"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

# ಕರ್ನಾಟಕ ವಿಧಾನ ಪರಿಷತ್ತು

7ನೇ ಜೂನ್ 2017
ಬುಧವಾರ

## ವಿಷಯಾನುಕ್ರಮಣಿಕೆ

1. **ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು.**

2251 – ಮೋಜಣಿ ಕಾರ್ಯದ ಬಗ್ಗೆ
– ಶ್ರೀ ಬಸನಗೌಡ ಆರ್.ಪಾಟೀಲ್ (ಯತ್ನಾಳ್)

2277 – ರಾಜ್ಯದ ನೇಕಾರರಿಗೆ ಕೇಂದ್ರ ಸರ್ಕಾರದ ಯೋಜನೆ ಬಗ್ಗೆ
– ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ (ಅಣ್ಣಯ್ಯ)

2299 – ಜಿಲ್ಲಾ ಸಂಕೀರ್ಣ ನಿರ್ಮಾಣ ಮಾಡುವ ಬಗ್ಗೆ
– ಶ್ರೀ ಎನ್.ಎಸ್.ಬೋಸ್‌ರಾಜು

2185 – ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕಿನಲ್ಲಿ ಗಂಧದ ಗಿಡಗಳು ಹಾಗೂ ದಾಲಚಿನ್ನಿ ಎಲೆ ತೊಗಟೆಗಳ ಕಳ್ಳತನ ಕುರಿತು
– ಶ್ರೀ ಎಸ್.ಎಲ್.ಘೋಟ್ನೇಕರ

2152 – ಕೆರೆಗಳಿಗೆ ನೀರುಣಿಸುವ ಕುರಿತು
– ಶ್ರೀ ಪ್ರದೀಪ್ ಶೆಟ್ಟರ್

2267 – ದೇವಸ್ಥಾನಗಳಿಗೆ ಮೂಲಭೂತ ಸೌಕರ್ಯ ಒದಗಿಸಿರುವ ವಿಚಾರ
– ಶ್ರೀ ಭಾನುಪ್ರಕಾಶ್

2158 – ಕೆರೆಗಳ ಅಭಿವೃದ್ಧಿ ಬಗ್ಗೆ
– ಶ್ರೀ ಆರ್.ಧರ್ಮಸೇನಾ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

2295 – ಕೊಡಗು ಜಿಲ್ಲೆಯಲ್ಲಿರುವ ಹಾಕಿ ಪ್ರತಿಭೆಗಳನ್ನು ಪ್ರೋತ್ಸಾಹಿಸುವ ಕುರಿತು
– ಶ್ರೀಮತಿ ಎಸ್.ವೀಣಾ ಅಚ್ಚಯ್ಯ

2218 – ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನ ಕ್ರೀಡಾಂಗಣ ಮತ್ತು ಅಲ್ಲಿ ಕೈಗೊಂಡಿರುವ ಒಳ ಕ್ರೀಡಾಂಗಣ ಕಾಮಗಾರಿ ಕುರಿತು
– ಶ್ರೀ ಎಸ್.ವಿ.ಸಂಕನೂರ

2283 – ಆನೆ ಕಾರಿಡಾರ್ ಬಗ್ಗೆ
–ಶ್ರೀ ಚೌಡರೆಡ್ಡಿ ತೂಪಲ್ಲಿ

2171 – ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕೆರೆ–ಕುಂಟೆಗಳು
– ಶ್ರೀ ವಿ.ಎಸ್.ಉಗ್ರಪ್ಪ

**ಆ) ಚುಕ್ಕೆ ರಹಿತ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.**

**2. <u>ಸಭಾಪತಿಯವರ ಅನುಮತಿ ಮೇರೆಗೆ ಚರ್ಚಿಸಲ್ಪಟ್ಟ ವಿಷಯಗಳು.</u>**

**ಅ) ವಿಜಯಪುರ ಜಿಲ್ಲೆಯಲ್ಲಿ ಅಕ್ರಮವಾಗಿ ಮರಗಳನ್ನು ಕಡಿದು ಸಾಗಿಸುತ್ತಿರುವ ಬಗ್ಗೆ.**

– ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್)
– ಶ್ರೀ ಬಿ.ರಮಾನಾಥ ರೈ (ಅರಣ್ಯ ಸಚಿವರು)

**ಆ) ರಾಜ್ಯದ ಹಲವಾರು ನಗರ ಪ್ರದೇಶಗಳಲ್ಲಿ ಬಡ್ಡಿ ಆಮಿಷಕ್ಕೆ ಒಳಗಾಗಿ ಹಣ ಕಳೆದುಕೊಂಡ ಪ್ರಕರಣಗಳ ಕುರಿತು.**

– ಶ್ರೀ ಶ್ರೀನಿವಾಸ ವಿ.ಮಾನೆ
– ಶ್ರೀ ಟಿ.ಬಿ.ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

**ಇ) ಆರ್ಯವೈಶ್ಯ ಸಮಾಜ ಜಾತಿ ಪ್ರಮಾಣ ಪತ್ರ ಮತ್ತು ಆದಾಯ ಪ್ರಮಾಣ ಪತ್ರ ಪಡೆಯಲು ತೊಂದರೆಯಾಗುತ್ತಿರುವ ಬಗ್ಗೆ.**

– ಶ್ರೀ ಟಿ.ಎ.ಶರವಣ
– ಶ್ರೀ ಟಿ.ಬಿ.ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಈ) ಹಾಪ್‌ಕಾಮ್ಸ್‌ನಲ್ಲಿ ಮಾವಿನ ಹಣ್ಣುಗಳನ್ನು ಹಣ್ಣು ಮಾಡಲು ಕ್ಯಾಲ್ಸಿಯಂ ಕಾರ್ಬೈಡ್ ಬಳಸುತ್ತಿರುವ ಬಗ್ಗೆ**

- ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿ
- ಶ್ರೀ ಟಿ.ಬಿ.ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

**ಉ) ಸರ್ಕಾರದ ಯೋಜನೆ "ಸಕಾಲ" ದುರ್ಬಲಗೊಳ್ಳುತ್ತಿರುವ ಬಗ್ಗೆ**

- ಶ್ರೀ ಕೋಟ ಶ್ರೀನಿವಾಸ ಪೂಜಾರಿ
- ಶ್ರೀ ಟಿ.ಬಿ.ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

**3. ಗಮನ ಸೆಳೆಯುವ ಸೂಚನೆಗಳು**

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ 10 ವರ್ಷಕ್ಕೂ ಮೇಲ್ಪಟ್ಟು ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಆಯುಷ್ ವೈದ್ಯರನ್ನು ಖಾಲಿ ಇರುವ ಹುದ್ದೆಗಳಿಗೆ ಸಕ್ರಮಗೊಳಿಸುವ ಕುರಿತು –**

- ಶ್ರೀ ಕೋಟ ಶ್ರೀನಿವಾಸ ಪೂಜಾರಿ
- ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ
- ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು)
- ಶ್ರೀ ಬಿ.ಜೆ.ಪುಟ್ಟಸ್ವಾಮಿ
- ಶ್ರೀ ಶರಣಪ್ಪ ಮಟ್ಟೂರ
- ಶ್ರೀ ಕೆ.ಆರ್.ರಮೇಶ್‌ಕುಮಾರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

**4. ನಿಯಮ 330ರ ಮೇರೆಗೆ ನಡೆದ ಚರ್ಚೆ**

**ಆಲಮಟ್ಟಿ ಕೃಷ್ಣ ಮೇಲ್ದಂಡೆ ಯೋಜನೆಯಿಂದ ಬಾಧಿತಗೊಂಡ ಸಂತ್ರಸ್ತ ಕುಟುಂಬಗಳಿಗೆ ಏಕರೂಪ ಪರಿಹಾರ ನಿಗಧಿಪಡಿಸುವ ಕುರಿತು**

- ಶ್ರೀ ನಿರಾಣಿ ಹಣಮಂತ್ ರುದ್ರಪ್ಪ
- ಶ್ರೀ ವಿ.ಎಸ್.ಉಗ್ರಪ್ಪ
- ಶ್ರೀ ಎಂ.ಬಿ.ಪಾಟೀಲ (ಜಲ ಸಂಪನ್ಮೂಲ ಸಚಿವರು)
- ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು)
- ಶ್ರೀ ಕಾಗೋಡು ತಿಮ್ಮಪ್ಪ (ಕಂದಾಯ ಸಚಿವರು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

– ಶ್ರೀ ಬಸನಗೌಡ ಆರ್.ಪಾಟೀಲ್ (ಯತ್ನಾಳ್)
– ಶ್ರೀ ಕೋಟ ಶ್ರೀನಿವಾಸ ಪೂಜಾರಿ
– ಶ್ರೀಮತಿ ತಾರಾ ಅನೂರಾಧ

**5. ಪ್ರಕಟಣೆ**

----

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(572)07-06-2017 MM-BNS 11.00

**ಕರ್ನಾಟಕ ವಿಧಾನ ಪರಿಷತ್ತು**

***ಬುಧವಾರ, 07ನೇ ಜೂನ್ 2017***

**ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**

**ಬೆಳಗ್ಗೆ 11 ಗಂಟೆ 05 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಡಿ.ಹೆಚ್.ಶಂಕರಮೂರ್ತಿ) ಅವರು ಪೀಠದಲ್ಲಿ ಉಪಸ್ಥಿತರಿದ್ದರು.**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರು:–** ಈಗ ಪ್ರಶ್ನೋತ್ತರ.

## 1. ಪ್ರಶ್ನೋತ್ತರಗಳು

ಅ) ಚುಕ್ಕೆಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು.

**ಚುಕ್ಕೆ ಪ್ರಶ್ನೆ ಸಂಖ್ಯೆ: 2251**

**(ಉತ್ತರದ ಪ್ರತಿ ಲಗತ್ತಿಸಿದೆ)**

**ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್):–** ಮಾನ್ಯ ಸಭಾಪತಿಯವರೆ, ಉತ್ತರವನ್ನು ಒದಗಿಸಿದ್ದಾರೆ. ಇವತ್ತು ಸರ್ವೆ ಇಲಾಖೆಯವರು ರೈತರು ಅರ್ಜಿಯನ್ನು ಕೊಟ್ಟರೆ ಕನಿಷ್ಠ ಮೂರರಿಂದ ನಾಲ್ಕು ವರ್ಷಗಳ ಸಮಯವನ್ನು ತೆಗೆದುಕೊಳ್ಳುತ್ತಿದ್ದಾರೆ. ಸ್ವತಃ ನನ್ನ ಅನುಭವವನ್ನು ಹೇಳುವುದಾದರೆ, ಒಂದು ಸಮುದಾಯ ಭವನವನ್ನು ಕಟ್ಟುವುದಕ್ಕೆ ನಾವೇ ದಾನ ಕೊಟ್ಟಂತಹ ಒಂದು ಜಮೀನನ್ನು ಸರ್ಕಾರದ ಹೆಸರಿಗೆ ಮಾಡುವುದಕ್ಕೆ ಸತತವಾಗಿ ಒಂದು ವರ್ಷದಿಂದ ಪ್ರಯತ್ನ ಮಾಡುತ್ತಿದ್ದೇನೆ. ಇನ್ನು ನಿಮ್ಮ ಪಾಳಿ ಬಂದಿಲ್ಲ, ಬಂದ ಮೇಲೆ ನಿಮಗೆ ಅವಕಾಶ ಸಿಗುತ್ತದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಮಾನ್ಯ ಸಚಿವರಲ್ಲಿ ಕೇಳಬಯಸುವುದೇನೆಂದರೆ, ಸರ್ವೇಯರ್‌ಗಳನ್ನು ಎಷ್ಟು ಕಾಲಾವಧಿಯಲ್ಲಿ ಪೂರ್ತಿಯಾಗಿ ತುಂಬುವಂತಹ ಪ್ರಯತ್ನವನ್ನು ಮಾಡುತ್ತೀರಿ ಎಂದು ಕೇಳಬಯಸುತ್ತೇನೆ. ಏಕೆಂದರೆ ಗ್ರಾಮ ಪಂಚಾಯ್ತಿಗಳಲ್ಲಿ ಕೂಡ ಮನೆಗಳು; ಮಾನ್ಯ ಸಚಿವರೆ, ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಆಯ್ಕೆಯಾದ ಮೇಲೆ ಸುಮಾರು 200 ಗ್ರಾಮಪಂಚಾಯ್ತಿಗಳನ್ನು ಭೇಟಿ ಮಾಡಿದ್ದೇನೆ. ಎಲ್ಲಾ ಗ್ರಾಮ ಪಂಚಾಯ್ತಿಗಳಲ್ಲಿ ಸರ್ವೆಯರ್‌ಗಳು ಇಲ್ಲದಿರುವುದರಿಂದ; ಮೂರು ನಾಲ್ಕು ವರ್ಷದ ಹಿಂದೆ ಮನೆಯನ್ನು ತೆಗೆದುಕೊಂಡಿರುವವರು; ಒಂದು ಲಕ್ಷ ಎರಡು ಲಕ್ಷ ರೂಪಾಯಿಗಳಿಗೆ ತೆಗೆದುಕೊಂಡ ಮನೆಗಳ ಬೆಲೆ ಇವತ್ತು ನಾಲ್ಕೈದು ಪಟ್ಟು ಆಗಿರುವುದರಿಂದ ಆ ಮೂಲ ಮಾಲೀಕನ ಮನಸ್ಸು ಬದಲಾವಣೆಯಾಗಿದೆ. ಇದು ಬಹಳ ದೊಡ್ಡ ಸಮಸ್ಯೆಯಾಗಿರುವುದರಿಂದ ಸಾಕಷ್ಟು ಕ್ರಾಂತಿಕಾರಕವಾದ ಬದಲಾವಣೆಯನ್ನು ಕಂದಾಯ ಇಲಾಖೆಯಲ್ಲಿ ತರಲಾಗುತ್ತಿದೆ. ನಾನು ವೈಯಕ್ತಿಕವಾಗಿ ಅತ್ಯಂತ ಹೃದಯಪೂರ್ವಕವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇನೆ. ಮಾನ್ಯ ಸಚಿವರು ಸರ್ವೇಯರ್‌ಗಳನ್ನು ತುಂಬುವ ಬಗ್ಗೆ ಬಹಳ ಗಂಭೀರವಾಗಿ ತೆಗೆದುಕೊಂಡು ಆದಷ್ಟು ಬೇಗನೆ ಪರಿಹಾರವನ್ನು ಕೊಡಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರ ಆತಂಕ ಮತ್ತು ನೋವು ನನಗೂ ಅರ್ಥವಾಗಿದೆ. ಆ ನಿಟ್ಟಿನಲ್ಲಿ ನಾನು ಕೂಡ ಇದ್ದೇನೆ. ಅನೇಕ ಕಾರಣಗಳು ಇದಕ್ಕೆ ಸೇರಿವೆ. ಹಾಗಾಗಿ ಬಹಳಷ್ಟು ಪಕ್ಕಾ ಪೋಡಿ ಕೆಲಸಗಳು ಕೊಳೆಯುತ್ತಾ ಇವೆ. ತಾವು ಹೇಳಿದಂತೆ ನಾನು ಕೂಡ ಅನುಭವ ಪಡೆದೇ ಇಲ್ಲಿಗೆ ಬಂದಿದ್ದೇನೆ. ಅದಕ್ಕೆ ಇದನ್ನು ದುರಸ್ತಿ ಮಾಡಬೇಕು. ಜಾಗ್ರತೆ ಆಗಬೇಕು ಎನ್ನುವುದರಲ್ಲಿ ಪ್ರಯತ್ನ ಮಾಡಬೇಕು. ಕಾರಣವೇನೆಂದರೆ, ನೇಮಕಾತಿ ಮಾಡಲಿಲ್ಲ, ಎಲ್ಲಾ ಹುದ್ದೆಗಳು ಖಾಲಿ ಇವೆ, ಈಗ ನೇಮಕಾತಿ ಮಾಡಲು ಪ್ರಾರಂಭಿಸಿದ್ದೇವೆ. ಎರಡನೆಯದಾಗಿ ಗುತ್ತಿಗೆ ಆಧಾರದ ಮೇಲೆ ನಿವೃತ್ತಿಯಾದ ಸುಮಾರು 500 ಜನರನ್ನು ನೇಮಕ ಮಾಡಿದ್ದೇವೆ. Licenced Surveyor ಗಳನ್ನು ಕೂಡ ಬಳಸಿಕೊಳ್ಳುತ್ತಿದ್ದೇವೆ ಹಾಗೂ ಅವರನ್ನು ಬಳಸಿಕೊಂಡು ಎಷ್ಟು ಸಾಧ್ಯವೋ ಅಷ್ಟು pendency ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. Assistant Director of Land Records (ADLR) ಗಳ ಕೊರತೆ ಇತ್ತು, ಅದಕ್ಕೆ ಪ್ರಮೋಷನ್ ಕೊಟ್ಟಿದ್ದೇವೆ. ಅನೇಕ ಕಡೆಗಳಲ್ಲಿ Deputy Director of Land Records (DDLR) ಇರಲಿಲ್ಲ, ಅದನ್ನು ಕೂಡ ಪ್ರಮೋಷನ್ ಕೊಟ್ಟು ಭರ್ತಿ ಮಾಡಿದ್ದೇವೆ. ಹೀಗಾಗಿ ಸಿಬ್ಬಂದಿಗಳ ಕೊರತೆಯಿಂದಾಗಿ ಅನೇಕ ಕೆಲಸಗಳು ಉಳಿಯುತ್ತಿವೆ. ಮೇಲಾಗಿ ಒಬ್ಬ ಸರ್ವೇಯರ್ ಆದವರು ಒಂದು ತಿಂಗಳಿನಲ್ಲಿ ಕನಿಷ್ಠ 23 ಪ್ರಕರಣಗಳನ್ನು ಮಾಡಲೇಬೇಕೆಂದು ಕಡ್ಡಾಯವಿದೆ. ವಾಸ್ತವವಾಗಿ ಬೆಳಗಾಂ ಭಾಗಕ್ಕೆ ಹೋದಂತಹ ಸಂದರ್ಭದಲ್ಲಿ ಜಿಲ್ಲಾಧಿಕಾರಿಯೊಬ್ಬರು 40 ಪ್ರಕರಣಗಳನ್ನು ಮಾಡುವುದಕ್ಕೆ ಅವಕಾಶವಿದೆ ಎಂದು ಹೇಳಿದರು. ಅದನ್ನು ಇಲ್ಲಿ ಬಂದು ಚರ್ಚೆ ಮಾಡಿದಾಗ ಹಿಂದಿನ ನಿಯಮವೇ ಸರಿ ಇದೆ ಎಂದು ಅಭಿಪ್ರಾಯಪಟ್ಟರು. ಸದ್ಯಕ್ಕೆ ಪ್ರತಿಯೊಬ್ಬ ಸರ್ವೇಯರ್ ಒಂದು ತಿಂಗಳಿನಲ್ಲಿ 23 ಪ್ರಕರಣಗಳನ್ನಾದರೂ ಪೂರ್ಣ ಮಾಡಿ ಕಳುಹಿಸಿದರೆ sort out ಮಾಡುತ್ತೇವೆ. ಅದಕ್ಕೋಸ್ಕರ ಇದನ್ನು ನಿಯಮಬದ್ಧವಾಗಿ ಕೆಲಸ ಮಾಡುವುದಕ್ಕೆ ಸರ್ವೇಯರ್‌ಗಳಿಗೆ ಅಗತ್ಯವಾದ ಮಾರ್ಗದರ್ಶನಗಳನ್ನು ನೀಡುವ ಪ್ರಯತ್ನ ಮಾಡುತ್ತಿದ್ದೇವೆ. ಅದರ ಜೊತೆಗೆ ಉತ್ತರದಲ್ಲಿ ದೀರ್ಘವಾಗಿ ಎಲ್ಲವನ್ನೂ ಹೇಳಿದ್ದೇನೆ. ಯಾವುದೇ ಭಿನ್ನಾಭಿಪ್ರಾಯಗಳಿಲ್ಲ. ಇದನ್ನು ಚುರುಕುಗೊಳಿಸಬೇಕು. ಪೋಡಿಮುಕ್ತ ಯೋಜನೆಯೊಂದು ಜಾರಿಗೆ ಬಂದಿದೆ. ಅದರಲ್ಲಿ ಏನಾಗಿದೆ ಎಂದರೆ, ಹಳೆಯ ನಂಬರ್ ಮಾತ್ರ ಮಾಡುತ್ತಾರೆ ವಿನಃ ದರ್ಖಾಸ್ತು ಅಡಿಯಲ್ಲಿ ಮಂಜೂರಿ, ಭೂಸುಧಾರಣೆ ಮತ್ತು ಇನಾಂ ಕಾನೂನಿನ ಅಡಿಯಲ್ಲಿ ಮಂಜೂರಿ; ಇವು ಯಾವುದನ್ನು ಮುಟ್ಟುವುದಿಲ್ಲ.

(ಮುಂದು . . .

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

573/7-6-2017/11.10/ಡಿ.ಎಸ್.-ಬಿ.ಎನ್.ಎಸ್.

**ಶ್ರೀ ಕಾಗೋಡು ತಿಮ್ಮಪ್ಪ(ಮುಂದು):-**

ಹಾಗಾಗಿ ನಾನು ಬಂದ ಮೇಲೆ ಪೋಡಿ ಮುಕ್ತ ಗ್ರಾಮ ಎಂದು ಹೇಳಿದ ಮೇಲೆ ಆ ಗ್ರಾಮದಲ್ಲಿ A ಯಿಂದ ಹಿಡಿದು Z ವರೆಗೆ ಸರ್ಕಾರಿ ಜಮೀನನ್ನು ಸೇರಿ ಮಾಡಬೇಕೆಂದು ಆದೇಶ ಕೊಟ್ಟು ಅದನ್ನು ಕೂಡ ಈಗ ಶುರು ಮಾಡಿದ್ದೇವೆ. ಹೀಗಾಗಿ ಪೋಡಿ ಮುಕ್ತ ಕೆಲಸವನ್ನು ಆದಷ್ಟು ಬೇಗ ಮಾಡಬೇಕು. ತಮಗೆ ಗೊತ್ತಿದೆ, ಮಾನ್ಯ ಕರುಣಾಕರ ರೆಡ್ಡಿಯವರು ಕಂದಾಯ ಸಚಿವರಾಗಿದ್ದಾಗ ನಾನೇ ಒಂದು ಸಲ ಸ್ವತಃ ಅವರನ್ನು ಭೇಟಿಯಾಗಿದ್ದೆ. ವಿಳಂಬವಾಗುತ್ತಿರುವುದಕ್ಕೆ ಕಾರಣವೇನೆಂದರೆ, ಜಿಲ್ಲಾಧಿಕಾರಿಗಳ ಅನುಮತಿ ಬೇಕು. ಆ ಜಿಲ್ಲಾಧಿಕಾರಿಗಳ ಅನುಮತಿ ಪಡೆಯುವುದಾದರೆ ತಹಸೀಲ್ದಾರ್‌ರವರು ಎ.ಸಿ. ಗೆ ಕಳುಹಿಸುತ್ತಾರೆ. ಆ ಎ.ಸಿ. ಒಂದು ಕೊಕ್ಕೆ ಹಾಕಿ ವಾಪಸ್ ಕಳುಹಿಸುತ್ತಾರೆ. ಆ ಕೊಕ್ಕೆಯನ್ನು ಸರಿ ಮಾಡಿ ಮತ್ತೆ ಕಳುಹಿಸುತ್ತಾರೆ. ಅವರು ಮತ್ತೆ ಡಿ.ಸಿ.ಗೆ ಕಳುಹಿಸುತ್ತಾರೆ. ಆ ಡಿ.ಸಿ. ಕೊಕ್ಕೆ ಹಾಕಿ ಮತ್ತೆ ವಾಪಸ್ ಕಳುಹಿಸುತ್ತಾರೆ. ಏಕೆಂದರೆ ಈ ಕೊಕ್ಕೆ ವಿಧಾನ ನಮ್ಮ ಆಡಳಿತದಲ್ಲಿ ಹೆಚ್ಚಾಗಿಬಿಟ್ಟಿದೆ. ಈಗ ಎಲ್ಲಾ ಪೂರ್ಣ ಪಕ್ಕಾ ಪೋಡಿ ಜವಾಬ್ದಾರಿಯನ್ನು ತಹಸೀಲ್ದಾರ್‌ರವರಿಗೆ ಕೊಟ್ಟಿದ್ದೇವೆ. ಹಾಗಾಗಿ ಮಾನ್ಯ ಸದಸ್ಯರ ಆತಂಕವನ್ನು ಕಡಿಮೆ ಮಾಡುವುದಕ್ಕೆ ಪ್ರಾಮಾಣಿಕ ಪ್ರಯತ್ನವನ್ನು ನಾನು ಮಾಡುತ್ತಿದ್ದೇನೆ. ಈ ಸಿಬ್ಬಂದಿಯ ಕೊರತೆಯಿಂದಾಗಿ ನನ್ನ ಕೈಕಾಲು ಕಟ್ಟಿ ಹಾಕಿದಂತಾಗಿದೆ. ಆದ್ದರಿಂದ ಈ ಕೆಲಸದಲ್ಲಿ ವಿಳಂಬವಾಗಿರುವುದಕ್ಕೆ ಎಲ್ಲಾ ನಮ್ಮ ಜನಪ್ರತಿನಿಧಿಗಳ ಕ್ಷಮೆಯನ್ನು ನಾನು ಕೇಳುತ್ತೇನೆ.

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೆ, ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ಮಾಡಿಕೊಡಬೇಕು. ಏಕೆಂದರೆ ಅವರು ಕಂದಾಯ ಸಚಿವರಾದಾಗಿನಿಂದಲೂ ಉತ್ತರ ಕೊಡುತ್ತಿದ್ದಾರೆ. ಅವರಿಗಿಂತ ಮುಂಚೆ ಇದ್ದಂತಹ ಸಚಿವರು ಉತ್ತರ ಕೊಡುತ್ತಿದ್ದಾರೆ. ಆದರೆ ಸಮಸ್ಯೆ ಬಗೆಹರಿಯುತ್ತಿಲ್ಲ. ಇದು ಬಹಳ ಗಂಭೀರವಾಗಿರುವಂತಹ ವಿಚಾರ. ದಯಮಾಡಿ ತಾವು ಅರ್ಧ ಗಂಟೆ ಕಾಲಾವಧಿಯ ಚರ್ಚೆಗೆ ಅವಕಾಶ ಕೊಟ್ಟರೆ ಒಳ್ಳೆಯದು. ಇಂತಹ ಗಂಭೀರ ಸಮಸ್ಯೆಗಳ ವಿಚಾರದಲ್ಲಿ ಅಸಹಾಯಕತೆ ಪಡುವುದು ಪರಿಹಾರವಲ್ಲ.

**ಸಭಾಪತಿಯವರು:-** ನೋಟಿಸ್ ಕೊಡಿ, ಪ್ರಯತ್ನ ಮಾಡೋಣ.

**ಚುಕ್ಕೆ ಪ್ರಶ್ನೆ ಸಂಖ್ಯೆ:2277**

**ಉತ್ತರ ಲಗತ್ತಿಸಲಾಗಿದೆ**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ:-** ಮಾನ್ಯ ಸಭಾಪತಿಯವರೆ, ಮಂತ್ರಿಗಳು ಉತ್ತರವನ್ನು ಒದಗಿಸಿದ್ದಾರೆ. ಅವರು ಹುಡುಗಾಟದ ಉತ್ತರವನ್ನು ಕೊಟ್ಟಿದ್ದಾರೆಂದು ನನಗೆ ಅನ್ನಿಸುತ್ತಿದೆ. ಕರ್ನಾಟಕ ರಾಜ್ಯದಲ್ಲಿ ಸುಮಾರು 60 ಲಕ್ಷ ಜನ ನೇಕಾರರಿದ್ದಾರೆ. ಇವರುಗಳು ಎದುರಿಸುತ್ತಿರುವ ಈ ಸಮಸ್ಯೆ ಬಗ್ಗೆ ಇಲಾಖೆ ತೀವ್ರತರವಾಗಿ ಯಾವುದೇ ಕಾರ್ಯಕ್ರಮಗಳನ್ನು ತೆಗೆದುಕೊಂಡಿಲ್ಲ ಎನ್ನುವುದು ನನ್ನ ಒಂದು ಭಾವನೆಯಾಗಿದೆ. ನನ್ನ (ಅ) ಮತ್ತು (ಆ) ಪ್ರಶ್ನೆಗೆ ಸರ್ಕಾರ ಉತ್ತರ ನೀಡಿದೆ. 1992ರಿಂದ ಇವತ್ತಿನವರೆವಿಗೂ ನಾನು ಅಂಕಿ-ಅಂಶಗಳನ್ನು ಗಮನಿಸಿದ್ದೇನೆ. ಇದು ಕೇವಲ ಸಾವಿರ ರೂಪಾಯಿಗಳಲ್ಲಿದೆಯೇ ಹೊರತು ಲಕ್ಷಗಳಲ್ಲಿ ಅಥವಾ ಕೋಟಿಗಳಲ್ಲಿಲ್ಲ. ಹಿಂದಿನ ಸರ್ಕಾರದಲ್ಲಿ ನಾನು Handloom Development Corporation ಗೆ Chairman ಆಗಿದ್ದಾಗ ದೆಹಲಿಯಲ್ಲಿ ಕೇಂದ್ರದ ಮಂತ್ರಿಗಳನ್ನು ಭೇಟಿ ಮಾಡಿ ಕೋಟಿಗಟ್ಟಲೆ ಅನುದಾನವನ್ನು ತರತಕ್ಕಂಥ ಪ್ರಯತ್ನವನ್ನು ಮಾಡಿದ್ದೆ. ಆದರೆ ಇವತ್ತಿನ ಸಂದರ್ಭದಲ್ಲಿ 30 ಜಿಲ್ಲೆಗಳ ಜಿಲ್ಲಾ ಕೇಂದ್ರದಲ್ಲಿ ನಮ್ಮ ಅಧಿಕಾರಿಗಳೇನಿದ್ದಾರೆ, ಆ ಅಧಿಕಾರಿಗಳು ಜಿಲ್ಲಾ ಮಟ್ಟದಲ್ಲಿ ಯಾವುದೇ ರೀತಿಯ ಕೆಲಸವನ್ನು ಮಾಡುತ್ತಿಲ್ಲ. ನಮ್ಮ ಅಧಿಕಾರಿ ವರ್ಗ ನಿರುಕ್ತವಾಗಿ ಕುಳಿತಿದೆ. ಕಳೆದ ನಾಲ್ಕು ವರ್ಷಗಳಿಂದ ಕೇಂದ್ರ ಸರ್ಕಾರದ ಏನೇನು ಯೋಜನೆಗಳನ್ನು ಜಾರಿಗೆ ಕೊಟ್ಟಿದ್ದಾರೆ, ಅದರಲ್ಲಿಯೂ ವಿಶೇಷವಾಗಿ ಉತ್ತರ ಕರ್ನಾಟಕ ಹಾಗೂ ಹೈದರಾಬಾದ್-ಕರ್ನಾಟಕ ಮತ್ತು ಮಂತ್ರಿಗಳು ವಾಸ ಮಾಡತಕ್ಕಂಥ ಹಾವೇರಿ ಜಿಲ್ಲೆಯಲ್ಲಿಯೂ ಕೂಡ ಹೆಚ್ಚಿನ ನೇಕಾರರಿದ್ದಾರೆ. ಈ ಒಂದು ದಿಸೆಯಲ್ಲಿ ಹೊಸ ಯೋಜನೆಗಳನ್ನು ತರಲು ಸರ್ಕಾರ ಪ್ರಮಾಣಿಕವಾಗಿ ಏನು ಪ್ರಯತ್ನ ಮಾಡಿದೆ ಎನ್ನುವುದರ ಬಗ್ಗೆ ವಿವರವಾಗಿ ಬೆಳಕು ಚೆಲ್ಲಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

**ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ನಾನು ಸಂಪೂರ್ಣವಾಗಿ ಉತ್ತರವನ್ನು ಒದಗಿಸಿದ್ದೇನೆ. ಇನ್ನೂ ಸಾಕಷ್ಟು ಸಮಸ್ಯೆಗಳಿವೆ. ಸಮಸ್ಯೆಗಳಿಗೆ ಆದಷ್ಟು ಪರಿಹಾರವನ್ನು ಹುಡುಕುವ ದೃಷ್ಟಿಯಲ್ಲಿ ನಮ್ಮ ಸದಸ್ಯರನ್ನು ಕೇಳಿಕೊಂಡು ಏನಾಗಬೇಕೆಂಬುದರ ಬಗ್ಗೆ ಇಬ್ಬರೂ ಕೂಡಿ ಅವರ ಜೊತೆಗೆ ಪ್ರತ್ಯೇಕವಾಗಿ ಚರ್ಚೆ ಮಾಡುತ್ತೇವೆ. ಅವರಿಗೆ ಅನುಕೂಲವಾಗುವ ರೀತಿಯಲ್ಲಿ ಸರ್ಕಾರದಿಂದ ಯಾವ್ಯಾವ ರೀತಿಯ ಸಹಾಯವನ್ನು ಒದಗಿಸಬೇಕೋ, ಆ ದೃಷ್ಟಿಯಲ್ಲಿ ನಾವಿಬ್ಬರೂ ಕೂಡಿ ಚರ್ಚೆ ಮಾಡಿ ಅದಕ್ಕೆ ಪರಹಾರವನ್ನು ಒದಗಿಸುತ್ತೇವೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಮಾನ್ಯ ಸದಸ್ಯರ ಕಳಕಳಿ ಸಚಿವರಿಗೆ ಅರ್ಥವಾದರೆ ಅಲ್ಲಿಗೆ ಮುಗಿಯಿತಲ್ಲ, ಇನ್ನೇನು ಉಳಿಯಲಿಲ್ಲ.

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ:–** ಮಾನ್ಯ ಸಭಾಪತಿಯವರೆ, ಹಿಂದೆ ಬೇರೆ ಮಂತ್ರಿಗಳಿದ್ದು ಈಗ ಮಾನ್ಯ ರುದ್ರಪ್ಪ ಮಾನಪ್ಪ ಲಮಾಣಿಯವರು ಜವಳಿ ಖಾತೆಯನ್ನು ವಹಿಸಿಕೊಂಡಿದ್ದಾರೆ. ಮಾನ್ಯ ಸಚಿವರು ಬಹಳ ಒಳ್ಳೆಯವರು, ಅವರ ಬಗ್ಗೆ ನಾನೇನು ಹೇಳುವುದಿಲ್ಲ. ಅವರ ಜಿಲ್ಲೆಯಲ್ಲಿ ನಾನು ಬಹಳಷ್ಟು ಸುತ್ತಾಡಿದ್ದೇನೆ. ನನ್ನ ಕಳಕಳಿ ಏನೆಂದರೆ, ನಮ್ಮ ಅಧಿಕಾರಿ ವರ್ಗವನ್ನು ನೀವು ಯಾವ ರೀತಿಯಾಗಿ ಹಿಡಿತಕ್ಕೆ ತೆಗೆದುಕೊಂಡು ಕಾರ್ಯಕ್ರಮಗಳನ್ನು ಕೈಗೊಳ್ಳುತ್ತೀರಿ? ಬೆಳಗಾಂ, ಬೆಂಗಳೂರು, ಬಾಗಲಕೋಟೆ, ಗದಗ, ಬಿಜಾಪುರ, ಹುಬ್ಬಳ್ಳಿ–ಧಾರವಾಡ, ಹಾವೇರಿ, ದಾವಣಗೆರೆ, ಚಿತ್ರದುರ್ಗ ಹಾಗೂ ಗುಲ್ಬರ್ಗಾ ಜಿಲ್ಲೆಗಳಲ್ಲಿ ಅತಿ ಹೆಚ್ಚು ನೇಕಾರರು ವಾಸ ಮಾಡುತ್ತಿದ್ದಾರೆ. ಕೇವಲ ನೇಕಾರ ವೃತ್ತಿಯಿಂದಲೇ ಅವರು ಜೀವನವನ್ನು ಸಾಗಿಸುತ್ತಿದ್ದಾರೆ. ಇವತ್ತು ಕೈಮಗ್ಗ ನೇಕಾರಿಕೆ ಸಂಪೂರ್ಣವಾಗಿ ಸ್ಥಗಿತವಾಗಿದೆ. ಹಿಂದಿನ ಸರ್ಕಾರ ಪ್ರತಿ ವರ್ಷ ಒಂದು ಸಾವಿರ ನೇಕಾರರಿಗೆ ಉಚಿತವಾಗಿ ಮಗ್ಗಗಳನ್ನು ಕೊಡಬೇಕೆಂದು ಆದೇಶವನ್ನು ಮಾಡಿದ್ದರೂ ಕೂಡ ಕಳೆದ ನಾಲ್ಕು ವರ್ಷಗಳಿಂದ ಅವರುಗಳಿಗೆ ಲೈಸೆನ್ಸ್ ಕೊಡುತ್ತಿಲ್ಲ. ಲೈಸೆನ್ಸ್ ಕೊಡುವುದು ನಿಂತು ಹೋಗಿದೆ. ಇದರ ಬಗ್ಗೆ ನಾನು ಸದನ ಸಮಿತಿಯಲ್ಲಿಯೂ ಸಹ ಚರ್ಚೆ ಮಾಡಿದ್ದೇನೆ. ಸದನದಲ್ಲಿ ನಗರಾಭಿವೃದ್ಧಿ ಸಚಿವರು ಇದರ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳುತ್ತೇನೆಂದು ಸಹ ಉತ್ತರವನ್ನು ಕೊಟ್ಟಿದ್ದಾರೆ. ಈ ಜಿಲ್ಲೆಗಳ ನೇಕಾರರ ಪಾಡು ಏನಾಗಿದೆ ಎಂದರೆ, ಅವರು ವಲಸೆ ಹೋಗುವಂಥಾದ್ದು, ಇಲ್ಲವೇ ಆತ್ಮಹತ್ಯೆ ಮಾಡಿಕೊಳ್ಳುವಂಥ ಪರಿಸ್ಥಿತಿ ಬಂದಿದೆ. Textile Parks ಬಗ್ಗೆ... ಕೇಂದ್ರದ ಅನುದಾನದ ಬಗ್ಗೆ ನಾನೇಕೆ ಹೇಳುತ್ತೇನೆಂದರೆ, ನಾನು ಮೊನ್ನೆ ಪ್ರವಾಸವನ್ನು ಮಾಡುವಂಥ ಕಾಲದಲ್ಲಿ ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡು ಮತ್ತು ಕೇರಳ ರಾಜ್ಯಗಳ ಜವಳಿ ಸಚಿವರನ್ನು ನಾನು ಪ್ರತ್ಯೇಕವಾಗಿ ಭೇಟಿ ಮಾಡಿ ಬಂದಿದ್ದೇನೆ. ಕೇಂದ್ರ ಸರ್ಕಾರ ಮಹಾರಾಷ್ಟ್ರಕ್ಕೆ 1,500 ಕೋಟಿ ರೂಪಾಯಿಗಳನ್ನು, ಆಂಧ್ರಪ್ರದೇಶಕ್ಕೆ 2,400 ಕೋಟಿ ರೂಪಾಯಿಗಳನ್ನು ಹಾಗೂ ತಮಿಳುನಾಡಿಗೆ 2,100 ಕೋಟಿ ರೂಪಾಯಿಗಳನ್ನು ಕೊಟ್ಟಿದೆ. ಆದರೆ ನಮ್ಮ ಸರ್ಕಾರಕ್ಕೆ ಕೇಂದ್ರದ ಅನುದಾನವಾಗಿ ಲಕ್ಷ ರೂಪಾಯಿಗಳನ್ನು ಸಹ ತೋರಿಸಿಲ್ಲ. ನನ್ನ (ಈ) ಪ್ರಶ್ನೆಗೆ "ರಾಜ್ಯದ ಕೋರಿಕೆಯ ಮೇರೆಗೆ ಹಾಗೂ ನೇಕಾರರ ಸಂಖ್ಯೆಗನುಗುಣವಾಗಿ ಕೇಂದ್ರ ಸರ್ಕಾರದಿಂದ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ." ಎಂದು ಹೇಳಿದೆ. ತಜ್ಞರ ಸಮಿತಿ ಇದೆ. ಇದುವರೆವಿಗೂ ಸರ್ಕಾರ ಎಷ್ಟು ಸಮಿತಿಗಳನ್ನು ಮಾಡಿದೆ? ತಜ್ಞರು ಹೇಳಿರತಕ್ಕಂಥ ವಿಚಾರಗಳನ್ನು ರಾಜ್ಯ ಸರ್ಕಾರದ ಮುಖಾಂತರ ಕೇಂದ್ರ ಸರ್ಕಾರಕ್ಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಳುಹಿಸಲಾಗಿದೆಯೇ ಎಂಬುದರ ಬಗ್ಗೆ ಮಾನ್ಯ ಮಂತ್ರಿಗಳು ಬೆಳಕು ಚೆಲ್ಲಬೇಕು. ಆ ದೃಷ್ಟಿಯಿಂದ ಅಧಿಕಾರಿ ವರ್ಗದ ಜೊತೆಗೆ ಮಾನ್ಯ ಸಚಿವರು ದೀರ್ಘವಾಗಿ ಚರ್ಚೆ ಮಾಡಬೇಕು.

ಮೊನ್ನೆ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನ ಮಾಡಿಗೇರ ಎನ್ನುವ ಒಂದು ಗ್ರಾಮಕ್ಕೆ ಹೋಗಿದ್ದೆ. ಆ ನೇಕಾರರು ಜನಿವಾರ, ಶಿವದಾರ ಹಾಗೂ ನಾವು ಹಾಕಿಕೊಳ್ಳುವಂಥ ಉಡದಾರ ತಯಾರಿಸುತ್ತಾರೆ. ಅಲ್ಲಿ ಸುಮಾರು 125 ಮನೆಗಳಿವೆ. ಸ್ವಾತಂತ್ರ ಬಂದು 75 ವರ್ಷಗಳಾದರೂ ಸಹ ಇವರು ಇದೇ ಕಸುಬನ್ನೇ ಮಾಡುತ್ತಿದ್ದಾರೆ. ಆ ಜಿಲ್ಲೆಯ ಜಿಲ್ಲಾಧಿಕಾರಿಗಳು ಇವತ್ತಿನವರೆವಿಗೂ ಆ ಊರಿಗೆ ಹೋಗಿಲ್ಲ ಹಾಗೂ ಅವರ ಸಮಸ್ಯೆಯನ್ನು ಆಲಿಸಿಲ್ಲ. ಇವತ್ತು ಸಹ ಕೊಂಕಣ ರೈಲ್ವೆ ಪಕ್ಕದಲ್ಲಿರತಕ್ಕಂಥ ನದಿಯಲ್ಲಿ ಆ ಗ್ರಾಮ 6 ತಿಂಗಳುಗಳ ಕಾಲ ಮುಳುಗಿರುತ್ತದೆ. ಆ ಬಡ ನೇಕಾರರಿಗೆ atleast Cluster ಯೋಜನೆಯೋ ಅಥವಾ ನೇಕಾರಿಕೆಗೆ ಸಂಬಂಧಪಟ್ಟ ಯೋಜನೆಯನ್ನು ಜಾರಿ ಮಾಡಲಿಕ್ಕೆ ದೂರವಾಣಿ ಮಾಡಿದರೆ ಆ ಅಧಿಕಾರಿ ಕೈಗೆ ಸಿಗುವುದಿಲ್ಲ. ಪ್ರತಿ ಜಿಲ್ಲೆಯಲ್ಲಿಯೂ ಸಹ ಸಂಬಂಧಪಟ್ಟ ನೇಕಾರರಿಗೆ ಏನು ಅನುಕೂಲಗಳಾಗಬೇಕೆನ್ನುವ ದೃಷ್ಟಿಯಿಂದ ಸಭೆಗಳನ್ನು ಮಾಡಿ, ಸರ್ಕಾರದ ಮೂಲಕ ಕೇಂದ್ರ ಸರ್ಕಾರಕ್ಕೆ ವರದಿಯನ್ನು ಕೊಟ್ಟು ಅಲ್ಲಿಂದ ಅನುದಾನವನ್ನು ತರುವ ವ್ಯವಸ್ಥೆಯನ್ನು ಮಾಡಿ ನೇಕಾರರಿಗೆ ಅನುಕೂಲ ಮಾಡಿಕೊಡಲು ಸಾಧ್ಯವಾಗುತ್ತದೆ. ದಯಮಾಡಿ ಸರ್ಕಾರ ಈ ಕೆಲಸವನ್ನು ಮಾಡಲಿಲ್ಲವೆಂದರೆ, ಇಡೀ ರಾಜ್ಯದಲ್ಲಿರತಕ್ಕಂಥ 60 ಲಕ್ಷ ಜನ ನೇಕಾರರು ಬೀದಿ ಪಾಲಾಗುತ್ತಾರೆ. ಇಲ್ಲವೆಂದರೆ ವಲಸೆ ಹೋಗುತ್ತಾರೆ ಅಥವಾ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಆದ್ದರಿಂದ ಸರ್ಕಾರದ ಹಂತದಲ್ಲಿ ಅನುದಾನ ತರುವ ವ್ಯವಸ್ಥೆಯನ್ನು ಚುರುಕುಗೊಳಿಸುವಂಥ ಕೆಲಸವಾಗಬೇಕು. ವಿದ್ಯುತ್‌ಚಾಲಿತ ಮಗ್ಗಗಳಿಗೆ ಕಳೆದ ನಾಲ್ಕು ವರ್ಷಗಳಿಂದ ನಗರ ಮಟ್ಟದಲ್ಲಿ ಲೈಸೆನ್ಸ್ ಕೊಡತಕ್ಕಂಥ ಕೆಲಸವಾಗುತ್ತಿಲ್ಲ. ನಗರಾಭಿವೃದ್ಧಿ ಇಲಾಖೆ ಹಾಗೂ ಜವಳಿ ಇಲಾಖೆಯಲ್ಲಿ coordination ಇಲ್ಲದೇ ಇರುವುದರಿಂದ ಸಮಸ್ಯೆಗಳಾಗಿವೆ.

**ಸಭಾಪತಿಯವರು:–** ಮಾನ್ಯ ಲಕ್ಷ್ಮೀನಾರಾಯಣರವರೆ, ನೀವು ಇಡೀ ನೇಕಾರರ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡುತ್ತಿದ್ದೀರಿ. ಅಷ್ಟೊಂದು ದೀರ್ಘ ಚರ್ಚೆ ಬೇಡ. ನಿಮ್ಮನ್ನು ಕರೆದು ಚರ್ಚೆ ಮಾಡುತ್ತೇನೆಂದು ಮಾನ್ಯ ಸಚಿವರು ಈಗಾಗಲೇ ಹೇಳಿದ್ದಾರೆ.

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ:–** ಮಾನ್ಯ ಸಭಾಪತಿಯವರೆ, 75 ಸದಸ್ಯರಲ್ಲಿ ನೇಕಾರರ ಬಗ್ಗೆ ಮಾತನಾಡಲು ಅವಕಾಶ ಸಿಕ್ಕಿರುವುದು ನನ್ನೊಬ್ಬನಿಗೆ ಮಾತ್ರ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಅದಕ್ಕಾಗಿಯೇ ನಿಮಗೆ ಮಾತನಾಡಲು ಅವಕಾಶವನ್ನು ಕೊಡಲಾಗಿದೆ.

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ:–** ಮಾನ್ಯ ಸಭಾಪತಿಯವರೆ, ನಾನು ರಾಜ್ಯಾಧ್ಯಕ್ಷನೂ ಹೌದು, ಶಾಸಕನೂ ಹೌದು. ಮೂರು ನಿಮಿಷಗಳಿಗೂ ಹೆಚ್ಚಿನ ಸಮಯವನ್ನು ನಾನು ಯಾವುದೇ ಪ್ರಶ್ನೆಗೆ ತೆಗೆದುಕೊಂಡಿಲ್ಲ. ಈ ವಿಷಯದ ಬಗ್ಗೆ ಬೆಳಕು ಚೆಲ್ಲಬೇಕು. ಕೇಂದ್ರ ಸರ್ಕಾರ ಅನುದಾನವನ್ನು ಕೊಡಲು ತಯಾರಿದ್ದ ಸಂದರ್ಭದಲ್ಲಿ ಮಂತ್ರಿಗಳು ನಿಯೋಗ ತೆಗೆದುಕೊಂಡು ಹೋಗಿ ಶೀಘ್ರವಾಗಿ ಹಣ ತರತಕ್ಕಂಥ ವ್ಯವಸ್ಥೆಯನ್ನು ಮಾಡಬೇಕೆಂದು ನೇಕಾರರ ಪರವಾಗಿ ನಮ್ಮ ಕಳಕಳಿಯನ್ನು ವ್ಯಕ್ತಪಡಿಸುತ್ತಿದ್ದೇವೆ.

**ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ:–** ಮಾನ್ಯ ಸಭಾಪತಿಯವರೆ, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ ನೇಕಾರರ ಅಭಿವೃದ್ಧಿಗೆ ಯಾವ್ಯಾವ ರೀತಿಯ ಯೋಜನೆಗಳನ್ನು ಹಾಕಿಕೊಳ್ಳಬೇಕು, ಅವರಿಗೆ ಯಾವ ರೀತಿಯಾಗಿ ಸಹಾಯವನ್ನು ಮಾಡಬೇಕೆಂದು ಯೋಚನೆ ಮಾಡುತ್ತಿದ್ದೇವೆ. ನೇಕಾರರಿಗೆ ಮನೆ ನಿರ್ಮಾಣ ಮಾಡತಕ್ಕಂಥ ಯೋಜನೆಯಲ್ಲಿ ಸಾಲ ಮತ್ತು ಬಡ್ಡಿಯನ್ನು ಮನ್ನಾ ಮಾಡಿರುವುದರ ಜೊತೆಗೆ ಇನ್ನಿತರ ಯೋಜನೆಗಳನ್ನು ಹಾಕಿಕೊಂಡಿದ್ದೇವೆ. ವಿದ್ಯಾ ವಿಕಾಸ ಯೋಜನೆ ಅಡಿಯಲ್ಲಿ ನೇಕಾರರು ತಯಾರು ಮಾಡಿದ ಮಾಲನ್ನು ತೆಗೆದುಕೊಳ್ಳಲಿಕ್ಕೆ ಒಂದು Memorandum of Understanding (MOU) ಮಾಡಿಕೊಳ್ಳಲಿಕ್ಕೆ ಈ ತಿಂಗಳಿನಲ್ಲಿಯೇ ವ್ಯವಸ್ಥೆ ಮಾಡುತ್ತೇವೆ. ನೇಕಾರರಿಗೆ ಬೇಕಾದಂಥ ಸವಲತ್ತುಗಳನ್ನು ಒದಗಿಸುವುದಕ್ಕೆ ಸಂಬಂಧಿಸಿದಂತೆ ಮಾನ್ಯ ಸದಸ್ಯರು ಮತ್ತು ಅಧಿಕಾರಿಗಳನ್ನು ಕರೆದು ಚರ್ಚೆ ಮಾಡಿ ಅವರಿಗೆ ಯಾವ ರೀತಿಯಲ್ಲಿ ಸಹಾಯ ಮಾಡಲಿಕ್ಕೆ ಸಾಧ್ಯತೆ ಇದೆಯೋ ಮತ್ತು ಕೇಂದ್ರ ಸರ್ಕಾರದಿಂದ ಏನು ಸಹಾಯಾನುದಾನವನ್ನು ತರಲಿಕ್ಕೆ ಸಾಧ್ಯವಿದೆಯೋ, ಅದರ ಬಗ್ಗೆ plan ಮಾಡಿಕೊಂಡು ತಕ್ಷಣದಿಂದಲೇ ಮಾಡುವುದಕ್ಕೆ ನಾನು ವ್ಯವಸ್ಥೆ ಮಾಡುತ್ತೇನೆ.

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ:–** ಮಾನ್ಯ ಸಭಾಪತಿಯವರೆ, ಉತ್ತರ ಕರ್ನಾಟಕ, ಹೈದರಾಬಾದ್–ಕರ್ನಾಟಕದಲ್ಲಿರತಕ್ಕಂಥ 9–10 ಜಿಲ್ಲೆಗಳಿಗೆ Textile Parks ಆಗಬೇಕು. Textile Parks ಮಾಡಬೇಕೆನ್ನುವ ದೃಷ್ಟಿಯಿಂದ ಕಳೆದ 10 ವರ್ಷಗಳಿಂದ ನಾವು ಹೋರಾಟವನ್ನು ಮಾಡುತ್ತಿದ್ದೇವೆ.

(ಮುಂದು)

(574) 07.06.2017/ 11.20/ ಕೆಹೆಚ್/ಕೆಎಸ್(ಎಸ್‌ಪಿ)

(ಸಭಾಪತಿಯವರ ಉಪಸ್ಥಿತಿ)

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಮುಂದು):-** ಆದರೆ ಇದುವರೆವಿಗೂ ಕೂಡ Textile Park ಗಳನ್ನು ಮಾಡಿಲ್ಲ. ಶ್ರೀ ಕಾಗೋಡು ತಿಮ್ಮಪ್ಪನವರ ಸ್ವಂತ ಊರಿಗೆ ಭೇಟಿಕೊಟ್ಟು ಬಂದಿದ್ದೇನೆ. ಅವರ ಸ್ವಂತ ಊರಿನಲ್ಲೂ ಕೂಡ ನೇಕಾರರ ಪರಿಸ್ಥಿತಿಯ ಬಗ್ಗೆ ಶ್ರೀ ಕಾಗೋಡು ತಿಮ್ಮಪ್ಪನವರು ಯೋಚನೆ ಮಾಡಿದ್ದಾರೆ. ಎಲ್ಲಾ ಕ್ಷೇತ್ರದ ಶಾಸಕರು ಸದನದಲ್ಲಿರುವ ಸಂದರ್ಭದಲ್ಲಿ Textile Park ಗಳನ್ನು ಮಾಡುವುದಕ್ಕೆ ಕೇಂದ್ರ ಸರ್ಕಾರದವರಿಗೆ ದಯವಿಟ್ಟು ಒಂದು project ಅನ್ನು ಮಾಡಿ ಕಳುಹಿಸಿಕೊಡಿ. Textile Park ಗಳು, Cluster ಗಳು, Textile Diploma College ಗಳು ಆಗಬೇಕು. ಕರ್ನಾಟಕದಲ್ಲಿ Textile Diploma College ಗಳಿಲ್ಲ. ನೇಕಾರರ ಮಕ್ಕಳ ಪರಿಸ್ಥಿತಿ ಬಹಳ ಕಷ್ಟದಾಯಕವಾಗಿದೆ. Silk Production Weaving Centre ಆಗಬೇಕು. ಕರ್ನಾಟಕ ರಾಜ್ಯ ರೇಷ್ಮೆಗೆ ಅತ್ಯುತ್ತಮವಾದಂತಹ ಹೆಸರನ್ನು ತೆಗೆದುಕೊಂಡಿರುವುದು. ಆ ದೃಷ್ಟಿಯಿಂದ ಇವೆಲ್ಲವನ್ನು ಮಾಡುವ ಸಂದರ್ಭದಲ್ಲಿ ಅಧಿಕಾರಿಗಳ ಸಭೆ ಕರೆದು, ಕೇಂದ್ರಕ್ಕೆ ರಾಜ್ಯ ಸರ್ಕಾರದ ಮೂಲಕ ಅನುದಾನವನ್ನು ತರುವ ವ್ಯವಸ್ಥೆ ಕಡ್ಡಾಯವಾಗಿ ಮಾಡಬೇಕೆನ್ನುವುದು ನನ್ನ ಪ್ರಾರ್ಥನೆ.

**ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ:-** ಮಾನ್ಯ ಸಭಾಪತಿಯವರೆ, ಈ ವರ್ಷ ಆಯವ್ಯಯದಲ್ಲಿ 4 Textile Park ಗಳನ್ನು ಮತ್ತು ಮೈಸೂರಿನಲ್ಲಿ Silk Park ಅನ್ನು ಮಾಡುವ ಬಗ್ಗೆ ಯೋಜನೆ ಮಾಡಲಾಗಿದೆ. ಜಾಗವನ್ನು ಗುರುತಿಸಿ MOU ಮಾಡಿಕೊಂಡು, ಈಗಾಗಲೇ ಎಲ್ಲವನ್ನು ಕೂಡ ಮಾಡಿದ್ದೇವೆ. ಆದಷ್ಟು ಅವರನ್ನು ನನ್ನ ಜೊತೆಯಲ್ಲಿ ಕರೆದುಕೊಂಡು ಏನೇನು ಮಾಡುವುದಕ್ಕೆ ಸಾಧ್ಯತೆಯಿದೆಯೋ ಅದೆಲ್ಲವನ್ನು ಮಾಡುತ್ತೇನೆ.

**ಪ್ರಶ್ನೆ ಸಂಖ್ಯೆ: 2299**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎನ್.ಎಸ್. ಬೋಸ್‌ರಾಜು:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ವಿವರವಾದಂತಹ ಉತ್ತರವನ್ನು ಒದಗಿಸಿದ್ದಾರೆ. ಅನೇಕ ವರ್ಷಗಳಿಂದ ಜಿಲ್ಲಾ ಮಟ್ಟದ ಜಿಲ್ಲಾ complex ನಲ್ಲಿ ಇಲಾಖೆ ಮತ್ತು ಜಿಲ್ಲಾಡಳಿತ ನಡೆಯುತ್ತಿದೆ. ಈಗಾಗಲೇ ಉಳಿದಿರುವಂತಹ ವಿವಿಧ ಕಾಮಗಾರಿಗಳು ಇವತ್ತು ಸರ್ಕಾರದ ಪರಿಶೀಲನೆಯಲ್ಲಿದೆ. ಆದಷ್ಟು ಶೀಘ್ರವಾಗಿ ಜಿಲ್ಲಾ complex ಅನ್ನು ಕಟ್ಟುವುದಕ್ಕೆ ಅನುಮೋದನೆಯನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಎರಡನೆಯದಾಗಿ ರಾಯಚೂರು ಜಿಲ್ಲೆ, ಮಾನ್ವಿ ಪಟ್ಟಣದ ಮಿನಿ ವಿಧಾನಸೌಧ ನಿರ್ಮಾಣದ ವಿಚಾರವಾಗಿ ಕಂದಾಯ ಸಚಿವರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಭೇಟಿಕೊಟ್ಟಂತಹ ಸಂದರ್ಭದಲ್ಲಿ ಎರಡು ಬಾರಿ ನೋಡಿ ಒಳ್ಳೆಯ ಜಾಗವಿದೆ ಎಂದು ಹೇಳಿದರು. ಆ ಜಾಗವನ್ನು ಕೊಡಬೇಕೆಂದು ನೇರವಾಗಿ ಮಾನ್ಯ ಸಚಿವರನ್ನು ಕೇಳುತ್ತೇನೆ. ನಿರುಪಯೋಗಿಯಾಗಿರುವಂತಹ ಜಾಗವನ್ನು ಕೊಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿದಾಗ KBJNL ನಿಂದ ಒಪ್ಪಿಗೆಯನ್ನು ನೀಡಿದ್ದಾರೆ. ಹಾಗೆಯೇ 4 ಎಕರೆ ಜಾಗಕ್ಕೆ 6 ಕೋಟಿ 80 ಲಕ್ಷ ರೂಪಾಯಿಗಳು ಖರ್ಚುಯಾಗುತ್ತದೆಂದು Demand Notice ನ್ನು ಕಳುಹಿಸಿದ್ದಾರೆ. Revenue ಇಲಾಖೆಯಿಂದ 10 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. 10 ಕೋಟಿ ರೂಪಾಯಿಗಳ ಮೇಲೆ ಒಂದು ರೂಪಾಯಿಯನ್ನು ಕೊಡುವುದಿಲ್ಲ ಎನ್ನುವ ಮಾತನ್ನು ಇದೇ ಸದನದಲ್ಲಿ ಎರಡು ಬಾರಿ ಉತ್ತರವನ್ನು ಕೊಟ್ಟಿದ್ದಾರೆ. ಹಾಗಾಗಿ ಇಲಾಖೆಯಿಂದ ಇಲಾಖೆಗೆ ಕೊಡಬೇಕಾಗಿರುವಂತಹ ಜಾಗವನ್ನು ಮತ್ತು ಮಂಜೂರಾತಿಯನ್ನು ಹಾಗೂ ಈಗಾಗಲೇ ಅದಲಿ ಬದಲಿ ಮಾಡುವುದಕ್ಕೆ 4 ಎಕರೆಯಿಂದ 8 ಎಕರೆ ಬೇರೆ ಜಾಗವನ್ನು ಕೊಡುವುದಕ್ಕೆ ಜಿಲ್ಲಾಧಿಕಾರಿಯವರು ಪ್ರಸ್ತಾಪವನ್ನು ಕಳುಹಿಸಿದ್ದಾರೆ. ಕಂದಾಯ ಸಚಿವರು, ನೀರಾವರಿ ಸಚಿವರು, ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು ಈ ಸದನದಲ್ಲಿ ಇದ್ದಾರೆ. ಅದಲಿ ಬದಲಿ ಜಾಗಕ್ಕೆ ತಾವು ಒಪ್ಪಿಗೆಯನ್ನು ಕೊಟ್ಟರೆ ತಕ್ಷಣ ಮಿನಿ ವಿಧಾನಸೌಧವನ್ನು ಕಟ್ಟುವುದಕ್ಕೆ ಸಾಧ್ಯವಾಗುತ್ತದೆ. File ಇಲ್ಲೇ ತಿರುಗಾಡುತ್ತಿದೆ. File ಅಲ್ಲಿಂದ ಇಲ್ಲಿಗೆ, ಇಲ್ಲಿಂದ ಅಲ್ಲಿಗೆ ಬರುತ್ತದೆ, ಮಾನ್ಯ ಮುಖ್ಯಮಂತ್ರಿಯವರು ಒಪ್ಪಿಗೆಯನ್ನು ನೀಡಿದರೆ ಇದು ಸಾಧ್ಯವಾಗುತ್ತದೆ.

**ಸಭಾಪತಿಯವರು:–** ಅಕ್ಕ–ಪಕ್ಕದಲ್ಲಿಯೇ ಕುಳಿತಿದ್ದೀರಿ. ಅವರಿಗೆ ಜಾಗ ಕೊಡುತ್ತೀರೋ, ಇಲ್ಲವೋ?

**ಶ್ರೀ ಎನ್.ಎಸ್. ಬೋಸ್‌ರಾಜು:–** ಮಾನ್ಯ ಸಭಾಪತಿಯವರೆ, 6 ಕೋಟಿ 80 ಲಕ್ಷ ರೂಪಾಯಿಗಳನ್ನು ಕಟ್ಟುವುದಕ್ಕೆ . . . .

**ಸಭಾಪತಿಯವರು:–** ನನಗೆ ಕಾರಣ ಬೇಕಾಗಿಲ್ಲ. ಜಾಗ ಕೇಳಿದ್ದಾರೆ. ಕಂದಾಯ ಸಚಿವರ ಪಕ್ಕದಲ್ಲಿ ಕುಳಿತಿದ್ದೀರಿ. ಅವರು ಮಿನಿ ವಿಧಾನಸೌಧವನ್ನು ಕಟ್ಟಿಸುವುದಕ್ಕೆ ತಯಾರಿದ್ದಾರೆ. ದುಡ್ಡು ಇದೆ. ಜಾಗ ಕೊಡುತ್ತೀರೋ, ಇಲ್ಲವೋ? ಜಾಗವನ್ನು ಕೊಡುತ್ತೇನೆ ಅಥವಾ ಇಲ್ಲ ಸ್ವಾಮಿ ಕೊಡುವುದಿಲ್ಲ ಎಂದು ಎರಡು ಮಾತನ್ನು ಹೇಳಿ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ಬಿ.ಪಾಟೀಲ (ಜಲ ಸಂಪನ್ಮೂಲ ಸಚಿವರು):-** ಮಾನ್ಯ ಸಭಾಪತಿಯವರೆ, ಆ ವಿಷಯದ ಬಗ್ಗೆ ನೋಡಿ ಹೇಳಬೇಕಾಗುತ್ತದೆ. ತಕ್ಷಣ ಉತ್ತರವನ್ನು ಕೊಡುವುದಕ್ಕಾಗುವುದಿಲ್ಲ.

**ಸಭಾಪತಿಯವರು:-** ಅವರು ಖಾಸಗಿಯವರದ್ದು ಕೇಳುತ್ತಿಲ್ಲ. ಸರ್ಕಾರಿ ಸಂಕೀರ್ಣವನ್ನು ಕಟ್ಟುವುದಕ್ಕೆ ಕೇಳುತ್ತಿದ್ದಾರೆ.

**ಶ್ರೀ ಎಂ.ಬಿ.ಪಾಟೀಲ:-** ಮಾನ್ಯ ಸಭಾಪತಿಯವರೆ, ನಾನು ಇದನ್ನು ಪರಿಗಣಿಸುತ್ತೇನೆ. ನನಗೆ ಇದರ ಬಗ್ಗೆ ಸರಿಯಾದ ಮಾಹಿತಿಯಿಲ್ಲ. ಆ ಜಾಗವನ್ನು ಕೊಡಬಹುದೋ, ಇಲ್ಲವೋ? ಆದು ಜಾಗ ನಮಗೆ ಬೇಕಾಗಿದೆಯೋ, ಬೇಕಾಗಿಲ್ಲವೋ ಎಂಬುದನ್ನು ನೋಡಬೇಕಾಗುತ್ತದೆ. ಸುಮ್ಮನೆ ನಾವು ಉತ್ತರವನ್ನು ಕೊಡುವುದಕ್ಕಾಗುವುದಿಲ್ಲ. ಪ್ರಶ್ನೆಯನ್ನು ನನಗೆ ಕೇಳಿಲ್ಲ. ನನಗೆ ಪ್ರಶ್ನೆಯನ್ನು ಕೇಳಿದ್ದರೆ ನಾನು ಉತ್ತರವನ್ನು ಕೊಡುತ್ತಿದ್ದೆ.

**ಶ್ರೀ ಎನ್.ಎಸ್. ಬೋಸ್‌ರಾಜು:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಹೊಸ ತಾಲ್ಲೂಕುಗಳ ನಿರ್ಮಾಣಕ್ಕೆ ಈಗಾಗಲೇ ಘೋಷಣೆಯನ್ನು ಮಾಡಿದ್ದಾರೆ. ಆದರೆ ಇನ್ನು ಪ್ರಾರಂಭ ಮಾಡಿಲ್ಲ. ಇದರಿಂದ ಜನರು ಪರದಾಡುತ್ತಿದ್ದಾರೆ. ಹೊಸ ತಾಲ್ಲೂಕುಗಳನ್ನು ಯಾವ ದಿನದಿಂದ ಪ್ರಾರಂಭ ಮಾಡುತ್ತೀರೆಂದು ಜನರು ಕೇಳುತ್ತಿದ್ದಾರೆ. ಹೊಸ ತಾಲ್ಲೂಕುಗಳನ್ನು ನಿರ್ಮಾಣ ಮಾಡುವುದಕ್ಕೆ ತಹಶೀಲ್ದಾರ್‌ರವರನ್ನು ನೇಮಕಾತಿ ಮಾಡಬೇಕು.

**ಸಭಾಪತಿಯವರು:-** ಹೊಸ ತಾಲ್ಲೂಕುಗಳು ಘೋಷಣೆಯಾಯಿತು. ಆದರೆ ಇನ್ನು ಪ್ರಾರಂಭವಾಗಿಲ್ಲ ಮತ್ತು ಕೆಲಸವಾಗಿಲ್ಲವೆಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೆ, ಹೊಸ ತಾಲ್ಲೂಕುಗಳನ್ನು ಆದಷ್ಟು ಬೇಗ ಪ್ರಾರಂಭ ಮಾಡುವುದಕ್ಕೆ ಎಲ್ಲ ಸಿದ್ಧತೆಗಳನ್ನು ಮಾಡುತ್ತಿದ್ದೇವೆ. ಕೆಲವಕ್ಕೆ ಸ್ಥಳ ಬೇಕು. ಪರ್ಯಾಯ ಜಾಗ ಕೂಡ ಬೇಕು. ಇದಕ್ಕೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳಿಂದ ವರದಿಯನ್ನು ಕಳುಹಿಸಿಕೊಡುವುದಕ್ಕೆ ತಿಳಿಸಿದ್ದೇವೆ. ಜೊತೆಯಲ್ಲಿ ಆ ಜಿಲ್ಲಾ ಮಂತ್ರಿಯವರ ಒಪ್ಪಿಗೆಯನ್ನು ಪಡೆದು ಪ್ರಸ್ತಾವನೆಯನ್ನು ಸಲ್ಲಿಸುವುದಕ್ಕೆ ಹೇಳಿದ್ದೇವೆ. ಆದಷ್ಟು ಬೇಗ ಹೊಸ ತಾಲ್ಲೂಕುಗಳನ್ನು ಪ್ರಾರಂಭ ಮಾಡುವುದಕ್ಕೆ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇವೆ.

**ಶ್ರೀ ಎನ್.ಎಸ್. ಬೋಸ್‌ರಾಜು:-** ಮಾನ್ಯ ಸಭಾಪತಿಯವರೆ, ಜಾತಿ certificate ಅನ್ನು ಕೊಡುವುದಕ್ಕೂ ಸಹ ಬಹಳ ನಿಧಾನವಾಗುತ್ತಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ಸದಸ್ಯರು ಜಾತಿ certificate ಬಗ್ಗೆ ಸಂಬಂಧಿಸಿದ ಪ್ರಶ್ನೆಯನ್ನು ಕೇಳುತ್ತಿದ್ದಾರೆ.

**ಶ್ರೀ ಎನ್.ಎಸ್. ಬೋಸ್‌ರಾಜು:-** ಮಾನ್ಯ ಸಭಾಪತಿಯವರೆ, ಅದರಲ್ಲಿ ಮುಖ್ಯವಾಗಿ ಹಿಂದುಳಿದ ವರ್ಗಗಳಿಗೆ ಸೇರಿರುವಂತಹ "ಹೆಳವ" ಸಮಾಜದವರು ಅನೇಕ representation ಗಳನ್ನು ಕೊಟ್ಟಿದ್ದಾರೆ. ಮೊನ್ನೆಯ ದಿವಸ ರಾಯಚೂರಿನಲ್ಲಿ "ಹೆಳವ" ಸಮಾಜದ ಇಡೀ ರಾಜ್ಯ ಮಟ್ಟದ ಮಹಾಸಭೆ ನಡೆಯಿತು. ಆ ಸಮಯದಲ್ಲಿ ಅವರು ಬೇಡಿಕೆಯನ್ನಿಟ್ಟಿದ್ದಾರೆ. ದಯವಿಟ್ಟು ಅದರ ಬಗ್ಗೆ ಪರಿಶೀಲನೆಯನ್ನು ಮಾಡಿ ತಕ್ಷಣ ಜಾತಿ ಪ್ರಮಾಣ ಪತ್ರವನ್ನು ಕೊಡುವುದಕ್ಕೆ ಪ್ರಯತ್ನ ಮಾಡಬೇಕು.

**ಸಭಾಪತಿಯವರು:-** ಜಾತಿ certificate ಕೊಡುವುದಕ್ಕೆ ತಡವಾಗುತ್ತಿದೆ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೆ, ಜಾತಿ ಪ್ರಮಾಣ ಪತ್ರವನ್ನು ಕೊಡುವುದಕ್ಕೆ ತಡವಾಗುವುದಿಲ್ಲ. ಜಾತಿಗೆ ಸಂಬಂಧಪಟ್ಟಂತಹ ಮೂಲಭೂತ ದಾಖಲೆಗಳನ್ನು ಕೊಟ್ಟರೆ ತಕ್ಷಣ ಜಾತಿ ಪ್ರಮಾಣ ಪತ್ರವನ್ನು ಕೊಡುತ್ತಾರೆ. ಇದರ ಕೊರತೆಯಿಂದಾಗಿ ಕಂದಾಯ ನಿರೀಕ್ಷಕರನ್ನು ಅವನ ಊರಿಗೆ ಕಳುಹಿಸಬೇಕು. ಅಲ್ಲಿ ಮಹಜರ್ ಮಾಡಬೇಕು. ಹೌದೋ, ಇಲ್ಲವೋ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಹೀಗಾಗಿ ವಿಳಂಬವಾಗುತ್ತಿದೆಯೇ ವಿನಃ, ಈ ತಾಲ್ಲೂಕು ತಹಶೀಲ್ದಾರ್‌ರವರಿಂದ ಏನು ವಿಳಂಬವಾಗುವುದಿಲ್ಲ. ಈ ರೀತಿಯ ಸನ್ನಿವೇಶವಿದೆ. ಯಾರೇ ಇದ್ದರೂ ಕೂಡ ಶಾಲೆಯ admission ನ ಪ್ರಮಾಣ ಪತ್ರವನ್ನು ಕೊಟ್ಟರೆ, ಅದರಲ್ಲಿ ಜಾತಿಯ ಬಗ್ಗೆ ನಮೂದಿಸಿರುವುದರಿಂದ ಬೇಗ ಆಗುತ್ತದೆ. ಕೆಲವು ಬಾರಿ ಇರುವುದಿಲ್ಲ. ಅದಕ್ಕೆ ಈ ರೀತಿಯಾಗಿದೆ. ಅದಕ್ಕೋಸ್ಕರ ಈಗ ಜಾತಿ certificate ಅನ್ನು ಕೊಡುವುದಕ್ಕೆ ತಾಲ್ಲೂಕು ಕಚೇರಿಯಲ್ಲಿ ಮಾತ್ರವಲ್ಲ, ನಾಡ ಕಚೇರಿಯಲ್ಲೂ ಕೊಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದೇವೆ. ಆದ್ದರಿಂದ ವಿಳಂಬವಾಗದೇ ಇರುವ ರೀತಿಯಲ್ಲಿ ಇತ್ಯರ್ಥಪಡಿಸುವುದಕ್ಕೆ ಏನು ಸೂಚನೆ ಬೇಕೋ ಅದನ್ನು ಕೊಡುವಂತಹ ಕೆಲಸವನ್ನು ಮಾಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 2185**

**(ಉತ್ತರವನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನೇನೋ ಒದಗಿಸಿದ್ದಾರೆ. ಆದರೆ ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕಿನಲ್ಲಿ ಗಂಧದ ಗಿಡಗಳ ಹಾಗೂ ದಾಲಚಿನ್ನಿ, ಎಲೆ, ತೊಗಟೆಗಳ ವ್ಯಾಪಕ ಕಳ್ಳತನ ನಡೆಯುತ್ತಿದ್ದರೂ ಇಲಾಖೆ ಮೌನ ವಹಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎನ್ನುವ ಪ್ರಶ್ನೆಯನ್ನು ಮಾನ್ಯ ಸಚಿವರನ್ನು ಕೇಳಿರುವುದಕ್ಕೆ ಅವರು ಪ್ರಕರಣವನ್ನು ದಾಖಲಿಸಲಾಗಿದೆ, ಬೇರೆ ಯಾವುದಾದರೂ ಇಂತಹ ಪ್ರಕರಣಗಳು ಕಂಡುಬಂದಲ್ಲಿ ಕರ್ನಾಟಕ ಅರಣ್ಯ ಕಾಯ್ದೆ 1963 ರ ಅರಣ್ಯ ಮೊಕದ್ದಮೆ ದಾಖಲಿಸಿ ಕ್ರಮ ಕೈಗೊಳ್ಳಲಾಗುವುದೆಂದು ಹೇಳಿದ್ದಾರೆ. ಇಂತಹ ಗಂಭೀರವಾದಂತಹ ವಿಷಯಗಳನ್ನು ಪರಿಗಣಿಸದೆ ಅರಣ್ಯ ಇಲಾಖೆಯವರು ಈ ರೀತಿಯ ಉತ್ತರವನ್ನು ಕೊಡುತ್ತಾ ಬಂದಿದ್ದಾರೆ. ಗಂಧದ ಗಿಡದ ಕಳ್ಳತನ ಜಾಲವನ್ನು ಒಮ್ಮೆಯಾದರೂ ಈ ಇಲಾಖೆ ಭೇದಿಸಿದೆಯೇ? ಇದರ ಬಗ್ಗೆ ಮೊನ್ನೆಯ ದಿವಸ ಉತ್ತರವನ್ನು ಕೊಟ್ಟಿದ್ದಾರೆ. ಅರಣ್ಯಗಳಲ್ಲಿ ಅದರಲ್ಲೂ ಶ್ರೀಗಂಧದ ಗಿಡಗಳನ್ನು ಕಳ್ಳತನ ಮಾಡುವವರನ್ನು ಇಲಾಖೆಯವರು ಗಮನ ಹರಿಸದೇ, ಹಿಂದೆಯೂ ಬಹಳಷ್ಟು ಇಂತಹ ಪ್ರಕರಣಗಳು ನಡೆದಿವೆ. ಇದುವರೆವಿಗೂ ಶ್ರೀಗಂಧದ ಕಳ್ಳರನ್ನು ಹಿಡಿಯುವಂತಹ ಕೆಲಸವಾಗಿಲ್ಲ. ಹಳಿಯಾಳ ವಿಭಾಗದಲ್ಲಿನ DFO ಮನೆಯ ಆವರಣದಲ್ಲಿರುವ ಗಂಧದ ಗಿಡಗಳನ್ನು ಎರಡು ವರ್ಷಗಳ ಹಿಂದೆ ಕಳ್ಳತನ ಮಾಡಿದರು. ಅದನ್ನು ಇದುವರೆವಿಗೂ ಪತ್ತೆ ಮಾಡಿಲ್ಲ. ಈ ರೀತಿಯಾಗಿ ಉಡಾಫೆ ಉತ್ತರಗಳನ್ನು ಕೊಡುತ್ತಾ ಹೋದರೆ ಮತ್ತು ಇವರಿಗೆ ಬೇರೆ ಬೇರೆ ಕೆಲಸಗಳೇ ಹೆಚ್ಚಾಗಿವೆ. RFO, DFO ಇವರಿಗೆ ಯಾವ ಯಾವ ಕೆಲಸಗಳು ಹೆಚ್ಚಾಗಿವೆಯೆಂದರೆ ಗಿಡ ನೆಡುವ ಕಾರ್ಯಕ್ರಮ, trench ಹೊಡೆಯುವುದು, Civil work ಗಳನ್ನು ಇವರೇ ಮಾಡುತ್ತಾರೆ, ಬೇರೆ ಯಾವ contractor ಗಳಿಗೂ ಕೊಡುವುದಿಲ್ಲ. Dead and fallen trees, ಸತ್ತ ಗಿಡ-ಮರಗಳನ್ನು logging ಅವರೇ ಮಾಡುತ್ತಾರೆ. ಉಸುಕು ಮತ್ತು ಕಲ್ಲು ಅವರೇ ನೋಡುತ್ತಾರೆ.

**ಸಭಾಪತಿಯವರು:-** ಅರಣ್ಯ ಸಚಿವರು ಏನು ಮಾಡಬೇಕೆಂದು ಹೇಳಿ.

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ:-** ಮಾನ್ಯ ಸಭಾಪತಿಯವರೆ, ಇನ್ನು ಮುಂದೆ ಇದೇ ರೀತಿ ನಡೆದರೆ ನಮ್ಮ ಉತ್ತರ ಕನ್ನಡ ಜಿಲ್ಲೆಯಲ್ಲಿರುವಂತಹ 5 ಅರಣ್ಯ ಪ್ರದೇಶಗಳಲ್ಲಿ ಬೆಲೆ ಬಾಳುವಂತಹ ಗಿಡಗಳಿವೆ. ಗಿಡ ನೆಡುವುದಕ್ಕಿಂತ, ಇರುವಂತಹ ಗಿಡಗಳನ್ನು ಕಾಯ್ದುಕೊಂಡರೆ ಸಾಕು. ಎಷ್ಟು ಗಿಡಗಳನ್ನು ನೆಡುತ್ತಾರೆ. ಏನು ಮಾಡುತ್ತಾರೆ. ವರ್ಷ ವರ್ಷ ಎಲ್ಲಿಗೆ ಹೋಗುತ್ತಾರೆ. ಪ್ರತಿವರ್ಷ ಗಿಡಗಳನ್ನು ನೆಡುತ್ತಾರೆ. ಪ್ರತಿಯೊಂದು ಕೆಲಸವನ್ನು ಅವರೇ ಮಾಡುತ್ತಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಸಭಾಪತಿಯವರು:–** ಮಾನ್ಯ ಸಚಿವರು ಇದರ ಬಗ್ಗೆ ಉತ್ತರವನ್ನು ಹೇಳುತ್ತಾರೆ.

**ಶ್ರೀ ಬಿ.ರಮಾನಾಥ ರೈ:–** ಮಾನ್ಯ ಸಭಾಪತಿಯವರೆ, ಗೌರವಾನ್ವಿತ ಸದಸ್ಯರು . . .

**ಸಭಾಪತಿಯವರು:–** ಶ್ರೀ ಘೋಟ್ನೆಕರ್‌ರವರ ನೇರ ಪ್ರಶ್ನೆಯಲ್ಲಿ ನೀವು ಕೊಟ್ಟಿರುವಂತಹ ಉತ್ತರದ ಬಗ್ಗೆ ಗಮನಿಸಿದ್ದೇನೆ. ಮಾನ್ಯ ಸದಸ್ಯರು **ಉಡಾಫೆ** ಎನ್ನುವ ಪದವನ್ನು ಉಪಯೋಗಿಸಿದರು. ಅದನ್ನು ನಾನು ನೋಡುತ್ತೇನೆ. ಸರಿಯಿಲ್ಲ ಎನ್ನುವ ಪದವನ್ನು ಉಪಯೋಗಿಸಿದ್ದಾರೆ. ಉತ್ತರದ ಬಗ್ಗೆ ಸರಿಯಾಗಿ ನೋಡಿ ಹೇಳಿ. ಆ ಉತ್ತರವನ್ನು ನೋಡಿ ಮಾನ್ಯ ಸದಸ್ಯರಿಗೆ ಸಮಧಾನವಾಗಿಲ್ಲ. ಮನಸ್ಸಿಗೆ ನೋವಾಗಿದೆ. ನಿಮ್ಮ ಉತ್ತರವನ್ನು ನೋಡಿ. ಏನೇನು ಬಾಕಿಯಿವೆ. ಅದಕ್ಕೆ ಉತ್ತರವನ್ನು ಹೇಳಬಹುದು.

**ಶ್ರೀ ಬಿ.ರಮಾನಾಥ ರೈ:–** ಮಾನ್ಯ ಸಭಾಪತಿಯವರೆ, ಉತ್ತರ ಕನ್ನಡ ಜಿಲ್ಲೆಯಲ್ಲಿ ಅದರಲ್ಲೂ ಶಿರಸಿ ತಾಲ್ಲೂಕಿನಲ್ಲಿ ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆಗೆ ಉತ್ತರವಾಗಿ ನಾವು ಕೆಲವು ಪ್ರಕರಣಗಳನ್ನು ಇವತ್ತು ಕರ್ನಾಟಕ ಅರಣ್ಯ ಕಾಯ್ದೆ 1963 ಹಾಗೂ ಕರ್ನಾಟಕ ಅರಣ್ಯ ನಿಯಮಾವಳಿ 1969 ರಂತೆ ಅರಣ್ಯ ಮೊಕದ್ದಮೆ ದಾಖಲಿಸಲಾಗಿದೆ. ಇದರಲ್ಲಿ ಒಬ್ಬರನ್ನು ಜಪ್ತಿ ಮಾಡಿ, ಅವರನ್ನು ದಸ್ತಗಿರಿ ಮಾಡಲಾಗಿದೆ ಮತ್ತು ನ್ಯಾಯಾಲಯದಲ್ಲಿ ಕೇಸ್ ಕೂಡ ನಡೆಯುತ್ತಿದೆ. ನಾವು ಸಾಧ್ಯವಾದಷ್ಟು ಮಟ್ಟಿಗೆ ಕಳ್ಳತನವನ್ನು ನಿಯಂತ್ರಣ ಮಾಡುವುದಕ್ಕೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಿದ್ದೇವೆ. ಮುಂದುವರೆದು, ಗಿಡಗಳನ್ನು ನೆಡುತ್ತಾರೆ ಎನ್ನುವ ಪ್ರಶ್ನೆಗೆ ಹೌದು, ಜನಸಂಖ್ಯೆ ಜಾಸ್ತಿಯಾಗಿದೆ. ಅರಣ್ಯಗಳ ಮೇಲೆ ಅವಲಂಬಿತ ಜನರು ಜಾಸ್ತಿಯಾಗಿದ್ದಾರೆ. ಒಂದು ಕಡೆ ಗಿಡಗಳನ್ನು ನೆಡುತ್ತಿದ್ದರೆ, ಅದನ್ನು ಕಾಲಕಾಲಕ್ಕೆ ಕಡಿಯುವಂತಹ ಕೆಲಸ ಕೂಡ ಆಗುತ್ತದೆ. ಈಗ ಇಷ್ಟು ಜನಸಂಖ್ಯೆ ಇರುವುದರಿಂದ ಊರುವಲು ಮತ್ತು ಇನ್ನಿತರ ಮರಮುಟ್ಟುಗಳೆಲ್ಲವೂ ಸಹ ಕಾಡಿನಿಂದಲೇ ಆಗಬೇಕಾಗಿದೆ.

(ಮುಂದು)

575/7-6-2017/11-30/bkp-ks(sp)

**ಶ್ರೀ ಬಿ. ರಮಾನಾಥ ರೈ (ಮುಂದು. . )**

ಒಂದು ಲಕ್ಷ ಜನಸಂಖ್ಯೆ ಜಾಸ್ತಿಯಾಗಿದೆ. ಒಂದು ವಿಚಾರವನ್ನು ತಮಗೆ ಹೇಳಲಿಕ್ಕೆ ಬಯಸುತ್ತೇನೆ. ಹಿಂದೆ ಶ್ರೀಮತಿ ಇಂದಿರಾ ಗಾಂಧಿಯವರು ಇದ್ದಂತಹ ಸಂದರ್ಭದಲ್ಲಿ ಅರಣ್ಯ ಸಂರಕ್ಷಣಾ ಕಾಯಿದೆ ತಂದರು. ಈ ಕಾಯಿದೆಯನ್ನು ತರುವ ಮೊದಲು ಲಕ್ಷಾಂತರ ಹೆಕ್ಟೇರ್ ಜಾಗ ಅರಣ್ಯ ಪ್ರದೇಶಕ್ಕೆ ಹೋಗುತ್ತಿತ್ತು. ಈಗ ಸಾಕಷ್ಟು ನಿಯಂತ್ರಣವಾಗಿದೆ. ಹೌದು, ಗಂಧದ ಕಳ್ಳತನ ಮೊದಲಿನಿಂದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಗುತ್ತಿರುವುದು ಸ್ವಲ್ಪಮಟ್ಟಿಗೆ ಇದೆ. ಅದನ್ನು ಸಂಪೂರ್ಣವಾಗಿ ಇಲ್ಲವೆಂದು ನಾನು ಹೇಳಲಿಕ್ಕೆ ಹೋಗುವುದಿಲ್ಲ. ಆದರೆ, ನಮ್ಮ ಇಲಾಖೆ ಇದನ್ನು ಸಾಧ್ಯವಾದಷ್ಟು ಮಟ್ಟಿಗೆ ನಿಯಂತ್ರಣ ಮಾಡಲಿಕ್ಕೆ ಪ್ರಯತ್ನ ಮಾಡುತ್ತಿದೆ. ನಿಯಂತ್ರಣ ಇಲಾಖೆಯಾಗಿದ್ದು, ನಾವು ನಮ್ಮ ಕರ್ತವ್ಯದ ಪಾಲನ್ನು ಮಾಡುತ್ತಿದ್ದೇವೆ. ಬಹುಶ: ತಾವು ಈ ಶಿರಸಿಯಲ್ಲಿನ ವಿಚಾರವನ್ನು ತಾವು ಏನು ಹೇಳಿದ್ದೀರಿ, ನಿಮಗೆ ನಮ್ಮ ಉತ್ತರಗಳು ಸಮಾಧಾನಕರವಾಗಿಲ್ಲದಿದ್ದರೆ ನಾವು ಹಿರಿಯ ಅಧಿಕಾರಿಗಳೊಂದಿಗೆ ಚರ್ಚೆ ಮಾಡಿ, ಇದರ ಬಗ್ಗೆ ಏನು ನಡೆದಿದೆ ಎಂದು ಕೂಲಂಕಷವಾಗಿ ಪರಿಶೀಲಿಸಿ, ಅದಕ್ಕೆ ಏನು ಕ್ರಮ ಕೈಗೊಳ್ಳಬೇಕಾಗಿದೆಯೋ ಅದನ್ನು ಮಾಡಲಿಕ್ಕೆ ನಾನು ಬದ್ಧನಿದ್ದೇನೆಂದು ಈ ಸಂದರ್ಭದಲ್ಲಿ ಸದಸ್ಯರಿಗೆ ಹೇಳಲಿಕ್ಕೆ ಬಯಸುತ್ತೇನೆ.

**ಸಭಾಪತಿಯವರು:-** ಧನ್ಯವಾದಗಳು. ಮಾನ್ಯ ಸದಸ್ಯರು ಮತ್ತೆ ಏನಾದರೂ ಕೇಳುವುದಿದ್ದರೆ ಕೇಳಿ. ಪ್ರಶ್ನೆಯನ್ನು ಕೇಳುವುದಿದ್ದರೆ ಕೇಳಿ.

**ಶ್ರೀ ಎಸ್.ಎಲ್. ಘೋಟ್ನೆಕರ್:-**ಮಾನ್ಯ ಸಭಾಪತಿಯವರೆ, ಇವರು ಗಿಡಗಳನ್ನು ನೆಡುತ್ತಾರೆ. ಆದರೆ, ಆ ಗಿಡಗಳನ್ನು ನೋಡುವವರು ಯಾರು? ಆ ಗಿಡಗಳನ್ನು ನೋಡುವುದೇ ಇಲ್ಲ. ಒಂದು ಬಾರಿ ಗಿಡಗಳನ್ನು ನೆಟ್ಟಿದರೆ ಸಾಕು, ಅವರ ಕೆಲಸ ಮುಗಿಯಿತು. ಅದಕ್ಕೆ ನೀರು ಕೊಡುವುದಿಲ್ಲ, ಮತ್ತೇನು ನೋಡುವುದಿಲ್ಲ. ನೀವು ಎಷ್ಟು ಗಿಡಗಳನ್ನು ನೆಡುತ್ತೀರಿ, ಅವುಗಳನ್ನು ಸಂರಕ್ಷಣೆ ಮಾಡಬೇಕಲ್ಲವೇ? ಪ್ರತಿ ವರ್ಷ ಎಲ್ಲಿ ಗಿಡಗಳನ್ನು ನೆಡುತ್ತಾರೆ, ಅಲ್ಲಿಯೇ ಮತ್ತೆ ಗಿಡಗಳನ್ನು ನೆಡುತ್ತಾರೆ.

**ಸಭಾಪತಿಯವರು:-** ಸಚಿವರು ಅದರ ಬಗ್ಗೆ ಹೇಳುತ್ತಾರೆ.

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೆ,

**ಸಭಾಪತಿಯವರು:-** ಬೇಡ ಕುಳಿತುಕೊಳ್ಳಿ. ಇದು ಪ್ರಶ್ನೋತ್ತರ ಅವಧಿ. ವಿಷಯ ಎಲ್ಲಿಗೋ ಹೋಗಿಬಿಡುತ್ತದೆ.

**ಶ್ರೀ ಕೆ.ಬಿ.ಶಾಣಪ್ಪ:-** ಎಲ್ಲಿಗೂ ಹೋಗುವುದಿಲ್ಲ.

**ಸಭಾಪತಿಯವರು:-** ಈಗ ಅರಣ್ಯ ಇಲಾಖೆಯ ಬಗ್ಗೆ ಚರ್ಚೆ ಇಲ್ಲ. ಅವರ ಜಿಲ್ಲೆ ಬಗ್ಗೆ ಮಾತ್ರ ಕೇಳುತ್ತಿದ್ದಾರೆ. ಅವರ ಉತ್ತರ ಕನ್ನಡ ಜಿಲ್ಲೆಯ ಬಗ್ಗೆ ಮಾತ್ರ ಚರ್ಚೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಎಲ್. ಘೋಟ್ನೇಕರ್:-**ಮಾನ್ಯ ಸಭಾಪತಿಯವರೆ, ಗಿಡಗಳನ್ನು ಘೋಷಣೆ ಮಾಡಬೇಕಲ್ಲವೇ, ಬರಿ ಗಿಡ ನೆಟ್ಟರೆ ಸಾಕಾಗುವುದಿಲ್ಲ.

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೆ,

**ಸಭಾಪತಿಯವರು:-** ದಯವಿಟ್ಟು ಕುಳಿತುಕೊಳ್ಳಿ. ಇಲ್ಲಿ ಗಿಡ ನೆಡುವ ವಿಷಯ ಅಲ್ಲ. ಉತ್ತರ ಕನ್ನಡ ಜಿಲ್ಲೆಯಲ್ಲಿ ಅರಣ್ಯ. ಹೊರಗಡೆ ವಿಷಯವಲ್ಲ. ಆದ್ದರಿಂದ, ವಿಷಯ ಇದ್ದಲ್ಲಿ ಅರಣ್ಯ ಇಲಾಖೆಯ ವಿಷಯ ಚರ್ಚೆಗೆ ಬಂದಾಗ ನೋಡೋಣ. ಇಲ್ಲಿ ಉತ್ತರ ಕನ್ನಡ ಜಿಲ್ಲೆಯದ್ದು ಮಾತ್ರ ಬರುತ್ತದೆ. ಬೇಕಾದರೆ ಉತ್ತರ ಕನ್ನಡ ಜಿಲ್ಲೆಯದ್ದೇ ಹೇಳುವುದಿದ್ದರೆ ಹೇಳಿ. ಪ್ರಶ್ನೆ ಏನಿದೆ ಎಂದು ನೀವು ನೋಡಿ. ಪ್ರಶ್ನೆ ಉತ್ತರ ಕನ್ನಡ ಜಿಲ್ಲೆಗೆಂದು ಇದೆ.

**ಶ್ರೀ ಕೆ.ಬಿ.ಶಾಣಪ್ಪ:-** ಗಿಡಗಳು ಎಂದರೆ ರಾಜ್ಯದ ಎಲ್ಲಾ ಕಡೆ ಸಂಬಂಧಪಟ್ಟದ್ದಾಗಿದೆ.

**ಸಭಾಪತಿಯವರು:-** ಈಗ ಆ ಪ್ರಶ್ನೆ ಇಲ್ಲ. ಉತ್ತರ ಕನ್ನಡ ಜಿಲ್ಲೆಯ ಪ್ರಶ್ನೆಯಾಗಿದೆ.

**ಶ್ರೀ ಕೆ.ಬಿ.ಶಾಣಪ್ಪ:-** ಗಿಡ ನೆಟ್ಟ ನಂತರ ಅದನ್ನು ಸಂರಕ್ಷಣೆ ಮಾಡಲಿಕ್ಕೆ ಏತಕ್ಕೆ ಕ್ರಮ ತೆಗೆದುಕೊಳ್ಳುವುದಿಲ್ಲ. ಬರಿ ಗಿಡ ನೆಡುತ್ತೀರಿ. ಅದಕ್ಕೆ ನೀರು ಹಾಕುವುದಿಲ್ಲ, ಅದರ ಪೋಷಣೆಯ ಬಗ್ಗೆ ನೋಡುವುದಿಲ್ಲ. ಅದರ ಬಗ್ಗೆ ನನ್ನ ಚಿಂತೆ ಇದೆ.

**ಸಭಾಪತಿಯವರು:-** ನಿಮ್ಮ ವಿಷಯ ಇದ್ದರೆ ಕೇಳಿ, ಹೇಳುತ್ತಾರೆ. ಇಡೀ ರಾಜ್ಯದ ವಿಷಯ ಈಗ ಆಗುವುದಿಲ್ಲ.

**ಶ್ರೀ ಬಿ.ರಮಾನಾಥ ರೈ:-** ಇಂತಹ ಕಡೆ ಈ ರೀತಿ ಆಗಿದೆ ಎಂದು ನೀವು ನೇರವಾಗಿ ಪ್ರಶ್ನೆಯನ್ನು ಕೇಳಿ.

**ಶ್ರೀ ಕೆ.ಬಿ.ಶಾಣಪ್ಪ:-** ನೀವು ಸಾವಿರಾರು ಗಿಡ ನೆಡುತ್ತೀರಿ. ನಾನು ಒಪ್ಪುತ್ತೇನೆ.

**ಶ್ರೀ ಬಿ.ರಮಾನಾಥ ರೈ:-** ನೀವು ಸುಮ್ಮನೆ ಸರಾಸಗಟಾಗಿ ನೀರು ಹಾಕುತ್ತಿಲ್ಲ, ಹಾಗೆ ಮಾಡುತ್ತಿಲ್ಲ, ಹೀಗೆ ಮಾಡುತ್ತಿಲ್ಲ ಎನ್ನುವುದಲ್ಲ. ನಾವು ಒಂದು ಮಾತನ್ನು ಹೇಳಲಿಕ್ಕೆ ಬಯಸುತ್ತೇನೆ. ಗಿಡ ನೆಡತಕ್ಕಂತಹ ಕಾರ್ಯಕ್ರಮವನ್ನು ನಾವು ಸಾಕಷ್ಟು ದೊಡ್ಡ ಸಂಖ್ಯೆಯಲ್ಲಿ ಮಾಡುತ್ತಿದ್ದೇವೆ. ನಾವು ಪ್ರತಿ ಕ್ಷೇತ್ರದಲ್ಲಿ ಶಾಸಕರ ನೇತೃತ್ವದಲ್ಲಿ . . .

(ಗೊಂದಲ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅದಕ್ಕಿಂತ ಹೆಚ್ಚಾಗಿ ಅರಣ್ಯ ಪ್ರೋತ್ಸಾಹ, ಕೃಷಿ ಅರಣ್ಯ ಪ್ರೋತ್ಸಾಹ ಕಾರ್ಯಕ್ರಮ ಇದೆ. ಒಂದು ಯಾವುದೇ ಒಬ್ಬ ವ್ಯಕ್ತಿ ಗಿಡವನ್ನು ತನ್ನ ಜಾಗದಲ್ಲಿಯೇ ನೆಟ್ಟರೆ, ಅವನು ಅದನ್ನು ಉಳಿಸಿ, 3 ವರ್ಷ ಉಳಿಸಿದರೆ 100 ರೂಪಾಯಿಗಳನ್ನು ಕೊಡುವಂತಹ ಕಾರ್ಯಕ್ರಮ ನಮ್ಮ ಇಲಾಖೆಯಲ್ಲಿ ಇದೆ. ಮೊದಲು 45 ರೂಪಾಯಿಗಳಿತ್ತು. ಈಗ 100 ರೂಪಾಯಿಗಳನ್ನು ಕೊಡುತ್ತಿದ್ದೇವೆ. ಅವನ ಜಮೀನಿನಲ್ಲಿ ಗಿಡ ನೆಟ್ಟು, ಅದನ್ನು ಉಳಿಸಿ, ಬೆಳೆಸಬೇಕು. ಮತ್ತೆ ಸಾಕಷ್ಟು ಕಡೆ ನಡು ತೋಪುಗಳನ್ನು ನೆಡುವಂತಹದ್ದು, ಅದನ್ನು ಉಳಿಸುವಂತಹ ಪ್ರಯತ್ನವನ್ನು ಇಲಾಖೆ ಖಂಡಿತವಾಗಿ ಮಾಡುತ್ತದೆ ಎಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ.

**ಪ್ರಶ್ನೆ ಸಂಖ್ಯೆ 2152**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಪ್ರದೀಪ್ ಶೆಟ್ಟರ್:-** ಮಾನ್ಯ ಸಭಾಪತಿಯವರೆ, ನಮ್ಮ ಧಾರವಾಡ, ಗದಗ ಮತ್ತು ಹಾವೇರಿ ಈ ಮೂರು ಜಿಲ್ಲೆಯಲ್ಲಿ ಒಟ್ಟು 140 ಕೆರೆಗಳಿವೆ. ಅದರಲ್ಲಿ 19 ಕೆರೆಗಳು ಪೂರ್ಣಗೊಂಡಿವೆ ಎಂದು ಹೇಳುತ್ತಾರೆ. 25 ಕೆರೆಗಳು ಕಾರ್ಯ ಪ್ರಗತಿಯಲ್ಲಿವೆ ಎಂದು ಹೇಳುತ್ತಾರೆ. 96 ಕೆರೆಗಳ ಕಾಮಗಾರಿ ಇನ್ನೂ ಪ್ರಾರಂಭವಾಗಿಲ್ಲ, ಇನ್ನೂ ಟೆಂಡರ್ ಕರೆದಿಲ್ಲ. ಮಹಾ ಬರಗಾಲ. ಸರ್ಕಾರದವರು ಮತ್ತು ಪ್ರತಿ ಪಕ್ಷದವರಾದ ನಾವು ಕರ್ನಾಟಕದಲ್ಲಿ ಬರಗಾಲ ಇದೆ ಎಂದು ಹೇಳಿಕೊಂಡು ಓಡಾಡುತ್ತಿದ್ದೇವೆ. ಇವತ್ತು 96 ಕೆರೆಗಳ ಕಾಮಗಾರಿಯನ್ನು ಮಾಡಿಲ್ಲ.

ಮಾನ್ಯ ಸಭಾಪತಿಯವರೆ, ಧಾರವಾಡ ಜಿಲ್ಲೆಯಲ್ಲಿ ತುಪ್ಪದ ಕೆರೆ ಇದು ಮಂತ್ರಿಗಳಾದ ಶ್ರೀ ವಿನಯ್ ಕುಲಕರ್ಣಿ ರವರ ಕ್ಷೇತ್ರ. ಅಲ್ಲಿ ಟೆಂಡರ್ ಕರೆದಿಲ್ಲ. ಒಂದು ಕೆರೆಗೂ ಸಹ ಟೆಂಡರ್ ಕರೆದಿಲ್ಲ. ಕಳೆದ ರಿವ್ಯೂ ಕಮಿಟಿ ಸಭೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಧಾರವಾಡ ಜಿಲ್ಲೆಗೆ ಬಂದಂತಹ ಸಮಯದಲ್ಲಿ ಸಚಿವರಾದ ಶ್ರೀಯುತ ವಿನಯ್ ಕುಲಕರ್ಣಿಯವರೆ ಹೇಳಿದರು. ಇವತ್ತು ಏನಾಗುತ್ತಿದೆ? ಆ ಗ್ರಾಮದಲ್ಲಿನ ರೈತರು ಗೂಳೆ ಹೊರಟಿದ್ದಾರೆ. ಕುಡಿಯುವುದಕ್ಕೆ ನೀರಿಲ್ಲ. ಇಂತಹ ಸ್ಥಿತಿ. ಬಿಡಿ, ದೊಡ್ಡ ದೊಡ್ಡ ಟೆಂಡರ್‌ಗಳನ್ನು ಕರೆಯುವುದನ್ನು ಬಿಡಿ. ಮೊದಲು ಕೆರೆಗಳಿಗೆ ನೀರನ್ನು ತುಂಬಿಸಿ. ರೈತರು ಕುಡಿಯುವುದಕ್ಕೆ ನೀರಿಲ್ಲದೆ, ಧಾರವಾಡ, ಶಿಗ್ಗಾಂವ್‌ನ ಕೆಲವು ಭಾಗದಲ್ಲಿ, ಗದಗ್‌ನ ಕೆಲವು ಭಾಗದಲ್ಲಿ ಕುಡಿಯುವುದಕ್ಕೆ ನೀರಿಲ್ಲ. ಅಲ್ಲಿಯೂ ಸಹ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಹೆಚ್.ಕೆ.ಪಾಟೀಲ್‌ರವರು ಇದ್ದಾರೆ. ಇವತ್ತಿನ ದಿವಸ ಈ ಮೂರು ಜಿಲ್ಲೆಗಳಲ್ಲಿ ಕೆಟ್ಟ ಪರಿಸ್ಥಿತಿ ಇದೆ. ನೀರು ಇಲ್ಲದೇ 96 ಕೆರೆಗಳು ಖಾಲಿ ಇವೆ. ಅವುಗಳಿಗೆ ನೀರು ತುಂಬಿಸಿಲ್ಲ. ಇದು ಸರ್ಕಾರಕ್ಕೆ ಬಹಳ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೆಟ್ಟ ಹೆಸರು. ದಯವಿಟ್ಟು ಮಾನ್ಯ ಮಂತ್ರಿಗಳು ಈ ಬಗ್ಗೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕು. ನೀವು ಆಗಸ್ಟ್, 2017 ರೊಳಗೆ ಈ ಕೆಲಸವನ್ನು ಮಾಡುತ್ತೇವೆಂದು ಸಮಯ ಕೊಟ್ಟಿದ್ದೀರಿ. ಎರಡು ತಿಂಗಳಿನಲ್ಲಿ ಕೆರೆಗಳಿಗೆ ನೀರನ್ನು ಹೇಗೆ ತುಂಬಿಸುತ್ತೀರೋ ದೇವರಿಗೇ ಗೊತ್ತು. ಈ ವಿಚಾರವನ್ನು ಸರ್ಕಾರ ಗಂಭೀರವಾಗಿ ತೆಗೆದುಕೊಳ್ಳಬೇಕು. ಸರ್ಕಾರದವರು ರೈತರ ಆತ್ಮಹತ್ಯೆಯನ್ನು ತಡೆಯಬೇಕೆಂದು ದೊಡ್ಡ ದೊಡ್ಡ ಮಾತುಗಳನ್ನಾಡುತ್ತಾರೆ. ಕುಡಿಯುವುದಕ್ಕೆ ನೀರಿಲ್ಲದೆ, ಅವರು ಖಂಡಿತವಾಗಿಯೂ ಸಾಯುತ್ತಾರೆ. ಆದ್ದರಿಂದ, ಜನರು ನೀರಿಲ್ಲದೆ, ಸಾಯುತ್ತಿದ್ದು, ಇದರ ಬಗ್ಗೆ ಮಾನ್ಯ ಮಂತ್ರಿಗಳು ಗಂಭೀರವಾದ ಉತ್ತರವನ್ನು ಕೊಡಬೇಕೆಂದು ಮಾನ್ಯ ಸಭಾಪತಿಯವರ ಮೂಲಕ ಕೇಳಲಿಕ್ಕೆ ಬಯಸುತ್ತೇನೆ.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೆ, ಈ ಕೆರೆ ತುಂಬುವ ಯೋಜನೆಗಳ ಬಗ್ಗೆ ಮಾನ್ಯ ಸದಸ್ಯರಿಗೆ ವಿವರವಾದ ಉತ್ತರವನ್ನು ಕೊಟ್ಟಿದ್ದೇನೆ. **ತಿಳುವಳ್ಳಿ ಏತ ನೀರಾವರಿ ಯೋಜನೆ,** ಪ್ರಾರಂಭಿಸಿದ್ದು ಯಾವಾಗ? ಅದನ್ನು 2009-10 ರಲ್ಲಿ ಪ್ರಾರಂಭಿಸಲಾಗಿದೆ. ಆ ಸಮಯದಲ್ಲಿ ನಾನು ಇರಲಿಲ್ಲ. ನಮ್ಮ ಸರ್ಕಾರ ಇರಲಿಲ್ಲ. ಪ್ರದೀಪ್ ಶೆಟ್ಟರ್‌ರವರ ಸರ್ಕಾರ ಇತ್ತು.

**ಶ್ರೀ ಕೆ.ಬಿ.ಶಾಣಪ್ಪ:-** ಆ ವಿಚಾರ ಈಗ ಏತಕ್ಕೆ?

**ಶ್ರೀ ಎಂ.ಬಿ.ಪಾಟೀಲ್:-** ಅವರು ಹೇಳಿದ್ದಕ್ಕೆ ನಾನು ಹೇಳುತ್ತಿದ್ದೇನೆ.

**ಶ್ರೀ ಪ್ರದೀಪ್ ಶೆಟ್ಟರ್:-** ಮಾನ್ಯ ಸಭಾಪತಿಯವರೆ,

**ಶ್ರೀ ಎಂ.ಬಿ.ಪಾಟೀಲ್:-** ಸದಸ್ಯರು ದಯವಿಟ್ಟು ಕುಳಿತುಕೊಳ್ಳಬೇಕು. ಸದಸ್ಯರು ಹೇಳಿದ ಭಾಷೆ ಹೇಗೆ ಇತ್ತು ಎಂದರೆ ಸರ್ಕಾರ ಏನು ಮಾಡುತ್ತಿದೆ, ಈ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತಿದೆ. . . ಕೆಟ್ಟ ಹೆಸರು ಬರಬೇಕಾಗಿದ್ದು ನಿಮ್ಮ ಸರ್ಕಾರಕ್ಕೆ. ನೀವು ಮಾಡಿದ ಕೆಲಸಗಳಲ್ಲಿ. . . ಸನ್ಮಾನ್ಯ ಸಭಾಪತಿಯವರೆ, ಸದಸ್ಯರು ಬಳಸಿದ ಶಬ್ದಕ್ಕೆ ನಾನು ಉತ್ತರವನ್ನು ಕೊಡುತ್ತಿದ್ದೇನೆ. ನನಗೂ ಗೊತ್ತಿದೆ. .

**ಶ್ರೀ ಪ್ರದೀಪ್ ಶೆಟ್ಟರ್:-** ರೈತರು ಸಾಯುತ್ತಿದ್ದಾರೆಂದರೆ ಇಂತಹ ಭಾಷೆ ಬಳಸುತ್ತಿದ್ದಾರೆಂದು . .

**ಶ್ರೀ ಎಂ.ಬಿ.ಪಾಟೀಲ್:-** ನೀವು ಏನು ಹೇಳಬೇಕಾಗಿತ್ತು ಎಂದರೆ ಕೆಲಸ ಬೇಗ ಮಾಡಬೇಕೆಂದು ಹೇಳಬೇಕಾಗಿತ್ತು. ಅದನ್ನು ಬಿಟ್ಟು ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತಿದೆ, ಈ ಸರ್ಕಾರ ಏನೂ ಮಾಡಿಲ್ಲವೆಂದರೆ . . ನಮ್ಮ ಸರ್ಕಾರ ಕೆಲಸ ಮಾಡುತ್ತಿದೆ.

**ಶ್ರೀ ಪ್ರದೀಪ್ ಶೆಟ್ಟರ್:-** ಇನ್ನು 96 ಕೆರೆಗಳು ಹಾಗೆಯೇ ಉಳಿದಿವೆ. . .

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಎಂ.ಬಿ.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೆ, ನಾನು ಉತ್ತರ ಕೊಡುತ್ತೇನೆ, ಅವರಿಗೆ ಕುಳಿತುಕೊಳ್ಳಲಿಕ್ಕೆ ಹೇಳಿ.

**ಶ್ರೀ ಪ್ರದೀಪ್ ಶೆಟ್ಟರ್:–** ಆಯಿತು, ಕೊಡಿ.

**ಶ್ರೀ ಎಂ.ಬಿ.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೆ, ತಿಳುವಳ್ಳಿ ಏತ ನೀರಾವರಿ ಯೋಜನೆಯನ್ನು 2009–10 ರಲ್ಲಿ ಪ್ರಾರಂಭಿಸಲಾಗಿದೆ. ಅದನ್ನು ನಾವು ಈಗ ಅಕ್ಟೋಬರ್ 2017ಕ್ಕೆ ಮುಕ್ತಾಯ ಮಾಡುತ್ತಿದ್ದೇವೆ. ಅದು ನಿಮ್ಮ ಕಾಲದ್ದು.

ಎರಡನೆಯದಾಗಿ, **ಕಾಗಿನೆಲೆ ಯೋಜನೆ 2015–16ಕ್ಕೆ ಪ್ರಾರಂಭವಾಗಿದೆ.** 2017 ನೇ ಆಗಸ್ಟ್‌ಗೆ ಪೂರ್ಣಗೊಳಿಸುತ್ತಿದ್ದೇವೆ. ಟೆಂಡರ್ ಅವಧಿ ಇರುತ್ತದೆ ಎನ್ನುವುದನ್ನು ಪ್ರದೀಪ್ ಶೆಟ್ಟರ್‌ರವರು ಗಮನಿಸಬೇಕು. 24 ತಿಂಗಳು, 12 ತಿಂಗಳು, 18 ತಿಂಗಳು ರೀತಿಯಲ್ಲಿ ಇರುತ್ತದೆ. ಆ ಒಂದು ಅವಧಿಯಲ್ಲಿಯೇ ಕೆಲಸವನ್ನು ಮುಗಿಸುತ್ತಿದ್ದೇವೆ.

ಮೂರನೆಯದಾಗಿ, **ಸವಣೂರ ಏತ ನೀರಾವರಿ ಯೋಜನೆಯು** 48 ಕೆರೆಗಳು ತುಂಬುವಂತಹ ಯೋಜನೆಯಾಗಿದೆ. ಇದು ಈಗ ಇತ್ತೀಚೆಗೆ ಆಗಿರುವಂತಹದ್ದು. ಇದು ಕಳೆದ ಎರಡು ತಿಂಗಳಿನಲ್ಲಿ ಬೋರ್ಡ್‌ನಲ್ಲಿ ತೀರ್ಮಾನವಾಗಿದೆ. ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ. ಈ ಸಂಬಂಧ ನಾವು ಏನಾದರೂ ತಪ್ಪು ಉತ್ತರ ಕೊಟ್ಟಿದ್ದರೆ ಮಾನ್ಯ ಸಭಾಪತಿಯವರಾದ ತಾವು ಜಡ್ಜ್ ಇದ್ದು, ಅದನ್ನು ತಾವು ಹೇಳಬೇಕು.

ಇನ್ನು ಶಿಗ್ಗಾಂವ್ ಏತ ನೀರಾವರಿ ಯೋಜನೆ 2015–16 ರಲ್ಲಿ ಪ್ರಾರಂಭವಾಗಿದೆ. ಹಂತ–1 ರಲ್ಲಿ ಶಿಗ್ಗಾಂವ್ ತಾಲ್ಲೂಕಿನ 18 ಕೆರೆಗಳನ್ನು ತುಂಬಿಸುವ ಯೋಜನೆ ಇದಾಗಿದೆ. ಕಾಮಗಾರಿ ಪೂರ್ಣಗೊಂಡಿರುತ್ತದೆ. ಮಾರ್ಚ್ 2017 ರಲ್ಲಿ ಪೂರ್ಣಗೊಂಡಿರುತ್ತದೆ. ಹಂತ–1 ರಲ್ಲಿ ಸದರಿ ಯೋಜನೆಯ ಅಡಿಯಲ್ಲಿ ವರದಾ ನದಿಯಿಂದ ನೀರನ್ನು ತುಂಬಿಸುವಂತಹದ್ದು, ಹೆಚ್ಚುವರಿಯಾಗಿ ಶಿಗ್ಗಾಂವ್ ತಾಲ್ಲೂಕಿನ 39 ಕೆರೆಗಳನ್ನು ತುಂಬಿಸುವ ಕಾಮಗಾರಿಯ ಟೆಂಡರ್ ಪ್ರಕ್ರಿಯೆಯಲ್ಲಿದೆ. ಇದರಲ್ಲಿ ಏನಾಗಿತ್ತು ಎಂದರೆ ಈ ಯೋಜನೆಯಲ್ಲಿ ಸ್ವಲ್ಪ ಹಣ ಉಳಿತಾಯವಾಗಿತ್ತು. ಉಳಿತಾಯದ ಹಣವನ್ನು ಉಪಯೋಗಿಸಿ ಇವತ್ತಿನ ದಿವಸ ಅದನ್ನು extension ಮಾಡುತ್ತಿದ್ದೇವೆ. ಶ್ರೀ ಪ್ರದೀಪ್ ಶೆಟ್ಟರ್‌ರವರು ಗಮನಿಸಬೇಕು. ನಾವು ಏನೂ ಇವತ್ತು ಅಪ್ರೂವಲ್ ಕೊಟ್ಟು, ಟೆಂಡರ್ ಪ್ರಕ್ರಿಯೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಲ್ಲದೇ ತಕ್ಷಣ ಅದನ್ನು 24 ತಿಂಗಳು, ಮುಗಿಸಿ, ಒಮ್ಮಿಂದೊಮ್ಮೆ ಅದನ್ನು ಮುಗಿಸಲಿಕ್ಕೆ ಆಗುವುದಿಲ್ಲ. We cannot create magic here.

ಮೂರನೆಯದಾಗಿ, ತುಪ್ಪರಿಹಳ್ಳ ಏತ ನೀರಾವರಿ ಯೋಜನೆಯು ಕೂಡ ನಮ್ಮ ಶ್ರೀ ವಿನಯ್ ಕುಲಕರ್ಣಿಯವರ ವ್ಯಾಪ್ತಿಯಲ್ಲಿ ಬರುತ್ತದೆ. ಈ ಯೋಜನೆ 9 ಕೆರೆಗಳನ್ನು ತುಂಬಿಸುವಂತಹದ್ದಾಗಿದೆ. ಇತ್ತೀಚೆಗೆ ಇದು ಆಗಿರುವಂತಹದ್ದಾಗಿದೆ. ಇದಕ್ಕೆ ಬೋರ್ಡ್‌ನಲ್ಲಿ ಅಪ್ರೂವಲ್ ಕೊಟ್ಟು, ಇದು ಪ್ರೊಸೆಸ್‌ನಲ್ಲಿದೆ.

**ಶ್ರೀ ಪ್ರದೀಪ್ ಶೆಟ್ಟರ್:-** ಮಾನ್ಯ ಸಭಾಪತಿಯವರೆ,

**ಶ್ರೀ ಎಂ.ಬಿ.ಪಾಟೀಲ್:-** ಒಂದು ನಿಮಿಷ, ನಾನು ಮುಗಿಸುತ್ತೇನೆ. ಮುಗಿಸಿದ ಮೇಲೆ ಕೇಳಿ. ಸನ್ಮಾನ್ಯ ಸಭಾಪತಿಯವರೆ, ಇದಕ್ಕೆಲ್ಲಾ ಮೊದಲು ಒಂದು ಪ್ರಪೋಸಲ್ ಆಗಬೇಕಾಗುತ್ತದೆ. ಡಿಪಿಆರ್ ಆಗಬೇಕಾಗುತ್ತದೆ. Estimate Review Committee (ERC) ಎಂದು ಇದೆ. Tender Scrutiny Committee ಎಂದು ಇದೆ. Tender Scrutiny Committee ಯಿಂದ ಬೋರ್ಡ್‌ಗೆ ಬರುತ್ತದೆ. ಬೋರ್ಡ್‌ನಿಂದ ಕ್ಯಾಬಿನೆಟ್‌ಗೆ ಆಡಳಿತಾತ್ಮಕ ಅನುಮೋದನೆಗೆ ಬರುತ್ತದೆ. ಆಡಳಿತಾತ್ಮಕ ಅನುಮೋದನೆಯಾದ ಮೇಲೆ Estimate Review Committee ಹೋಗಿ ಮತ್ತೊಮ್ಮೆ ಟೆಂಡರ್ ಆಗುತ್ತದೆ. ಇದಕ್ಕೆಲ್ಲಾ ಒಂದು process ಇರುತ್ತದೆ. ಇದು ನಾನು ಬಂದ ಮೇಲೆ ಮಾಡಿದಂತಹ process ಅಲ್ಲ. ಮೊದಲಿನಿಂದಲೂ ಇದ್ದಂತಹ process ಆಗಿದೆ. ತುಪ್ಪರಿಹಳ್ಳ ಏತ ನೀರಾವರಿ ಯೋಜನೆಯು ಕೂಡ ಪ್ರಕ್ರಿಯೆ ಕೂಡ ನಡೆಯುತ್ತಿದೆ. ಇದಕ್ಕೆ ಟೆಂಡರ್ ಕರೆಯುವಲ್ಲಿ ಕ್ಯಾಬಿನೆಟ್‌ನಿಂದ ಆಡಳಿತಾತ್ಮಕ ಅನುಮೋದನೆಯನ್ನು ಕೊಟ್ಟಿದ್ದೇವೆ. ಇನ್ನು ಸಿಂಗಟಾಲೂರು ಯೋಜನೆಯಡಿಯ ಇತಿಹಾಸವನ್ನು ಕೇಳಬೇಕು. ಈ ಯೋಜನೆ ಪ್ರಾರಂಭವಾಗಿದಾಗಿನಿಂದ ಹಿಡಿದು 15 ವರ್ಷಗಳಲ್ಲಿ ಯಾವುದೇ ಒಂದು ಸರ್ಕಾರ . . . 15 ವರ್ಷಗಳಲ್ಲಿ ಈ ಯೋಜನೆಯಲ್ಲಿ ಏನು ಖರ್ಚು ಮಾಡಿದ್ದಾರೆನ್ನುವುದನ್ನು ಶ್ರೀ ಪ್ರದೀಪ್ ಶೆಟ್ಟರ್‌ರವರು ಗಮನಿಸಬೇಕು.

**ಮುಂದು. . .**

(576) 07.06.2017 SPR-GR 11.40

**(ಸಭಾಪತಿಯವರ ಉಪಸ್ಥಿತಿ)**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಶ್ರೀ ಎಂ.ಬಿ.ಪಾಟೀಲ್(ಮುಂದು):-

ಸಿಂಗಟಾಲೂರು ಯೋಜನೆ ಪ್ರಾರಂಭವಾದಾಗಿನಿಂದ ಯಾವುದೇ ಸರ್ಕಾರವು 15 ವರ್ಷ ಸಮಯದಲ್ಲಿ ಈ ಯೋಜನೆಗೆ ಎಷ್ಟು ಹಣವನ್ನು ಖರ್ಚು ಮಾಡಿದೆ ಅದಕ್ಕಿಂತ ಹೆಚ್ಚಿನ ಮೊತ್ತವನ್ನು ನಾವು ಅಧಿಕಾರ ವಹಿಸಿಕೊಂಡ ನಾಲ್ಕು ವರ್ಷಗಳಲ್ಲಿ ಖರ್ಚು ಮಾಡಿದ್ದೇವೆ. ಪ್ರಥಮ ಬಾರಿಗೆ ಮೂರು ಹಂತಗಳಾದ ಲಿಫ್ಟ್ 1, 2 ಮತ್ತು 3 ಗಳನ್ನೂ ಪೂರ್ಣಗೊಳಿಸಿ, ಭೀಷ್ಮ ಕೆರೆಗೆ ನೀರನ್ನು ಒದಗಿಸುತ್ತಿದ್ದೇವೆ. ಈ ಕೆಲಸವನ್ನು ನಾವು ಮಾಡಿದ್ದೇವೆ. ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತದೆ ಎಂಬುದಾಗಿ ಸದಸ್ಯರು ಹೇಳಿದ್ದಾರೆ ಆದರೆ ಅದು ನಮ್ಮ ಸರ್ಕಾರಕ್ಕಲ್ಲ. ನೀವು ಮಾಡಿರುವ ಕೆಲಸಗಳಿಂದಾಗಿ ನಿಮ್ಮ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತದೆ.

**(ಗೊಂದಲ)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರೆ ನೀವು ಏಕೆ ಟೆಂಪರ್ ಅನ್ನು ಕಳೆದುಕೊಳ್ಳುತ್ತೀರಿ?

**ಶ್ರೀ ಸೋಮಣ್ಣ ಮ.ಬೇವಿನಮರದ:-** ಮಾನ್ಯ ಸಭಾಪತಿಯವರೆ, ನೀರಾವರಿ ಮಂತ್ರಿಗಳು ಸಮುದ್ರದ ಹಾಗಿರಬೇಕು ಆದರೆ ಅವರು ಕೆರೆ ಇದ್ದ ಹಾಗೆ ಇದ್ದಾರೆ. ಮಾನ್ಯ ಸಚಿವರೆ, ಹೀಗೇಕೆ ಜೋರಾಗಿ ಉತ್ತರವನ್ನು ಕೊಡುತ್ತೀರಿ?

**(ಗೊಂದಲ)**

**ಶ್ರೀ ಪ್ರದೀಪ ಶೆಟ್ಟರ್:-** ಮಾನ್ಯ ಸಭಾಪತಿಯವರೆ, 96 ಕೆರೆಗಳಿಗೆ ನೀರನ್ನು ಯಾವಾಗ ತುಂಬಿಸುತ್ತೀರಿ ಎಂಬ ಬಗ್ಗೆ ನಾನು ಪ್ರಶ್ನೆಯನ್ನು ಕೇಳಿದ್ದೇನೆ.

**ಶ್ರೀ ಎಂ.ಬಿ.ಪಾಟೀಲ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರ ಪ್ರಶ್ನೆಗಳಿಗೆ ನಾನು ವಿವರವಾದ ಉತ್ತರವನ್ನು ನೀಡಿದ್ದೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರೆ, ನೀವು ಶೀಘ್ರದಲ್ಲಿ ಯೋಜನೆಯನ್ನು ಜಾರಿಗೊಳಿಸಿಲ್ಲವೆಂದರೆ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತದೆ ಎಂಬುದಾಗಿ ಸದಸ್ಯರು ಹೇಳಿದ್ದಾರೆ. ಇದರಲ್ಲಿ ಏನು ತಪ್ಪಿದೆ? ನೀವು ಟೆಂಪರ್‌ನ್ನು ಏಕೆ ಕಳೆದುಕೊಳ್ಳುತ್ತೀರಿ? ನೀವು ಶೀಘ್ರದಲ್ಲಿ ಕೆಲಸವನ್ನು ಮಾಡಿದರಾಯಿತು ; ಹೀಗಾಗಿ ನೀವು ಟೆಂಪರ್‌ನ್ನು ಕಳೆದುಕೊಳ್ಳಬೇಡಿ. ತಾವು ಮಂತ್ರಿಗಳಾಗಿದ್ದೀರಿ ಆದ್ದರಿಂದ ಸಮಾಧಾನವಾಗಿರಿ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರ ಬಗ್ಗೆ ನಮಗೆ ಅಭಿಮಾನವಿದೆ, ಅವರು ಸದಾ ನಗುತ್ತಿರಲಿ ; ಸಿಟ್ಟು ಮಾಡಿಕೊಳ್ಳುವುದು ಬೇಡ. ನಾವು ಸಿಟ್ಟನ್ನು ಮಾಡಿಕೊಳ್ಳಬಹುದು, ಆದರೆ ನೀವು ಮಾಡಿಕೊಳ್ಳಬಾರದು.

**(ಗೊಂದಲ)**

**ಶ್ರೀ ಎಂ.ಬಿ.ಪಾಟೀಲ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರ ಮೇಲೆ ನಾನು ಸಿಟ್ಟನ್ನು ಮಾಡುವುದಿಲ್ಲ. ಸಾಮಾನ್ಯವಾಗಿ ಒಂದು ವಿಚಾರವನ್ನು ನಾನು ಇವತ್ತಿನ ದಿವಸ ಹೇಳಬೇಕು ಅದನ್ನೀಗ ಹೇಳುತ್ತಿದ್ದೇನೆ. ನಮ್ಮ ಸರ್ಕಾರ ಬಂದ ಮೇಲೆ ...

**ಶ್ರೀ ಎಸ್.ನಾಗರಾಜ್ (ಸಂದೇಶ್ ನಾಗರಾಜ್):-** ಮಾನ್ಯ ಸಭಾಪತಿಯವರೆ, ಪಕ್ಷದ ನಾಯಕರುಗಳಾದ ನಾವು ಯಾರೂ ಪ್ರಶ್ನೆಯನ್ನು ಕೇಳುವುದಿಲ್ಲ ಏಕೆಂದರೆ ಇವತ್ತಿನ ಪರಿಸ್ಥಿತಿಯನ್ನು ನೋಡಿದರೆ ನಾವು ಪ್ರಶ್ನೆಯನ್ನು ಕೇಳಿದರೆ ನಮಗೇನು ಮಾಡುತ್ತಾರೋ ಗೊತ್ತಿಲ್ಲ ಎಂಬಂತಾಗಿದೆ. ಇನ್ನು ಮುಂದೆ ಯಾರೂ ಪ್ರಶ್ನೆಯನ್ನೇ ಮಾಡುವಂತಿಲ್ಲ.

**ಶ್ರೀ ಎಂ.ಬಿ.ಪಾಟೀಲ:-** ಮಾನ್ಯ ಸಭಾಪತಿಯವರೆ, ನಾನು ಕೈಗೊಂಡ ಪೂಜೆಯ ಬಗ್ಗೆ ಸ್ವಪ್ರೇರಣೆಯಿಂದಲೇ ಉತ್ತರವನ್ನು ಕೊಡುತ್ತೇನೆ.

**ಸಭಾಪತಿಯವರು:-** ಈಗ ಬೇಡ.

**ಶ್ರೀ ಸೋಮಣ್ಣ ಮ.ಬೇವಿನಮರದ:-** ಮಾನ್ಯ ಸಭಾಪತಿಯವರೆ, ಎಲ್ಲಿಯೋ ಒಂದು ಕಡೆ ಮಾನ್ಯ ಸಚಿವರ ಸಿಟ್ಟು ಈ ಸದನದಲ್ಲಿ ವ್ಯಕ್ತವಾಗುತ್ತಿದೆ.

**ಶ್ರೀ ಎಂ.ಬಿ.ಪಾಟೀಲ:-** ಮಾನ್ಯ ಸಭಾಪತಿಯವರೆ, ನಾನು ಪ್ರಸ್ತುತ ಪ್ರಶ್ನೆಯ ಬಗ್ಗೆ ಉತ್ತರವನ್ನು ಕೊಡುತ್ತೇನೆ.

**(ಗೊಂದಲ)**

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರೇ ನೀವು ಪೂಜೆ ಮಾಡಿ ಬಂದಿದ್ದೀರಿ ; ಹೀಗಾಗಿ ಇಷ್ಟೊಂದು ಆವೇಶಕ್ಕೆ ಒಳಗಾಗಬೇಡಿ. ವಿರೋಧ ಪಕ್ಷದವರು ಏನಾದರೂ ಹೇಳಿದರೆ, ಅದನ್ನು ಸಹಿಸಿಕೊಳ್ಳುವಂತಹ ಶಕ್ತಿ ನಿಮಗೆ ಸಿಗಲಿ. ಈ ರೀತಿಯಾಗಿ ನೀವು ಸಿಟ್ಟಿನಿಂದ ಉತ್ತರವನ್ನು ಕೊಡದೇ ಶಾಂತ ರೀತಿಯಲ್ಲಿ ಉತ್ತರವನ್ನು ಕೊಡಬೇಕು. ನೀವು ಈ ರೀತಿಯಾಗಿ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉತ್ತರವನ್ನು ಕೊಟ್ಟರೆ ವಿರೋಧ ಪಕ್ಷದವರು ಧ್ವನಿಯನ್ನು ಎತ್ತಬಾರದೇ? ಸಚಿವರು ಹೇಳಿದ್ದನ್ನೆಲ್ಲಾ ಸಹಿಸಿಕೊಳ್ಳಬೇಕೆ?

**ಶ್ರೀ ಎಂ.ಬಿ.ಪಾಟೀಲ:-** ಮಾನ್ಯ ಸಭಾಪತಿಯವರೆ, ನಾನು ಕೈಗೊಂಡ ಪೂಜೆಯ ಬಗ್ಗೆ ಸ್ವಪ್ರೇರಣೆಯಿಂದಲೇ ಉತ್ತರವನ್ನು ಕೊಡುತ್ತೇನೆ. ಅದಕ್ಕಾಗಿ ತಾಳ್ಮೆಯಿರಲಿ.

**ಸಭಾಪತಿಯವರು:-** ಮಾನ್ಯ ಸದಸ್ಯರು ಮೂರು ಜಿಲ್ಲೆಗಳ 140 ಕೆರೆಗಳ ಬಗ್ಗೆ ಪ್ರಶ್ನೆಯನ್ನು ಕೇಳಿದ್ದಾರೆ. ಇಡೀ ರಾಜ್ಯದ ಬಗ್ಗೆ ಅಲ್ಲ. ಆ ಜಿಲ್ಲೆಗಳಲ್ಲಿನ ಕೆರೆಗಳನ್ನು ಯಾವಾಗ ತುಂಬಿಸುತ್ತೀರಿ? ಕೆರೆಗಳು ತುಂಬಬೇಕೆನ್ನುವುದು ಮಾನ್ಯ ಸದಸ್ಯರ ಆಸೆ. ಅವುಗಳು ತುಂಬಲಿಲ್ಲವೆಂದರೆ ಮನಸ್ಸಿಗೆ ಆತಂಕವುಂಟಾಗುತ್ತದೆ. ಕೋಪದಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಸದಸ್ಯರ ಆತಂಕವನ್ನು ಮಾನ್ಯ ಸದಸ್ಯರಾದ ಶ್ರೀಯುತ ಬಸವರಾಜ ಹೊರಟ್ಟಿರವರು ಸ್ಪಷ್ಟವಾಗಿ ತಿಳಿಸಿದ್ದಾರೆ.

**ಶ್ರೀ ಎಂ.ಬಿ.ಪಾಟೀಲ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಶ್ರೀ ಪ್ರದೀಪ್ ಶೆಟ್ಟರ್‌ರವರು ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತದೆ ಎಂಬ ಪದವನ್ನು ಉಪಯೋಗಿಸಿದ್ದಾರೆ.

**ಸಭಾಪತಿಯವರು:-** ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತದೆ ಎಂದು ಹೇಳಿದ್ದಾರೆ ಹೊರತು ಬಂದಿದೆ ಎಂದು ಹೇಳಿಲ್ಲ. ಸರ್ಕಾರಕ್ಕೆ ಕೆಟ್ಟ ಹೆಸರು ಬರಬಾರದು ಎನ್ನುವುದು ಸದಸ್ಯರ ಉದ್ದೇಶವಾಗಿದೆ.

**ಶ್ರೀ ಎಂ.ಬಿ.ಪಾಟೀಲ:-** ಮಾನ್ಯ ಸಭಾಪತಿಯವರೆ, ನಮ್ಮ ಸರ್ಕಾರಕ್ಕೆ ಕೆಟ್ಟ ಹೆಸರು ಬರುವಂತಹ ಕೆಲಸವನ್ನು ನಾನು ಮಾಡಿಲ್ಲ.

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ.:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಶ್ರೀ ಪ್ರದೀಪ್ ಶೆಟ್ಟರ್ ರವರು ಒಳ್ಳೆಯ ಉದ್ದೇಶದಿಂದ ಈ ಪ್ರಶ್ನೆಯನ್ನು ಕೇಳಿದ್ದಾರೆ.

**ಶ್ರೀ ಎಂ.ಬಿ.ಪಾಟೀಲ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಉತ್ತರವನ್ನು ನೀಡುತ್ತಿದ್ದೇನೆ. ಉತ್ತರವನ್ನು ಕೇಳಿಸಿಕೊಳ್ಳಲು ಸದಸ್ಯರಿಗೆ ಸಹನೆಯಿರಲಿ. ಹಿಂದಿನ ಸರ್ಕಾರದ ಅವಧಿಯಲ್ಲಿ ಪ್ರಾರಂಭಿಸಿದ ಯೋಜನೆಗಳನ್ನು ನಾವು ನಮ್ಮ ಅಧಿಕಾರಾವಧಿಯಲ್ಲಿ ಪೂರ್ಣಗೊಳಿಸಿದ್ದೇವೆ.

**(ಗೊಂದಲ)**

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:–** ಇದು ಪ್ರಶ್ನೋತ್ತರ ಅವಧಿಯಾಗಿದ್ದು, ಹೆಚ್ಚಿನ ಸಮಯವನ್ನು ತೆಗೆದುಕೊಳ್ಳಬೇಡಿ. ನಾನು ಇನ್ನು ಮುಂದಿನ ಪ್ರಶ್ನೆಗಳನ್ನು ತೆಗೆದುಕೊಳ್ಳಬೇಕು. ಆದ್ದರಿಂದ ಸಾಕು ಮುಗಿಸಿ ಬಿಡಿ. ಸಚಿವರೇ, ಈ ಪ್ರಶ್ನೆಗೆ ಸಂಬಂಧಪಟ್ಟಂತೆ ಮಾತ್ರವೇ ಹೇಳಿ.

**ಶ್ರೀ ಎಂ.ಬಿ.ಪಾಟೀಲ:–** ಮಾನ್ಯ ಸಭಾಪತಿಯವರೆ, ಕೆರೆಗಳನ್ನು ತುಂಬಿಸುವ ಯೋಜನೆಗಳಿಗೆ ಒಂದು ಕಾಲಾವಧಿಯಿರುತ್ತದೆ. ಅದು ಟೆಂಡರ್ ಅವಧಿಯನ್ನೂ ಸಹ ಒಳಗೊಂಡಿರುತ್ತದೆ. ಯೋಜನೆಗೆ ಸಂಬಂಧಿತ ಎಲ್ಲಾ ಕೆಲಸಗಳನ್ನು ನಾನು ಸಕಾಲದಲ್ಲಿ ಪೂರ್ಣಗೊಳಿಸಲು ಬದ್ಧನಾಗಿದ್ದೇನೆ ಹಾಗೂ ಅಂತಹ ಕೆಲಸಗಳನ್ನು ಮಾಡುತ್ತೇನೆ. ಕೆರೆಗಳನ್ನು ತುಂಬಿಸುವ ಯೋಜನೆಗಳಲ್ಲಿ ಸಾಮಾನ್ಯವಾಗಿ 18 ತಿಂಗಳು, 24 ತಿಂಗಳುಗಳ ಅವಧಿಯನ್ನು ನಿಗದಿಪಡಿಸಲಾಗಿರುತ್ತದೆ. ನನಗೆ ತಿಳಿದ ಮಟ್ಟಿಗೆ ಅಷ್ಟು ಅವಧಿಯ ಅವಶ್ಯಕತೆಯಿಲ್ಲ. ಆದರೆ, K.T.P.P. ಕಾಯ್ದೆಯ ಪ್ರಕಾರ ನಾವು ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ಹೀಗಾಗಿ ಕಾಮಗಾರಿಯ ಅವಧಿಯನ್ನು ನಿಗದಿಪಡಿಸಲಾಗಿರುತ್ತದೆ. ಒಂದು ಕೆರೆ ತುಂಬುವ ಯೋಜನೆಯನ್ನು ಕೇವಲ ಐದು ತಿಂಗಳಲ್ಲಿ ಮಾಡಿರುವ ಉದಾಹರಣೆಯೊಂದನ್ನು ನಾನು ಕೊಡುತ್ತೇನೆ. ಹೀಗಾಗಿ ನಮ್ಮಲ್ಲಿ ಸ್ವಲ್ಪವಾದರೂ ಇಚ್ಛಾಶಕ್ತಿಯಿದ್ದರೆ, ನಮ್ಮ ಇಂಜಿನಿಯರ್‌ಗಳು, ವ್ಯವಸ್ಥಾಪಕ ನಿರ್ದೇಶಕರವರುಗಳು ಆಸಕ್ತಿ ವಹಿಸಿ ಗುತ್ತಿಗೆದಾರರ ಮನವೊಲಿಸಿ ಟೆಂಡರ್ ಅವಧಿಯು 24 ತಿಂಗಳುಗಳಿದ್ದರೂ ಒಂದೇ ವರ್ಷದಲ್ಲಿ ಯೋಜನೆಯನ್ನು ಪೂರ್ಣಗೊಳಿಸಿ ಎಂದು ಹೇಳಿದರೆ ಯೋಜನೆಯನ್ನು ಅವಧಿಗೂ ಮುನ್ನ ಪೂರ್ಣಗೊಳಿಸುವ ಸಾಧ್ಯತೆಗಳಿವೆ. ಆ ದೃಷ್ಟಿಯಲ್ಲಿ ಕ್ರಮವನ್ನು ಕೈಗೊಳ್ಳುತ್ತೇನೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ.

ನಮ್ಮ ಸರ್ಕಾರವು ಕೆರೆ ತುಂಬುವ ಯೋಜನೆಗೆ ಬಹಳ ಪ್ರಾಧಾನ್ಯತೆಯನ್ನು ಕೊಟ್ಟಿದೆ. ಹಳೆಯ ಯೋಜನೆಗಳು, ಪ್ರಸ್ತುತ ತೆಗೆದುಕೊಂಡಿರುವ ಯೋಜನೆಗಳು ಹಾಗೂ ಮುಂದೆ ಕೈಗೊಳ್ಳಲಿರುವ ಯೋಜನೆಗಳು, ಈ ರೀತಿಯಾಗಿ ಪ್ರತಿಯೊಂದು ನೀರಾವರಿ ಯೋಜನೆಗಳಲ್ಲಿ ಪ್ರಾಧಾನ್ಯತೆಯ ಆಧಾರದ ಮೇಲೆ ಕೆರೆಗಳನ್ನು ತುಂಬಲು ಸಾಧ್ಯವಾಗುತ್ತಿದೆ ಅವುಗಳೆಲ್ಲವನ್ನೂ ತುಂಬುವ ನಿರ್ಣಯವನ್ನು ನಾವು ತೆಗೆದುಕೊಂಡಿದ್ದೇವೆ. ಅದೇ ಪ್ರಕಾರವಾಗಿ ಎಲ್ಲಾ ಕಡೆಗಳಲ್ಲಿಯೂ ಸಹ ಕೆಲಸಗಳನ್ನು ಮಾಡುತ್ತಿದ್ದೇವೆ. ರಾಜ್ಯದಲ್ಲಿ ಸುಮಾರು 6,000 ಕೋಟಿ ರೂಪಾಯಿಗಳ ವೆಚ್ಚದಲ್ಲಿ 1,400 ಕೆರೆಗಳನ್ನು ತುಂಬುವ 75 ಯೋಜನೆಗಳಿಗೆ ಈಗಾಗಲೇ ಸುಮಾರು 3,000 ಕೋಟಿ ರೂಪಾಯಿಗಳನ್ನು ವ್ಯಯ ಮಾಡಿದ್ದೇವೆ. ಇನ್ನೂ 3,000 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಕೆರೆಗಳನ್ನು ತುಂಬುವ ಯೋಜನೆಗಳಿಗೆ ಹೆಚ್ಚಿನ ಆದ್ಯತೆಯನ್ನು ನಾವು ಕೊಟ್ಟಿದ್ದೇವೆ, ಏಕೆಂದರೆ ಇಂತಹ ಯೋಜನೆಗಳಿಂದಾಗಿ ಅಂತರ್ಜಲದ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಟ್ಟ ಹೆಚ್ಚಾಗುತ್ತದೆ; ಬಾವಿ, ಬೋರ್‌ವೆಲ್‌ಗಳಿಗೆ ನೀರು ಬರುತ್ತದೆ. ಕೆರೆ ತುಂಬುವ ಯೋಜನೆಯಿಂದಾಗಿ ನೀರಾವರಿ ಯೋಜನೆಗಳಿಗೆ ಅನುಕೂಲವಾಗುತ್ತದೆ.

**ಶ್ರೀ ಕೆ.ಬಿ.ಶಾಣಪ್ಪ:–** ಮಾನ್ಯ ಸಭಾಪತಿಯವರೆ, ಯೋಜನೆಗೆ ನಿಗದಿಪಡಿಸಿದ ಹಣ ಖರ್ಚಾಗಿದೆ ಆದರೆ, ಕೆರೆಗಳು ಇನ್ನೂ ತುಂಬಿಲ್ಲ.

**ಸಭಾಪತಿಯವರು:–** ಕೆರೆಗಳು ತುಂಬುತ್ತವೆ ಎಂಬುದಾಗಿ ಮಾನ್ಯ ಸಚಿವರು ಹೇಳುತ್ತಿದ್ದಾರೆ. ನೀವು ಮಧ್ಯೆ ಮಧ್ಯೆ ಮಾತನಾಡಿದರೆ ಸಚಿವರಿಗೆ ಉತ್ತರವನ್ನು ಕೊಡಲು ಕಷ್ಟವಾಗುತ್ತದೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಅವರ ಜಿಲ್ಲೆಯಲ್ಲಿನ ಕೆರೆಗಳನ್ನು ಮಾತ್ರವೇ ತುಂಬಿಸುವ ಕೆಲಸಗಳನ್ನು ಏಕೆ ಮಾಡುತ್ತಿದ್ದಾರೆ?

**(ಗೊಂದಲ)**

**ಶ್ರೀ ಎಂ.ಬಿ.ಪಾಟೀಲ:–** ಮಾನ್ಯ ಸಭಾಪತಿಯವರೆ, ಎಲ್ಲಾ ಯೋಜನೆಗಳಿಗೆ ಒಂದು ನಿರ್ದಿಷ್ಟವಾದ ಟೆಂಡರ್ ಅವಧಿಯಿರುತ್ತದೆ. **(ಗೊಂದಲ)** ಆದಷ್ಟು ಬೇಗನೆ ಎಲ್ಲಾ ಕೆರೆಗಳನ್ನು ನಿಗದಿತ ಅವಧಿಗಿಂತ ಮುಂಚಿತವಾಗಿ ತುಂಬಿಸುವ ಶತ ಪ್ರಯತ್ನವನ್ನು ಮಾಡುತ್ತೇನೆ. **(ಗೊಂದಲ)** 2009–10 ನೇ ಸಾಲಿನ ಯೋಜನೆಗಳನ್ನು ಪೂರ್ಣಗೊಳಿಸಲು ಒಂದು ಅವಧಿಯನ್ನು ನಿಗದಿಪಡಿಸಲಾಗಿದೆ. ಎಲ್ಲಾ ಯೋಜನೆಗಳನ್ನು ಒಂದೇ ಬಾರಿಗೆ ಪೂರ್ಣಗೊಳಿಸಲಾಗುವುದು ಎಂಬುದಾಗಿ ಉತ್ತರವನ್ನು ಕೊಡುವುದಕ್ಕಾಗುವುದಿಲ್ಲ. ಯಾವ್ಯಾವ ಯೋಜನೆಗಳು ಯಾವಾಗ ಪ್ರಾರಂಭವಾಗಿದೆ ಎನ್ನುವುದರ ಮೇಲೆ ಅವುಗಳನ್ನು ಮುಕ್ತಾಯಗೊಳಿಸಲಾಗುವುದು. ಈ ಸಂಬಂಧ ವಿವರವಾದ ಉತ್ತರವನ್ನು ಕೊಟ್ಟಿದ್ದೇನೆ.

**ಶ್ರೀ ಪ್ರದೀಪ್ ಶೆಟ್ಟರ್:–** ಮಾನ್ಯ ಸಭಾಪತಿಯವರೆ, ಆದಷ್ಟು ಶೀಘ್ರದಲ್ಲಿ ಕೆರೆಗಳನ್ನು ತುಂಬಿಸುವ ಯೋಜನೆಗಳನ್ನು ಪೂರ್ಣಗೊಳಿಸಿ. ಯಾವ ಸರ್ಕಾರಕ್ಕೆ ಕೆಟ್ಟ ಹೆಸರು ಬರಲಿ, ಬಿಡಲಿ, ರೈತರಿಗೆ ನೀರು ಬರಲಿ ಏಕೆಂದರೆ ಅವರಿಗೆ ಕುಡಿಯಲಿಕ್ಕೂ ಸಹ ನೀರಿಲ್ಲ.

**ಶ್ರೀ ಎಂ.ಬಿ.ಪಾಟೀಲ:–** ಮಾನ್ಯ ಸಭಾಪತಿಯವರೆ, ಆದಷ್ಟು ಶೀಘ್ರದಲ್ಲಿ ಯೋಜನೆಗಳನ್ನು ಪೂರ್ಣಗೊಳಿಸಲಾಗುವುದು.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 2267**

**(ಉತ್ತರವನ್ನು ಒದಗಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಭಾನುಪ್ರಕಾಶ್:-** ಮಾನ್ಯ ಸಭಾಪತಿಯವರೆ, ನಾನು ನಾಲ್ಕು ದೇವಸ್ಥಾನಗಳಿಗೆ ಸಂಬಂಧಿಸಿದಂತೆ ಕಳೆದ ಮೂರು ವರ್ಷಗಳ ಆದಾಯ ಮತ್ತು ಖರ್ಚಿನ ಕುರಿತಾದ ಪ್ರಶ್ನೆಯನ್ನು ಕೇಳಿದ್ದೇನೆ. ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಮೂರು ವರ್ಷಕ್ಕೆ ಕೊಲ್ಲೂರು ಶ್ರೀ ಮೂಕಾಂಬಿಕ ದೇವಾಲಯದ ಆದಾಯ ರೂ. 11,460.66 ಲಕ್ಷಗಳಾಗಿದ್ದು, ರೂ.82 ಕೋಟಿ 48 ಲಕ್ಷಗಳು ಖರ್ಚಾಗಿದೆ. ಅದೇ ರೀತಿಯಾಗಿ ಶ್ರೀ ಸುಬ್ರಮಣ್ಯ ದೇವಾಲಯದ ಆದಾಯ ಮೂರು ವರ್ಷಕ್ಕೆ ರೂ. 26,217.37 ಲಕ್ಷಗಳಾಗಿದ್ದು, ರೂ.247.28 ಲಕ್ಷಗಳಷ್ಟು ಖರ್ಚಾಗಿದೆ. ಶಿವಮೊಗ್ಗದಲ್ಲಿರುವ ಹಣಗೆರೆಕಟ್ಟೆ ಶ್ರೀ ಚೌಡೇಶ್ವರಿ ಭೂತರಾಯ ದೇವಾಲಯದ ಆದಾಯ ರೂ. 300.91 ಲಕ್ಷಗಳಾಗಿದ್ದು ಇದರ ಖರ್ಚು ರೂ. 62 ಲಕ್ಷಗಳಷ್ಟೇ ಆಗಿದೆ. ಅದೇ ರೀತಿಯಾಗಿ ಸಾಗರದ ಶ್ರೀ ಮಹಾಗಣಪತಿ ದೇವಸ್ಥಾನ ಆದಾಯ ರೂ. 126.11 ಲಕ್ಷಗಳಷ್ಟಿದ್ದು, ರೂ. 64 ಲಕ್ಷಗಳಷ್ಟು ಮಾತ್ರವೇ ಖರ್ಚಾಗಿದೆ. ದೇವಸ್ಥಾನಗಳಲ್ಲಿ ಸಂಗ್ರಹವಾದ ಹಣವನ್ನು ಯಾವ ಉದ್ದೇಶಗಳಿಗೆ ಬಳಸಲಾಗಿದೆ ಎಂಬ ಪ್ರಶ್ನೆಗೆ ವರ್ಷಾವಾರು ಉತ್ತರವನ್ನು ಕೊಟ್ಟಿದ್ದಾರೆ. ನನ್ನ ಜಿಲ್ಲಾ ವ್ಯಾಪ್ತಿಗೆ ಶ್ರೀ ಮಹಾಗಣಪತಿ ಹಾಗೂ ಶ್ರೀ ಚೌಡೇಶ್ವರಿ ದೇವಸ್ಥಾನಗಳು ಬರುತ್ತವೆ. ನಾನು ಎರಡೂ ದೇವಸ್ಥಾನಗಳಿಗೆ ಭೇಟಿ ನೀಡಿದ್ದೇನೆ. ಅಲ್ಲಿನ ಭಕ್ತಾದಿಗಳು ದೇವಸ್ಥಾನದಲ್ಲಿ ತೀರ್ಥವನ್ನು ತೆಗೆದುಕೊಳ್ಳಬೇಕಾದರೆ ಮೇಲೆ ನೋಡುತ್ತಿರುವುದನ್ನು ನಾನು ಗಮನಿಸಿ, ಅಲ್ಲಿರುವವರನ್ನು ಮೇಲೆ ನೋಡುವ ಪದ್ಧತಿ ಏನಾದರೂ ಇದೆಯೇ ಎಂಬುದಾಗಿ ವಿಚಾರಿಸಿದಾಗ, ಅಲ್ಲಿನ ಭಕ್ತಾದಿಗಳು ಮೇಲೆ ನೋಡುವ ಪದ್ಧತಿ ಇಲ್ಲ. ಆದರೆ ಮೇಲೆ ಒಂದು ತೊಲೆಯಿದೆ ಅದು ಮುರಿದು ಬೀಳುವ ಸ್ಥಿತಿಯಲ್ಲಿದೆ ಎಂಬುದಾಗಿ ಹೇಳಿದರು. ಆದರೆ ಈಗ ಅಲ್ಲಿ ಅದರ ದುರಸ್ತಿ ಕಾರ್ಯವು ನಡೆಯುತ್ತಿದೆ. ಆ ಕಾಮಗಾರಿಯ ಬಿಲ್‌ನ ಮೊತ್ತವನ್ನು ಇನ್ನೂ ಪಾವತಿಸಿಲ್ಲ. ದೇವಸ್ಥಾನದ ಮುಖ್ಯ ದ್ವಾರವನ್ನು ಹಾಕಿ ಒಂದೂವರೆ ವರ್ಷಗಳಾಯಿತು. ದೇವಸ್ಥಾನದಲ್ಲಿ ನಿಂತುಕೊಳ್ಳುವುದಕ್ಕೂ ಸಹ ಸ್ಥಳವಿಲ್ಲ. ಆದರೆ, ಸರ್ಕಾರದವರು ಅದನ್ನೆಲ್ಲಾ ಅಭಿವೃದ್ಧಿ ಮಾಡುತ್ತಿರುವುದಾಗಿ ಹೇಳುತ್ತಿದ್ದಾರೆ. ದೇವಸ್ಥಾನದಲ್ಲಿ ಒಂದು ಬೆಳ್ಳಿಯ ರಥ ಹಾಗೂ ಬೆಳ್ಳಿಯ ಮಂಟಪವಿದೆ. ಹರಕೆ ಮಾಡಿಕೊಂಡವರಿಗೆ ಅವುಗಳ ಪೂಜೆಗೆ ಅವಕಾಶ ಕೊಡಬೇಕು. ಆದರೆ ಈಗ ಪೂಜೆಗೆ ಅವಕಾಶ ಸಿಗುತ್ತಿಲ್ಲ. ದೇವಸ್ಥಾನದಲ್ಲಿ ಜನರೇಟರ್ ಇದೆ. ಆದರೆ ಐದು ಲೀಟರ್‌ಗಿಂತ ಹೆಚ್ಚಿನ ಸೀಮೆ ಎಣ್ಣೆಯನ್ನು ಖರೀದಿಸಲು ಜಿಲ್ಲಾಧಿಕಾರಿಗಳ ಅನುಮತಿ ಬೇಕಾಗುತ್ತದೆ. ಇದು ಅಲ್ಲಿನ ಪರಿಸ್ಥಿತಿಯಾಗಿದೆ. ಎಲ್ಲಾ ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತಿದ್ದೇವೆ ಎಂಬುದಾಗಿ ಸಚಿವರು ಹೇಳುತ್ತಿದ್ದಾರೆ. ಆದರೆ ಅವರ ಗಮನಕ್ಕಾಗಿ ನಾನು ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಣಗೆರೆಕಟ್ಟೆಯ ದೇವಸ್ಥಾನಕ್ಕೆ ಬಹಳ ದೊಡ್ಡ ಸಂಖ್ಯೆಯಲ್ಲಿ ಅಮಾವಾಸ್ಯೆ ಹಾಗೂ ಭಾನುವಾರಗಳಂದು ಸಾವಿರಾರು ಸಂಖ್ಯೆಯಲ್ಲಿ ಭಕ್ತಾದಿಗಳು ಬರುತ್ತಾರೆ. ಅಲ್ಲಿ ಬಹಳ ವಿಶೇಷವಾಗಿ ಚೌಡೇಶ್ವರಿ ಹಾಗೂ ಭೂತರಾಯ ದೇವರುಗಳಿಗೆ ಪೂಜೆ ನಡೆಯುತ್ತದೆ. ಅಲ್ಲಿನ ದೇವಸ್ಥಾನಕ್ಕೆ ಹಿಂದೂ ಮತ್ತು ಮುಸಲ್ಮಾನ ಎರಡೂ ಸಮುದಾಯದ ಭಕ್ತಾದಿಗಳು ಬರುತ್ತಾರೆ. ಎಡೆ ಮಾಡುವುದಕ್ಕೆ ಪ್ರಾಣಿಗಳನ್ನು ಪೂಜೆ ಮಾಡಿ ಅರ್ಪಣೆ ಮಾಡುತ್ತಾರೆ ; ಅವುಗಳನ್ನು ತೆಗೆದುಕೊಂಡು ಹೋಗಿ ಅಲ್ಲಿನ ಎಲ್ಲಾ ಜಾಗಗಳಲ್ಲಿ ವಧೆ ಮಾಡಿ ನೈವೇದ್ಯ ಮಾಡುವಂತಹ ಪದ್ಧತಿ ಅಲ್ಲಿದೆ.

(ಮುಂದು)

(577) 07.06.2017 MSS-GR 11.50

**ಶ್ರೀ ಭಾನುಪ್ರಕಾಶ್(ಮುಂದು):–**

ಆದರೆ ಅಲ್ಲಿ ಜಗಳ ಏನು ನಡೆಯುತ್ತದೆಂದರೆ, ಅಲ್ಲಿ ಒಂದು ಗೋರಿ ಇದೆ. ಆ ಗೋರಿಗೆ ಹೋಗಿ ಎಡೆಯನ್ನು ಇಟ್ಟುಬಿಡುತ್ತಾರೆ. ಮುಜವಾರ್‌ಗಳು ನಮ್ಮ ಗೋರಿ ಹತ್ತಿರ ಎಡೆಯನ್ನು ಇಡುತ್ತೀರಿ ಎಂದು ಜಗಳ ಮಾಡುತ್ತಾರೆ. ಇದು ಏಕೆ ಈ ರೀತಿಯಾಗುತ್ತದೆಂದರೆ, ಇಲ್ಲಿ ಅಡಿಗೆ ಮಾಡುವುದಕ್ಕೆ ಒಂದು ವ್ಯವಸ್ಥೆ ಇಲ್ಲ. ಒಂದು ಕೋಣೆ ಕೂಡ ಇಲ್ಲ. ಎಲ್ಲಾ ಕಡೆ ಅಡಿಗೆಯನ್ನು ಮಾಡುವಂತಹ ಪರಿಸ್ಥಿತಿ ಇದೆ. ಈ ದೇವಸ್ಥಾನದಲ್ಲಿ ವರ್ಷಕ್ಕೆ ಮೂರು ಕೋಟಿ ರೂಪಾಯಿಗಳ ಆದಾಯ ಇದೆ. ಬ್ಯಾಂಕ್‌ನಲ್ಲಿಯೇ ಒಂದುವರೆ ಕೋಟಿ ರೂಪಾಯಿಗಳನ್ನಿಟ್ಟಿದ್ದಾರೆ. ಹಣ ಇರುವುದರಿಂದ ಒಂದು ಅಡಿಗೆ ಮನೆಯನ್ನು ಮಾಡಿಕೊಡುವುದಕ್ಕೆ ಸಾಧ್ಯವಿದೆ. ಅಲ್ಲಿ ಸ್ವಲ್ಪವೂ ಕೂಡ ಸ್ವಚ್ಛತೆ ಇಲ್ಲ. ಯಾವುದೇ ಊಟ ಇರಲಿ. ಊಟ ಮಾಡುವಂತಹ ಜಾಗ ಯಾವ ರೀತಿಯಾಗಿರಬೇಕು ಎನ್ನುವುದನ್ನು ಕಲ್ಪನೆ ಮಾಡಿಕೊಂಡು ವ್ಯವಸ್ಥೆಯನ್ನು ಮಾಡುವುದಕ್ಕೆ ಸಾಧ್ಯವಿದೆ. ಇನ್ನು ಎರಡನೆಯದಾಗಿ ಕೆಲವು ದೇವಸ್ಥಾನಗಳಲ್ಲಿ ಸಮಿತಿಗಳನ್ನು ಮಾಡಿಲ್ಲ. ಮಹಾಗಣಪತಿ ದೇವಸ್ಥಾನಕ್ಕೂ ಸಮಿತಿಯನ್ನು ಮಾಡಿಲ್ಲ. ತಹಸೀಲ್ದಾರ್‌ರವರೆ ಅಡ್ಮಿನಿಸ್ಟ್ರೇಟರ್ ಅಗಿರುತ್ತಾರೆ. ಹಣಗೆರೆಕಟ್ಟೆ ಶ್ರೀ ಚೌಡೇಶ್ವರಿ ಭೂತರಾಯ ದೇವಾಲಯಕ್ಕೂ ಕೂಡ ಇದುವರೆಗೂ ಸಮಿತಿಯನ್ನು ಮಾಡಿಲ್ಲ. ಸಮಿತಿಯನ್ನು ಯಾರು ಮಾಡಬೇಕು? ತಹಸೀಲ್ದಾರ್‌ರವರು ಮಾಡಬೇಕೆಂದಾದರೆ ಮಾನ್ಯ ಕಂದಾಯ ಸಚಿವರು ಹಕ್ಕು ಪತ್ರಗಳನ್ನು ಕೊಡುವುದಕ್ಕೆ ಅವರನ್ನು ಕರೆದುಕೊಂಡು ಹೋಗುತ್ತಾರೆ. ಹಾಗಾಗಿ ಅವರು ನಮಗೆ ಸಿಗುವುದಿಲ್ಲ. ಆದರೆ ಈ ದೇವಸ್ಥಾನ ಮತ್ತು ಸಣ್ಣ ಪುಟ್ಟದ್ದರ ಬಗ್ಗೆ ತಹಸೀಲ್ದಾರ್‌ರವರಿಗೆ ಗಮನವೇ ಇಲ್ಲ. ಹೋಗಲಿ ಸಮಿತಿಯನ್ನಾದರು ಮಾಡಿದರೆ ಅನುಕೂಲವಾಗುತ್ತದೆ. ಒಳ್ಳೆಯ ಆದಾಯ ಬರುವಂತಹ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದೇವಸ್ಥಾನವಾಗಿದೆ. ಜನರಿಗೂ ಕೂಡ ಅನುಕೂಲವಾಗುತ್ತದೆ. ಹಾಗಾಗಿ ನನ್ನ ಪ್ರಶ್ನೆ ಏನೆಂದರೆ, ಸಮಿತಿಯನ್ನು ಮಾನ್ಯ ಸಚಿವರು ಎಷ್ಟು ದಿವಸದಲ್ಲಿ ಮಾಡುತ್ತಾರೆ? ಎರಡನೆಯದಾಗಿ ಎಲ್ಲಾ ಶಾಲೆಗಳಿಗೆ ಸಿಸಿ ಕ್ಯಾಮರವನ್ನು ಅಳವಡಿಸಬೇಕೆಂದು ಕಡ್ಡಾಯವನ್ನು ಮಾಡಲಾಗಿದೆ. ನ್ಯಾಯವಾಗಿ ದೇವಸ್ಥಾನಗಳಲ್ಲಿ ಕಾಣಿಕೆ ಹೆಚ್ಚು ಬರುತ್ತಿರುವಂತಹ ಕಡೆಯಲ್ಲಿ ಸಿಸಿ ಕ್ಯಾಮರವನ್ನು ಅಳವಡಿಸಬೇಕು. ಹಣಗೆರೆಕಟ್ಟೆ ಶ್ರೀ ಚೌಡೇಶ್ವರಿ ಭೂತರಾಯನ ದೇವಾಲಯಕ್ಕೂ ಸಿಸಿ ಕ್ಯಾಮರ ಹಾಕಬೇಕಾಗಿದೆ. ಅದುದರಿಂದ ಸಿಸಿ ಕ್ಯಾಮರವನ್ನು ಯಾವಾಗ ಹಾಕಲಾಗುತ್ತದೆ? ಮೂರನೆಯದಾಗಿ ಕೊಲ್ಲೂರು ಶ್ರೀ ಮೂಕಾಂಬಿಕ ದೇವಾಲಯದ ಹತ್ತಿರ ಪಾರ್ಕಿಂಗ್‌ಗೆ ಹೆಚ್ಚು ಜಾಗ ಬೇಕಾಗಿದೆ. ಇಲ್ಲಿರುವಂತಹ ಎಲ್ಲಾ ಭಕ್ತಾದಿಗಳು ಆ ದೇವಾಲಯಕ್ಕೆ ಹೋಗಿದ್ದಾರೆ. ಕೊಲ್ಲೂರಿನಲ್ಲಿ ದೇವಸ್ಥಾನದ ಜಾಗ ಮುಗಿದು ಹೋಗಿದೆ. ಅಲ್ಲಿ ಏನಾದರು ಒಂದು ಅಡಿ ಮುಂದೆ ಇಟ್ಟರೆ ಅದು ಅರಣ್ಯದ ಜಾಗವಾಗಿದೆ. ಆದರೆ ಬೇರೆ ಬೇರೆ ಪ್ರಾಂತ್ಯದಿಂದ ಮತ್ತು ಬೇರೆ ಬೇರೆ ರಾಜ್ಯಗಳಿಂದ ಭಕ್ತಾಧಿಗಳು ಆ ದೇವಾಲಯಕ್ಕೆ ಬರುತ್ತಾರೆ. ಹಾಗಾಗಿ ಅರಣ್ಯ ಸಚಿವರ ಹತ್ತಿರ ವಿನಂತಿಯನ್ನು ಮಾಡಿಕೊಂಡು ಕೊಲ್ಲೂರು ಶ್ರೀ ಮೂಕಾಂಬಿಕ ದೇವಾಲಯದ ಹೊರಗಡೆ ವಾಹನಗಳ ನಿಲುಗಡೆಗೆ ಜಾಗವನ್ನು ಅರಣ್ಯ ಇಲಾಖೆಯಿಂದ ಗುತ್ತಿಗೆ ಆಧಾರದ ಮೇಲೆ ತೆಗೆದುಕೊಂಡು ಏನಾದರು ಮಾಡಲಾಗುತ್ತದೆಯೇ ಮತ್ತು ಇದನ್ನು ಯಾವಾಗ ಮಾಡಲಾಗುತ್ತದೆ? ಅಲ್ಲಿ ವಾಹನವನ್ನು ನಿಲ್ಲಿಸಲು ಒಂದು ಚೂರು ಜಾಗ ಕೂಡ ಇಲ್ಲ. ಸುಮಾರು 50,000 ರಿಂದ 60,000 ಜನರು ಸೇರಿದಾಗ ಅಲ್ಲಿ ಓಡಾಡುವುದಕ್ಕೆ ತೊಂದರೆಯಾಗುತ್ತಿದೆ. ಅರಣ್ಯ ಇಲಾಖೆಯವರ ಹತ್ತಿರವೇ ಜಾಗವನ್ನು ತೆಗೆದುಕೊಳ್ಳಬೇಕು. ಕಂದಾಯ ಇಲಾಖೆಯ ಜಾಗ ಇದ್ದಿದ್ದರೆ ಮಾನ್ಯ ಕಂದಾಯ ಇಲಾಖೆಯ ಸಚಿವರಾದ ಶ್ರೀ ಕಾಗೋಡು ತಿಮ್ಮಪ್ಪನವರ ಹತ್ತಿರ ಮಾತನಾಡಿ ಜಾಗವನ್ನು ತೆಗೆದುಕೊಂಡು ಬಿಡುತ್ತಿದ್ದೋ. ಅರಣ್ಯ ಇಲಾಖೆಯ ಸಚಿವರ ಹತ್ತಿರ ನಾವು ಜಾಗವನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಅರಣ್ಯ ಇಲಾಖೆಯವರು ಗುತ್ತಿಗೆ ಆಧಾರ ಮೇಲೆ ಜಾಗವನ್ನು ಕೊಟ್ಟರೆ ಒಂದು ಮರವನ್ನೂ ಕೂಡ ಕಡಿಯದೇ ವಾಹನ ನಿಲುಗಡೆಗೆ ವ್ಯವಸ್ಥೆಯನ್ನು ಮಾಡಿಕೊಟ್ಟರೆ ಭಕ್ತಾಧಿಗಳಿಗೆ ಅನುಕೂಲವಾಗುತ್ತದೆ. ಇದನ್ನು ಯಾವಾಗ ಮಾಡಿಕೊಡಲಾಗುತ್ತದೆ? ಎ-ಗ್ರೇಡ್ ದೇವಸ್ಥಾನದ ಬಗ್ಗೆ ಒಂದು ಕ್ಲಾರಿಫಿಕೇಷನ್ ಕೊಡಬೇಕು. ಕುಕ್ಕೆ ಸುಬ್ರಮಣ್ಯ ದೇವಸ್ಥಾನದಲ್ಲಿ ವಿಶೇಷ ಖರ್ಚು ಎಂದು ತೋರಿಸಲಾಗಿದೆ. ಆದರೆ ಅಲ್ಲಿ ಯಾವುದೇ ವಿವರಗಳಿಲ್ಲ. ಒಂದೆರಡು ಲಕ್ಷ ರೂಪಾಯಿಗಳಾದರೆ ಪರವಾಗಿಲ್ಲ. ಕೊಲ್ಲೂರು ಶ್ರೀ ಮೂಕಾಂಬಿಕ ದೇವಾಲಯದಲ್ಲಿ 2.86 ಲಕ್ಷ ರೂಪಾಯಿಗಳನ್ನು ವಿಶೇಷ ಖರ್ಚು ಎಂದು ಮಾಡಲಾಗಿದೆ. ಆದರೆ ಕುಕ್ಕೆ ಸುಬ್ರಮಣ್ಯ ದೇವಸ್ಥಾನದಲ್ಲಿ ವಿಶೇಷ ವೆಚ್ಚವೆಂದು 53 ಕೋಟಿ ರೂಪಾಯಿಗಳನ್ನು ಮೂರು ವರ್ಷಗಳಲ್ಲಿ ಮಾಡಿದ್ದಾರೆ. ಎರಡನೆಯದಾಗಿ ಹಣವನ್ನು ಹೂಡಿಕೆ ಕೂಡ ಮಾಡಲಾಗಿದೆ. ಯಾವ

ಕಾನೂನಿನ ಪ್ರಕಾರವಾಗಿ ಭಕ್ತಾಧಿಗಳು ದೇವಾಲಯಕ್ಕೆ ಕೊಟ್ಟ ಹಣವನ್ನು ಹೂಡಿಕೆ ಮಾಡಿಲಾಗಿದೆ? ಇದನ್ನು ಯಾವ ಕಾನೂನಿನ ಪ್ರಕಾರವಾಗಿ ಹೂಡಿಕೆ ಮಾಡುವುದಕ್ಕೆ ಅವಕಾಶ ಇದೆಯೋ ಎನ್ನುವುದು ಗೊತ್ತಿಲ್ಲ. ಕುಕ್ಕೆ ಸುಬ್ರಮಣ್ಯ ದೇವಾಲಯದವರು 83 ಕೋಟಿ ರೂಪಾಯಿಗಳನ್ನು ಮಾಡಿದ್ದಾರೆ. ಇವೆರಡು ಈ ಹೆಡ್‌ನಲ್ಲಿದೆ. ಇದರ ಬಗ್ಗೆ ಕ್ಲಾರಿಫಿಕೇಷನ್ ಕೊಡಬೇಕು.

ಮೂರು ಪ್ರಶ್ನೆಗಳೆಂದರೆ, ದೇವಾಲಯಗಳಿಗೆ ಯಾವಾಗ ಸಮಿತಿಗಳನ್ನು ಮಾಡಲಾಗುವುದು? ಎರಡನೆಯದಾಗಿ ಸಮಿತಿ ಮಾಡಿದ ಮೇಲೆ ದೇವಾಲಯಗಳಿಗೆ ಸಿಸಿ ಕ್ಯಾಮರವನ್ನು ಯಾವಾಗ ಅಳವಡಿಸಲಾಗುವುದು? ಮೂರನೆಯದಾಗಿ ಕೊಲ್ಲೂರು ಶ್ರೀ ಮೂಕಾಂಬಿಕ ದೇವಾಲಯದ ಪಕ್ಕದಲ್ಲಿ ಭಕ್ತಾಧಿಗಳ ವಾಹನವನ್ನು ನಿಲ್ಲಿಸಲು ಪಾರ್ಕಿಂಗ್ ವ್ಯವಸ್ಥೆಯನ್ನು ಯಾವಾಗ ಮಾಡಲಾಗುತ್ತದೆ?

**ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ:–** ಮಾನ್ಯ ಸಭಾಪತಿಯವರೆ, ಹುಣಗೆರೆಕಟ್ಟೆಯಲ್ಲಿ ಎಡೆಯನ್ನು ಇಡುತ್ತಾರೆ ಎನ್ನುವುದನ್ನು ಹೇಳಿದ್ದಾರೆ. ನಾವು ಅಧಿಕಾರಕ್ಕೆ ಬಂದಮೇಲೆ ಎಡೆಯನ್ನು ಇಡುತ್ತಿರುವಂಥದ್ದಲ್ಲ. ಮೊದಲಿನಿಂದ ಸಂಪ್ರದಾಯಿಕವಾಗಿ ನಡೆದುಕೊಂಡು ಬಂದಿರುವಂಥದ್ದು. ಸ್ಪೆಸಿಫಿಕ್ ಅಗಿ ಅಲ್ಲಿಯ ಬಗ್ಗೆ ಹೇಳಿದ್ದಾರೆ. ತಕ್ಷಣವೇ ನಮ್ಮ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿ ಅದನ್ನು ತ್ವರಿತವಾಗಿ ಜಿಲ್ಲಾಧಿಕಾರಿಗಳಿಗೆ ಹೇಳಿ ಮಾಡಿಸುತ್ತೇನೆ. ಮತ್ತೆ ದೇವಾಲಯಗಳಿಗೆ ಸಮಿತಿಗಳನ್ನು ರಚನೆ ಮಾಡಿಲ್ಲವೆಂದು ಹೇಳಿದ್ದಾರೆ. ಆದರೆ ಸಮಿತಿಗಳನ್ನು ರಚನೆ ಮಾಡಬೇಕೆಂದು ಸುಮಾರು ಪ್ರೋಸಿಜರ್‌ಗಳಿದೆ. ಜಿಲ್ಲಾಧಿಕಾರಿಗಳು ಸಮಿತಿ ಸದಸ್ಯರುಗಳನ್ನು ಮಾಡುವಾಗ ಅವರ ಮೇಲೆ ಏನಾದರು ಕೇಸ್ ಇದೆಯೇ ಎನ್ನುವುದರ ಬಗ್ಗೆ ಎಲ್ಲಾ ವರದಿಯನ್ನು ತೆಗೆದುಕೊಂಡು ಮಾಡುವುದಕ್ಕೆ ಸುಮಾರು 4 ತಿಂಗಳುಗಳಾಗುತ್ತದೆ. ಆದರೆ ನಾವು ಕಮೀಷನರ್ ಮತ್ತು ಕಾರ್ಯದರ್ಶಿಯವರು ಸೇರಿ ಯಾರ್‍ಯಾರನ್ನು ಸಮಿತಿಗೆ ಸೇರಿಸಿಕೊಳ್ಳಬೇಕು ಅದರ ಬಗ್ಗೆ ವರದಿಯನ್ನು ತೆಗೆದುಕೊಂಡು ಸೆಲೆಕ್ಟ್ ಮಾಡಿಯೇ ವರದಿಯನ್ನು ತರಿಸಿಕೊಳ್ಳುವಂತಹ ಒಂದು ಹೊಸ ವ್ಯವಸ್ಥೆಯನ್ನು ಮಾಡಲಾಗುತ್ತಿದೆ. ಅದಷ್ಟು ಬೇಗ ಸಮಿತಿಗಳನ್ನು ಮಾಡಲಾಗುತ್ತದೆ. ಅದರ ಜೊತೆಗೆ ಸಿಸಿ ಕ್ಯಾಮರಗಳನ್ನು ದೇವಾಲಯದಲ್ಲಿ ಹಾಕಿಸುವುದಕ್ಕೆ ಏನೂ ತೊಂದರೆ ಇಲ್ಲ. ಆದಷ್ಟು ಬೇಗ ಸಮಿತಿಗಳನ್ನು ಮಾಡಿಬಿಟ್ಟರೆ ಸಮಿತಿಯವರೆ ಸಿಸಿ ಕ್ಯಾಮರವನ್ನು ಹಾಕಿಸುವಂತಹ ಕೆಲಸವನ್ನು ಮಾಡುತ್ತಾರೆ. ಕೊಲ್ಲೂರಿನಲ್ಲಿ 53 ಕೋಟಿ ರೂಪಾಯಿಗಳ ಹೂಡಿಕೆಯನ್ನು ಮಾಡಿರುವುದರ ಬಗ್ಗೆ ನಾನು ಪರಿಶೀಲನೆ ಮಾಡುತ್ತೇನೆ. ಸಾಕಷ್ಟು ಅಭಿವೃದ್ಧಿಯನ್ನು ಮಾಡುವುದಕ್ಕೆ ಅಲ್ಲಿ ಏನೇನು ಬೇಕು ಯುಜಿಡಿ ಯಿಂದ ಹಿಡಿದು ಅಲ್ಲಿ ಮಾಸ್ಟರ್ ಪ್ಲಾನ್ ಮಾಡಿರುವುದನ್ನು ನೋಡಿದ್ದೇನೆ. ನಾನು ಕೂಡ ಎರಡು ಸಾರಿ ಅಲ್ಲಿಗೆ ಭೇಟಿ ಕೊಟ್ಟಿದ್ದೇನೆ. ಭೇಟಿ ಕೊಟ್ಟಾಗ ಕುಡಿಯುವ ನೀರಿನ ಸಮಸ್ಯೆಯಾಗಿರಬಹುದು ಮತ್ತೆ ಅಲ್ಲಿ ಸಿಡಿಲು ಹೊಡೆದು ಗೋಪುರಕ್ಕೆ ಸ್ವಲ್ಪ ಡ್ಯಾಮೇಜ್ ಅಗಿದೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಂದು ಹೇಳಿದರು. ತಕ್ಷಣ ಅದನ್ನು ಸರಿಪಡಿಸುವಂತಹ ಕೆಲಸವನ್ನು ಮಾಡುವಂಥದ್ದು. ಇನ್ನೊಂದು ಸಾರಿ ನಾನು ಅಲ್ಲಿಗೆ ಭೇಟಿ ಕೊಟ್ಟು ಅಲ್ಲಿಯ ಸಮಸ್ಯೆಯನ್ನು ಸರಿಪಡಿಸುವಂತಹ ಕೆಲಸವನ್ನು ಮಾಡುತ್ತೇನೆ. ಆಮೇಲೆ ಕೊಲ್ಲೂರು ದೇವಾಲಯಕ್ಕೂ ಕೂಡ ನಾನು 15 ದಿವಸದ ಹಿಂದೆ ಭೇಟಿ ಕೊಟ್ಟಿದ್ದೆ. ಅಲ್ಲಿ ವಾಹನದ ಪಾರ್ಕಿಂಗ್ ಸಮಸ್ಯೆ ಇದೆ. ದೇವಾಲಯದ ಪಕ್ಕದಲ್ಲಿ ಎಲ್ಲಾ ಅರಣ್ಯ ಭೂಮಿ ಇದೆ. ಆದರೆ ಅಲ್ಲಿಯೇ ಹತ್ತಿರದಲ್ಲಿ ಯಾರೋ ಖಾಸಗಿ ವ್ಯಕ್ತಿ ಸ್ವಲ್ಪ ಜಾಗ ಇದ್ದು ಅದನ್ನು ಅವರು ಮಾರಾಟ ಮಾಡುವುದಕ್ಕೆ ತಯಾರಿದ್ದಾರೆಂದು ಹೇಳಿದ್ದಾರೆ. ಅದನ್ನು ತೆಗೆದುಕೊಳ್ಳುವುದಕ್ಕೆ ನಮ್ಮ ಅಧಿಕಾರಿಗೆ ಹೇಳಿದ್ದೇನೆ. ಆ ಜಾಗವನ್ನು ತೆಗೆದುಕೊಂಡು ಪಾರ್ಕಿಂಗ್ ವ್ಯವಸ್ಥೆಯನ್ನು ಆದಷ್ಟು ಬೇಗ ಮಾಡುತ್ತೇವೆ. ಈಗಾಗಲೇ ಸುಮಾರು ದೇವಾಲಯಗಳಿಗೆ ಸಮಿತಿಯನ್ನು ಮಾಡಲಾಗಿದೆ. ಈಗ ಎ ವರ್ಗದಲ್ಲಿ ಬರುವಂತಹ ದೇವಾಲಯಗಳಿಗೆ ಆದಷ್ಟು ಸಮಿತಿಗಳನ್ನು ಮಾಡಿದ್ದೇವೆ. ಇನ್ನು ಸ್ವಲ್ಪ ದೇವಾಲಯಗಳಿಗೆ ಮಾತ್ರ ಸಮಿತಿಗಳನ್ನು ಮಾಡಬೇಕಾಗಿದೆ. ರಾಜ್ಯದಲ್ಲಿರತಕ್ಕಂತಹ ಎಲ್ಲಾ ದೇವಾಲಯಗಳಿಗೆ ಸಮಿತಿಗಳನ್ನು ಮಾಡಿಕೊಟ್ಟರೆ, ಸಮಿತಿಯ ಸದಸ್ಯರುಗಳು ಎಲ್ಲಾ ವ್ಯವಸ್ಥೆಯನ್ನು ಮಾಡಿಕೊಡುತ್ತಾರೆ. ಮಾನ್ಯ ಸದಸ್ಯರ ಕಳಕಳಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಆದಷ್ಟು ಬೇಗ ಮತ್ತೊಂದು ಸಾರಿ ಆ ದೇವಾಲಯಕ್ಕೆ ಭೇಟಿಯನ್ನು ಕೊಟ್ಟು ತಾವು ಹೇಳಿದ್ದನ್ನೆಲ್ಲಾ ಪರಿಶೀಲನೆ ಮಾಡುತ್ತೇನೆ. ನೀವು ಕೊಟ್ಟಿರುವಂತಹ ಸಲಹೆಗಳನ್ನು ಕೂಡ ಗಮನದಲ್ಲಿಟ್ಟುಕೊಂಡಿದ್ದೇನೆ.

**ಶ್ರೀ ಭಾನುಪ್ರಕಾಶ್:-** ಮಾನ್ಯ ಸಭಾಪತಿಯವರೆ, ಕುಕ್ಕೆ ಸುಬ್ರಮಣ್ಯ ದೇವಾಲಯದವರು 83 ಕೋಟಿ ರೂಪಾಯಿಗಳನ್ನು ಹೂಡಿಕೆ ಮಾಡಿದ್ದಾರೆ. ಈ ರೀತಿಯಾಗಿ ದೇವಾಲಯದ ಹಣವನ್ನು ಯಾವ ಕಾನೂನಿನ ಅಡಿಯಲ್ಲಿ ಹೂಡಿಕೆ ಮಾಡಲಾಗುತ್ತದೆ? ಹೂಡಿಕೆಯನ್ನು ಯಾವುದಕ್ಕೆ ಮಾಡಿದ್ದಾರೆ. ಎರಡನೆಯದಾಗಿ ವಿಶೇಷವಾದಂತಹ ಹೆಡ್‌ನಲ್ಲಿ micellaneous ಎಂದರೆ ಎರಡು ಲಕ್ಷ ರೂಪಾಯಿಗಳನ್ನೋ, ಮೂರು ಲಕ್ಷ ರೂಪಾಯಿಗಳನ್ನೋ ಖರ್ಚು ಮಾಡಿದ್ದರೆ ಒಪ್ಪಿಕೊಳ್ಳುತ್ತೇನೆ. ಪ್ರತಿವರ್ಷ ವಿಶೇಷ ಹೆಡ್‌ನಲ್ಲಿ ಹಣವನ್ನು ಕೋಟಿಗಟ್ಟಲೆ ಹಣವನ್ನು ವೆಚ್ಚ ಮಾಡಿದ್ದಾರೆ. ಮೂರು ವರ್ಷದಲ್ಲಿ 53 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿದ್ದಾರೆ. ವಿಶೇಷ ಎಂದು ಹೆಡ್ ಏನಾದರು ಇದೆಯೇ? ಉಳಿದಿದ್ದಕ್ಕೆಲ್ಲಾ ಹೆಡ್ ಇದೆ. ಇದಕ್ಕೆ ಏಕೆ ಇಲ್ಲ.

**ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ:-** ಮಾನ್ಯ ಸಭಾಪತಿಯವರೆ, ನಮ್ಮಲ್ಲಿ ಸಂಗ್ರಹವಾಗುತ್ತಿರುವಂತಹ ಹಣ ಎಂದರೆ, ಸಾಮಾನ್ಯ ಸಂಗ್ರಹ ನಿಧಿ ಎಂದು ಇದೆ. ಅದು ಭಕ್ತಾದಿಗಳು ದೇವಾಲಯಕ್ಕೆ ಬಂದು ಹುಂಡಿಗೆ ಹಣವನ್ನು ಹಾಕುತ್ತಾರೆ. ಆ ಹಣವನ್ನು ನಾವು 10% ಹಣವನ್ನು ಮಾತ್ರ ರಾಜ್ಯ ಮುಜರಾಯಿ ಪರಿಷತ್ತಿಗೆ ತೆಗೆದುಕೊಳ್ಳುತ್ತೇವೆ. ಉಳಿದಂತಹ ಎಲ್ಲಾ ಹಣವನ್ನು ಅಲ್ಲಿಯ ದೇವಾಲಯಗಳಿಗೆ ಖರ್ಚು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಬೇಕೆಂದು ಒಂದು ಕಾಯ್ದೆಯಲ್ಲಿ ಪ್ರಾವಿಜನ್ ಇದೆ. ಆ ಕಾಯ್ದೆಯ ಪ್ರಾವಿಜನ್ ಬಳಸಿಕೊಂಡು ನಾವು ಅಲ್ಲಿರತಕ್ಕಂತಹ 3–4 ದೇವಾಲಯಗಳನ್ನು ಅಭಿವೃದ್ಧಿ ಪಡಿಸಲಾಗುತ್ತದೆ. ರಾಜ್ಯದಲ್ಲಿರುವಂತಹ ವರ್ಷಕ್ಕೆ ಎರಡು ಲಕ್ಷ ರೂಪಾಯಿಗಳಿಗಿಂತಲೂ ಕಡಿಮೆ ಆದಾಯ ಇರುವಂತಹ ದೇವಾಲಯವನ್ನು ಅಭಿವೃದ್ಧಿ ಪಡಿಸಿ ಮತ್ತು ಹೆಚ್ಚು ಸವಲತ್ತುಗಳನ್ನು ಪ್ರವಾಸಿಗರಿಗೆ ಒದಗಿಸಿದಾಗ ಹೆಚ್ಚು ಹಣ ಬರುತ್ತದೆ ಎನ್ನುವ ದೃಷ್ಟಿಯಿಂದ ಅದನ್ನು ಕೂಡ ಚಾಲನೆ ಮಾಡಿ, ಪಕ್ಕ ಪಕ್ಕದಲ್ಲಿರತಕ್ಕಂತಹ ದೇವಾಲಯಗಳಿಗೆ ಹಣವನ್ನು ಕೊಡುವಂತಹ ಕೆಲಸವನ್ನು ಮಾಡಿದ್ದೇವೆ. ಜೊತೆಗೆ ನಾವು ಎಲ್ಲಾ ವಿವರಗಳನ್ನು ಲಿಖಿತ ಉತ್ತರದಲ್ಲಿ ಕೊಟ್ಟಿದ್ದೇವೆ. ವಸತಿ ಗೃಹಗಳನ್ನು ಮಾಡತಕ್ಕಂಥದ್ದು, ಶೌಚಾಲಯವನ್ನು ಮಾಡತಕ್ಕಂಥದ್ದು, ವಿಐಪಿ ಗಳು ಬಂದರೆ ಗೆಸ್ಟ್ ಹೌಸ್ ಮಾಡತಕ್ಕಂಥದ್ದು, ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡುವಂಥದ್ದು ಮತ್ತು ಹಲವಾರು ಯೋಜನೆಗಳನ್ನು ಮಾಡುವುದಕ್ಕೆ ನಾವು ಹಮ್ಮಿಕೊಂಡಿದ್ದೇವೆ. ಸಾರ್ವಜನಿಕರ ಹಿತದೃಷ್ಟಿಯಿಂದ ಒಂದು ರೂಪಾಯಿ ಕೂಡ ದುರ್ಬಳಕೆಯಾದ ರೀತಿಯಲ್ಲಿ ಮಾಡುತ್ತಿದ್ದಾರೆ. ಇದನ್ನು ನಾನೇ ಸ್ವತಃ ಅಲ್ಲಿಗೆ ಹೋದಾಗ ನೋಡಿದ್ದೇನೆ. ನಾನೇ ಸ್ವತಃ ಹೋಗಿ ಮೀಟಿಂಗ್ ಕರೆದಿದ್ದೇನೆ. ಯಾವುದೇ ದುರುಪಯೋಗವಾಗಿಲ್ಲ. ಸಾಮಾನ್ಯ ಭಕ್ತಾಧಿಗಳಿಂದ ಬಂದಂತಹ ಹಣವನ್ನೇ ಬೇರೆ ಬೇರೆ ಬ್ಯಾಂಕ್‌ಗಳಲ್ಲಿ ಠೇವಣಿಯನ್ನು ಇಡುತ್ತೇವೆ. ಅದರಿಂದ ಬಡ್ಡಿ ಕೂಡ ಬರುತ್ತದೆ. ಪ್ರತಿವರ್ಷ ಅಡಿಟ್ ಕೂಡ ಮಾಡಿಸುತ್ತೇವೆ. ಬಡ್ಡಿ ಬರುವಂತಹ ಹಣವನ್ನು ಕೂಡ ಪರಿಗಣನೆ ಮಾಡುತ್ತೇವೆ. ಈಗ ಏನು 53 ಕೋಟಿ ರೂಪಾಯಿಗಳ ಹಣ ಬೇರೆ ಬೇರೆ ಬ್ಯಾಂಕ್‌ಗಳಿದೆ ಅದನ್ನು ಕೂಡ ನಮಗೆ ತಿಳಿಸಿದ್ದಾರೆ. ಯಾವ ರೀತಿಯಾಗಿ ಹಣವನ್ನು ಉಪಯೋಗ ಮಾಡಿದ್ದಾರೆಂದು ಇನ್ನೊಂದು ಸಾರಿ ಪರಿಶೀಲನೆ ಮಾಡುತ್ತೇನೆ.

**ಶ್ರೀ ಭಾನುಪ್ರಕಾಶ್:-** ಮಾನ್ಯ ಸಭಾಪತಿಯವರೆ, ನಾನು ಸಚಿವರ ಬಗ್ಗೆ ಏನೂ ಹೇಳುವುದಿಲ್ಲ. ಅವರ ಪ್ರಾಮಾಣಿಕತೆ ಬಗ್ಗೆ ಮತ್ತು ಕಳಕಳಿ ಬಗ್ಗೆ ಏನೂ ಅನುಮಾನ ಇಲ್ಲ. ಆದರೆ ಈ ಲಿಖಿತ ಉತ್ತರವನ್ನು ಕೊಡಬೇಕಾದರೆ ಕೋಟಿಗಟ್ಟಲೆ ಹಣವನ್ನು ವಿಶೇಷ ಹೆಡ್‌ನಲ್ಲಿ ಖರ್ಚು ಮಾಡಲಾಗಿದೆ ಎಂದು ಕೊಡುವುದಕ್ಕಾಗುತ್ತದೆಯೇ? ಕಾನೂನಿನಲ್ಲಿ 10% ಹಣವನ್ನು ಎ ಗ್ರೇಡ್ ಮುಜರಾಯಿ ದೇವಾಲಯಗಳಿಂದ ತೆಗೆದುಕೊಳ್ಳಬೇಕೆಂದು ಇದೆ. 10% ಎಂದರೆ ಆ ದೇವಾಲಯದ ಆದಾಯದಲ್ಲಿ ಖರ್ಚು ಎಲ್ಲಾ ಕಳೆದು ಅಲ್ಲಿ ಉಳಿದಂತಹ ಹಣದಲ್ಲಿ ತೆಗೆದುಕೊಳ್ಳಬೇಕು. ಉದಾಹರಣೆಗೆ 100 ಕೋಟಿ ರೂಪಾಯಿಗಳು ಒಂದು ಮುಜರಾಯಿ ಇಲಾಖೆಯ ದೇವಾಲಯದಲ್ಲಿ ಆದಾಯ ಬಂದರೆ 80 ಕೋಟಿ ರೂಪಾಯಿಗಳು ಖರ್ಚಾದರೆ 20 ಕೋಟಿ ರೂಪಾಯಿಗಳು ಉಳಿಯುತ್ತದೆ. ಆ 20 ಕೋಟಿ ರೂಪಾಯಿಗಳಲ್ಲಿ 10% ಹಣವನ್ನು ಸರ್ಕಾರ ತೆಗೆದುಕೊಳ್ಳಬೇಕು. ನಾನು ವಿಶೇಷ ವೆಚ್ಚದ ಬಗ್ಗೆ ಪ್ರಸ್ತಾಪ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುತ್ತಿದ್ದೇನೆಂದರೆ, ಇದರ ಬಗ್ಗೆ ಪತ್ರಿಕೆಗಳಲ್ಲಿ ಮತ್ತು ವಾಟ್ಸ್ ಅಪ್‌ಗಳಲ್ಲಿ ಮುಜರಾಯಿ ಹಣವನ್ನು ಬೇರೆ ಬೇರೆಗೆ ಖರ್ಚು ಮಾಡುತ್ತಿರುವುದರಿಂದ ಭಕ್ತಾಧಿಗಳು ಯಾವುದೇ ಕಾರಣಕ್ಕೂ ಹಣವನ್ನು ಹುಂಡಿಗೆ ಹಾಕಬೇಡಿ ಎಂದು ಸುದ್ಧಿ ಓಡಾಡುತ್ತಿದೆ. ದೇವಾಲಯಗಳಿಗೆ ಭಕ್ತಾಧಿಗಳಿಂದ ಆದಾಯ ಬರುವಂಥದ್ದು. ಸರ್ಕಾರದಿಂದ ಒಂದು ಪೈಸೆ ಕೂಡ ಕೊಡುವುದಿಲ್ಲ. ಅದಕ್ಕೋಸ್ಕರವಾಗಿ ಮಾನ್ಯ ಸಚಿವರು ಇದನ್ನು ಗಮನಿಸಬೇಕು. ಈ ವಿಷಯವನ್ನು ನಾನು ಮುಂದುವರೆಸುವುದಿಲ್ಲ. ಹಣಗೆರೆಕಟ್ಟೆಯಲ್ಲಿ ಸುತ್ತಲೂ ಕಾಡು ಇದೆ. ಅಲ್ಲಿ ಹೋಗಿ ಅಡುಗೆಯನ್ನು ಮಾಡುವವರೆಲ್ಲರೂ ಕಾಡಿನಲ್ಲಿರುವಂರಹ ಮರಗಳನ್ನು ಕಡಿದರೆ ಕಾಡು ನಾಶವಾಗುತ್ತದೆ. ಆ ದೇವಾಲಯದಲ್ಲಿ ಒಂದು ಕೋಟಿ ರೂಪಾಯಿಗಳಷ್ಟು ಹಣ ಅಲ್ಲಿದೆ. ದಯಮಾಡಿ ಒಂದು ಶೆಡ್ ಹಾಕಿಸಿ ಮತ್ತು ಗ್ಯಾಸ್ ಒಲೆಯನ್ನು ಮಾಡಿ, ಅಚ್ಚುಕಟ್ಟಾಗಿ ನೀರಿನ ವ್ಯವಸ್ಥೆಯನ್ನು ಮಾಡಿದರೆ ಅಲ್ಲಿಗೆ ಬರುವಂತಹ ಭಕ್ತಾಧಿಗಳು ಆನಂದವಾಗಿರುತ್ತಾರೆ. ನಿಮಗೂ ಕೂಡ ಪುಣ್ಯ ಬರುತ್ತದೆ. ನೀವು ಕೂಡ ಮಂತ್ರಿಯಾಗಿರಬಹುದು. ಮಾನ್ಯ ಅರಣ್ಯ ಸಚಿವರು ಸದನದಲ್ಲಿದ್ದಾರೆ. ಕೊಲ್ಲೂರು ಮಾನ್ಯ ಅರಣ್ಯ ಸಚಿವರಿಗೆ ಹತ್ತಿರದಲ್ಲಿಯೇ ಇದೆ. ಆ ದೇವಾಲಯಕ್ಕೆ ದೇಶದ ಎಲ್ಲಾ ಭಾಗಗಳಿಂದ ಭಕ್ತಾಧಿಗಳು ಬರುತ್ತಾರೆ. ದಯವಿಟ್ಟು 4–5 ಎಕರೆ ಜಾಗವನ್ನು ಪಾರ್ಕಿಂಗ್ ಮಾಡುವುದಕ್ಕೆ ಕೊಡಿ. ದೇವಾಲಯದಿಂದ ಹಣವನ್ನು ತೆಗೆದುಕೊಂಡು ಜಾಗವನ್ನು ಕೊಡಿ ಎಂದು ತಮ್ಮ ಮುಖಾಂತರ ಅರಣ್ಯ ಸಚಿವರಲ್ಲಿಯೂ ಕೂಡ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

. . . ಮುಂದು

(578) 07.06.2017 12.00 SV-MD

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಭಾನುಪ್ರಕಾಶ್(ಮುಂದು):–**

ದಯವಿಟ್ಟು ಸ್ವಲ್ಪ ಜಾಗವನ್ನು ಕೊಡಿ. ನಾಲ್ಕೈದು ಎಕರೆ ಜಾಗವನ್ನು ಕೊಡಿ. ಮರ ಕಡಿಯುವುದಕ್ಕೆ ಬಿಡಬೇಡಿ. ಮರಗಳನ್ನು ಕಡಿಯದೆ ಪಾರ್ಕಿಂಗ್ ವ್ಯವಸ್ಥೆಯನ್ನು ಮಾಡುವುದಕ್ಕೆ ಅವಕಾಶವಿದೆ. ದೇವಸ್ಥಾನದಿಂದ ಹಣವನ್ನು ಪಡೆದುಕೊಂಡು ಈ ಜಾಗವನ್ನು ಲೀಸ್ ಮೇಲೆ ಕೊಡಿ ಎಂದು ನಾನು ತಮ್ಮ ಮೂಲಕ ಅರಣ್ಯ ಸಚಿವರಲ್ಲಿ ವಿನಂತಿ ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ:-** ಮಾನ್ಯ ಸಭಾಪತಿಯವರೆ, ಅಲ್ಲಿ ಪಾರ್ಕಿಂಗ್ ವ್ಯವಸ್ಥೆ ಮಾಡಲು ಏನು ಸಾಧ್ಯತೆ ಇದೆ ಎಂಬುದನ್ನು ಚರ್ಚೆ ಮಾಡುತ್ತೇವೆ. ಅಲ್ಲಿ ಖಾಸಗಿ ಜಮೀನು ಕೂಡ ಇದೆ ಎಂಬುದೂ ನನ್ನ ಗಮನಕ್ಕೆ ಬಂದಿದೆ. ಆದಷ್ಟು ಬೇಗನೆ ಇದನ್ನು ಮಾಡುವಂತಹ ವ್ಯವಸ್ಥೆಯನ್ನು ಮಾಡಲಾಗುವುದು. ಮಾನ್ಯ ಸದಸ್ಯರು ಇನ್ನೊಂದು ಮಾತನ್ನು ಹೇಳಿದರು. ಹುಂಡಿಯ ಹಣದಲ್ಲಿ ಖರ್ಚು ವೆಚ್ಚವನ್ನು ಕಳೆದು ಉಳಿದ ಹಣವನ್ನು ದೇವಸ್ಥಾನಕ್ಕೆ ಬಳಸಿಕೊಳ್ಳಬೇಕು. ಹಾಗೆಯೇ ಮಾಡುತ್ತಿದ್ದೇವೆ. ಇಲ್ಲಿ ಯಾವುದೇ ದುರುಪಯೋಗವನ್ನು ಮಾಡಿರುವುದಿಲ್ಲ. ಇದರ ಬಗ್ಗೆ ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರೂ ಸಹ ಗಮನ ಸೆಳೆಯುವ ಸೂಚನೆಯನ್ನೂ ಸಹ ಕೇಳಿರುತ್ತಾರೆ. ಅದರ ಬಗ್ಗೆಯೂ ಸಹ ನಾನು ಸದನದಲ್ಲಿ ಉತ್ತರಿಸುತ್ತೇನೆ.

**ಸಭಾಪತಿಯವರು:-** ಮುಂದಿನ ಪ್ರಶ್ನೆಯನ್ನು ಶ್ರೀ ರಮೇಶ್ ಬಾಬುರವರು ಕೇಳಿದ್ದಾರೆ. ಅದಕ್ಕೆ ಉತ್ತರಿಸಲು ಮಾನ್ಯ ಸಚಿವರು ಕಾಲಾವಕಾಶವನ್ನು ಕೇಳಿರುತ್ತಾರೆ. ಮಾನ್ಯ ಸಚಿವರು ಕಾರಣವೇನೆಂದು ತಿಳಿಸಬೇಕು.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೆ, ಕಳೆದ ಮೂರು ವರ್ಷದಲ್ಲಿ ಒಟ್ಟು ಕಾಮಗಾರಿಗಳು, ನಿಗದಿತ ಅವಧಿಯಲ್ಲಿ ಪೂರ್ಣಗೊಂಡಿರುವ ಕಾಮಗಾರಿಗಳು, ಬಾಕಿ ಇರುವ ಕಾಮಗಾರಿಗಳು, ಅವಧಿ ಮೀರಿದ ಪ್ರಕರಣಗಳಲ್ಲಿ ಗುತ್ತಿಗೆದಾರರಿಗೆ ಪಾವತಿ ಮಾಡಲಾದ ಮೊತ್ತ ಇತ್ಯಾದಿ ವಿವರಗಳನ್ನು ಮಾನ್ಯ ಸದಸ್ಯರು ಕೋರಿರುತ್ತಾರೆ. ಹೀಗಾಗಿ ನಾನು ಕಾಲಾವಕಾಶವನ್ನು ಕೋರಿದ್ದೇನೆ.

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೆ, ನನ್ನ ಪ್ರಶ್ನೆಯೇ ಬೇರೆ; ಮಾನ್ಯ ಸಚಿವರು ಹೇಳುತ್ತಿರುವುದೇ ಬೇರೆ. ಕೃಷ್ಣಾ ಮೇಲ್ದಂಡೆಗೆ ಸಂಬಂಧಪಟ್ಟಂತೆ ಆಗಿರುವ ಅಧಿಸೂಚನೆಗೆ ಎಷ್ಟು ಹಣ deposit ಮಾಡಲಾಗಿದೆ? ಏಕೆಂದರೆ 6,000 ಕೋಟಿ ರೂಪಾಯಿ ಇದ್ದದ್ದು 20,000 ಕೋಟಿ ರೂಪಾಯಿ ಆಗಿದೆ. ಮಾನ್ಯ ಸಚಿವರು 12 ಲಕ್ಷ ಹೆಕ್ಟೇರ್‌ಗೆ ನೀರಾವರಿ ಒದಗಿಸಲಾಗುವುದು ಎಂದು ಹೇಳಿದ್ದರು.

**ಸಭಾಪತಿಯವರು:-** ಈಗ ಅದರ ಬಗ್ಗೆ ಚರ್ಚೆ ಬೇಡ. ಅವರು ಸಮಯ ಕೇಳಿದ್ದಾರೆ. ಈಗ ಉತ್ತರ ಸಿದ್ಧವಿರುವುದಿಲ್ಲ.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೆ, ಅವರು ಪ್ರಶ್ನೆ ಅದಲ್ಲವೆಂದು ಹೇಳುತ್ತಿದ್ದಾರೆ. ಪ್ರಶ್ನೆ 'ಉ'ನಲ್ಲಿ ಕೃಷ್ಣಾ ಭಾಗ್ಯ ಜಲ ನಿಗಮದಡಿಯಲ್ಲಿ ಗುತ್ತಿಗೆ ಕಾಮಗಾರಿ ಪಡೆದು ಅವಧಿ ಮೀರಿದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಕರಣಗಳಲ್ಲಿ ಎಷ್ಟು ಗುತ್ತಿಗೆದಾರರಿಗೆ ಹಣವನ್ನು ಪಾವತಿ ಮಾಡಲಾಗಿದೆ? ನಿಗಮಕ್ಕಾಗಿರುವ ನಷ್ಟ ಎಷ್ಟು ಎಂದೂ ಕೇಳಿದ್ದಾರೆ.

**ಸಭಾಪತಿಯವರು:-** ಹಾಗಾದರೆ ಮುಂದಿನ ವಾರ ಉತ್ತರವನ್ನು ಕೊಡಲಾಗುವುದೇ?

**ಶ್ರೀ ಎಂ.ಬಿ.ಪಾಟೀಲ್:-** ನಾನು ತಪ್ಪು ಮಾಹಿತಿಯನ್ನು ಕೊಡುವುದಕ್ಕೆ ಬಯಸುವುದಿಲ್ಲ. ಮುಂದಿನ ಬುಧವಾರ ಉತ್ತರವನ್ನು ಕೊಡಲಾಗುವುದು.

**ಪ್ರಶ್ನೆ ಸಂಖ್ಯೆ:- 2289**

**ಸಭಾಪತಿಯವರು:-** ಮುಂದಿನ ಪ್ರಶ್ನೆ ಮಾನ್ಯ ಶ್ರೀ ಅಮರನಾಥ ಪಾಟೀಲರದ್ದು. ಇದು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಗೆ ವರ್ಗಾವಣೆಯಾಗಿದೆ. ನೀವು ಕಂದಾಯ ಇಲಾಖೆಗೆ ಕೇಳಿದ್ದೀರಿ.

**ಶ್ರೀ ಅಮರನಾಥ ಪಾಟೀಲ್:-** ಮಾನ್ಯ ಸಭಾಪತಿಯವರೆ, ಇದರಲ್ಲಿ ಡಿ.ಪಿ.ಎ.ಆರ್. ಪ್ರಶ್ನೆಯೇ ಬರುವುದಿಲ್ಲ. ಇದು ನಾನು ಕೇವಲ ಉತ್ತರ ಪಡೆಯುವುದಕ್ಕೆ ಹಾಕಿದ ಪ್ರಶ್ನೆಯಲ್ಲ. ಇಂದು 371(ಜೆ) ರಚನೆಯಾಗಿ ಕಂದಾಯ ಇಲಾಖೆಗೆ 371(ಜೆ) ಅಡಿಯ ಪ್ರಮಾಣ ಪತ್ರಗಳು ನೀಡುವ ಕುರಿತು ಬಹಳ ಸ್ಪಷ್ಟವಾದ ನಿರ್ದೇಶನವನ್ನು ನೀಡಲಾಗಿದೆ. ಸರ್ಕಾರದ ಒಬ್ಬ ಹಿರಿಯ ಸಚಿವರಿಗೆ ಈ ಕುರಿತು ಗೊಂದಲ ಇದ್ದು, ಏನು ಮಾಡಬೇಕು; ಅವರ ಪರಮಾವಧಿಯಲ್ಲಿ ಏನು ಬರುತ್ತದೆ, ಏನಿಲ್ಲ ಎಂಬುದು ಅವರಿಗೆ ಗೊತ್ತಿಲ್ಲವೆಂದರೆ ನನಗೆ ಆಶ್ಚರ್ಯವಾಗುತ್ತದೆ. ಈಗ ನಾನು ಪ್ರಶ್ನೆ ಕೇಳುತ್ತಿದ್ದರೂ ಸಹ ಅವರು ಲಕ್ಷ್ಯವನ್ನು ಕೊಡದೆ ಅಲ್ಲಿ ಮಾತನಾಡುತ್ತಿದ್ದಾರೆ. ಇಲ್ಲಿಯೇ ಹೀಗಾದರೆ ಅಲ್ಲಿನ ಗತಿಯೇನು? ಹೈದರಾಬಾದ್ ಕರ್ನಾಟಕದ ಪರಿಸ್ಥಿತಿಯೇನು? ಕೇಳಿದರೆ 371(ಜೆ) ಅಡಿಯಲ್ಲಿ ನಾವು ಎಲ್ಲವನ್ನೂ ಜಾರಿಗೊಳಿಸಿದ್ದೇವೆ ಎಂದು ಹೇಳುತ್ತಾರೆ. ಈಗಲೂ ಸಹ ಅವರು ನನ್ನ ಮಾತನ್ನು ಕೇಳುತ್ತಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಕಂದಾಯ ಸಚಿವರನ್ನು ಪ್ರಶ್ನೆ ಕೇಳುತ್ತಿದ್ದರೂ ಅವರು ಮಾತನಾಡುತ್ತಾ ಕುಳಿತುಕೊಳ್ಳುವುದಾದರೆ ನಾವು ಏಕೆ ಸದನಕ್ಕೆ ಬರಬೇಕು? ಹಿರಿಯ ಸಚಿವರಿಗೆ ಮಾನ್ಯ ಸದಸ್ಯರು ಬಹಳ ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದರೂ ಸಹ ಅವರು ಈ ರೀತಿ ಮಾತನಾಡಿಕೊಂಡು ಕುಳಿತರೆ ನಾವೇನು ಮಾಡುವುದು?

**ಶ್ರೀ ಅಮರನಾಥ ಪಾಟೀಲ್:-** ಮಾನ್ಯ ಸಭಾಪತಿಯವರೆ, 371(ಜೆ) ಅರ್ಹತಾ ಪ್ರಮಾಣಪತ್ರಗಳ ಬಗ್ಗೆ ಕಾನೂನು ರಚನೆಯಾಗಿ ಕಂದಾಯ ಇಲಾಖೆಯ ಉಪವಿಭಾಗಾಧಿಕಾರಿಗಳಿಗೆ, ಜಿಲ್ಲಾಧಿಕಾರಿಗಳ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಛೇರಿ, ತಹಶೀಲ್ದಾರ್ ಕಛೇರಿಗೆ ಸ್ಪಷ್ಟವಾದ ನಿರ್ದೇಶನ ಇದೆ. ಸಂಪೂರ್ಣ ಅವ್ಯವಸ್ಥೆಯ ಆಗರವಾಗಿದ್ದು, ಯುವಕರಿಗೆ ಮತ್ತು ಅಲ್ಲಿನ ನಾಗರಿಕರಿಗೆ ಅನಾನುಕೂಲವಾಗಿದೆ.

**Mr.CHAIRMAN:-** You are going on the merit. ಅವರು ಕೇಳಿರುವ ಪ್ರಶ್ನೆ ಕಂದಾಯ ಇಲಾಖೆಯದ್ದೇ. ಡಿ.ಪಿ.ಎ.ಆರ್‌ದಲ್ಲ. ಮಾನ್ಯ ಸಚಿವರು ಮತ್ತೊಮ್ಮೆ ನೋಡಿ. ಕಂದಾಯ ಇಲಾಖೆಯಿಂದಲೇ ಉತ್ತರ ಬರಬೇಕು. 371(ಜೆ) ಅಡಿಯಲ್ಲಿ ಕಂದಾಯ ಎಂದು ಹೇಳುತ್ತಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಡಿ.ಪಿ.ಎ.ಆರ್.ಗೆ ಹೋಗುವುದಕ್ಕೆ ಕಾರಣವೇನು?

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೆ, ಹೈದರಾಬಾದ್ ಕರ್ನಾಟಕದ ವಿಚಾರ ಆಗಿರುವುದರಿಂದ ಅದನ್ನು ಡಿ.ಪಿ.ಎ.ಆರ್.ಗೆ ರೆಫರ್ ಮಾಡಲಾಗಿತ್ತು. ನಾನು ಮತ್ತೊಮ್ಮೆ ಪರಿಶೀಲನೆ ಮಾಡುತ್ತೇನೆ. ನಾವೇ ಮಾಡುವುದಾದರೆ ನಾಳೆಯೇ ಕೊಡುತ್ತೇನೆ.

**ಶ್ರೀ ಅಮರನಾಥ ಪಾಟೀಲ್:-** ಮಾನ್ಯ ಸಭಾಪತಿಯವರೆ, ಹಾಗಾದರೆ ನಾಳೆಯೇ ಉತ್ತರವನ್ನು ಕೊಡಲಾಗುವುದೇ?

**ಸಭಾಪತಿಯವರು:-** ಮುಂದಿನ ವಾರ ಅದು ಲಿಸ್ಟ್ ಆದಾಗ ಕೊಡುತ್ತಾರೆ. ನಾಳೆ ಆದರೆ ನೋಡೋಣ.

**ಪ್ರಶ್ನೆ ಸಂಖ್ಯೆ:- 2158**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಧರ್ಮಸೇನ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಎಲ್ಲಾ ಉತ್ತರಗಳನ್ನು ಕೊಟ್ಟಿರುತ್ತಾರೆ. ಅದಕ್ಕಾಗಿ ಧನ್ಯವಾದಗಳು. ನಮ್ಮ ಮೈಸೂರು-ಚಾಮರಾಜನಗರ ವಿಭಾಗಕ್ಕೆ ಸಂಬಂಧಿಸಿದಂತೆ ನಾನು ಒಂದು ಪ್ರಶ್ನೆಯನ್ನು ಕೇಳಿದ್ದೆನು. ಕಳೆದ ಬಾರಿ ಸುಮಾರು 159 ಕೆರೆಗಳಲ್ಲಿ 107 ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದೇವೆಂದು ಹೇಳಿದ್ದಾರೆ. ಪ್ರಸಕ್ತ ಸಾಲಿನಲ್ಲಿ 50ಕ್ಕೆ 50 ಕೂಡ ಪ್ರಗತಿಯಲ್ಲಿದೆ ಎನ್ನುವಂತಹ ಮಾತನ್ನು ಹೇಳಿದ್ದಾರೆ. ಒಟ್ಟು 102 ಕಾಮಗಾರಿಗಳನ್ನು ಎಷ್ಟು ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗುವುದು? ಅನುದಾನದ ಲಭ್ಯತೆಯ ಅನುಸಾರವಾಗಿ ಎಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳಲಾಗಿದೆ. ಅನುದಾನದಿಂದ ಭರಿಸಲಾಗದಷ್ಟು ಹಣದ ಅವಶ್ಯಕತೆ ಇದೆ ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಟಿ.ಬಿ.ಜಯಚಂದ್ರ:–** ಮಾನ್ಯ ಸಭಾಪತಿಯವರೆ, ಆದಷ್ಟು ಬೇಗ ಮುಗಿಸಬೇಕು ಎನ್ನುವುದು ಉದ್ದೇಶ. 2016–17ನೇ ಸಾಲಿನಲ್ಲಿ ತೆಗೆದುಕೊಂಡ ಎಲ್ಲಾ ಕಾಮಗಾರಿಗಳು ಕೂಡ ಪ್ರಗತಿಯಲ್ಲಿವೆ. ಕಾಮಗಾರಿಗಳನ್ನು ಮಾಡಬೇಕಾದಾಗ ಹಣಕಾಸಿನ ಇತಿಮಿತಿಯನ್ನು ಕೂಡ ನೋಡಬೇಕಾಗುತ್ತದೆ. ಆದಷ್ಟು ಬೇಗ ಮುಗಿಸಬೇಕೆನ್ನುವುದು ನಮ್ಮ ಉದ್ದೇಶವಾಗಿದೆ. ಮುಗಿಸಿಕೊಡುತ್ತೇವೆ.

**ಪ್ರಶ್ನೆ ಸಂಖ್ಯೆ: 2295**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀಮತಿ ವೀಣಾ ಅಚ್ಚಯ್ಯ:–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಬಹಳ ಚೆನ್ನಾಗಿ ಉತ್ತರವನ್ನು ಒದಗಿಸಿದ್ದು, ಅದಕ್ಕಾಗಿ ಅವರಿಗೆ ಧನ್ಯವಾದಗಳನ್ನು ಹೇಳುತ್ತಾ, ಇನ್ನೂ ಕೆಲವು ಬೇಡಿಕೆಗಳನ್ನು ಅವರ ಮುಂದಿಡಲು ಇಚ್ಛೆ ಪಡುತ್ತೇನೆ. ಈಗಾಗಲೇ ಹಾಕಿ ಇಂಡಿಯಾದವರು *Astro Turf* ಎಂದರೆ ಕೃತಕ ಹುಲ್ಲುಹಾಸಿನ ಮೈದಾನದ ಮೇಲೆ ಅಭ್ಯಾಸವನ್ನು ಮಾಡಬೇಕು ಮತ್ತು ಪಂದ್ಯಗಳನ್ನು ಕೂಡ ಆ ಮೈದಾನಗಳಲ್ಲಿಯೇ ನಡೆಸಬೇಕೆಂದು ಸ್ಥಳೀಯ ಹಾಕಿ ಸಂಸ್ಥೆಗೆ ಮೌಖಿಕ ಆದೇಶವನ್ನು ನೀಡಿರುತ್ತಾರೆ. ಹೀಗಾಗಿ ಇನ್ನೂ ಹೆಚ್ಚಿನ *Astro Turf* ಮೈದಾನ ನಮಗೆ ಬೇಕು. ಈಗಾಗಲೇ ಕೊಡಗು ಜಿಲ್ಲೆಯಲ್ಲಿ ಎರಡು *Astro Turf* ಮೈದಾನಗಳು ಮಡಿಕೇರಿ ಮತ್ತು ಪೊನ್ನಂಪೇಟೆಯಲ್ಲಿವೆ. ಈ ಎರಡೂ ಮೈದಾನಗಳಿಗೆ ಆದಷ್ಟು ಬೇಗ ನೀರಿನ ಸೌಕರ್ಯವನ್ನು ಒದಗಿಸಬೇಕು. ಸೋಮವಾರಪೇಟೆಯಲ್ಲಿ *Astro Turf* ಮೈದಾನದ ಕಾಮಗಾರಿ ಪ್ರಗತಿಯಲ್ಲಿದೆ. ಅದರ ಜೊತೆಯಲ್ಲಿಯೇ ಅಮ್ಮತ್ತಿ, ವಿರಾಜಪೇಟೆ ಮತ್ತು ನಾಪೊಕ್ಲುವಿನಲ್ಲಿಯೂ ಸಹ ಈ ಮೈದಾನ ಆಗಬೇಕೆಂದು ಮಾನ್ಯ ಸಚಿವರಲ್ಲಿ ಮನವಿ ಮಾಡುತ್ತೇನೆ. ಅದೇ ರೀತಿ ಕೊಡವ ಸಂಸ್ಕೃತಿ ಮತ್ತು ಜೀವನಶೈಲಿಯಲ್ಲಿ ಹಾಕಿಗೆ ಒಂದು ವಿಶೇಷವಾದ ಸ್ಥಾನಮಾನವಿದ್ದು, ಇದನ್ನು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ಯಲು ಕೊಡವ ಹಾಕಿ ಪ್ರತಿಭೆಗಳಿಗೆ ವಿಶೇಷ ಆದ್ಯತೆಯನ್ನು ಕಲ್ಪಿಸಬೇಕೆಂದು ನಾನು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಕೊಡಗಿನ ಹಾಕಿ ಪ್ರತಿಭೆಗಳು ಅಂತರರಾಷ್ಟ್ರೀಯ ಮಟ್ಟದಲ್ಲಿ ತರಬೇತಿಯನ್ನು ಪಡೆಯುವುದಕ್ಕಾಗಿ ವಿದೇಶದಲ್ಲಿಯೂ ತರಬೇತಿಯನ್ನು ನೀಡಬೇಕೆಂದು ಮನವಿ

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುತ್ತೇನೆ. ಈಗಾಗಲೇ 21 ವರ್ಷಗಳಿಂದ ಸತತವಾಗಿ ಕೊಡವ ಕುಟುಂಬಗಳು ಹಾಕಿಯ ಒಂದು ಹಬ್ಬವನ್ನು ಆಚರಿಸುತ್ತಿದ್ದಾರೆ. ಅವರಿಗೂ ಸಹ ಕರ್ನಾಟಕ ಸರ್ಕಾರ ನಿರಂತರವಾಗಿ ಸಹಾಯಧನವನ್ನು ಕೊಡುತ್ತಾ ಬಂದಿದೆ. ಆ ಸಹಾಯಧನವನ್ನು ಪ್ರತಿವರ್ಷವೂ ಬೇರೆ ಬೇರೆ ರೀತಿಯಲ್ಲಿ ಕೊಡುವುದರಿಂದ ಗೊಂದಲ ಉಂಟಾಗುತ್ತಿದ್ದು, ಇದಕ್ಕೆಂದೇ ಒಂದು ಸೀಮಿತ ಮೊತ್ತವನ್ನು ನಿಗದಿ ಪಡಿಸಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಆದಷ್ಟು ಶೀಘ್ರವಾಗಿ *Astro Turf* Hockey ಮೈದಾನವನ್ನು ಮಾಡಿಕೊಡಬೇಕೆಂದು ಮತ್ತೊಮ್ಮೆ ಮಾನ್ಯ ಸಚಿವರನ್ನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ.

**ಶ್ರೀ ಪ್ರಮೋದ್ ಮಧ್ವರಾಜ್:-** ಮಾನ್ಯ ಸಭಾಪತಿಯವರೆ, ಹಾಕಿ ಎಂದಾಕ್ಷಣ ನಮಗೆ ನೆನಪಾಗುವುದು ಕೊಡಗು ಜಿಲ್ಲೆ. ಏಕೆಂದರೆ, it is a cradle of hockey in the country. ನಮ್ಮ ದೇಶದ ರಾಷ್ಟ್ರೀಯ ಹಾಕಿ ತಂಡಗಳಲ್ಲಿ ಪ್ರತಿ ವರ್ಷ 4-5 ಜನ ಕೊಡಗಿನ ಆಟಗಾರರು ಇರುತ್ತಾರೆ. ಹಾಗಾಗಿ ಹಾಕಿ ಕ್ರೀಡೆಗೆ ವಿಶೇಷವಾದ ಉತ್ತೇಜನ ನೀಡುವ ಸಲುವಾಗಿ ನಾವು ಗರಿಷ್ಠವಾದ ಸಹಕಾರವನ್ನು ಕೊಡಗು ಜಿಲ್ಲೆಯ ಹಾಕಿ ಕ್ರೀಡಾಳುಗಳಿಗೆ ನೀಡುತ್ತಾ ಬಂದಿದ್ದೇವೆ. ಈಗಾಗಲೇ ಕೊಡಗಿನಲ್ಲಿ ಮೂರು Hockey Turf ಇದೆ. ಅದರಲ್ಲಿ ಕೂಡಿಗೆಯ Hockey Turfನ ಕಾಮಗಾರಿ ಪ್ರಗತಿಯಲ್ಲಿದ್ದು, ಇನ್ನು ಮೂರು ತಿಂಗಳುಗಳಲ್ಲಿ ಮುಗಿಸಲಾಗುವುದು. ಸೋಮವಾರಪೇಟೆಯ Hockey Turf ನ ಟೆಂಡರ್ ಕೂಡ ಇವತ್ತು ಅಥವಾ ನಾಳೆ ತೆರೆಯಲಾಗುವುದು. Work order ಕೊಟ್ಟ ಮೇಲೆ ಆರು ತಿಂಗಳೊಳಗಾಗಿ ಅದನ್ನು ಕೂಡ ಮುಗಿಸುತ್ತೇವೆ. ನಮಗೆ ಕೊಡಗಿನ ಬಗ್ಗೆ ಎಷ್ಟು ಆಶಾಭಾವನೆ ಇದೆ ಎಂದರೆ ಬೆಂಗಳೂರಿನಲ್ಲಿರತಕ್ಕಂತಹ ಹಾಕಿ ಕ್ರೀಡಾಂಗಣಕ್ಕೆ ಯಾವ ಹೆಸರನ್ನಿಡಬೇಕೆಂಬ ಪ್ರಶ್ನೆ ಬಂದಾಗ ನಾನು ಫೀಲ್ಡ್‌ಮಾರ್ಷಲ್ ಕೆ.ಎಂ.ಕಾರ್ಯಪ್ಪನವರ ಹೆಸರನ್ನು ಇಡುವುದಕ್ಕೆ ತೀರ್ಮಾನ ಮಾಡಿದ್ದೇನೆ. ಹೀಗಾಗಿ ಹಾಕಿ ಸಲುವಾಗಿ ಕೊಡಗಿಗೆ ಏನೆಲ್ಲಾ ಸಹಕಾರ ಬೇಕಾಗಿದೆಯೋ, ಅವುಗಳನ್ನೆಲ್ಲಾ on top priority basis ಮಾಡಲಿಕ್ಕೆ ನಾವು ಬದ್ಧರಾಗಿದ್ದೇವೆ ಎನ್ನುವಂತಹ ಉತ್ತರವನ್ನು ನಾನು ಸದನಕ್ಕೆ ನೀಡಬಯಸುತ್ತೇನೆ.

(...ಮುಂದು)

(579)/7-6-2017/12=10/RC-MD

(ಸಭಾಪತಿಯವರ ಉಪಸ್ಥಿತಿ)

**ಚುಕ್ಕೆ ಪ್ರಶ್ನೆ ಸಂಖ್ಯೆ 2218**
**(ಉತ್ತರವನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ವ್ಹಿ.ಸಂಕನೂರ:–** ಸನ್ಮಾನ್ಯ ಸಭಾಪತಿಯವರೆ, ಹಾವೇರಿ ಜಿಲ್ಲೆಯ ಹಿರೇಕೆರೂರ ತಾಲ್ಲೂಕಿನಲ್ಲಿರುವಂತಹ ತಾಲ್ಲೂಕ ಕ್ರೀಡಾಂಗಣದ ಮತ್ತು ಒಳ ಕ್ರೀಡಾಂಗಣದ ಅವ್ಯವಸ್ಥೆಯ ಕುರಿತು ನಾನು ಪ್ರಶ್ನೆ ಕೇಳಿದ್ದೆ. ಅದಕ್ಕೆ ಉತ್ತರವನ್ನು ಒದಗಿಸಿದ್ದಾರೆ. ನನ್ನ ಪ್ರಶ್ನೆ ಏನೆಂದರೆ, ಅಲ್ಲಿ ತಾಲ್ಲೂಕ ಕ್ರೀಡಾಂಗಣ 2012ರಲ್ಲಿ ಉದ್ಘಾಟನೆ ಆಯಿತು. ಉದ್ಘಾಟನೆ ಆದ ನಂತರ ಅಲ್ಲಿ ಎಲ್ಲಾ ರೀತಿಯಾದಂತಹ ಚಟುವಟಿಕೆಗಳು ನಡೆಯುತ್ತಿತ್ತು. ಅಂದರೆ ಸ್ವಾತಂತ್ರ್ಯ ದಿನಾಚರಣೆ, ಸಾಂಸ್ಕೃತಿಕ ಕಾರ್ಯಕ್ರಮಗಳು, ಹಾಗೂ ದಸರಾ ಕ್ರೀಡಾ ಕೂಟಗಳು ಸಹ ನಡೆಯುತ್ತಿತ್ತು. ಒಂದೆರಡು ವರ್ಷ ಸರಿಯಾಗಿ ನಡೆಯಿತು. ಆದರೆ ಇತ್ತೀಚೆಗೆ ಅಂದರೆ ಎರಡು ಮೂರು ವರ್ಷಗಳಿಂದ ಈ ಎಲ್ಲಾ ಕಾರ್ಯಕ್ರಮಗಳು ನಿಂತು ಹೋಗಿವೆ. ಏಕೆಂದರೆ ನನ್ನ ಪ್ರಶ್ನೆ ಏನೆಂದರೆ, ಕ್ರೀಡಾಂಗಣದ ಒಳಗೆ ಜಾಲಿಗಿಡ, ಕಾಂಗ್ರೆಸ್ ಕಸ, ಹುಲ್ಲು ಹಾಗೂ ವಿವಿಧ ರೀತಿಯ ಗಿಡಗಂಟೆಗಳು ಬೆಳೆದು ನಿಂತಿವೆ ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂಬ ಪ್ರಶ್ನೆಗೆ ಉತ್ತರವಾಗಿ ಸರ್ಕಾರದ ಗಮನಕ್ಕೆ ಬಂದಿದೆ ಎಂದು ಒಪ್ಪಿಕೊಂಡಿದ್ದಾರೆ.

**ಶ್ರೀ ಬಸವರಾಜ ಹೊರಟ್ಟಿ:–** ಕಾಂಗ್ರೆಸ್ ಕಸ ಎಂದು ಹೇಳಿದ್ದಾರಲ್ಲ ಅದು ಯಾವುದು?

(ಗೊಂದಲ)

**ಶ್ರೀ ಪ್ರಮೋದ್ ಮಧ್ವರಾಜ್:–** ಕಾಂಗ್ರೆಸ್ ಅನ್ನು ಯಾರು ಯಾವತ್ತು ಮುಗಿಸುವುದಕ್ಕೆ ಆಗುವುದಿಲ್ಲ ಹಾಗಾಗಿ ಅದಕ್ಕೆ ಕಾಂಗ್ರೆಸ್ ಗಿಡ ಎಂದು ಹೆಸರು ಇಟ್ಟಿದ್ದಾರೆ.

**ಸಭಾಪತಿಯವರು;–** ಆ ವಿಷಯವನ್ನು ಅಲ್ಲಿಗೆ ಬಿಡಿ. ಈಗ ಹಾವೇರಿ ಕ್ರೀಡಾಂಗಣದ ವಿಷಯ ಹೋಯಿತು.

**ಶ್ರೀ ಬಸವರಾಜ ಹೊರಟ್ಟಿ:–** ಅದರ ಬಗ್ಗೆ ಸ್ಪಷ್ಟೀಕರಣ ನೀಡಿ.

**ಶ್ರೀ ಹೆಚ್.ಎಂ.ರೇವಣ್ಣ:–** ಬಳಕೆಯಲ್ಲಿರುವ ಪದವನ್ನು ಹೇಳಿ. ಬಳಕೆಯಲ್ಲಿ ಕಾಂಗ್ರೆಸ್ ಗಿಡ ಎಂದು ಹೇಳುತ್ತೇವೆ.

**ಶ್ರೀ ಬಸವರಾಜ ಹೊರಟ್ಟಿ:–** ನಮ್ಮ ಕಡೆ ಬಳಕೆಯಲ್ಲಿ ಕಾಂಗ್ರೆಸ್ ಕಸ ಎಂದು ಹೇಳುತ್ತಾರೆ.

**ಸಭಾಪತಿಯವರು:–** ಮಾನ್ಯ ಸಂಕನೂರ್ ಅವರೆ, ನಿಮ್ಮ ಪ್ರಶ್ನೆಗೆ ಉತ್ತರ ಬೇಡವೆ? ಮೊದಲು ಅದನ್ನು ಕೇಳಿ. ಬೇರೆ ಯಾವುದೋ ವಿಷಯಕ್ಕೆ ಹೋಗುತ್ತೀರಲ್ಲ. ಈ ವಿಷಯ ಎಲ್ಲಿಗೋ ಹೋಗುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಂಕನೂರ್ ಅವರೆ, ಕಾಂಗ್ರೆಸ್ ಗಿಡ ಹೇಗೆ ಹೋಗುವುದಿಲ್ಲವೋ ಹಾಗೆಯೇ ಕಾಂಗ್ರೆಸ್ ಎಂದಿಗೂ ಸಹ ಹೋಗುವುದಿಲ್ಲ. ಇದನ್ನು ನೀವು ಅರ್ಥ ಮಾಡಿಕೊಳ್ಳಬೇಕು. ಕಸ ಏನಾದರೂಇದ್ದರೆ ಅದು ಭಾರತೀಯ ಜನತಾ ಪಾರ್ಟಿ ಕಛೇರಿಯಲ್ಲಿ.

**ಸಭಾಪತಿಯವರು:–** ನೋಡಿ, ವಿಷಯ ಎಲ್ಲಿಂದ ಎಲ್ಲಿಗೋ ಹೋಯಿತು. You don't want the answer.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:–** ಈಗ ಜನರೆಲ್ಲರೂ ಸೇರಿ ಕಾಂಗ್ರೆಸ್ ಹುಲ್ಲನ್ನು ಕಿತ್ತು ಅದಕ್ಕೆ ಬೆಂಕಿ ಹಾಕುತ್ತಿದ್ದಾರೆ.

**ಶ್ರೀ ಪ್ರಮೋದ್ ಮಧ್ವರಾಜ್:–** ಬೆಂಕಿ ಹಾಕುವವರೇ ಬಿ.ಜೆ.ಪಿ. ಅವರು.

**ಸಭಾಪತಿಯವರು:–** ಈಗ ನೀವು ಹಾವೇರಿ ಜಿಲ್ಲೆಯ ಹಿರೇಕೆರೂರ ಪಟ್ಟಣದ ಕ್ರೀಡಾಂಗಣದ ಬಗ್ಗೆ ಪ್ರಶ್ನೆ ಕೇಳಿದ್ದೀರಿ. ಆದರೆ ಈಗ ಆ ಪ್ರಶ್ನೆ ಬಿಟ್ಟು ಬೇರೆ ಎಲ್ಲಾ ವಿಷಯಗಳು ಚರ್ಚೆಯಾಗುತ್ತಿದೆ. ಈಗ ನಿಮಗೆ ಏನು ಬೇಕು ಕೇಳಿ, ಅದಕ್ಕೆ ಮಾನ್ಯ ಸಚಿವರು ಉತ್ತರ ಕೊಡುತ್ತಾರೆ. ಬೇರೆ ವಿಷಯಕ್ಕೆ ಹೋಗಬೇಡಿ.

**ಶ್ರೀ ಎಸ್.ವ್ಹಿ.ಸಂಕನೂರ:–** ಮಾನ್ಯ ಸಭಾಪತಿಯವರೇ, ಈ ಕ್ರೀಡಾಂಗಣದಲ್ಲಿ ಜಾಲಿ ಗಿಡಗಳು ಗಿಡಗಂಟೆಗಳು ಬೆಳೆದಿವೆ. ಆದರೆ ಇಲ್ಲಿ ಏಕೆ ಸರಿಯಾಗಿ ಕ್ರೀಡಾಂಗಣವನ್ನು ನಿರ್ವಹಣೆ ಮಾಡಿಲ್ಲ? ಈ ರೀತಿ ಆಗುವುದಕ್ಕೆ ಯಾರು ಹೊಣೆ? ನಿರ್ವಹಣೆ ಮಾಡುವುದಕ್ಕೆ ಯಾರನ್ನು ಹೊಣೆಗಾರರನ್ನಾಗಿ ಮಾಡಿದ್ದಾರೆ ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕು. ಎರಡನೆಯ ವಿಷಯವೇನೆಂದರೆ, ಇದೆಲ್ಲವನ್ನೂ ಯಾವಾಗ ಸರಿಪಡಿಸುತ್ತೀರಿ?

**ಶ್ರೀ ಪ್ರಮೋದ್ ಮಧ್ವರಾಜ್:–** ಮಾನ್ಯ ಸಭಾಪತಿಯವರೇ, ನಾಲ್ಕು ದಿವಸದ ಹಿಂದೆ ಈ ಕ್ರೀಡಾಂಗಣದಲ್ಲಿ ಜಾಲಿ ಗಿಡಗಳು, ಗಿಡಗಂಟೆಗಳು ಏನೆಲ್ಲಾ ಬೆಳೆದಿದ್ದವು ಅವೆಲ್ಲವನ್ನೂ ನಾವು ಕ್ಲಿಯರ್ ಮಾಡುವಂತಹ ಕೆಲಸವನ್ನು ಮಾಡಿದ್ದೇವೆ. ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ ತಕ್ಷಣವೇ ಅಧಿಕಾರಿಗಳು ಅದೆಲ್ಲವನ್ನೂ ಕ್ಲಿಯರ್ ಮಾಡಿಸಿದ್ದಾರೆ. ಪ್ರತಿಯೊಂದು ತಾಲ್ಲೂಕು ಕ್ರೀಡಾಂಗಣಕ್ಕೆ local MLA is the chairman. ಇಲ್ಲಿ ಶ್ರೀ ಯು.ಬಿ.ಬಣಕರ್ ಸಾಹೇಬರು ಅಧ್ಯಕ್ಷರಾಗಿದ್ದಾರೆ. ನಿರ್ವಹಣೆ ಬಗ್ಗೆ ಸ್ಥಳೀಯ ಶಾಸಕರು ಸಹ ಸ್ವಲ್ಪ ಹೆಚ್ಚಿನ ಒಂದು ಮುತುವರ್ಜಿಯನ್ನು ವಹಿಸಿಕೊಳ್ಳಬೇಕಾಗುತ್ತದೆ. ಅಲ್ಲದೆ ಆ ಕ್ರೀಡಾಂಗಣ ಇದುವರೆಗೂ ಉದ್ಘಾಟನೆ ಆಗಿಲ್ಲ. ಕಾರಣವೇನೆಂದರೆ, ಇನ್ನೂ ಸಹ 13 ಲಕ್ಷ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೂಪಾಯಿ ಬಾಕಿ ಇದೆ. 1 ಕೋಟಿ 73 ಲಕ್ಷ ರೂಪಾಯಿಯಲ್ಲಿ 1 ಕೋಟಿ 60 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಇನ್ನೂ 13 ಲಕ್ಷ ರೂಪಾಯಿ ಬಾಕಿ ಇದೆ. ಇದನ್ನು ಜೂನ್ ತಿಂಗಳಿನಲ್ಲಿಯೇ ಉದ್ಘಾಟನೆ ಮಾಡುವಂತಹ ಕೆಲಸವನ್ನು ನಾವು ಮಾಡುತ್ತಿದ್ದೇವೆ. ಇನ್ನು ಮುಂದೆ ಆ ಕ್ರೀಡಾಂಗಣವನ್ನು ಚೆನ್ನಾಗಿ ನಿರ್ವಹಣೆ ಮಾಡುವುದಕ್ಕೆ ನಮ್ಮ ಶಾಸಕರ ನೇತೃತ್ವದ ಕಮಿಟಿ ಏನಿದೆ, ಆ ಕಮಿಟಿಗೆ ನಾವು ಸೂಚನೆಯನ್ನು ಕೊಡುತ್ತೇವೆ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೆ, ನಾನು ಒಳ ಕ್ರೀಡಾಂಗಣದ ಬಗ್ಗೆ ಪ್ರಶ್ನೆ ಕೇಳಿಲ್ಲ. ಆ ಕ್ರೀಡಾಂಗಣಕ್ಕೆ 83 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ, ಅದನ್ನು ನಿರ್ವಹಣೆ ಮಾಡದಿದ್ದ ಮೇಲೆ ಏನು ಪ್ರಯೋಜನ? ಯಾವ ಉದ್ದೇಶಕ್ಕಾಗಿ ಕ್ರೀಡಾಂಗಣ ಮಾಡಿದ್ದೀರಿ? ಅದು ಸರಿಯಾಗಿ ಉಪಯೋಗ ಆಗದಿದ್ದ ಮೇಲೆ ಏನು ಪ್ರಯೋಜನ? ನಿರ್ವಹಣೆ ಮಾಡುವಲ್ಲಿ ನೀವು ಏಕೆ ವಿಫಲರಾಗಿದ್ದೀರಿ? ಅದರ ಬಗ್ಗೆ ನಾನು ಪ್ರಶ್ನೆ ಕೇಳಿದ್ದೆ. ಆದರೆ ಮಾನ್ಯ ಸಚಿವರು ಎರಡನೇ ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ. ಈಗ ಕ್ರೀಡಾಂಗಣ ನಿರ್ವಹಣೆ ಮಾಡುವುದಕ್ಕೆ ಒಬ್ಬರು ಮೇಲ್ವಿಚಾರಕರು ಮತ್ತೊಬ್ಬರು ಸಹಾಯಕರನ್ನು ನೇಮಕ ಮಾಡಿದ್ದೇವೆಂದು ಹೇಳುತ್ತಾರೆ. ಕ್ರೀಡಾಂಗಣ ಸರಿಯಾಗಿ ನಿರ್ವಹಣೆ ಆಗದೆ ಇರುವುದರಿಂದ ಅಲ್ಲಿ ಅನೈತಿಕ ಚಟುವಟಿಕೆಗಳು ನಡೆಯುತ್ತಿವೆಯೆಂದು ಸಾಕಷ್ಟು ಪತ್ರಿಕೆಗಳಲ್ಲಿ ಬಂದಿವೆ. ಆದರೆ ಇದು ಸರ್ಕಾರದ ಗಮನಕ್ಕೆ ಬಂದಿಲ್ಲವೆಂದು ಹೇಳುತ್ತಿದ್ದಾರೆ. ದಯವಿಟ್ಟು ತಮಗೆ ಈ ಪತ್ರಿಕೆಯನ್ನು ಕೊಡುತ್ತೇನೆ ತಾವು ಪರಿಶೀಲನೆ ಮಾಡಬೇಕು. ಇದು ಕೇವಲ ಹಾವೇರಿ ಜಿಲ್ಲೆಯ ಹಿರೇಕೆರೂರ ತಾಲ್ಲೂಕಿನಲ್ಲಿರುವಂತಹ ತಾಲ್ಲೂಕ ಕ್ರೀಡಾಂಗಣದ ಸಮಸ್ಯೆ ಅಲ್ಲ, ರಾಜ್ಯದಲ್ಲಿರುವಂತಹ ಎಲ್ಲಾ ತಾಲ್ಲೂಕುಗಳ ಕ್ರೀಡಾಂಗಣದ ಹಣೆಯ ಬರಹವೂ ಸಹ ಇದೇ ರೀತಿಯಲ್ಲಿಯೇ ಇದೆ.

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೆ, ಎಲ್ಲಿ ಕ್ರೀಡಾಪಟುಗಳು ಇರುತ್ತಾರೆ ಅಲ್ಲೆಲ್ಲಾ ಕ್ರೀಡಾಂಗಣಗಳು ಚೆನ್ನಾಗಿಯೇ ಇವೆ. ನಮ್ಮಲ್ಲಿರುವಂತಹ ಕ್ರೀಡಾಂಗಣಗಳು ಚೆನ್ನಾಗಿಯೇ ಇದೆ. ಅದು ಸರಿಯಾಗಿ ನಿರ್ವಹಣೆ ಆಗಿಲ್ಲವೆಂದರೆ ಅದನ್ನು ನೀವು ನೋಡಿಕೊಳ್ಳಬೇಕು.

**ಶ್ರೀ ಎಸ್.ವ್ಹಿ.ಸಂಕನೂರ:-** ನಾನು ಈ ಹಿಂದೆಯು ಸಹ ಹಿರೇಕೆರೂರಿಗೆ ಕ್ರೀಡಾ ತರಬೇತಿದಾರರನ್ನು ನೇಮಕ ಮಾಡಬೇಕೆಂದು ಪ್ರಶ್ನೆ ಕೇಳಿದ್ದೆ. ಹಾಗಾಗಿ ಹಿರೇಕೆರೂರಿನಲ್ಲಿ ಕ್ರೀಡಾ ತರಬೇತಿದಾರರನ್ನು ನೇಮಕ ಮಾಡಿದ್ದೀರೋ ಇಲ್ಲವೋ ಎಂದು ತಿಳಿಸಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ಸಚಿವರು ಅದಕ್ಕೆ ಉತ್ತರ ಹೇಳುತ್ತಾರೆ. ಅವರು ಉತ್ತರ ಹೇಳುವುದಕ್ಕಾದರೂ ಬಿಡಿ.

**ಶ್ರೀ ಪ್ರಮೋದ್ ಮಧ್ವರಾಜ್:-** ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯಕ್ಕೆ ಒಟ್ಟು 300 ಕ್ರೀಡಾ ತರಬೇತಿದಾರರು ಬೇಕಾಗಿದ್ದಾರೆ. ಆದರೆ ನಮ್ಮ ಬಳಿ ಇರುವುದು ಕೇವಲ 100 ಜನ ತರಬೇತಿದಾರರಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಇನ್ನೂ 100 ಜನ ತರಬೇತಿದಾರರನ್ನು ನೇಮಕ ಮಾಡುವುದಕ್ಕೆ ನಮಗೆ ಅನುಮತಿಯನ್ನು ಕೊಟ್ಟಿದ್ದಾರೆ. ಅದು ಆರ್ಥಿಕ ಇಲಾಖೆಯಲ್ಲಿ ಫೈಲ್ ಪೆಂಡಿಂಗ್ ಇದೆ. ಆರ್ಥಿಕ ಇಲಾಖೆಯಿಂದ ಅನುಮತಿ ದೊರಕಿದ ಕೂಡಲೆ ಇನ್ನು 100 ಜನ ತರಬೇತಿದಾರರನ್ನು ನೇಮಕ ಮಾಡಿಕೊಳ್ಳುತ್ತೇವೆ. ಎಲ್ಲಾ ತಾಲ್ಲೂಕು ಕ್ರೀಡಾಂಗಣಗಳಿಗೆ ತರಬೇತಿದಾರರನ್ನು ಕೊಡುವುದಕ್ಕೆ ನಮ್ಮಿಂದ ಆಗುತ್ತಿಲ್ಲ. ಹೊಸದಾಗಿ ತರಬೇತಿದಾರರನ್ನು ನೇಮಕ ಮಾಡಿದಾಗ ಮಾಡುತ್ತೇವೆ. ನಾನು ಈಗಾಗಲೆ ಹೇಳಿದೆ ಒಂದು ಕ್ರೀಡಾಂಗಣವನ್ನು ಸ್ಥಳೀಯ ಸಂಘ ಸಂಸ್ಥೆಗಳು, ಜನ ಪ್ರತಿನಿಧಿಗಳು ಅದನ್ನು ಉಪಯೋಗ ಮಾಡಿದರೆ ಮಾತ್ರ ಆ ಕ್ರೀಡಾಂಗಣ ಉಪಯೋಗಕ್ಕೆ ಬರುತ್ತದೆಯೇ ವಿನಃ ಅಲ್ಲಿ ಯಾರೂ ಸಹ ಉಪಯೋಗ ಮಾಡದೆ ಹೋದರೆ, ಆಸಕ್ತಿ ತೋರಿಸದೆ ಹೋದರೆ ಯಾವ ಕ್ರೀಡಾಂಗಣವನ್ನು ಸಹ ನಾವು ಅಭಿವೃದ್ಧಿ ಪಡಿಸುವುದಕ್ಕೆ ಆಗುವುದಿಲ್ಲ. ಸರ್ಕಾರ ಮೂಲಭೂತ ಸೌಕರ್ಯಗಳನ್ನು ಕೊಡಬಹುದೆ ವಿನಃ ಅದನ್ನು ಉಪಯೋಗ ಮಾಡುವಂತಹ ಜವಾಬ್ದಾರಿ ಸಮಾಜದ್ದು ಹಾಗೂ ಕ್ರೀಡಾಪಟುಗಳದು. ಅದಕ್ಕೋಸ್ಕರವೇ ತಾಲ್ಲೂಕು ಕ್ರೀಡಾಂಗಣ ಸಮಿತಿಗಳಿಗೆ ಸ್ಥಳೀಯ ಎಂ.ಎಲ್.ಎ. ಅವರನ್ನು ಅಧ್ಯಕ್ಷರನ್ನಾಗಿ ಮಾಡಿದ್ದೇವೆ. ಜಿಲ್ಲಾ ಕ್ರೀಡಾಂಗಣಕ್ಕೆ ಅಧ್ಯಕ್ಷರಾಗಿ ಇದುವರೆಗೂ ಡಿ.ಸಿ. ಅವರು ಈಗ ಉಸ್ತುವಾರಿ ಸಚಿವರನ್ನು ನಾವು ಅಧ್ಯಕ್ಷರನ್ನಾಗಿ ಮಾಡುವಂತಹ ಮಾರ್ಪಾಡನ್ನು ಮಾಡಿ ಆದೇಶವನ್ನು ಹೊರಡಿಸಿದ್ದೇವೆ. ಇದಕ್ಕೆ ಸ್ಥಳೀಯ ಶಾಸಕರಾದಂತಹ ಶ್ರೀ ಯು.ಬಿ.ಬಣಕಾರ್ ಅವರು ಅಧ್ಯಕ್ಷರಾಗಿದ್ದಾರೆ. ಅವರು ಕೂಡ ಹೆಚ್ಚಿನ ಆಸಕ್ತಿ ವಹಿಸಿಕೊಂಡು ಕ್ರೀಡಾಂಗಣವನ್ನು ನಿರ್ವಹಣೆ ಮಾಡುವುದಕ್ಕೆ ಕಾಲ ಕಾಲಕ್ಕೆ ನಮ್ಮ ಅಧಿಕಾರಿಗಳಿಗೆ ಸೂಚನೆಯನ್ನು ಕೊಡಬೇಕು, ನಾವು ಕೂಡ ಇಲಾಖೆಯಿಂದ ಈಗಾಗಲೆ ಸೂಚನೆಯನ್ನು ಕೊಟ್ಟಿದ್ದೇವೆ. ಈಗಾಗಲೇ ಕ್ಲಿಯರ್ ಆಗಿದೆ. ಹಾಗಾಗಿ ಈಗ ಕಾಂಗ್ರೆಸ್ ಗಿಡವು ಇಲ್ಲ, ಕಮ್ಯೂನಿಸ್ಟ್ ಗಿಡವು ಇಲ್ಲ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೆ, ಒಳ ಕ್ರೀಡಾಂಗಣ ನಿರ್ಮಿಸುವುದಕ್ಕೆ ನನಗೆ ತಿಳಿದಿರುವಂತೆ ಗುತ್ತಿಗೆದಾರರಿಗೆ ಒಂದೂವರೆ ವರ್ಷ ಕಾಲಾವಕಾಶವನ್ನು ಕೊಟ್ಟಿದ್ದರು. ಈಗ ನಾಲ್ಕು ವರ್ಷವಾದರೂ ಮುಗಿಸಿಲ್ಲ. 173 ಲಕ್ಷ ರೂಪಾಯಿಗಳಲ್ಲಿ ಈಗಾಗಲೇ 160 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಆದರೆ ಆ ಗುತ್ತಿಗೆದಾರರು ಏಕೆ ತಡಮಾಡಿದರು? ಅವರ ಮೇಲೆ ಯಾವ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ರೀತಿಯಾದಂತಹ ಕ್ರಮವನ್ನು ತೆಗೆದುಕೊಂಡಿದ್ದೀರಿ ಎನ್ನುವುದನ್ನು ತಿಳಿಸಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

**ಶ್ರೀ ಪ್ರಮೋದ್ ಮಧ್ವರಾಜ್:-** ಮಾನ್ಯ ಸಭಾಪತಿಯವರೇ, ನಮ್ಮ ಇಲಾಖೆಯಲ್ಲಿ ತಡವಾಗುವಂಥದ್ದು, ವಿಳಂಬವಾಗುವಂಥದ್ದು, ಕಳಪೆ ಕಾಮಗಾರಿ ಆಗುವಂಥದ್ದರ ಬಗ್ಗೆ ಬಹಳಷ್ಟು ದೂರುಗಳು ಇದೆ. ಆದುದರಿಂದ ನಾನು ಸಚಿವನಾಗಿ ಬಂದಮೇಲೆ ಒಂದು Technical Advisory Committee ಯನ್ನು ಮಾಡಿ, ಅದರಲ್ಲಿ Chief Engineer and four Executive Engineers ಹಾಗೂ ಬೆಳಗಾವಿ ಮತ್ತು ಗುಲ್ಬರ್ಗಾದ ಕೆಲವು Professors ನ್ನು ಹಾಕಿ ಒಂದು ಕಮಿಟಿ ಮಾಡಿ ಯಾರು ತಮ್ಮ ಅವಧಿಯಲ್ಲಿ ಅತ್ಯಂತ ಪ್ರಾಮಾಣಿಕವಾಗಿ ಸೇವೆ ಸಲ್ಲಿಸಿದಂತಹ ಅಧಿಕಾರಿಗಳು ಇದ್ದಾರೆ, ಅಂಥವರನ್ನು ಹುಡುಕಿ ನಾವು ಒಂದು Technical Advisory Committee ಯನ್ನು ಮಾಡಿ, ಎಲ್ಲಾ ಕ್ರೀಡಾಂಗಣಗಳಿಗೆ ಭೇಟಿ ಮಾಡಿ ಎಲ್ಲಿ ಕಳಪೆ ಕಾಮಗಾರಿ ಆಗಿದೆ, ಏಕೆ ವಿಳಂಬ ಆಗಿದೆ ಎನ್ನುವುದರ ಬಗ್ಗೆ ಒಂದು ವರದಿಯನ್ನು ತರಿಸುವಂತಹ ಒಂದು ಪ್ರಯತ್ನವನ್ನು ಸಹ ನಾನು ಮಾಡುತ್ತಿದ್ದೇನೆ. ಈಗ ನಾನು ಸಚಿವನಾದ ಮೇಲೆ ಎಲ್ಲಿಯೂ ಸಹ ಕೆಲಸ-ಕಾರ್ಯಗಳು ವಿಳಂಬ ಆಗದ ರೀತಿಯಲ್ಲಿ ಮುಂಜಾಗ್ರತೆಯನ್ನು ವಹಿಸುತ್ತಿದ್ದೇವೆ. ಮತ್ತು ಎಲ್ಲೆಲ್ಲಿ ಗುತ್ತಿಗೆದಾರರು ವಿಳಂಬ ಮಾಡುತ್ತಾರೆ, ಕಳಪೆ ಕಾಮಗಾರಿ ಮಾಡುತ್ತಾರೆ ಅಂಥವರ ಮೇಲೆ ನಿಷ್ಠೂರವಾಗಿ ಕ್ರಮ ತೆಗೆದುಕೊಳ್ಳುವುದಕ್ಕೆ ನಾವು ಹಿಂದೆ ಮುಂದೆ ನೋಡುವುದಿಲ್ಲವೆಂದು ಸ್ಪಷ್ಟಪಡಿಸುತ್ತೇನೆ.

(ಮುಂದು)

(580) 07.06.2017 KG-AK 12.20

**ಶ್ರೀ ಚೌಡರೆಡ್ಡಿ ತೂಪಲ್ಲಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನಾನು ಸಕಲೇಶಪುರ ತಾಲ್ಲೂಕ್ ಪಶ್ಚಿಮ ಘಟ್ಟದ ಅಂಚಿನಲ್ಲಿರುವ ಬಿಸಲೆ ರಕ್ಷಿತಾರಣ್ಯದಲ್ಲಿ ಆನೆಗಳ ಹಾವಳಿಯಿಂದ ಎಷ್ಟು ಹಳ್ಳಿಗಳು ತೊಂದರೆಗೆ ಒಳಗಾಗಿವೆ ಎಂದು ಪ್ರಶ್ನೆಯನ್ನು ಕೇಳಿದ್ದೆ. ಮಾನ್ಯ ಸಚಿವರು ಏಳು ಹಳ್ಳಿಗಳು ತೊಂದರಗೆ ಒಳಗಾಗಿವೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದರೆ, ಮಾನ್ಯ ಸಚಿವರು ಬಂದಿದೆ ಎಂದು ಒಪ್ಪಿಕೊಂಡಿದ್ದಾರೆ. ಹಾಗಿದ್ದರೆ, ಈ ಸಂಬಂಧ ಸರ್ಕಾರ ಕೈಗೊಂಡ ಕ್ರಮಗಳೇನು ವಿವರವಾದ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಹಿತಿಯನ್ನು ನೀಡುವುದು ಎಂಬ ಪ್ರಶ್ನೆಯನ್ನು ಕೇಳಿದ್ದೇನೆ. ಮಾನ್ಯ ಸಚಿವರು 2013-2014 ನೇ ಸಾಲಿನಲ್ಲಿ 256 ಬೆಳೆ ಹಾನಿ ಪ್ರಕರಣಗಳು, 2014-2015 ನೇ ಸಾಲಿನಲ್ಲಿ 389 ಬೆಳೆ ಹಾನಿ ಪ್ರಕರಣಗಳು, 2015-2016 ನೇ ಸಾಲಿನಲ್ಲಿ 280 ಬೆಳೆ ಹಾನಿ ಪ್ರಕರಣಗಳು ಆಗಿವೆ ಎಂದು ಒಪ್ಪಿಕೊಂಡಿದ್ದಾರೆ. ಮಾನ್ಯ ಸಭಾಪತಿಯವರೆ, ಈ ವಿಷಯಕ್ಕೆ ಸಂಬಂಧಪಟ್ಟಂತೆ, ತಾತ್ಕಾಲಿಕ ಪರಿಹಾರ ಅಲ್ಲದೆ, ಶಾಶ್ವತ ಪರಿಹಾರದ ಬಗ್ಗೆ ಸರ್ಕಾರದ ನಿಲುವು ಏನು ಎಂಬುದರ ಬಗ್ಗೆ ನನ್ನ ಪ್ರಶ್ನೆ ಇದೆ. ಮಾನ್ಯ ಸಚಿವರು ಅದಕ್ಕೆ ಕೊಟ್ಟಿರುವಂತಹ ಉತ್ತರ ಬಹಳ ಬೇಜವಾಬ್ದಾರಿಯಿಂದ ಕೂಡಿದೆ ಎಂದು ನನಗೆ ಕಾಣುತ್ತದೆ. ಏಕೆಂದರೆ, ಮಾನ್ಯ ಸಚಿವರು 2013 ನೇ ಸಾಲಿನಿಂದ ಇಲ್ಲಿಯವರೆಗೆ ವನ್ಯಪ್ರಾಣಿಗಳಿಂದ ಎಷ್ಟು ಬೆಳೆ ಹಾನಿ ಪ್ರಕರಣಗಳು ಆಗಿವೆ ಎಂಬುದನ್ನು ಅಂಕಿ-ಅಂಶಗಳ ಸಮೇತವಾಗಿ ಕೊಟ್ಟಿದ್ದಾರೆ. ಅವರು ಸಚಿವರಾಗಿ ನಾಲ್ಕು ವರ್ಷಗಳು ಕಳೆದರೂ ಸಹ, ತಮ್ಮ ಉತ್ತರದಲ್ಲಿ ಸಮಿತಿಯ ಸೂಚನೆಯ ಪ್ರಕಾರ, ಹೆತ್ತೂರು ಹೋಬಳಿಯ ಏಳು ಹಳ್ಳಿಗಳಿಗೆ ಸಂಬಂಧಿಸಿದ 3,143 ಎಕರೆ ಜಮೀನು ಹಾಗೂ ವಸತಿಗಳನ್ನು ಹೊಸ ಭೂ-ಸ್ವಾಧೀನ ಕಾಯ್ದೆಯಂತೆ ಸ್ವಾಧೀನಪಡಿಸಿಕೊಳ್ಳಲು ಅಂದಾಜು ರೂ.272.00 ಕೋಟಿ ಅನುದಾನ ಬೇಕಾಗುತ್ತದೆ. ರಾಜ್ಯ ಸರ್ಕಾರ ಪ್ರಾರಂಭಿಸಿರುವ ಆನೆ ಮೊಗಸಾಲೆ (ಕಾರಿಡಾರ್) ಯೋಜನೆಯಲ್ಲಿ ಕಾಡಿನ ಮಧ್ಯದಲ್ಲಿರುವ ಅಥವಾ ಕಾಡಿಗೆ ಹೊಂದಿಕೊಂಡಿರುವ ಖಾಸಗಿ ಜಮೀನುಗಳನ್ನು ಆನೆಗಳು ಬಹುಕಾಲ ವಲಸೆ ಮಾರ್ಗವಾಗಿ ಬಳಸುತ್ತಿದ್ದಲ್ಲಿ ಅಂತಹ ಚಿಕ್ಕ ಚಿಕ್ಕ ಭೂಮಿಗಳನ್ನು ಖರೀದಿಸಿ ಆನೆಗಳ ವಲಸೆಗೆ ಅಡಚಣೆ ಇಲ್ಲದಂತೆ ಮಾಡುವುದಾಗಿದೆ. ಆ ಯೋಜನೆಯಲ್ಲಿ ರೂ.272.00 ಕೋಟಿಗಳಷ್ಟು ಅನುದಾನ ನೀಡಲು ಸಾಧ್ಯವಾಗದಿದ್ದರಿಂದ ಈ ಯೋಜನೆಗೆ CAMPA (Compensatory Afforestation Fund Management and Planning Authority) ನಿಧಿಯಿಂದ ಅನುದಾನ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಕೋರಲಾಗಿದೆ. ಕೇಂದ್ರ ಸರ್ಕಾರದ ಉತ್ತರವನ್ನು ನಿರೀಕ್ಷಿಸಲಾಗುತ್ತಿದೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಅಲ್ಲಿ ಕಳೆದ ನಾಲ್ಕು ವರ್ಷಗಳಿಂದ ಮಕ್ಕಳು ಶಾಲೆಗಳಿಗೆ ಹೋಗುವುದಕ್ಕೆ ಆಗುತ್ತಿಲ್ಲ. ರೈತರು ಬೆಳೆ ಬೆಳೆಯುವುದಕ್ಕೆ ಆಗುವುದಿಲ್ಲ. ಈ ರೀತಿ ಇದ್ದರೂ ಸಹ, ಮಾನ್ಯ ಸಚಿವರು ಹೆಚ್ಚಿಗೆ ಆಗುತ್ತದೆ CAMPA ನಿಧಿಯಿಂದ ಕೇಳಿದ್ದೇವೆಂದು ಉತ್ತರವನ್ನು ಕೊಟ್ಟರೆ ಅಲ್ಲಿನ ಜನರ ಸ್ಥಿತಿಗತಿ ಏನು? ಅವರು ಯಾವ ರೀತಿ ಜೀವನ ಮಾಡಬೇಕು? ಅವರು ಯಾವ ರೀತಿ ಬದುಕಿ ಬಾಳಬೇಕು ಎಂಬುದನ್ನು ಮಾನ್ಯ ಸಚಿವರು ಸ್ಪಷ್ಟಪಡಿಸಬೇಕು?

**ಶ್ರೀ ಬಿ.ರಮಾನಾಥ ರೈ:-** ಮಾನ್ಯ ಸಭಾಪತಿಯವರೆ, ಇದು ಕಳೆದ ನಾಲ್ಕು ವರ್ಷಗಳಿಂದ ಇರುವಂತಹ ಸಮಸ್ಯೆ ಅಲ್ಲ. ಮಾನ್ಯ ಸದಸ್ಯರು ಇದನ್ನು ಮೊದಲ ಗಮನಿಸಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಚೌಡರೆಡ್ಡಿ ತೂಪಲ್ಲಿ:–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ನಾಲ್ಕು ವರ್ಷಗಳಿಂದ ಅರಣ್ಯ ಇಲಾಖೆಯ ಸಚಿವರಾಗಿದ್ದಾರೆ ಎಂದು ಹೇಳಿದ್ದೇನೆ. ಆದರೆ, ನಾನು ಈ ಸಮಸ್ಯೆ ಕಳೆದ ನಾಲ್ಕು ವರ್ಷಗಳಿಂದ ಮಾತ್ರ ಇದೆ ಎಂದು ಹೇಳಿಲ್ಲ.

**ಶ್ರೀ ಬಿ.ರಮಾನಾಥ ರೈ:–** ಮಾನ್ಯ ಸಭಾಪತಿಯವರೆ, ಈ ಸಮಸ್ಯೆ ಬಹಳಷ್ಟು ವರ್ಷಗಳಿಂದ ಇದೆ. ಹೆತ್ತೂರು ಹೋಬಳಿಯಲ್ಲಿ ಜಮೀನನ್ನು ಖಾಸಗಿಯವರಿಂದ ತೆಗೆದುಕೊಳ್ಳಬೇಕೆಂದು ಒತ್ತಡ ಬಹಳ ವರ್ಷಗಳಿಂದ ಇದೆ. ಅದಕ್ಕೆ ಸಾಕಷ್ಟು ಹಣದ ಅಗತ್ಯ ಇದೆ. ಇದಕ್ಕೆ ಅಂದಾಜು 272 ಕೋಟಿ ರೂಪಾಯಿಗಳ ಅನುದಾನ ಬೇಕಾಗಿದೆ. ಮಾನ್ಯ ಸದಸ್ಯರು 'ಕಾರಿಡಾರ್' ಎಂದು ಹೇಳಿದ್ದಾರೆ. ಏಕೆಂದರೆ, ಇಲ್ಲಿ ಉತ್ತರಗಳು ಸ್ವಲ್ಪ confusion ಆಗುತ್ತದೆ. 'ಕಾರಿಡಾರ್' ಎಂದು ಹೇಳಿದರೆ 'ಮೊಗಸಾಲೆ' ಎಂದು ಹೇಳುತ್ತೇವೆ. ಆನೆಗಳು ಹೋಗುವ ದಾರಿಯನ್ನು 'ಕಾರಿಡಾರ್' ಎಂದು ಹೇಳುತ್ತೇವೆ. ಆನೆಗಳು ಎಲ್ಲಿ ಹೋಗುತ್ತವೆ, ಅದೇ ದಾರಿಯಲ್ಲಿಯೇ ಬರುತ್ತವೆ ಅದನ್ನು 'ಕಾರಿಡಾರ್' ಎಂದು ಕರೆಯುತ್ತೇವೆ. ಇದು 'ಕಾರಿಡಾರ್' ಅಲ್ಲ. ಆನೆಗಳನ್ನು ಉಳಿಸಿಕೊಳ್ಳುವುದಕ್ಕೆ ಒಂದು ಆವಾಸಸ್ಥಾನವನ್ನು ಮಾಡಬೇಕೆಂದು ಹೇಳುವುದು ಮಾನ್ಯ ಸದಸ್ಯರ ಒಂದು ಬೇಡಿಕೆ. ಮಾನ್ಯ ಸದಸ್ಯರು 'ಕಾರಿಡಾರ್', 'ಕಾರಿಡಾರ್' ಎಂದು ಹೇಳುತ್ತಾರೆ. 'ಕಾರಿಡಾರ್' ಎಂದು ಹೇಳುವಾಗ ಉತ್ತರಗಳು ಈ ರೀತಿ ಬರುತ್ತವೆ. ಆನೆಗಳು ಹೋಗುವಂತಹ ದಾರಿಯಲ್ಲಿ ಕೆಲವು ಕಡೆಗಳಲ್ಲಿ ಒತ್ತುವರಿಗಳು ಮತ್ತು ಕೆಲವು ಅಡಚಣೆಗಳು ಬರುತ್ತವೆ. ಆಗ ದಾರಿಗಳು ಚಿದ್ರ ಆದಾಗ ಆನೆಗಳು ಬೇರೆ ದಾರಿಯಲ್ಲಿ ಹೋಗುತ್ತವೆ. ಇದು ವಾಸ್ತವಿಕವಾದ ವಿಚಾರ. ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆ ಇವತ್ತಿನ ಅಥವಾ ನಿನ್ನೆಯ ಪ್ರಶ್ನೆಯಲ್ಲ. ಇದು ಬಹಳ ವರ್ಷಗಳಿಂದ ಇರುವಂತಹ ಪ್ರಶ್ನೆ. 272 ಕೋಟಿ ರೂಪಾಯಿಗಳ ಅನುದಾನ ಪಡೆಯುವುದರ ಬಗ್ಗೆ ಚರ್ಚೆ ಮಾಡಿ ಅದಕ್ಕೆ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಒಂದು ಕಮಿಟಿಯನ್ನು ಸಹ ಮಾಡಿದೆವು. ಅದಕ್ಕೆ ಮೌಲ್ಯವನ್ನು ಕಟ್ಟುವುದಕ್ಕೆ ಹೇಗೆ ಮಾಡಬೇಕು ಎಂಬುದನ್ನು ಮಾಡಿದೆವು. ಕೊನೆಗೆ ಎಲ್ಲರ ಒತ್ತಡಗಳ ಮೇರೆಗೆ, ಉಸ್ತುವಾರಿ ಸಚಿವರು ಮತ್ತು ಶಾಸಕರು ಎಲ್ಲರೂ ಒಟ್ಟಿಗೆ ಸೇರಿ CAMPA ನಿಧಿಯಿಂದ ಇದನ್ನು ಕೊಡಬಹುದು ಎಂದು ಹೇಳಿದ ಮೇರೆಗೆ, CAMPA ನಿಧಿಯಿಂದ ಒದಗಿಸಲಿಕ್ಕೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಎಂದು ಶಾಸಕ ಮಿತ್ರರು ಹೇಳಿದ ಪ್ರಕಾರ, ನಾವು ಅದನ್ನು CAMPA ನಿಧಿಯಿಂದ ಕೊಡಬೇಕು ಎಂದು ಶಾಸಕರುಗಳ ಅಭಿಪ್ರಾಯದ ಮೇರೆಗೆ, ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದೇವೆ. ಇದು ಬೇಜವಾಬ್ದಾರಿಯುತವಾದ ಉತ್ತರವಲ್ಲ. ಇದು ಜವಾಬ್ದಾರಿಯುತವಾದ ಉತ್ತರ. ಇನ್ನೂ ಮುಂದಕ್ಕೆ ಇದಕ್ಕೆ ಹಣ ಬೇಕಾದರೆ, ನಾವು ದೆಹಲಿಗೆ ಒಂದು ನಿಯೋಗ ಹೋಗಬೇಕೆಂಬ ತೀರ್ಮಾನವನ್ನು ಸಹ ಮಾಡಿದ್ದೇವೆ. ಆ ಸಂಬಂಧಪಟ್ಟ ಭಾಗದ ಶಾಸಕರನ್ನು ಮತ್ತು ಇತರರನ್ನು ಕರೆಸಿ

ದೆಹಲಿಗೆ ಹೋಗಬೇಕು. ಏಕೆಂದರೆ, ಇದು ಇವತ್ತಿನ ಅಥವಾ ನಿನ್ನೆಯ ಪ್ರಶ್ನೆಯಲ್ಲ. ಮಾನ್ಯ ಸಚಿವರಾದ ಬಿ.ರಮಾನಾಥ ರೈ ರವರು ಬೇಜವಾಬ್ದಾರಿಯುತವಾದ ಉತ್ತರ ಕೊಡುವಂತಹ ಕೆಲಸವನ್ನು ಮಾಡಿರುವುದಿಲ್ಲ. ನಾನು ಜವಾಬ್ದಾರಿಯುತವಾದ ಉತ್ತರವನ್ನು ಕೊಟ್ಟಿದ್ದೇನೆ. ಅದಕ್ಕೆ ನಾನು ಹೇಳಿದ್ದು, ಇದು ಕೇವಲ ನಾಲ್ಕು ವರ್ಷಗಳ ಸಮಸ್ಯೆಯಲ್ಲ. ಇದು ಬಹಳಷ್ಟು ವರ್ಷಗಳ ಸಮಸ್ಯೆ. ಈ ಬಹಳಷ್ಟು ವರ್ಷಗಳ ಸಮಸ್ಯೆಯನ್ನು ಪರಿಹಾರ ಮಾಡಬೇಕಾದರೆ, ಬಹುಶಃ ನಾವು ಜವಾಬ್ದಾರಿಯುತವಾಗಿ ಉತ್ತರವನ್ನು ಕೊಡಬೇಕಾಗುತ್ತದೆ. ನಾವು ಬೇಜವಾಬ್ದಾರಿಯುತವಾದ ಉತ್ತರವನ್ನು ಕೊಟ್ಟು, ಶಾಶ್ವತ ಪರಿಹಾರವನ್ನು ಕೇವಲ ಮಾತಿನಲ್ಲಿ ಹೇಳಿಕೊಂಡು ಸಾರಾಸಗಟಾಗಿ ಹೇಳಿಬಿಡುವಂತಹದ್ದು ಅಲ್ಲ. ಅದಕ್ಕೆ ಒಂದು ನಿರ್ಧಿಷ್ಟವಾದಂತಹ, ನಿಖರವಾದಂತಹ, ವ್ಯವಸ್ಥಿತವಾದಂತಹ ಉತ್ತರವನ್ನು ಕೊಡಬೇಕು ಎಂದು ಹೇಳುವಂತಹ ದೃಷ್ಟಿಯಲ್ಲಿ ಸರಿಯಾದಂತಹ ಉತ್ತರವನ್ನು ಕೊಟ್ಟಿದ್ದೇನೆ.

**ಶ್ರೀ ಚೌಡರೆಡ್ಡಿ ತೂಪಲ್ಲಿ:-** ಮಾನ್ಯ ಸಭಾಪತಿಯವರೆ, ನಾನು ಮಾನ್ಯ ಸಚಿವರು ಬಹಳ ಬೇಜವಾಬ್ದಾರಿಯುತವಾದ ಉತ್ತರ ಕೊಟ್ಟಿದ್ದಾರೆ ಎಂದು ಹೇಳಿರುವುದಕ್ಕೆ ಮಾನ್ಯ ಸಚಿವರು ಬೇಸರ ಮಾಡಿಕೊಳ್ಳಬಾರದೆಂದು ವಿನಂತಿ ಮಾಡುತ್ತೇನೆ. ಮಾನ್ಯ ಸಚಿವರಲ್ಲಿ ನನಗೆ ಬಹಳ ಕಳಕಳಿ ಇದೆ. ಮಾನ್ಯ ಅರಣ್ಯ ಸಚಿವರು ಪ್ರಮಾಣಿಕರು ಎಂಬ ಹೆಸರು ಇದೆ. ಅದಕ್ಕೆ ಆ ರೀತಿ ಪ್ರಶ್ನೆ ಮಾಡಿದ್ದು. ಅದಕ್ಕೆ ಕಾರಣವೇನೆಂದರೆ, ಅವರು ಅರಣ್ಯ ಸಚಿವರಾಗಿ ನಾಲ್ಕು ವರ್ಷಗಳು ಆಯಿತು. ಸುಮಾರು ವರ್ಷಗಳಿಂದ ಇರುವಂತಹ ಈ ಸಮಸ್ಯೆಯನ್ನು ಇನ್ನು ಪರಿಹಾರ ಮಾಡಲಿಲ್ಲ. ಈಗಲೂ ಸಹ ಅದು ಬಾಕಿ ಇದೆ. ಮಾನ್ಯ ಸಚಿವರು CAMPA ನಿಧಿಯಿಂದ ಹಣ ಕೇಳಿದ್ದೇವೆಂದು ಹೇಳಿದ್ದಾರೆ. CAMPA ನಿಧಿಯಿಂದ ಹಣ ಕೊಡಲಿಲ್ಲವೆಂದರೆ ಏನು ಮಾಡುವುದು? CAMPA ನಿಧಿಯಿಂದ ಕೊಡಲಿಲ್ಲವೆಂದರೆ, ರಾಜ್ಯ ಸರ್ಕಾರದಿಂದ ಕೊಡುತ್ತೇವೆ ಎಂಬ ಭರವಸೆಯನ್ನು ನೀಡಿ. ನಾವು ಅದು ಒಳ್ಳೆಯ ಉತ್ತರವೆಂದು ಹೇಳುತ್ತೇವೆ.

**ಶ್ರೀ ಬಿ.ರಮಾನಾಥ ರೈ:-** ಮಾನ್ಯ ಸಭಾಪತಿಯವರೆ, ಅದನ್ನು ಮುಂದಕ್ಕೆ ನೋಡೋಣ. ಇದು ಬಹಳಷ್ಟು ಚರ್ಚೆ ಆಗಿದೆ.

**ಶ್ರೀ ಚೌಡರೆಡ್ಡಿ ತೂಪಲ್ಲಿ:-** ಮಾನ್ಯ ಸಭಾಪತಿಯವರೆ, CAMPA ನಿಧಿಯಿಂದ ಹಣ ಕೊಡಲಿಲ್ಲವೆಂದರೆ, ಇದನ್ನು ರಾಜ್ಯ ಸರ್ಕಾರ ಮಾಡಲೇ ಬೇಕಲ್ಲವೇ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ರಮಾನಾಥ ರೈ:–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಚೌಡರೆಡ್ಡಿ ತೂಪಲ್ಲಿ ರವರು ಬಹಳ ಗೌರವಯುತ ಸದಸ್ಯರು. ಮಾನ್ಯ ಸದಸ್ಯರು ಬಹಳ ಬೇಜವಾಬ್ದಾರಿಯುತವಾದ ಉತ್ತರ ಎಂದು ಹೇಳುವಾಗ ನನ್ನ ಮನಸ್ಸಿಗೆ ಸ್ವಲ್ಪ ಬೇಜಾರು ಆಯಿತು.

**ಶ್ರೀ ಚೌಡರೆಡ್ಡಿ ತೂಪಲ್ಲಿ:–** ಮಾನ್ಯ ಸಭಾಪತಿಯವರೆ, ಬೇಜವಾಬ್ದಾರಿಯುತವಾದ ಉತ್ತರ ಎಂದರೆ, ಇಷ್ಟು ಪ್ರಮಾಣಿಕವಾಗಿ ಕೆಲಸ ಮಾಡುವಂತಹ ಮಾನ್ಯ ಸಚಿವರು ನಾಲ್ಕು ವರ್ಷಗಳಾದರೂ ಸಹ, ಈ ಸಮಸ್ಯೆಯನ್ನು ಇನ್ನು ಪರಿಹಾರ ಮಾಡಲಿಲ್ಲ ಎನ್ನುವುದು. ಇಲ್ಲಿ ನನ್ನ ಪ್ರಶ್ನೆ ಇಷ್ಟೇ. CAMPA ನಿಧಿಯಿಂದ ಕೊಟ್ಟಿಲ್ಲವೆಂದರೆ, ರಾಜ್ಯ ಸರ್ಕಾರ ಅಲ್ಲಿನ ಜನಕ್ಕೆ ಸಹಾಯ ಮಾಡುತ್ತೇವೆಂದು ಒಪ್ಪಿಕೊಳ್ಳಲಿ.

**ಶ್ರೀ ಬಿ.ರಮಾನಾಥ ರೈ:–** ಮಾನ್ಯ ಸಭಾಪತಿಯವರೆ, ಇದು ಸಾಕಷ್ಟು ಚರ್ಚೆಯಾಗಿ ಇತ್ತೀಚೆಗೆ 5–6 ತಿಂಗಳುಗಳ ಹಿಂದೆ ಎಲ್ಲಾ ಉಸ್ತುವಾರಿ ಮಂತ್ರಿಗಳು, ಎಲ್ಲಾ ಶಾಸಕರ ಮಿತ್ರರು ಹೇಳಿದ ಪ್ರಕಾರ, CAMPA ನಿಧಿಯಲ್ಲಿ ಬಂದಿರುವಂತಹ ಹಣವನ್ನು ನಾವು ಬೇರೆ ಬೇರೆ ಕಾರ್ಯಕ್ರಮಗಳಿಗೆ ಉಪಯೋಗ ಮಾಡುತ್ತೇವೆ. ಆದರೆ, ಇದನ್ನು ನಿರ್ದಿಷ್ಟವಾದ ವಿಚಾರಕ್ಕೆ ಉಪಯೋಗ ಮಾಡೋಣವೆಂದು ಹೇಳಿ ಕೇಂದ್ರ ಸರ್ಕಾರಕ್ಕೆ ಪತ್ರವನ್ನು ಬರೆಯೋಣವೆಂದು ಅವರೆಲ್ಲರೂ ಹೇಳಿದ ಪ್ರಕಾರ, ಮತ್ತು ಅಂತಿಮವಾಗಿ ಇಷ್ಟು ವರ್ಷಗಳ ಸುದೀರ್ಘವಾದ ಚರ್ಚೆಯ ನಂತರ ಒಂದು ತೀರ್ಮಾನಕ್ಕೆ ಬಂದೆವು. CAMPA ನಿಧಿ ಎಂದು ಇದೆ. ಅದು ನಮ್ಮ ರಾಜ್ಯ ಸರ್ಕಾರಕ್ಕೆ ಸಿಗುವಂತಹ ನಿಧಿ. ಸೆಸ್ ಹಣ ಎಂದು ಇದೆ. Petrol ಮತ್ತು ಡೀಸೆಲ್ ಸೆಸ್ ಹಣ C.R.F. (Calamity Relief Fund) ಹಣ ಬರುತ್ತದೆ. ಅದೇರೀತಿಯಲ್ಲಿ ಕೆಲವು CAMPA ನಿಧಿ ಹಣ ಎಂದು ಬರುತ್ತದೆ. C.R.F. ಹಣಕ್ಕೆ 2% ಸೆಸ್ ಡೀಸೇಲ್ ಮತ್ತು Petrol ಗೆ, ಆ ಹಣವನ್ನು ನಮಗೆ ಕೊಡುವಂತಹದ್ದು. ಅದು ಆ ರಾಜ್ಯ ಸರ್ಕಾರಕ್ಕೆ ಕೊಡುವಂತಹ ಹಣ. ಅದೇ ರೀತಿಯಲ್ಲಿ ನಮ್ಮ ರಾಜ್ಯಕ್ಕೆ ಸಿಗುವಂತಹ CAMPA ನಿಧಿಯಲ್ಲಿ ಬಹುಶಃ ಇದನ್ನು ಉಪಯೋಗ ಮಾಡಬೇಕೆಂದು ಹೇಳುವಂತಹ ಮನವಿಯ ಮೇರೆಗೆ ನಾವು CAMPA ನಿಧಿಯನ್ನು ಉಪಯೋಗ ಮಾಡಲಿಕ್ಕೆ ಶಿಫಾರಸ್ಸು ಮಾಡಿದ್ದೇವೆ. ನಾವು ಸುಮ್ಮನೆ ಕಾಟಾಚಾರಕ್ಕೆ ಶಿಫಾರಸ್ಸು ಮಾಡುವಂತಹದ್ದು ಅಲ್ಲ ಎನ್ನುವಂತಹ ಮಾತನ್ನು ಮಾನ್ಯ ಸದಸ್ಯರ ಗಮನಕ್ಕೆ ತರ ಬಯಸುತ್ತೇನೆ. ಮಾನ್ಯ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅವರನ್ನು ಮತ್ತು ಶಾಸಕ ಮಿತ್ರರನ್ನು ದೆಹಲಿಗೆ ಕರೆದುಕೊಂಡು ಹೋಗುತ್ತೇನೆ. ಕಳೆದ ನಾಲ್ಕು ವರ್ಷಗಳಿಂದ ಈ ಸಮಸ್ಯೆಯನ್ನು ಕೇಳುತ್ತಿದ್ದೇನೆ. ನಾವು ಒಂದೇ ಬಾರಿಗೆ 22 ಆನೆಗಳನ್ನು ಹಿಡಿದಿದ್ದೇವೆ. ಒಂದೇ ಬಾರಿಗೆ 22 ಆನೆಗಳನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಿಡಿದಿರುವಂತಹ ಚರಿತ್ರೆ ಇದ್ದರೆ, ಅದು ಇಡೀ ಏಷ್ಯಾ ಖಂಡದಲ್ಲಿಯೇ ಪ್ರಥಮ. ಇದು ಕರ್ನಾಟದಲ್ಲಿ ಮಾತ್ರ ಅಲ್ಲ. 22 ಆನೆಗಳನ್ನು ಹಾಸನ ಜಿಲ್ಲೆಯಲ್ಲಿ ಹಿಡಿದಿದ್ದೇವೆ ಎಂದರೆ, ಇದು ನಮ್ಮ ಭಾರತ ದೇಶದಲ್ಲಿಯೇ ಅಲ್ಲ. ನಾವು ಇಡೀ ಏಷ್ಯಾದಲ್ಲಿಯೇ ಅತ್ಯಂತ ಹೆಚ್ಚು ಆನೆಗಳನ್ನು ಒಂದೇ ಬಾರಿಗೆ ಹಿಡಿದಿರುವಂತಹ ಚರಿತ್ರೆಯನ್ನು ಮಾಡಿದ್ದೇವೆ.

ಮಾನ್ಯ ಸಭಾಪತಿಯವರೆ, ಇನ್ನು ಪರಿಹಾರದ ದೃಷ್ಟಿಯಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ಯಾರಾದರೂ ವನ್ಯಜೀವಿಗಳಿಂದ ಮರಣ ಹೊಂದಿದರೆ, 5 ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಶಾಶ್ವತ ಅಂಗವಿಕಲತೆಗೆ ಈ ಹಿಂದೆ 50 ಸಾವಿರ ಇತ್ತು. ನಮ್ಮ ಸರ್ಕಾರ ಬಂದ ಮೇಲೆ ಅದನ್ನು 5 ಲಕ್ಷ ರೂಪಾಯಿಗಳಿಗೆ ಹೆಚ್ಚಿಸಿದ್ದೇವೆ. ಭಾಗಶ: ಅಂಗವಿಕಲತೆಗೆ ಈ ಹಿಂದೆ 25 ಸಾವಿರ ಕೊಡುತ್ತಿದ್ದರು. ನಾವು ಅದನ್ನು 2.50 ಲಕ್ಷ ರೂಪಾಯಿಗಳಿಗೆ ಹೆಚ್ಚಿಗೆ ಮಾಡಿದ್ದೇವೆ. ಏಕೆಂದರೆ, ಇವತ್ತು ಜನರಿಗೆ ನಾವು ಬೇರೆ ರೀತಿಯಲ್ಲಿ ಕಂದಕ ಮಾಡುತ್ತೇವೆ. ರೈಲ್ವೆ ಹಳಿ ಪಟ್ಟಿಗಳನ್ನು ಕಟ್ಟಿ barricade ಮಾಡುತ್ತೇವೆ. ಇಲ್ಲಿ ಅದು ಇಲ್ಲ. ಸಕಲೇಶಪುರ ಒಂದು ಚಿದ್ರವಾದಂತಹ ಭೌಗೋಳಿಕವಾದಂತಹ ಪ್ರದೇಶ. ನಾವು ಇಲ್ಲಿ ಒಂದು ನಿರ್ಧಿಷ್ಟವಾಗಿ fencing ಮಾಡುವುದಕ್ಕೂ ಸಹ ಸಾಧ್ಯವಾಗುವುದಿಲ್ಲ. ಆನೆ ಕಂದಕವನ್ನು ನಿರ್ಮಾಣ ಮಾಡುವುದಕ್ಕೂ ಸಹ ಸಾಧ್ಯವಾಗುವುದಿಲ್ಲ. ಆದ್ದರಿಂದ, ಇಂತಹ ಸಮಸ್ಯೆಗಳನ್ನು ನಿಯಂತ್ರಣ ಮಾಡುವುದಕ್ಕೆ ಆನೆಗಳನ್ನು ಹಿಡಿಯುವಂತಹ ಒಂದು ಕಾರ್ಯಕ್ರಮವನ್ನು ಮಾಡಿದ್ದೇವೆ. ಅದೇರೀತಿ ಪರಿಹಾರವನ್ನು ಕೊಡುವಂತಹ ಕಾರ್ಯವನ್ನು ಮಾಡಿದ್ದೇವೆ. ನನಗೂ ಸಕಲೇಶಪುರ ಒಂದು ಒಳ್ಳೆಯ ಸಂಬಂಧ ಇರುವಂತಹ ಪ್ರದೇಶ. ನಾನು ಅಲ್ಲಿಗೆ ಹೆಚ್ಚಿಗೆ ಹೋಗುವಂತಹದ್ದು ಇದೆ. ಮಾನ್ಯ ಸದಸ್ಯರು ಹೇಳಿದಂತೆ, ಅಲ್ಲಿ ಸರ್ಕಾರದ ಮೂಲಕ ಏನು ಮಾಡುವುದಕ್ಕೆ ಸಾಧ್ಯವಿದೆ, ಅದನ್ನು ಖಂಡಿತವಾಗಿ ಮಾಡುವುದಕ್ಕೆ ಪ್ರಮಾಣಿಕವಾದ ಪ್ರಯತ್ನವನ್ನು ಮಾಡುತ್ತೇನೆ.

**ಶ್ರೀ ಚೌಡರೆಡ್ಡಿ ತೂಪಲ್ಲಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಆನೆ ಕೋಪ ಮಾಡಿಕೊಂಡ ಹಾಗೆ ಕೋಪ ಮಾಡಿಕೊಂಡಿದ್ದಾರೆ. ನಮಗೆ ಕೆಲಸವಾಗಲಿ, ರೈತರಿಗೆ ಅನುಕೂಲವಾಗಲಿ ಎನ್ನುವಂತಹ ದೃಷ್ಟಿಯಲ್ಲಿ ನಾನು ಹೇಳಿದ್ದೇನೆ.

(581) 12:30 07-06-2017 CS.AK

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ(ಮುಂದು):-**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಾಗೇ CAMPA (Compensatory Afforestation Fund Management and Planning Authority) fund ಬರುವ ತನಕ ಅಲ್ಲಿನ ಜನರಿಗೆ ಏನಾದರೂ ಪರಿಹಾರ ಕೊಡಿ, ಪರಿಹಾರ ನೀಡದೆ ಅವರು ಬೆಳೆಯನ್ನು ಬೆಳೆಯುವುದಿಲ್ಲ. ಬೆಳೆ ಬೆಳೆಯದೇ ಅವರು ಹೇಗೆ ಜೀವನವನ್ನು ನಡೆಸಬೇಕು? ಸರ್ಕಾರದಿಂದ ಆ CAMPA ಹಣವನ್ನು ನೀಡಿ, ಮೊಗಸಾಲೆ ಮಾಡುವವರೆಗೂ ಸರ್ಕಾರದಿಂದ ರೈತರಿಗೆ ಹಣವನ್ನು ಒದಗಿಸಿಕೊಡಿ.

ನನ್ನ ಮತ್ತೊಂದು ಪ್ರಶ್ನೆ ಏನೆಂದರೆ ರಕ್ಷಿತ ಅರಣ್ಯದ ಪಕ್ಕದಲ್ಲಿರುವ ರೈತರ ಜಮೀನುಗಳನ್ನು ವಶಪಡಿಸಿಕೊಳ್ಳಲು ಸರ್ವೋಚ್ಚ ನ್ಯಾಯಾಲಯ ನೀಡಿರುವ ನಿರ್ದೇಶನ ಏನು, ಅದಕ್ಕೆ ನಮ್ಮ ಸರ್ಕಾರದ ನಿಲುವು ಏನು ಎಂದು ನಾನು ಕೇಳಿದ್ದೇನೆ. ಅದಕ್ಕೆ ತಾವು ಸರ್ವೋಚ್ಚ ನ್ಯಾಯಾಲಯದಲ್ಲಿ ಯಾವುದೇ ನಿರ್ದೇಶನಗಳು ಇರುವುದಿಲ್ಲ, ಕೇಂದ್ರ ಅಧಿಕಾರಸ್ಥ ಸಂಸ್ಥೆ C.E.C. ಯು ನೈಸರ್ಗಿಕ ಅರಣ್ಯಗಳಿಂದ ಕೂಡಿದ ಖಾಸಗಿ ಭೂಮಿಗಳನ್ನು ಗುರುತಿಸಲು ಸಮಿತಿಯೊಂದನ್ನು ರಚಿಸಲಾಗಿತ್ತು. ಈ ಸಮಿತಿಯು ಗುರುತಿಸಿದ ಭೂಮಿಗಳ ವಶಪಡಿಸಿಕೊಳ್ಳುವ ಅಗತ್ಯತೆ ಪರಿಶೀಲಿಸಿ ಅವುಗಳ ಮೌಲ್ಯಮಾಪನ ಮಾಡಿ ಅವಶ್ಯವಿದ್ದಲ್ಲಿ ಪ್ರಸ್ತಾವನೆಗಳನ್ನು ಸಲ್ಲಿಸಲು ಜಿಲ್ಲಾ ಮಟ್ಟದ ಸಮಿತಿಗಳನ್ನು ರಚಿಸಲಾಗಿದೆ ಎಂದು ಹೇಳಿದ್ದಾರೆ. ಈಗಾಗಲೇ ಸರ್ವೋಚ್ಚ ನ್ಯಾಯಾಲಯದಲ್ಲಿ Air Marshal ಕೆ.ಸಿ.ಕಾರ್ಯಪ್ಪನವರ I.A.No.2530-2531, ಈ ಕೇಸಿನಲ್ಲಿ ರಕ್ಷಿತ ಅರಣ್ಯಗಳ ಪಕ್ಕದಲ್ಲಿರುವ ಖಾಸಗಿ ಪ್ರದೇಶಗಳನ್ನು ವಶಪಡಿಸಿಕೊಳ್ಳಲು ಕೇಂದ್ರೀಯ ಅಧಿಕಾರಸ್ಥ ಸಮಿತಿಯು ಶಿಫಾರಸ್ಸು ಮಾಡಿತ್ತು, ಯಾವ ನ್ಯಾಯಾಲಯವು ಈ ಜಮೀನನ್ನು ವಶಪಡಿಸಿಕೊಳ್ಳಬಾರದೆಂದು ಎಲ್ಲಿಯೂ ಹೇಳಿಲ್ಲ. ಅಲ್ಲದೇ ಈ ಪ್ರದೇಶವೂ ಆನೆಯ ಪಥದಲ್ಲಿಯೇ ಬರುತ್ತದೆ. ಎಲ್ಲಾ ಅಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗಳು ಈ ಬಗ್ಗೆ ಒಂದು ವರದಿಯನ್ನು ಸಲ್ಲಿಸಿದ್ದಾರೆ. ಆದರೆ ಸಚಿವರು ಅವಶ್ಯವಿದ್ದಲ್ಲಿ ಜಿಲ್ಲಾಧಿಕಾರಿಗಳು ವರದಿ ಸಲ್ಲಿಸಬಹುದೆಂದು ಹೇಳುತ್ತಿದ್ದಾರೆ, ಈಗಾಗಲೇ ಎಲ್ಲಾ ವರದಿಗಳನ್ನು ಸಲ್ಲಿಸಿದ್ದರು ಈ ವಿಚಾರದಲ್ಲಿ ಭೂಮಿಯನ್ನು ವಶಪಡಿಸಿಕೊಳ್ಳಬೇಕೆಂದು ನ್ಯಾಯಾಲಯದ ಆದೇಶ ಕೂಡ ಇದೆ. ಸಚಿವರು ಇಲ್ಲ ಎಂದರೆ ಏನರ್ಥ?

**ಶ್ರೀ ರಮಾನಾಥ ರೈ:-** ಮಾನ್ಯ ಸಭಾಪತಿಗಳೇ, ಮಾನ್ಯ ಸದಸ್ಯರು ಹೇಳಿರುವುದು ಸರಿಯಾಗಿಯೇ ಇದೆ. ಇಂತಹ ಪ್ರಕರಣಗಳು ಏನಾದರೂ ಇದ್ದರೆ ನಮ್ಮ ಕೇಂದ್ರೀಯ ಅಧಿಕಾರಸ್ಥ ಸಮಿತಿ ಏನು ಸಮಯ ನಿಗಧಿ ಮಾಡಿದ್ದಾರೆ, ಅದನ್ನು ನೈಸರ್ಗಿಕವಾಗಿ ಅರಣ್ಯ ಪಕ್ಕದಲ್ಲಿರುವ ಖಾಸಗಿ ಜಮೀನುಗಳನ್ನು ಗುರುತಿಸಿ, ಅವುಗಳನ್ನು ವಶಪಡಿಸಿಕೊಳ್ಳಲು ನೀವು ಪರಿಶೀಲಿಸಬೇಕೆಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಮಗೆ ಆದೇಶವಿದೆ. ಬಹುಶಃ ಆ ರೀತಿ ಇದ್ದಲ್ಲಿ ನಾವು ಪರಿಶೀಲಿಸಿ ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತೇವೆ. ರೈತರ ಬೆಳೆ ಸಾಕಷ್ಟು ನಾಶ ಆಗಿದೆ, ನಮಗೆ ಕಾನೂನಿನ ಪ್ರಕಾರ ಬೆಳೆ ನಾಶಕ್ಕೆ ಇಂತಿಷ್ಟೇ ನೀಡಬೇಕೆಂದಿದೆ. ಭತ್ತ, ರಾಗಿ ಜೋಳ ಯಾವುದೇ ಬೆಳೆ ಆದರೂ ಸಹ ಅದಕ್ಕೆ ಏನು ಬೆಳೆ ಪರಿಹಾರ ನೀಡಲಾಗುತ್ತಿತ್ತು ಅದನ್ನು ನಮ್ಮ ಸರ್ಕಾರ ಬಂದ ಮೇಲೆ double ಮಾಡಿದ್ದೇವೆ.

**ಶ್ರೀ ಆರ್ ಚೌಡರೆಡ್ಡಿ ತೂಪಲ್ಲಿ:-** ನನ್ನ ಪ್ರಶ್ನೆ ಇರುವುದೇ ಬೇರೆ? ಬೆಳೆ ನಾಶ ಆದರೆ ಸರ್ಕಾರ ಪರಿಹಾರ ನೀಡುತ್ತದೆ, ಆದರೆ ರೈತರು ಬೆಳೆಯುವುದಕ್ಕೆ ಭಯ ಪಟ್ಟು ಬೆಳೆ ಬೆಳೆಯದೇ ಇರುವುದಕ್ಕೆ ವರ್ಷಕ್ಕೆ ಇಷ್ಟು ಎಂದು ಪರಿಹಾರ ಕೊಡಿ ಎಂದು ನಾನು ಕೇಳುತ್ತಿದ್ದೇನೆ. ಕಾಡಾನೆಗಳ ಭಯದಿಂದ ಆ ರೈತರಿಗೆ ಬೆಳೆ ಬೆಳೆಯುವುದಕ್ಕೆ ಸಾಧ್ಯವಾಗುತ್ತಾ ಇಲ್ಲ.

**ಶ್ರೀ ರಮಾನಾಥ ರೈ:-** ಕೃಷಿ ಮಾಡಲು ಸಾಧ್ಯವಾಗದ ಜಮೀನನ್ನು ವಶಪಡಿಸಿಕೊಳ್ಳಿ ಎಂದು ಹೇಳುತ್ತಿದ್ದೀರಿ, ಅದರ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ:-** ಈ ಭೂಮಿಯನ್ನು ವಶಪಡಿಸಿಕೊಳ್ಳುವವರೆವಿಗೂ ಸರ್ಕಾರದಿಂದ ಏನಾದರೂ ಪರಿಹಾರವನ್ನು ಕೊಡಿ. ಸರ್ವೋಚ್ಚ ನ್ಯಾಯಾಲಯ ಎಲ್ಲಿಯೂ ಹೇಳಿಲ್ಲ ಎನ್ನುವುದನ್ನು ಉತ್ತರ ಕೊಡಿ.

**ಶ್ರೀ ರಮಾನಾಥ ರೈ:-** ನಮ್ಮ ಸರ್ಕಾರದಿಂದ ಏನನ್ನು ಮಾಡಲಿಕ್ಕೆ ಸಾಧ್ಯವಿದೆ, ಅದನ್ನು ಮಾಡುತ್ತೇವೆ. ಮುಖ್ಯವಾಗಿ ಇಲ್ಲಿ 2400 ಎಕರೆ ಖಾಸಗಿ ಜಮೀನು ಇದೆ. ಅದಕ್ಕೆ ಹೊಂದಿಕೊಂಡಂತೆ ಸರ್ಕಾರಿ ಜಮೀನು ಸಹ ಇದೆ. 3000 ಎಕರೆ ಜಮೀನು ಒಂದು ಸ್ಥಳ ಆಗುತ್ತದೆ. ಅದಕ್ಕೆ ಬಹಳ ದೊಡ್ಡ ಮೊತ್ತದ ಹಣ ನೀಡಬೇಕಾಗುತ್ತದೆ. ಅದಕ್ಕೆ ನಾವು CAMPA ದಿಂದ ಹಣ ನೀಡುವುದಕ್ಕೆ ಪ್ರಯತ್ನವನ್ನು ಪಡುತ್ತೇವೆ. ಈ ಬಗ್ಗೆ ಈಗಾಗಲೇ ಶಿಫಾರಸ್ಸು ಮಾಡಿದ್ದು ಮಂಜೂರು ಮಾಡಲಿಕ್ಕೆ ಕ್ರಮ ಕೈಗೊಳ್ಳುತ್ತೇವೆ.

**ಶ್ರೀಮತಿ ತಾರಾ ಅನುರಾಧ :-** ಮಾನ್ಯ ಸಭಾಪತಿಗಳೇ, ಇಲ್ಲಿ ಆನೆಗಳ ಬಗ್ಗೆ ಚರ್ಚೆ ನಡೆಯುತ್ತಿದೆ. ಆದರೆ ನಮ್ಮ ಸದನದಲ್ಲಿಯೇ ಇಲಿ ಹೆಗ್ಗಣಗಳ ಕಾಟ ಇದೆ ಎಂದು ಪತ್ರಿಕೆಗಳಲ್ಲಿ ಈಗಾಗಲೇ ವರದಿ ಬಂದಿದೆ. ದಯವಿಟ್ಟು ಕಾಲ ಬಳಿ ಇಲಿಗಳು ಬರುತ್ತವೆ ಎನ್ನುವ ಭಯ ಇದೆ, ದಯಮಾಡಿ ಇದರ ಬಗ್ಗೆ ತಾವು ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ರಮಾನಾಥ ರೈ:-** ಆನೆಗಳಿಗೆ ಹೆದರುವುದು ಬಿಟ್ಟು ಇಲಿ ಹೆಗ್ಗಣಗಳಿಗೆ ಹೆದರುತ್ತೀರಲ್ಲ, ನಾನು ಆನೆಗಳಿಗೆ ಮಾತ್ರ ಜನರು ಹೆದರುತ್ತಾರೆಂದು ತಿಳಿದುಕೊಂಡಿದ್ದೆನು.

**ಪ್ರಶ್ನೆ ಸಂಖ್ಯೆ 2171**
**(ಉತ್ತರವನ್ನು ಒದಗಿಸಲಾಗಿದೆ)**

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಗಳೇ, ನನ್ನ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ ಮೇಲ್ನೋಟಕ್ಕೆ ಸಚಿವರು ನೀಡಿರುವ ಉತ್ತರ ಅಪೂರ್ಣ ಎಂದು ಸ್ಪಷ್ಟವಾಗಿ ಕಾಣುತ್ತಿದೆ. ಅವರ ಉತ್ತರದ ರೀತ್ಯಾ 3677 ಕೆರೆಗಳು ಸಣ್ಣ ನೀರಾವರಿ ಮತ್ತು ಅಂತರ್ಜಲ ಇಲಾಖೆಗೆ ಬರುತ್ತದೆ ಎಂದು ಸಚಿವರು ಹೇಳುತ್ತಿದ್ದಾರೆ. ಯಾವ ಯಾವ ಜಿಲ್ಲೆಗಳಲ್ಲಿ ಎನ್ನುವುದಕ್ಕೆ ಕೇವಲ 17 ಜಿಲ್ಲೆಗಳ ಬಗ್ಗೆ ಮಾತ್ರ ಕೆರೆಗಳ ಮಾಹಿತಿಯನ್ನು ನಮಗೆ ನೀಡಿದ್ದಾರೆ. ಇನ್ನು 13 ಜಿಲ್ಲೆಗಳಲ್ಲಿ ಸಣ್ಣ ಕೆರೆಗಳು ಇವೆಯೇ ಇಲ್ಲವೇ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. 3677 ಕೆರೆಗಳಲ್ಲಿ ಎಷ್ಟು ಕೆರೆಗಳು ಒತ್ತುವರಿಯಾಗಿವೆ ಎನ್ನುವುದಕ್ಕೆ 99 ಕೆರೆಗಳು ಒತ್ತುವರಿಯಾಗಿವೆ ಎಂದು ಉತ್ತರ ನೀಡಿದ್ದಾರೆ. ಆದರೆ ಸಚಿವರ ಉತ್ತರದಲ್ಲಿ ಬೆಂಗಳೂರು ನಗರ ಆಗಲಿ, ಬೆಂಗಳೂರು ಗ್ರಾಮಾಂತರ ಆಗಲಿ ಚಿತ್ರದುರ್ಗ ಅಥವಾ ತುಮಕೂರಿನ ಮತ್ತು ಹಾಸನದ ಕೆರೆಗಳ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಉದಾಹರಣೆಗೆ ಬೆಂಗಳೂರಿನಲ್ಲಿ ಹೆಚ್ಎಸ್ಆರ್ ಲೇಔಟ್‌ನಲ್ಲಿ ನಮ್ಮ ಮನೆಯ ಹತ್ತಿರದಲ್ಲಿಯೇ ಅಗರ ಕೆರೆ ಇದೆ. ಅಥವಾ ತುಮಕೂರಿನಲ್ಲಿ ಅಂಬಾನಿ ಕೆರೆ ಇದೆ. ಜಿಲ್ಲಾ ಕೇಂದ್ರಗಳಲ್ಲಿರುವ ಕೆರೆಗಳು ಅದು ದೊಡ್ಡ ಕೆರೆಗಳಿರಬಹುದು ಅಥವಾ 100 ಎಕರೆ ಒಳಗಿರುವ ಕೆರೆಗಳಿರಬಹುದು, ಅವುಗಳು ಒತ್ತುವರಿಯಾಗಿವೆ. ಆದರೆ ಇವುಗಳ ಯಾವುದೇ ಮಾಹಿತಿ ಲಭ್ಯವಿಲ್ಲ. ಇದರ ಜೊತೆಗೆ ಕಳೆದ ಮೂರು ವರ್ಷಗಳಿಂದ ಎಷ್ಟು ಕೆರೆಗಳು ತುಂಬಿವೆ ಎನ್ನುವ ಮಾಹಿತಿಯನ್ನು ಕೇಳಿದ್ದರೆ ಅದಕ್ಕೆ ಅತ್ಯಂತ ಅಘಾತಕಾರಿ ಉತ್ತರ ನನಗೆ ಲಭ್ಯವಾಗಿದೆ. ಇವರು ಉತ್ತರ ನೀಡಿರುವುದು ರಾಜ್ಯದ ಕೇವಲ ನಾಲ್ಕು ಜಿಲ್ಲೆಗಳಲ್ಲಿ ಕಳೆದ 3 ವರ್ಷಗಳಲ್ಲಿ 37 ಕೆರೆಗಳು ಮಾತ್ರ ಮಳೆಯಿಂದ ತುಂಬಿವೆ ಎನ್ನುವ ಉತ್ತರವನ್ನು ನೀಡಿದ್ದಾರೆ. ಇನ್ನುಳಿದಂತೆ 16 ಕೆರೆಗಳು ಮೈಸೂರಿನ ಬಗ್ಗೆ ಹೇಳಿದ್ದಾರೆ, ಎಲ್ಲವೂ 30%-40%-70% ತುಂಬಿವೆ ಎಂದು ಹೇಳಿದ್ದಾರೆ. ಹಾಗಾದರೆ ಒಟ್ಟಾರೆ 3677 ಕೆರೆಗಳಲ್ಲಿ ನೋಡಿದರೆ 33% ತೆಗೆದುಕೊಂಡರೆ it is not even 1%. ಈ ಸ್ಥಿತಿಯಾದರೆ ರಾಜ್ಯದಲ್ಲಿ ಕುಡಿಯುವ ನೀರಿಗಾಗಲಿ, ವ್ಯವಸಾಯಕ್ಕಾಗಲೀ ಇತರೆ ಉದ್ದೇಶಗಳಿಗೆ ನೀರಿಲ್ಲದೆ ಯಾವ ರೀತಿ ಬದುಕನ್ನು ಸಾಗಿಸಲಿಕ್ಕೆ ಸಾಧ್ಯ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎನ್ನುವುದನ್ನು ಹೇಳಬೇಕಾಗುತ್ತದೆ. ನನ್ನ ಈ ಪ್ರಶ್ನೆಗಳಿಗೆ ಸಚಿವರು ಉತ್ತರ ನೀಡಿದಲ್ಲಿ ನಾನು ಉಪ ಪ್ರಶ್ನೆಯನ್ನು ನಂತರ ಕೇಳುತ್ತೇನೆ.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಗಳೇ, ಮಾನ್ಯ ಸದಸ್ಯರು ಕೇಳಿರತಕ್ಕ ಎಲ್ಲಾ ಪ್ರಶ್ನೆಗಳಿಗೆ ನಾನು ಉತ್ತರವನ್ನು ನೀಡಿದ್ದೇನೆ. ಅನುಬಂಧದಲ್ಲಿ ಕೇವಲ 17 ಜಿಲ್ಲೆಗಳ ಮಾಹಿತಿಯನ್ನು ಮಾತ್ರ ನೀಡಿದ್ದಾರೆ ಎಂದು ಅವರು ಹೇಳಿದ್ದಾರೆ. ಅಂದರೆ ಬೇರೆ ಜಿಲ್ಲೆಗಳಲ್ಲಿ ಕೆರೆಗಳು ಇಲ್ಲವೆಂದಲ್ಲ, ಬೇರೆ ಜಿಲ್ಲೆಗಳಲ್ಲಿಯೂ ಸಹ ಕೆರೆಗಳು ಇವೆ. ಅದು ಅನುಬಂಧದಲ್ಲಿ ಬಿಟ್ಟು ಹೋಗಿದ್ದರೆ ಅದನ್ನು ಸೇರಿಸಿ ಕೊಡುತ್ತೇನೆ. ಆ ಮಾಹಿತಿಗೆ ಯಾವುದೇ ಕೊರತೆ ಇಲ್ಲ. ಈಗ ನಮ್ಮ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಗೆ ಬರತಕ್ಕ ಕೆರೆಗಳು ಎಂದರೆ 40 ರಿಂದ 2000 ಹೆಕ್ಟೇರ್ ಅಚ್ಚುಕಟ್ಟು ವ್ಯಾಪ್ತಿಯಲ್ಲಿ ಬರತಕ್ಕ ಕೆರೆಗಳು ಮಾತ್ರ ನಮ್ಮ ವ್ಯಾಪ್ತಿಯಲ್ಲಿ ಬರುತ್ತವೆ. 0-40 ಹೆಕ್ಟೇರ್ ಕೆರೆಗಳು ಜಿಲ್ಲಾಪಂಚಾಯತಿಯ ವ್ಯಾಪ್ತಿಯಲ್ಲಿ ಬರುತ್ತದೆ. ಯಾವ ಯಾವ ಕೆರೆಗಳು ಎಷ್ಟು ಒತ್ತುವರಿಯಾಗಿವೆ ಎನ್ನುವ ಮಾಹಿತಿಯನ್ನು ಸಹ ಮಾನ್ಯ ಸದಸ್ಯರು ಕೇಳಿದ್ದರು, ಈಗಾಗಲೇ ನಮ್ಮಲ್ಲಿರುವ 3677 ಕೆರೆಗಳ ಪೈಕಿ 2418 ಕೆರೆಗಳ ಸರ್ವೆ ಮಾಡಿಸಲಾಗಿದೆ.

(ಮುಂದು)

**(582) 12.40 07-06-2017 ಎಂವಿ:ಆರ್‌ಎನ್**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಟಿ.ಬಿ.ಜಯಚಂದ್ರ (ಮುಂದು...):-**

ಸರ್ವೆ ಆಗಿರುವಂಥದ್ದು 2418 ಕೆರೆಗಳು, 721 ಕೆರೆಗಳಿಗೆ ಸರ್ವೆಯ ಅವಶ್ಯಕತೆ ಇರುವುದಿಲ್ಲ. ಏಕೆಂದರೆ, ಅವುಗಳು forest ಬೌಂಡರಿಯಲ್ಲಿರುತ್ತವೆ ಅಥವಾ ಸರ್ಕಾರಿ ಬೌಂಡರಿಯಲ್ಲಿ ಇರತಕ್ಕಂಥವುಗಳು, ಅವುಗಳಿಗೆ ಸರ್ವೆ ಕಾರ್ಯ ಅವಶ್ಯಕತೆ ಇರುವುದಿಲ್ಲ. ಆದರೆ, ಈಗ ಅವಶ್ಯಕತೆ ಎಂದು ಮಾಡಿರುವಂಥದ್ದು, 2418 ಕೆರೆಗಳಿಗೆ ಸರ್ವೆ ಕಾರ್ಯ ಮುಗಿದಿದೆ. ಅದರಲ್ಲಿ ಒತ್ತುವರಿಯಾಗಿರುವಂತಹ ಕೆರೆಗಳೆಂದರೆ 1470, ಎಷ್ಟು ವಿಸ್ತೀರ್ಣ ಇದೆ ಎಂದು ಹೇಳಿದರೆ 6871 ಹೆಕ್ಟೇರ್‌ನಷ್ಟು ಒತ್ತುವರಿಯಾಗಿದೆ, ಒತ್ತುವರಿಯನ್ನು ತೆರವುಗೊಳಿಸಿರುವಂಥದ್ದು 1385 ಕೆರೆಗಳು. ತೆರವುಗೊಳಿಸಿರುವಂತಹ ವಿಸ್ತೀರ್ಣವೆಂದರೆ 6319 ಹೆಕ್ಟೇರ್‌ಗಳು. ಈಗಾಗಲೇ ಕೆರೆ ಅಭಿವೃದ್ಧಿ ಪ್ರಾಧಿಕಾರವೆಂದು ಮಾಡಿರುವಂತಹ ಹಿನ್ನೆಲೆಯಲ್ಲಿ, ನಾವು ಈಗಾಗಲೇ ಸರ್ವೆ ಕೆಲಸಗಳನ್ನು ಮಾಡುವಂಥದ್ದು, ಬೌಂಡರಿಗಳನ್ನು ಹಾಕುವಂಥ ಕೆಲಸ ಕಳೆದ ಎರಡು-ಮೂರು ವರ್ಷಗಳಿಂದ ಬಹಳ ವೇಗವಾಗಿ ನಡೆಯುತ್ತಿದೆ. ಆದರೂ ಕೂಡ,

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇನ್ನೂ ಕೂಡ ಮಾಡಬೇಕಾಗಿರುವಂಥದ್ದು ಬೇಕಾದಷ್ಟಿದೆ. ಕೆರೆ ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಈ ನಲವತ್ತು ಹೆಕ್ಟೇರ್‌ನ ಕೆಳಗೆ ಬರುವಂತಹ ಕೆರೆಗಳನ್ನು ಕೂಡ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ, ತಾಲ್ಲೂಕು ಪಂಚಾಯತ್ ಮತ್ತು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಮಾಡಬೇಕಾಗುತ್ತದೆ. ಇವತ್ತಿನ ದಿವಸ ಕೆರೆಗಳನ್ನು ಉಳಿಸುವಂತಹ ಅವಶ್ಯಕತೆ ಕೂಡ ಇದೆ. ನಾನು ಏಕೆ ಈ ವಿಚಾರವನ್ನು ನಿಮಗೆ ತಿಳಿಸುತ್ತಿದ್ದೇನೆಂದರೆ, ನಾವು ಐದು ವರ್ಷಕ್ಕೆ ಒಂದು ಸಾರಿ census ಮಾಡುತ್ತೇವೆ. ಅಂದರೆ ಎಷ್ಟು ಕೆರೆಗಳಿವೆ, impounding structures ಎಷ್ಟು, ಅಂದರೆ ನೀರು ನಿಲ್ಲತಕ್ಕಂಥ ಪ್ರದೇಶಗಳು ಎಷ್ಟು ಇವೆ ಎನ್ನುವಂಥದ್ದು. ಅದಕ್ಕೆ ಬಹಳ ಎಂದು ಹೇಳಿದರೆ ನಮಗೆ ಒಂದನೇ ಗಣತಿ ಆಗಿರುವಂಥದ್ದು 1986-87ರಲ್ಲಿ ಅಂದರೆ ಐದು ವರ್ಷಕ್ಕೆ ಒಂದು ಸಾರಿ. ಆಗ ನಮಗೆ ಕಂಡು ಬಂದಿರುವಂಥದ್ದು, 40012 ಕೆರೆಗಳು. ಎರಡನೆ ಗಣತಿ ಆಗಿರುವಂಥದ್ದು 1993-94ರಲ್ಲಿ ಆಗ ಬಂದಿರುವಂಥದ್ದು 39086 ಕೆರೆಗಳು. 2000-2001ರಲ್ಲಿ ಆಗ ಬಂದಿರುವಂಥದ್ದು 30773 ಕೆರೆಗಳು. ಈಗ ನಾಲ್ಕನೇ ಗಣತಿ ನಡೆಯುತ್ತಿದೆ, ಐದು ವರ್ಷದಲ್ಲಿ ಮುಗಿಯಬೇಕಾಗಿತ್ತು, ಆದರೆ, ಅದು ಮುಗಿದಿಲ್ಲ, ಅಲ್ಲಿ figures tally ಆಗಲಿಲ್ಲವೆಂದು, Government of India ದವರು ವಾಪಸ್ಸು ಹಾಕಿರುವಂತಹ ಹಿನ್ನೆಲೆಯಲ್ಲಿ, 2006-2007ರಿಂದ 2013ರವರೆಗೂ ಕೂಡ ಈಗಾಗಲೇ ಗಣತಿ ಕೆಲಸ ಪ್ರಗತಿಯಲ್ಲಿದೆ.

**ಶ್ರೀ ವಿ.ಎಸ್.ಉಗ್ರಪ್ಪ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಈಗ ನನಗೆ ಮಾನ್ಯ ಸಚಿವರೇ 40,012 ಕೆರೆಗಳು ಇದ್ದವು ಎಂದು ಹೇಳಿದ್ದಾರೆ. ನನ್ನ ವರದಿ ಪ್ರಕಾರ, ನನಗೆ ಕೆಲವು ಲಭ್ಯವಾಗಿರುವಂತಹ ಮಾಹಿತಿ ಪ್ರಕಾರ, ಅನೇಕ ಪಾಳೇಗಾರರಿಂದ ಹಿಡಿದು, ಅನೇಕ ರಾಜರ ಕಾಲದಿಂದ ಹಿಡಿದು, ಸುಮಾರು 42,000 ಸಣ್ಣ ಕೆರೆ, ಕುಂಟೆಗಳನ್ನು ಕಟ್ಟಿರುವಂಥದ್ದು, ಚನ್ನಗಿರಿಯಲ್ಲಿ ರಾಣಿಕೆರೆ ಇದೆ, ಅದನ್ನು ಒಂದು ಹಂತದಲ್ಲಿ ಸೂಳೆಕೆರೆ ಎಂದು ಕರೆಯುತ್ತಿದ್ದರು. ಆ ಸಾಧ್ವಿಯನ್ನು ನಾವು ಈ ಸಂದರ್ಭದಲ್ಲಿ ಅಭಿನಂದಿಸಬೇಕು.

**ಸಭಾಪತಿಯವರು:-** ಅದನ್ನು ರಾಣಿಕೆರೆ ಎನ್ನುವುದಿಲ್ಲ, ನಾವೆಲ್ಲರೂ ಸೇರಿ ಶಾಂತಿಸಾಗರವೆಂದು ಹೆಸರಿಟ್ಟಿದ್ದೇವೆ. ಅದು ಸ್ವಲ್ಪ ದಿವಸ ಇತ್ತು, ನಾವೆಲ್ಲ ಸೇರಿ ಅಂದರೆ ದಿವಂಗತ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಜೆ.ಹೆಚ್.ಪಟೇಲರ ಕಾಲದಲ್ಲಿ ಶಾಂತಿಸಾಗರವೆಂದು ಹೆಸರಿಟ್ಟಿದ್ದೇವೆ, ದಯವಿಟ್ಟು ತಾವು ಆ ಹೆಸರನ್ನೇ ಬಳಸಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ಅದು ಏನೇ ಇರಲಿ, ಅದು ಈಗಾಗಲೇ ಇತಿಹಾಸ ಎನ್ನುವ ಕಾರಣಕ್ಕೋಸ್ಕರ ಮತ್ತು ಆ ಸಾಧ್ವಿಗೆ ನಾವು ಗೌರವಿಸಬೇಕೆಂದು ನಾನು ಹೇಳಿದೆ. ಈ ರೀತಿಯ ಕೆರೆಗಳನ್ನು ನಮ್ಮ ಪೂರ್ವಿಕರು ಕಟ್ಟಿದ್ದಾರೆ. ಕೆರೆ ಕಟ್ಟಿಸುವಂಥದ್ದು, ಸಾಲು ಮರಗಳನ್ನು ನೆಡುವಂಥದ್ದು, ಗುಡಿ-ಗೋಪುರಗಳನ್ನು ಕಟ್ಟುವಂಥದ್ದು ನಮ್ಮ ಸಂಪ್ರದಾಯವಾಗಿತ್ತು. ಆದರೆ, ಕಟ್ಟಿರುವುದನ್ನು ಉಳಿಸಿಕೊಳ್ಳುವಂಥ ರೀತಿಯಲ್ಲಿ ನಾವು ಇವತ್ತಿನ ದಿವಸ ಕಾಣುತ್ತಿಲ್ಲ. ಬಹುಶಃ ಎಲ್ಲಿಯವರೆವಿಗೂ ಗಿಡ-ಮರಗಳನ್ನು, ಕೆರೆ-ಕುಂಟೆಗಳನ್ನು ನಾವು ಉಳಿಸಿಕೊಳ್ಳುವುದಿಲ್ಲವೋ ಆ ರಾಜ್ಯವಾಗಲಿ, ಆ ದೇಶವಾಗಲಿ ಅಭಿವೃದ್ಧಿಯಾಗುವುದಕ್ಕೆ ಸಾಧ್ಯವಿಲ್ಲ. ಹಾಗಾಗಿ, ನಾನು ಇಷ್ಟೇ ಕೇಳಲಿಕ್ಕೆ ಬಯಸುತ್ತೇನೆ, ಈಗ ನೀವು ಹೇಳಿರುವ ಪ್ರಕಾರ 40012 ಕೆರೆ-ಕುಂಟೆಗಳು ಇವೆಯಲ್ಲ, ಇನ್ನು ಉಳಿದವುಗಳು ಯಾರ ಸುಪರ್ದಿಯಲ್ಲಿವೆ. ಈ ರಾಜ್ಯದ ಎಲ್ಲಾ ಕೆರೆ-ಕುಂಟೆಗಳನ್ನು ಒಂದು umbrella ಕೆಳಗಡೆ ತರುತ್ತೇವೆಂದು ತಾವು ಒಂದು ಕಡೆ ಬಜೆಟ್‌ನಲ್ಲಿ ಘೋಷಣೆ ಮಾಡುತ್ತೀರಿ. ಯಾವ್ಯಾವ ಕೆರೆ-ಕುಂಟೆಗಳು ಎನ್ನುವುದನ್ನು National Green Tribunal (NGT), ಈಗಾಗಲೇ declare ಮಾಡಿದೆ. ಇದರ ಮೇಲೆ ಯಾವ ರೀತಿ ಅದನ್ನು ಉಳಿಸುವಂಥದ್ದಕ್ಕೆ ಮತ್ತು ಅದರ ಜೊತೆಗೆ ಶೇಕಡ ಒಂದರಷ್ಟು ಕೆರೆ ತುಂಬುವುದನ್ನು ಬಿಟ್ಟು, ಶೇಕಡ 100ರಷ್ಟು ಕೆರೆಗಳು ತುಂಬುವಂತಹ ರೀತಿಯಲ್ಲಿ ಈ ಅಂತರ್ಜಲವನ್ನು ವೃದ್ಧಿ ಮಾಡುವಂತಹ ದಿಕ್ಕಿನಲ್ಲಿ ಯಾವ ಕ್ರಮಗಳನ್ನು ತಾವು ತೆಗೆದುಕೊಳ್ಳುವುದಕ್ಕೆ ಹೊರಟಿದ್ದೀರಿ? ಇತ್ತೀಚೆಗೆ ನಾನು ಕೇಳಲ್ಪಟ್ಟಿದ್ದೇನೆ, ತಾವು ಅಂತರ್ಜಲ ಅಭಿವೃದ್ಧಿ ಎಂದು ಹೇಳಿ ಒಂದು ಬದಲಾವಣೆ ಮಾಡಿಕೊಂಡಿರುವಂಥದ್ದು ಇದೆ. ಈ ಅಂತರ್ಜಲ ಒಂದು ಸಾವಿರ ಅಡಿ ಆಳಕ್ಕೆ ಹೋಗಿದೆ. ಇದನ್ನು ಅಭಿವೃದ್ಧಿ ಮಾಡಲಿಲ್ಲವೆಂದು ಹೇಳಿದರೆ, ಈಗ ಏನು ನೀವು ಪಾತಾಳ ಗಂಗೆಯನ್ನು ತರುತ್ತೇವೆಂದು ಹೊರಟ್ಟಿದ್ದೀರಿ, ದಯಮಾಡಿ ಹೇಳಲಿಕ್ಕೆ ಬಯಸುತ್ತೇನೆ. ಪಾತಾಳ ಗಂಗೆ ಎನ್ನುವಂತಹ ಶಬ್ದ ಬಳಸಲಿಕ್ಕೆ ಹೋಗಬೇಡಿ, ಅದನ್ನು ತಂದರೆ ಮುಗಿದೇ ಹೋಯಿತು. ದಯಮಾಡಿ, ಈ ಅಂತರ್ಜಲ ಅಭಿವೃದ್ಧಿ ಮಾಡುವುದರ ಮೂಲಕ, ಶೇಕಡ 100ರಷ್ಟು ಈ ರಾಜ್ಯದಲ್ಲಿರುವಂತಹ ಕೆರೆಗಳನ್ನು ಮಳೆಯ ಮೂಲಕ ಅಥವಾ ನದಿಗಳ ಮೂಲಕ ಅಥವಾ project ಮೂಲಕ ಯಾವ ರೀತಿ ತುಂಬಿಸಬಹುದೆನ್ನುವುದನ್ನು ನೋಡಿ. ಈಗ ಹೆಚ್.ಡಿ.ಕೋಟೆಯಲ್ಲಿ ಸುಮಾರು 37 ಕೆರೆಗಳಿವೆ, ಅಲ್ಲಿ ಮೂರು ಡ್ಯಾಮ್‌ಗಳಿವೆ. ಆದರೆ ಒಂದು ಕೆರೆಯಲ್ಲೂ ಸಹ ನೀರು ಸಿಗುವುದಿಲ್ಲ. ಬಹುಶಃ ಆ ದಿಕ್ಕಿನಲ್ಲಿ ಇವತ್ತಿನ ದಿವಸ ಯಾವ ರೀತಿಯ ಕ್ರಮಗಳನ್ನು ಜರುಗಿಸುತ್ತೀರಿ ಮತ್ತು ಒತ್ತುವರಿಯಾಗಿರುವಂತಹ ಕೆರೆಗಳಿಗೆ Land Revenue Act ನಲ್ಲಿ Section 39 ಎಂದು ಕಾಣುತ್ತೆ, summary eviction ಗೆ ಅವಕಾಶವಿದೆ, ಅದನ್ನು ಬಳಸಿ ಯಾವಾಗ ಕ್ರಮ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಳಲ್ಲಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜರುಗಿಸುತ್ತೀರಿ, encroach ಮಾಡಿಕೊಂಡಿರುವಂಥವರಿಗೆ ಯಾರಿಗೆ, ಎಷ್ಟು ಜನಕ್ಕೆ ಶಿಕ್ಷೆ ಕೊಡಿಸುತ್ತೀರಿ, ಯಾವ ಪ್ರಕರಣಗಳನ್ನು ಹಾಕಿದ್ದೀರಿ ಎಂದು ಕೇಳಲಿಕ್ಕೆ ಬಯಸುತ್ತೇನೆ.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೆ, ಈಗಾಗಲೇ ನಮ್ಮಲ್ಲಿ Lake Development Authority ಎಂದು ಇದೆ. ಈ Corporations ಮತ್ತು Bengaluru Metropolitan Area ದಲ್ಲಿ ಬರತಕ್ಕಂಥದ್ದೆಲ್ಲಾ Lake Development Authority ವ್ಯಾಪ್ತಿಗೆ ಬರುತ್ತದೆ. ಸಣ್ಣ ಕೆರೆಗಳು ಗ್ರಾಮೀಣಾಭಿವೃದ್ಧಿ ಇಲಾಖೆ ಅಡಿಯಲ್ಲಿ ಬರುತ್ತದೆ. ಈಗ ನೀವು ಕಳಕಳಿಯನ್ನು ವ್ಯಕ್ತಪಡಿಸಿರುವಂತಹ ಹಿನ್ನೆಲೆಯಲ್ಲಿ, ನನಗೂ ಕೂಡ ಆಶ್ಚರ್ಯವಾಯಿತು, ಪ್ರತಿ ವರ್ಷವೂ ಕೂಡ ಈ ಕೆರೆಗಳ ಪ್ರಮಾಣ ಕಡಿಮೆಯಾಗುತ್ತಿದೆ ಅಂದರೆ ಮಾಯವಾಗುತ್ತಿದೆಯೆಂದು. ಹಾಗಾಗಿ ಇದನ್ನೆಲ್ಲಾ ಒಂದು ವ್ಯಾಪ್ತಿಯಲ್ಲಿ ತರಬೇಕು ಎನ್ನುವಂತಹ ಹಿನ್ನೆಲೆಯಲ್ಲಿ, ಆಯವ್ಯಯದಲ್ಲಿ ಈಗಾಗಲೇ ಪ್ರಸ್ತಾಪವಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಕೂಡ ಈಗಾಗಲೇ ಅದನ್ನು ಹೇಳಿದ್ದಾರೆ, ಎಲ್ಲಾ ಕೆರೆಗಳನ್ನು ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಗೆ ತರಬೇಕು ಎನ್ನುವಂತಹ ಮಾತನ್ನು ಹೇಳಿದ್ದಾರೆ. ಆ ಪ್ರಕ್ರಿಯೆಗಳು ಕೂಡ ನಡೆಯುತ್ತಿವೆ. ಅದರ ಜೊತೆಗೆ, ಬರಗಾಲ ಅಂದರೆ ಏನು? ಕೆರೆಗಳ ಅವಶ್ಯಕತೆ ಏನು? ಮತ್ತು ಕೆರೆಗಳನ್ನು ಹೇಗೆ ಉಳಿಸಬೇಕು ಎಂದು ಈ ವರ್ಷ ನಮಗೆ ಅನುಭವವಾಗಿದೆ. ನನಗೆ ಒಂದು ಆಶ್ಚರ್ಯವೆಂದರೆ, ಜನರು ಸ್ವ-ಇಚ್ಛೆಯಿಂದ ಕೆರೆಯಿಂದ ಮಣ್ಣನ್ನು ತೆಗೆಯಬೇಕು ಎನ್ನುವಂಥದ್ದು, ಅವರ ಇಷ್ಟಕ್ಕೆ ಅವರುಗಳೇ ಮಣ್ಣನ್ನು ತೆಗೆಯುತ್ತಿರುವುದನ್ನು, ಪ್ರತಿ ತಾಲ್ಲೂಕಿನ ಎಲ್ಲಾ ಭಾಗದಲ್ಲೂ ಕೂಡ ನಾವು ನೋಡಬಹುದು. ಇವತ್ತಿನ ದಿವಸ ಸಂಘ-ಸಂಸ್ಥೆಗಳು ಕೂಡ ಈ ಕಾರ್ಯಕ್ಕೆ ಕೈ ಜೋಡಿಸಿದ್ದಾರೆ. ಅದೇ ರೀತಿ ಸರ್ಕಾರದಲ್ಲಿ ಕೂಡ, ನಮ್ಮದೇ ಆದಂತಹ ಕಾರ್ಯಕ್ರಮವಿದೆ. 'ಕೆರೆ ಸಂಜೀವಿನಿ' ಎಂದು ಒಂದು ಕಾರ್ಯಕ್ರಮವಿದೆ. ಅದರಡಿಯಲ್ಲಿ ಇವತ್ತಿನ ದಿವಸ ಗ್ರಾಮೀಣಾಭಿವೃದ್ಧಿ ಇಲಾಖೆಯ ವ್ಯಾಪ್ತಿಯಿಂದ ಹೂಳು ತೆಗೆಯುವಂಥದ್ದು ನಡೆಯುತ್ತಿದೆ. ಅದನ್ನು ಕೂಡ ಇವತ್ತಿನ ದಿವಸ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಗೆ ಕೊಟ್ಟು, ಎಲ್ಲಾ ಕೆರೆಗಳನ್ನು ಕೂಡ ಒಂದು ವ್ಯಾಪ್ತಿಯಲ್ಲಿ ತರಬೇಕು ಎನ್ನುವಂತಹ ಉದ್ದೇಶ ಕೂಡ ಇದೆ. ಆ ಪ್ರಕ್ರಿಯೆ ನಡೆಯುತ್ತಿದೆ. ಈಗ ಇದಕ್ಕೆ ಅಂತರ್ಜಲ ಅಭಿವೃದ್ಧಿ ಎನ್ನುವಂಥದ್ದನ್ನು ಪುನರ್‌ನಾಮಕರಣ ಮಾಡುವಂತಹ ಕೆಲಸವನ್ನು ಮಾಡಿದ್ದೇವೆ. ಕಾರಣವೇನೆಂದರೆ, ಸಣ್ಣ ನೀರಾವರಿ ಕೆರೆಗಳ ಬಹು ಮುಖ್ಯವಾದ ಉದ್ದೇಶ ಎಂದು ಹೇಳಿದರೆ, ಅಚ್ಚುಕಟ್ಟಿಗೆ ಎನ್ನುವುದಕ್ಕಿಂತ ಹೆಚ್ಚಾಗಿ, ಅಂತರ್ಜಲವನ್ನು ಅಭಿವೃದ್ಧಿ ಮಾಡುವಂಥದ್ದು. Ground

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Water Department ಎನ್ನುವಂಥದ್ದು ಕೂಡ ನಮ್ಮ ಇಲಾಖೆಯ ವ್ಯಾಪ್ತಿಗೆ ಬಂದಿರುವುದರಿಂದ, ಇವತ್ತಿನ ದಿವಸ ಅದರ ಹೆಸರನ್ನು 'ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ' ಎಂದು ಹೇಳಿ ಪುನರ್‌ನಾಮಕರಣ ಮಾಡಿದ್ದೇವೆ. ಇವತ್ತಿನ ದಿವಸ ನಾನು ನಿಮ್ಮ ಮಾತನ್ನು ಒಪ್ಪುತ್ತೇನೆ, ಏಕೆಂದರೆ ಕೆರೆಗಳು ತುಂಬುತ್ತಿಲ್ಲ. ರಾಯಕಾಲುವೆಗಳು ಇವತ್ತಿನ ದಿವಸ silt ನಿಂದ ತುಂಬಿ ಹೋಗಿವೆ, ಅದನ್ನು ತೆಗೆಸಬೇಕಾಗುತ್ತದೆ. ಆ ಕಾರಣಕ್ಕೆ ಈಗ ನಾವು ಎಲ್ಲಾ ಕಡೆಯೂ ಕೂಡ ನೀರನ್ನು ಹೊರಗಡೆಯಿಂದ ತರತಕ್ಕಂಥದ್ದು ನಡೆದಿದೆ. ಒಂದು ಮಾತನ್ನು ಹೇಳಬೇಕಾಗುತ್ತದೆ, ಇವತ್ತಿನ ದಿವಸ ನಾವು ಮಳೆ ನೀರನ್ನು ಸಂಗ್ರಹಿಸುವಂತಹ ಕೆಲಸವನ್ನು ಮಾಡಬೇಕು. ಆದ್ಯತೆಯ ಮೇಲೆ ಮಾಡಬೇಕು, ಅದನ್ನು ಎಲ್ಲಾ ಕಡೆಯೂ ಮಾಡಬೇಕಾಗುತ್ತದೆ. ಆ ನೀರನ್ನು ನಿಲ್ಲಿಸುವುದಕ್ಕೆ ಎಲ್ಲಿ ಸಾಧ್ಯ ಎಂದು ಹೇಳಿದರೆ, ಅದನ್ನು ಕೆರೆಗಳಲ್ಲೇ ನಿಲ್ಲಿಸುವುದಕ್ಕೆ ಸಾಧ್ಯ. ಇವತ್ತಿನ ದಿವಸ ಸಂಪೂರ್ಣ ಬಹಳಷ್ಟು ಕೆರೆಗಳು silt ನಿಂದ ತುಂಬಿ ಹೋಗಿವೆ, ಅಂದರೆ ಹೂಳಿನಿಂದ ತುಂಬಿ ಹೋಗಿದೆ. ಹೂಳನ್ನು ತೆಗೆಯಲೇಬೇಕು, ಮಳೆ ಬಂದಂತಹ ಸಂದರ್ಭದಲ್ಲಿ ಅಲ್ಲಿ ನೀರನ್ನು ಹಿಂಗಿಸುವಂತಹ ಕೆಲಸವನ್ನು ಮಾಡಲೇಬೇಕು. ಅಲ್ಲಿ ನೀರನ್ನು ನಿಲ್ಲಿಸಿದರೆ, ಅದು ತನ್ನಷ್ಟಕ್ಕೆ ತಾನೇ ಇಂಗುತ್ತದೆ.

**(ಮುಂದು...)**

(583) 07.06.2017 12.50 LL-RN **ಸಭಾಪತಿಯವರ ಉಪಸ್ಥಿತಿ**

**ಶ್ರೀ ಟಿ.ಬಿ. ಜಯಚಂದ್ರ:- (ಮುಂದುವರೆದಿದ್ದು...)**

ಅಂತರ್ಜಲಕ್ಕಾಗಿ 'ಕೆರೆ ಸಂಜೀವಿನಿ' ಎಂಬ ಒಂದು ಕಾರ್ಯಕ್ರಮವನ್ನು ರೂಪಿಸಿದ್ದೇವೆ. ಅದಕ್ಕಾಗಿ ನೂರು ಕೋಟಿ ರೂಪಾಯಿ ಹಣವನ್ನು ಸಹ ಮೀಸಲಿಟ್ಟಿದ್ದೇವೆ. ಇನ್ನು ಕೆಲವೇ ದಿನಗಳಲ್ಲಿ ಅದಕ್ಕೆ ಚಾಲನೆಯನ್ನು ಸಹ ನಾವು ನೀಡುತ್ತೇವೆ.

**ಸಭಾಪತಿಯವರು:-** ಧನ್ಯವಾದಗಳು. ಮುಂದಿನ ಪ್ರಶ್ನೆ ಶ್ರೀ ಹೆಚ್.ಎಂ. ರೇವಣ್ಣನವರದು. ತಮ್ಮ ಪ್ರಶ್ನೆಗೆ ಮಾನ್ಯ ಸಚಿವರು ಒಂದು ವಾರ ಕಾಲಾವಕಾಶ ಕೇಳಿದ್ದಾರೆ.

**ಶ್ರೀ ಹೆಚ್.ಎಂ. ರೇವಣ್ಣ:-** ಮಾನ್ಯ ಸಭಾಪತಿಯವರೆ...

**ಸಭಾಪತಿಯವರು:-** ಅದರಂತೆ, ಮುಂದಿನ ಬುಧವಾರ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ಮುಂದಿನ ಪ್ರಶ್ನೆ ಡಾ॥ ಜಯಮಾಲ ರಾಮಚಂದ್ರರವರದ್ದು. ತಮ್ಮ ಪ್ರಶ್ನೆಗೆ ಕಾರ್ಮಿಕ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಚಿವರು ಹತ್ತು ದಿನಗಳ ಕಾಲಾವಕಾಶ ಕೇಳಿದ್ದಾರೆ. ಹತ್ತು ದಿನಗಳು ಆಗುವುದಿಲ್ಲ. ಮುಂದಿನ ಬುಧವಾರ ಉತ್ತರಿಸಬೇಕೆಂದು ಕೇಳುವಂತಹ ಪ್ರಯತ್ನ ನಾನು ಮಾನ್ಯ ಸಚಿವರ ಜೊತೆ ಮಾಡುತ್ತೇನೆ.

**(ಗೊಂದಲ)**

ಈಗ ಪ್ರಶ್ನೋತ್ತರ ಅವಧಿ ಮುಗಿದಿದೆ. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

**ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಟಿ.ಬಿ. ಜಯಚಂದ್ರ(ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಸಣ್ಣ ನೀರಾವರಿ ಸಚಿವರು)(ಮಾನ್ಯ ಸಭಾ ನಾಯಕರ ಪರವಾಗಿ):–** ಮಾನ್ಯ ಸಭಾಪತಿಯವರೆ, ದಿನಾಂಕ:7ನೇ ಜೂನ್ 2017ರ ಸಮೂಹ–3ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 144 ಪ್ರಶ್ನೆಗಳ ಪೈಕಿ 80 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:–** ಮಂಡಿಸಲಾಯಿತು. ಧನ್ಯವಾದಗಳು. ಈಗ ಶೂನ್ಯವೇಳೆ. ಮೊದಲನೆಯದು ಶ್ರೀ ಬಸನಗೌಡ ಆರ್. ಪಾಟೀಲ್(ಯತ್ನಾಳ್)ಯವರದು.

**ಶ್ರೀ ಕಾಂತರಾಜು(ಬಿ.ಎಂ.ಎಲ್.)(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಕಳೆದ ಅಧಿವೇಶನದ ಉತ್ತರಗಳನ್ನೇ ಇದುವರೆವಿಗೂ ಕೊಟ್ಟಿರುವುದಿಲ್ಲ.

**ಸಭಾಪತಿಯವರು:–** ಆ ಉತ್ತರಗಳನ್ನು ಕೊಡುತ್ತಾರೆ. ನಾನು ಕೂಡ ಈ ಬಗ್ಗೆ ಹೇಳಿದ್ದೇನೆ. ಮಾನ್ಯ ಸದಸ್ಯರು ಬಹಳ ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದಾರೆ. ಮಾನ್ಯ ಸಭಾ ನಾಯಕರು ಮತ್ತು ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿಯೇ ಹೇಳಿದ್ದಾರೆ... ಈ ತರಹ ತಡೆಹಿಡಿಯಲಾದ ಪ್ರಶ್ನೆಗಳೆಂದರೆ... ಇವತ್ತಿನ ದಿವಸದ ಲಿಖಿತ ಮೂಲಕ ಉತ್ತರ ನೀಡುವ ಪ್ರಶ್ನೆಗಳಿಗೆ ಕಡಿಮೆ ಸಂಖ್ಯೆಯ ಉತ್ತರಗಳಿವೆ.

**(ಗೊಂದಲ)**

ಪೂರ್ಣ ಉತ್ತರಗಳನ್ನು ಕೊಟ್ಟಿರುವುದಿಲ್ಲ. ಉಳಿದ ಪ್ರಶ್ನೆಗಳಿಗೆ ಉತ್ತರಗಳನ್ನು ಕಳುಹಿಸಿಕೊಡಬೇಕು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕಾಂತರಾಜು(ಬಿ.ಎಂ.ಎಲ್.)(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಕಳೆದ ಅಧಿವೇಶನದಲ್ಲಿ ಲಿಖಿತ ಮೂಲಕ ಉತ್ತರಿಸಬೇಕಾದ ಪ್ರಶ್ನೆಗಳಿಗೇ ಇದುವರೆವಿಗೂ ಉತ್ತರ ನೀಡಿರುವುದಿಲ್ಲ.

**ಸಭಾಪತಿಯವರು:–** ಮಾನ್ಯ ಸಚಿವರು ಏನು ಉತ್ತರ ನೀಡುತ್ತಾರೆ, ಅದನ್ನು ಕೇಳೋಣ. ಕಳೆದ ಅಧಿವೇಶನದಲ್ಲಿ ಮಂಡಿಸಿದ ಉತ್ತರಗಳನ್ನು ಕೊಡಿಸುವುದಕ್ಕೆ ಹೇಳುತ್ತೇನೆ. ಈ ಅಧಿವೇಶನದ ಎಲ್ಲಾ ಪ್ರಶ್ನೆಗಳಿಗೆ ಉತ್ತರಗಳನ್ನು ಸದನ ಮುಗಿಯುವುದರೊಳಗೆ ಮಂಡಿಸುತ್ತೇವೆಂದು ಹೇಳಿದ್ದಾರೆ.

**ಶ್ರೀ ಕಾಂತರಾಜು(ಬಿ.ಎಂ.ಎಲ್.)(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಕಳೆದ ಮೂರು ಬಾರಿ ಅಧಿವೇಶನ ನಡೆದರೂ ಇದೇ ಉತ್ತರವನ್ನು ನೀಡುತ್ತಾ ಬರುತ್ತಿದ್ದಾರೆ. ತಾವುಗಳು ಈ ಬಗ್ಗೆ ಕೇಳಬಾರದೆಂದು ಹೇಳಿದರೆ ನಾನು ಕೇಳುವುದಿಲ್ಲ.

**ಸಭಾಪತಿಯವರು:–** ಆಯಿತು. ನಾನು ಉತ್ತರಗಳನ್ನು ಕೊಡುವುದಕ್ಕೆ ಹೇಳುತ್ತೇನೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಉತ್ತರಕ್ಕಾಗಿ ನಾವು ಪ್ರಶ್ನೆಗಳನ್ನು ಕೇಳಿರುತ್ತೇವೆ. ಆ ಪ್ರಶ್ನೆಗಳಿಗೆ ಉತ್ತರ ಕೊಡುವುದಕ್ಕಾಗುವುದಿಲ್ಲವೆಂದರೆ...

**ಸಭಾಪತಿಯವರು:–** ಆಯಿತು. ಈ ವಿಚಾರವನ್ನು ನಂತರ ಚರ್ಚೆ ಮಾಡೋಣ. ಈಗ ಶೂನ್ಯ ವೇಳೆ.

**ಶ್ರೀ ಕೆ.ಬಿ. ಶಾಣಪ್ಪ(ನಾಮ ನಿರ್ದೇಶನ):–** ಮಾನ್ಯ ಸಭಾಪತಿಯವರೆ, ಒಂದು ವಿಷಯವನ್ನು ನಾವು ಪ್ರಸ್ತಾಪ ಮಾಡಬೇಕೋ ಅಥವಾ ಬೇಡವೋ ಎಂಬುದನ್ನು ತಿಳಿಯಬೇಕಾಗಿದೆ.

**ಸಭಾಪತಿಯವರು:–** ಲಿಖಿತ ಮೂಲಕ ನೋಟಿಸ್ ನೀಡದೆ ವಿಷಯ ಪ್ರಸ್ತಾಪ ಮಾಡುವುದು ಹೇಗೆ ಸರಿಯಾಗುತ್ತದೆ?

**ಶ್ರೀ ಕೆ.ಬಿ. ಶಾಣಪ್ಪ:–** ಮಾನ್ಯ ಸಭಾಪತಿಯವರೆ, ಇದು ನಿಯಮದಲ್ಲಿಯೇ ಬರುವುದಿಲ್ಲ...

**ಸಭಾಪತಿಯವರು:–** ಹಾಗಾದರೆ ಏನು ಮಾಡುವುದಕ್ಕೆ ಬರುತ್ತದೆ?

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಬಿ. ಶಾಣಪ್ಪ:–** ಮಾನ್ಯ ಸಭಾಪತಿಯವರೆ, ಏಕೆಂದರೆ, ಕರ್ತವ್ಯ ನಿರತನಾಗಿದ್ದ ನಮ್ಮ ಶಾಸಕರ ಭವನದ ವಾಹನ ಚಾಲಕನು...

**ಸಭಾಪತಿಯವರು:–** ಬೇಡ, ಆ ವಿಚಾರ ಈಗ ಇಲ್ಲಿ ಮಾತನಾಡುವುದು ಬೇಡ.

**ಶ್ರೀ ಕೆ.ಬಿ. ಶಾಣಪ್ಪ:–** ಮಾನ್ಯ ಸಭಾಪತಿಯವರೆ, ಎಲ್ಲಿಯಾದರೂ ಅಪಘಾತ ಮಾಡಿದರೆ... ಅದಕ್ಕೆ ಆತನ ವೇತನದಲ್ಲಿ ಹಣ ಕಟಾಯಿಸುವುದನ್ನು ನಾನು ನನ್ನ ಜೀವನದಲ್ಲಿ ಎಲ್ಲಿಯೂ ನೋಡಿರುವುದಿಲ್ಲ.

**ಶ್ರೀ ಬಸನಗೌಡ ಆರ್. ಪಾಟೀಲ್(ಯತ್ನಾಳ್):–** ಮಾನ್ಯ ಸಭಾಪತಿಯವರೆ, ಪಾಪ ಆ ಚಾಲಕನಿಗೆ ವೇತನ ನೀಡುವುದೇ ಕೇವಲ ಐದು ಸಾವಿರ ರೂಪಾಯಿ. ಅದರಲ್ಲಿ ಈ ರೀತಿ ಹಣ ಕಟಾಯಿಸಿದರೆ ಹೇಗೆ?

**ಸಭಾಪತಿಯವರು:–** ಈ ವಿಚಾರವನ್ನು ಮುಂದೆ ಚರ್ಚೆ ಮಾಡೋಣ. ಇಲ್ಲಿ ಅಲ್ಲ. ಈ ವಿಚಾರವನ್ನು ಸದನದಲ್ಲಿ ಚರ್ಚೆ ಮಾಡುವುದಕ್ಕೆ ಬರುವುದಿಲ್ಲ.

**(ಗೊಂದಲ)**

ತಾವುಗಳು ನನ್ನ ಕಚೇರಿಗೆ ಬನ್ನಿ ಅದರ ಬಗ್ಗೆ ಮಾತನಾಡೋಣ.

**(ಗೊಂದಲ)**

**ಶ್ರೀ ಕೆ.ಬಿ. ಶಾಣಪ್ಪ:–** ಮಾನ್ಯ ಸಭಾಪತಿಯವರೆ, ಮಾನ್ಯ ಕಾರ್ಯದರ್ಶಿಯವರು ಆ ಚಾಲಕನ ವೇತನವನ್ನು ತಡೆಹಿಡಿದಿದ್ದಾರೆ. ಆದುದರಿಂದ, ದಯಮಾಡಿ...

**ಸಭಾಪತಿಯವರು:–** ಆಯಿತು. ಅದನ್ನು ನೋಡೋಣ. ಈಗ ಶೂನ್ಯವೇಳೆ. ಶ್ರೀ ಬಸನಗೌಡ ಆರ್.ಪಾಟೀಲ್‌ರವರು ತಮ್ಮ ವಿಷಯವನ್ನು ಓದಬೇಕು.

**ಶ್ರೀ ಕೆ.ಬಿ. ಶಾಣಪ್ಪ:–** ಮಾನ್ಯ ಸಭಾಪತಿಯವರೆ, ತಮ್ಮ ಬಗ್ಗೆಯೂ ಕೂಡ ನಾವು ಹೇಳಬೇಕಾಗುತ್ತದೆ.

**ಸಭಾಪತಿಯವರು:–** ಆಯಿತು. ನೋಡೋಣ. ನನ್ನ ಕಚೇರಿಗೆ ಬನ್ನಿ, ಅದರ ಬಗ್ಗೆ ಮಾತನಾಡೋಣ.

**ಶ್ರೀ ಕೆ.ಬಿ. ಶಾಣಪ್ಪ:–** ಮಾನ್ಯ ಸಭಾಪತಿಯವರೆ, ಕರ್ತವ್ಯ ನಿರತನಾಗಿದ್ದಂತಹ ಚಾಲಕನ...

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಈ ಬಗ್ಗೆ ನಾನು ಸದನದಲ್ಲಿ ಉತ್ತರ ನೀಡುವುದಕ್ಕೆ ಸಾಧ್ಯವಾಗುತ್ತದೆಯೇ? ಇಲ್ಲ. ಆಗುವುದಿಲ್ಲ. ದಯವಿಟ್ಟು ಸಹಕರಿಸಿ. ದಯಮಾಡಿ, ನನ್ನ ಕಛೇರಿಗೆ ಬನ್ನಿ.

**ಶ್ರೀ ಕೆ.ಬಿ. ಶಾಣಪ್ಪ:–** ಮಾನ್ಯ ಸಭಾಪತಿಯವರೆ, ಕೆ.ಎಸ್.ಆರ್.ಟಿ.ಸಿ. ಬಸ್ ಬಂದು ಆತನ ವಾಹನಕ್ಕೆ ಡಿಕ್ಕಿ ಹೊಡೆದರೆ ಆ ಚಾಲಕ ಹೇಗೆ ಜವಾಬ್ದಾರಿಯಾಗುತ್ತಾನೆ? We have to see that in what way he is responsible for that.

**ಶ್ರೀ ಬಸನಗೌಡ ಆರ್. ಪಾಟೀಲ್(ಯತ್ನಾಳ್):–** ಮಾನ್ಯ ಸಭಾಪತಿಯವರೆ, ತಾವುಗಳು ಈ ರೀತಿ ಸುಮ್ಮಸುಮ್ಮನೆ ಅವರಿಗೆ ತೊಂದರೆ ಕೊಡುತ್ತಿದ್ದೀರಿ.

**(ಗೊಂದಲ)**

**ಸಭಾಪತಿಯವರು:–** ಇದು ಸದನದಲ್ಲಿ ಉತ್ತರಿಸುವ ವಿಷಯವಲ್ಲ. ಆದುದರಿಂದ, ನೀವು ನನ್ನ ಕಛೇರಿಗೆ ಬನ್ನಿ.

**(ಗೊಂದಲ)**

**ಶ್ರೀ ಬಸವರಾಜ ಎಸ್. ಹೊರಟ್ಟಿ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಇದು ವಿಧಾನ ಪರಿಷತ್ತಿನ ವಿಷಯವಲ್ಲ. ಇದು ಒಬ್ಬ ನೌಕರನಿಗೆ ಸಂಬಂಧಪಟ್ಟ ವಿಷಯವಾಗಿದೆ.

**(ಗೊಂದಲ)**

**ಶ್ರೀ ಕೆ.ಬಿ. ಶಾಣಪ್ಪ:–** ಮಾನ್ಯ ಸಭಾಪತಿಯವರೆ, ಪಾಪ, ಆ ಚಾಲಕನಿಗೆ ಅನ್ಯಾಯವಾಗುತ್ತದೆ.

**ಸಭಾಪತಿಯವರು:–** ನನ್ನ ಕಛೇರಿಗೆ ಬನ್ನಿ ಎಂದು ಹೇಳಿದೆಯಲ್ಲವೇ?

**(ಗೊಂದಲ)**

**ಶ್ರೀ ಬಸನಗೌಡ ಆರ್. ಪಾಟೀಲ್(ಯತ್ನಾಳ್):–** ಮಾನ್ಯ ಸಭಾಪತಿಯವರೆ, ಬಡ ಚಾಲಕನ ಮೇಲೆ ತಮ್ಮ ಗದಾಪ್ರಹಾರ, ಇದು ಸರಿಯಲ್ಲ. ಸಭಾಪತಿಗಳಾಗಿ ತಾವು...

**(ಗೊಂದಲ)**

**ಶ್ರೀ ಬಸವರಾಜ ಎಸ್.ಹೊರಟ್ಟಿ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ... ಒಬ್ಬ ಸರ್ಕಾರಿ ನೌಕರನ ಬಗ್ಗೆ ಬರುತ್ತಿದೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಸಭಾಪತಿಯವರು:-** ತಾವುಗಳು ಬನ್ನಿ. Please come to my chamber and discuss with me. ಇನ್ನು ಏನು ಹೇಳಬೇಕು ನಾನು? ತಾವುಗಳು ನನ್ನ ಕಛೇರಿಗೆ ಬನ್ನಿ. ಮಾನ್ಯ ಸದಸ್ಯರು ಶೂನ್ಯವೇಳೆಯ ವಿಷಯವನ್ನು ಓದಿ.

**ಶ್ರೀ ಶರಣಪ್ಪ ಮಟ್ಟೂರ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರು ತಮ್ಮ ಕಛೇರಿಗೆ ಬನ್ನಿ ಆ ವಿಚಾರವನ್ನು ಚರ್ಚೆ ಮಾಡೋಣವೆಂದು ಹೇಳುತ್ತಿದ್ದಾರೆ. ಆಯಿತಲ್ಲವೇ..?

**ಶ್ರೀ ಬಸನಗೌಡ ಆರ್. ಪಾಟೀಲ್(ಯತ್ನಾಳ್):-** ಮಾನ್ಯ ಸಭಾಪತಿಯವರೆ...

**ಶ್ರೀ ಕೆ.ಬಿ. ಶಾಣಪ್ಪ:-** ಮಾನ್ಯ ಸಭಾಪತಿಯವರೆ, ನಿಂತಿದ್ದಂತಹ ವಾಹನಕ್ಕೆ ಯಾವುದೋ ವಾಹನ ಬಂದು ಡಿಕ್ಕಿ ಹೊಡೆದರೆ ಅದಕ್ಕೆ ಆ ಚಾಲಕನ ವೇತನ ತಡೆ ಹಿಡಿಯುತ್ತಾರೆಯೇ? The Secretary should see all these things. ಆತನ ವೇತನವನ್ನು ಕಡಿತ ಮಾಡುವುದು...

**ಶ್ರೀ ಶರಣಪ್ಪ ಮಟ್ಟೂರ:-** ಅದಕ್ಕಾಗಿ ಮಾನ್ಯ ಸಭಾಪತಿಯವರು ನನ್ನ ಕಛೇರಿಗೆ ಬನ್ನಿ ಅದರ ಬಗ್ಗೆ ಮಾತನಾಡೋಣವೆಂದು ಹೇಳುತ್ತಿದ್ದಾರೆ. The Hon'ble Chairman is inviting you to his chamber to discuss the same matter.

**ಶ್ರೀ ಕೆ.ಬಿ. ಶಾಣಪ್ಪ:-** ಮಾನ್ಯ ಸಭಾಪತಿಯವರೆ, he appealed, ಎರಡು ತಿಂಗಳಿನಿಂದ ಆತನ ವೇತನವನ್ನು ಕಡಿತಗೊಳಿಸಿದರೆ is it fair?

**ಸಭಾಪತಿಯವರು:-** ಆಯಿತು, ನನ್ನ ಕಚೇರಿಗೆ ಬನ್ನಿ ಎಂದು ಹೇಳಿದರೆ, ಇಲ್ಲಿ ಮಾತನಾಡುತ್ತೀರಿ?

**(ಗೊಂದಲ)**

**ಶ್ರೀ ಕೆ.ಬಿ. ಶಾಣಪ್ಪ:-** ಮಾನ್ಯ ಸಭಾಪತಿಯವರೆ, ಇಲ್ಲಿ ಮಾತನಾಡಬಾರದೆಂದರೆ, ನಾವು ಎಲ್ಲಿ ಮಾತನಾಡಬೇಕು?

**ಸಭಾಪತಿಯವರು:-** ಆ ವಿಚಾರವನ್ನು ನನ್ನ ಕಛೇರಿಯಲ್ಲಿಯೇ ಮಾತನಾಡಬೇಕು. ಯತ್ನಾಳ್‌ರವರು ತಮ್ಮ ವಿಷಯವನ್ನು ಓದಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಬಿ. ಶಾಣಪ್ಪ:-** ಮಾನ್ಯ ಸಭಾಪತಿಯವರೆ, ಆ ಚಾಲಕನ ಕುಟುಂಬದವರೆಲ್ಲಾ ಬಂದು ನನ್ನ ವೇತನವನ್ನು ಕಡಿತ ಮಾಡಿದ್ದಾರೆಂದು ಅಳುತ್ತಾ ಕುಳಿತಿದ್ದಾರೆ.

**(ಗೊಂದಲ)**

**ಶ್ರೀ ಶರಣಪ್ಪ ಮಟ್ಟೂರ:-** ಮಾನ್ಯ ಸಭಾಪತಿಯವರೆ, ಅದಕ್ಕಾಗಿಯೇ ನಾನು ಹೇಳುತ್ತಿರುವುದು, ಈ ವಿಚಾರವನ್ನು ಮಾನ್ಯ ಸಭಾಪತಿಯವರ ಕಛೇರಿಯಲ್ಲಿಯೇ ಮಾತನಾಡೋಣ.

**2. ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು**

**ಅ) ವಿಷಯ:- ವಿಜಯಪುರ ಜಿಲ್ಲೆಯಲ್ಲಿ ಅಕ್ರಮವಾಗಿ ಮರಗಳನ್ನು ಕಡಿದು ಸಾಗಿಸುತ್ತಿರುವ ಬಗ್ಗೆ**

– – –

**ಶ್ರೀ ಬಸನಗೌಡ ಆರ್. ಪಾಟೀಲ್(ಯತ್ನಾಳ್):-** ಮಾನ್ಯ ಸಭಾಪತಿಯವರೆ, ರಾಜ್ಯದಲ್ಲಿ ಅದರಲ್ಲೂ ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಯಲ್ಲಿ ಕೆಲವು ಕಡೆ ನಿರಂತರವಾಗಿ ಮರಗಳನ್ನು ಕಡಿದು ರಾತ್ರಿ ಹೊತ್ತಿನಿಂದ ಬೆಳಿಗ್ಗೆ 06-00 ಗಂಟೆವರೆಗೂ ಟ್ರಾಕ್ಟರ್ ಮತ್ತು ಲಾರಿಗಳಲ್ಲಿ ಸಾಗಿಸುತ್ತಿರುವುದನ್ನು ಸ್ವತಃ ನಾನೇ ಕಣ್ಣಾರೆ ಕಂಡಿದ್ದೇನೆ. ಇವುಗಳ ಸಾಗಾಟ ರಾತ್ರಿ ನಡೆಯುತ್ತಿರುವುದು ನೋಡಿದರೆ ಇದು ಅಕ್ರಮವೇ ಆಗಿರುತ್ತದೆ. ಈ ಕುರಿತು ಈಗಾಗಲೇ ನಾನು ಜಿಲ್ಲೆಯ ಕೆ.ಡಿ.ಪಿ. ಸಭೆಯಲ್ಲಿ ಪ್ರಸ್ತಾಪಿಸಿರುತ್ತೇನೆ. ಆದರೂ ಅಧಿಕಾರಿಗಳ ಕಣ್ಣು ತಪ್ಪಿಸಿಯೋ ಅಥವಾ ಅಧಿಕಾರಿಗಳನ್ನು ಒಪ್ಪಿಸಿದಂತೆಯೇ ಇದು ಇನ್ನು ಅವ್ಯಾಹತವಾಗಿ ನಡೆಯುತ್ತಿರುವುದನ್ನು ನೋಡಿದರೆ ಕಾಡು ನಾಶವಾಗಿ ನಾಡು ಸೃಷ್ಟಿಸಿದರೆ ಯಾವ ಪರಿಣಾಮವಾಗುತ್ತದೆ?

ನಮ್ಮ ಮುಂದಿನ ಪೀಳಿಗೆಗಾಗಿ ಅರಣ್ಯ ಸಂಪತ್ತನ್ನು ಉಳಿಸಿ ಬೆಳೆಸಬೇಕಾಗಿರುವುದು ಸರಕಾರದ ಕರ್ತವ್ಯ. ಒಂದು ಕಡೆ ಸರ್ಕಾರವು ಗಿಡ ನೆಡುವ ಕಾರ್ಯಕ್ರಮ ಹಾಕಿಕೊಳ್ಳುತ್ತದೆ. ಇನ್ನೊಂದು ಕಡೆ ಇಂತಹ ಮರಗಿಡಗಳ ಸಾಗಾಟವಾಗುತ್ತವೆ. ಒಂದು ದಿನಕ್ಕೆ, ನಮ್ಮ ಜಿಲ್ಲೆಯ ಜೇವರಗಿ, ಸಿಂಧಗಿ ಭಾಗದಿಂದ ವಿಜಯಪುರದವರೆಗೆ ಹೊರವಲಯದ ರಸ್ತೆ ಮೂಲಕ ನೂರಾರು ವಾಹನಗಳು ಮರಗಳನ್ನು ತುಂಬಿಕೊಂಡು ಹೋಗುತ್ತಿವೆ. ಒಂದು ಕಡೆ ಮರಳು ಮಾಫಿಯಾ, ಭೂ ಮಾಫಿಯಾ, ಮರದ ಮಾಫಿಯಾವೂ ನಡೆಯುತ್ತಿರುವುದನ್ನು ನೋಡಿದರೆ ಪರಿಸರ ಎಷ್ಟು ಸುರಕ್ಷಿತವಾಗಿದೆ? ಇಂದು ಅನೇಕ ಭಾಗಗಳಲ್ಲಿ ಗ್ರಾಮದ, ಪಟ್ಟಣದ, ನಗರದ, ಹೊರವಲಯ ಫಲವತ್ತಾದ ಭೂಮಿಯನ್ನು ಎನ್.ಎ. ಮಾಡಿಸಿ, ನಿವೇಶನಗಳನ್ನಾಗಿ ಮಾಡಲಾಗುತ್ತಿದೆ. ಇನ್ನೊಂದು ಕಡೆ ಇಟ್ಟಿಗೆ ಭಟ್ಟಿಗಾಗಿ ಫಲವತ್ತಾದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಣ್ಣನ್ನು ಒಯ್ಯಲಾಗುತ್ತದೆ. ಭೂ ಮಾಫಿಯಾದವರ ಕೈಗೆ ಸಿಕ್ಕ ಜಮೀನುಗಳು ಒಬ್ಬರಿಂದ ಒಬ್ಬರಿಗೆ ಮಾರಾಟವಾಗುತ್ತಾ, ಆ ಭೂಮಿಯಲ್ಲಿ ಏನು ಬೆಳೆಯಲಾಗದೇ ಬರಡಾಗಿ ಬೀಳುತ್ತದೆ. ಮಳೆ-ಬೆಳೆಯಿಲ್ಲದೇ ಆಹಾರ ಕೊರತೆಯಾಗಿ ರಾಸಾಯನಿಕ ಬಳಸಿ ಆಹಾರ ಬೆಳೆಯಲಾಗುತ್ತದೆ. ಗಿಡ-ಮರಗಳು ಪ್ರತಿ ವರ್ಷ ಕಡಿಮೆ ಆಗುತ್ತಿರುವುದರಿಂದ ಸರಿಯಾಗಿ ಮಳೆ-ಬೆಳೆಗಳು ಆಗುತ್ತಿಲ್ಲ. ಇಂದು ನಾವು ಯಾವ ದಿಕ್ಕಿನಲ್ಲಿ ಸಾಗುತ್ತಿರುವೆವು? ಗಿಡ-ಮರಗಳನ್ನು ಕಡಿಯುವುದರ ಪರಿಣಾಮದಿಂದ ಮಳೆ ಕಡಿಮೆಯಾಗುತ್ತದೆ. ಪರಿಸರ ವಾತಾವರಣದ ಮೇಲೆ ಪರಿಣಾಮ ಉಂಟಾಗುತ್ತದೆ. ತಾಪಮಾನ ಹೆಚ್ಚಾಗಿ ಪ್ರಕೃತಿ ವಿಕೋಪಗಳು ಹೆಚ್ಚುತ್ತವೆ. ಇವುಗಳಿಗೆ ಕಡಿವಾಣ ಹಾಕಲು ಸರಕಾರ ಯಾರಿಗೆ, ಯಾವ ರೀತಿ ನಿರ್ದೇಶನ ನೀಡಿದೆ? ಅವ್ಯಾಹತವಾಗಿ ಮರಗಳನ್ನು ಕಡಿದು ಕಳುಹಿಸುತ್ತಿರುವುದಕ್ಕೆ ಯಾವ ಅಧಿಕಾರಿಯನ್ನು ಹೊಣೆಗಾರರನ್ನಾಗಿಸಲಾಗುತ್ತದೆ? ಅರಣ್ಯ ಇಲಾಖೆಯೋ? ಜಿಲ್ಲಾಧಿಕಾರಿಗಳೋ? ಪೊಲೀಸ್ ಇಲಾಖೆಯೋ? ಇದನ್ನು ನಾವು ಸರ್ಕಾರದ ಗಮನಕ್ಕೆ ತರಬಯಸುತ್ತಾ, ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕೆಂದು ಮತ್ತು ಮುಂದಿನ ನಮ್ಮ ಪೀಳಿಗೆಯ ಅಳಿವು-ಉಳಿವಿಗಾಗಿ ಒತ್ತಾಯಿಸುತ್ತೇವೆ. ಇನ್ನು ಕೆಲವು ಕಡೆ ರೈತರ ಹೊಲಕ್ಕೆ ಪಹಣಿ ನಕಲು ಪ್ರತಿಯನ್ನು ಹಚ್ಚಿ ಪರವಾನಗಿ ಎಂಬ ಹೆಸರಿನಲ್ಲಿ ಮರಗಳನ್ನು ಕಡಿದು ಸಾಗಿಸಲಾಗುತ್ತದೆ. ಸರ್ಕಾರದ ಗಮನಕ್ಕೆ ತರಬಯಸುವುದೇನೆಂದರೆ, ಕೆಲವು ರಾಜ್ಯಗಳಲ್ಲಿ ಜಾಲಿ ಗಿಡಗಳು ವಾತಾವರಣ ತೇವಾಂಶವನ್ನು ಹೀರುತ್ತವೆ. ಇದರಿಂದ ಮಳೆ ಕಡಿಮೆಯಾಗುತ್ತಿದೆ. ಇವತ್ತಿನ ದಿವಸ ಅದು ವೈಜ್ಞಾನಿಕವಾಗಿ ಚರ್ಚೆಯಾಗುತ್ತಿದೆ. ಇಂತಹ ಮರಗಳನ್ನು ಕಡಿಯಬಹುದು. ಆದರೆ, ಆಲದಮರ, ಬೇವಿನಮರ, ಮಾವಿನಮರ ಮತ್ತು ಹುಣಸೇ ಮರಗಳನ್ನು ಕಡಿದು ಕಾಡನ್ನು ನಾಶ ಮಾಡಲಾಗುತ್ತದೆ. ಕಾರಣ ಶೀಘ್ರವೇ ಅರಣ್ಯ ರಕ್ಷಕ ಸಿಬ್ಬಂದಿಯಿಂದಲೂ ಇವುಗಳ ರಕ್ಷಣೆಗೆ ಸರ್ಕಾರ ಮುಂದಾಗಬೇಕು ಮತ್ತು ಸೂಕ್ತ ಬಂದೋಬಸ್ತ್, ದಂಡ ವಸೂಲಿ, ವಾಹನಗಳ ಜಪ್ತಿ, ಕ್ರಿಮಿನಲ್ ಕೇಸ್ ದಾಖಲೆಯಂತಹ ಕ್ರಮಕ್ಕೆ ಸರ್ಕಾರ ಮುಂದಾಗಬೇಕೆಂದು ಸರ್ಕಾರವನ್ನು ಶೂನ್ಯವೇಳೆಯಲ್ಲಿ ನಾನು ಒತ್ತಾಯಿಸುತ್ತೇನೆ.

**ಸಭಾಪತಿಯವರು:-** ಮಾನ್ಯ ಸಚಿವರು ಉತ್ತರ ಸಿದ್ದವಿದೆಯೆಂದರೆ ಹೇಳಬಹುದು. ಇಲ್ಲವಾದರೆ ಅದಕ್ಕಾಗಿ ಸಮಯ ತೆಗೆದುಕೊಳ್ಳಬಹುದು.

**ಶ್ರೀ ಬಿ. ರಮಾನಾಥ ರೈ(ಅರಣ್ಯ ಸಚಿವರು):-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಎಲ್ಲಾ ವಿಚಾರಗಳನ್ನು ಸೇರಿಸಿಕೊಂಡು ಸಾಮಾನ್ಯವಾಗಿ ಒಂದು ಪ್ರಶ್ನೆ ಕೇಳಿದ್ದಾರೆ. ಬಿಜಾಪುರ ಜಿಲ್ಲೆಯಲ್ಲಿ ರಾತ್ರಿ ಹೊತ್ತಿನಿಂದ ಬೆಳಿಗ್ಗೆಯವರೆಗೂ ಮರಗಳನ್ನು ಕಡಿದು ಸಾಗಾಟ ಮಾಡುತ್ತಿದ್ದಾರೆ. ಇದು ಅಕ್ರಮ ಸಾಗಾಟ ಆಗಿರಬಹುದೆಂದು ತಮ್ಮ ಅಭಿಪ್ರಾಯವನ್ನು ಹೇಳಿದ್ದಾರೆ. ಈಗ ತಾಪಮಾನ ಜಾಸ್ತಿಯಾಗತಕ್ಕಂಥದ್ದು,

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಾಕೃತಿಕ ಅಸಮತೋಲನವಾಗತಕ್ಕಂಥದ್ದು ಆಗುತ್ತಿರುವುದರಿಂದ ಬಹುಶಃ ಕಾಡಿನ ರಕ್ಷಣೆ ಮಾಡತಕ್ಕಂಥದ್ದು ಬಹಳ ಅಗತ್ಯವಿದೆಯೆಂಬುದು ಸತ್ಯವಾದ ಮಾತು. ಬಿಜಾಪುರ ಜಿಲ್ಲೆಯಲ್ಲಿ ಮಳೆ ಕಡಿಮೆಯಿದೆ. ಅಲ್ಲಿ ಕೆಲವು ಕಾನೂನಿನ ರಿಯಾಯಿತಿ ಕೂಡ ಇದೆ. ಈ 40 ಜಾತಿ ಮರಗಳು ಅದಕ್ಕೆ Tree Preservation Bill ಎಂದು ಇದೆ. ಅದು ಬಿಜಾಪುರ ಜಿಲ್ಲೆಯಲ್ಲಿ ಅವಕಾಶವಿಲ್ಲ. ಮರ ಕಡಿಯುವುದಕ್ಕೆ ನಿಯಂತ್ರಣ ಬೇರೆ ಕಡೆ ಇದ್ದಹಾಗೆ ಅಲ್ಲಿ ಇಲ್ಲ. ಏಕೆಂದರೆ, ಮರಗಳನ್ನು ಅವಶ್ಯಕತೆಗೆ ತಕ್ಕಂತೆ ಉಪಯೋಗ ಮಾಡಿಕೊಳ್ಳಬೇಕು ಎನ್ನುವಂತಹ ದೃಷ್ಟಿಯಲ್ಲಿ ಮಾಡಲಾಗಿದೆ. ಆದರೂ ಕೂಡ ಮಾನ್ಯ ಸದಸ್ಯರು ಈ ರೀತಿಯಾಗುತ್ತಿದೆಯೆಂದು ಈಗ ಶೂನ್ಯವೇಳೆಯಲ್ಲಿ ಈ ಪ್ರಶ್ನೆಯನ್ನು ಎತ್ತಿದ್ದಾರೆ. ನಾನು ಕೂಲಂಕಷವಾಗಿ ಇದರ ಪರಿಶೀಲನೆ ಮಾಡಿ ಸಂಬಂಧಪಟ್ಟಂತಹ ಹಿರಿಯ ಅಧಿಕಾರಿಗಳಿಗೆ ಸೂಚನೆ ನೀಡಿ, ಇದನ್ನು ನಿಯಂತ್ರಣ ಮಾಡುವುದಕ್ಕೆ ಏನು ಕ್ರಮ ಕೈಗೊಳ್ಳಬೇಕು ಅದನ್ನು ಕೈಗೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ ಮತ್ತು ಮುಖ್ಯವಾಗಿ ನನ್ನ ದೃಷ್ಟಿಯಲ್ಲಿ ಬಿಜಾಪುರದಲ್ಲಿ ಶೇಕಡ 5 ರಷ್ಟು ಮತ್ತು 6 ರಷ್ಟು ಅರಣ್ಯವಿರಬಹುದು. ಅದರಲ್ಲಿಯೂ ಕೂಡ ಒತ್ತುವರಿಯಿದೆ. ನಾನು ಒಮ್ಮೆ ಯಾದಗಿರಿ ಜಿಲ್ಲೆಗೆ ಭೇಟಿ ನೀಡಿದ್ದೆನು. ಅಲ್ಲಿ ಶೇಕಡ 3 ರಷ್ಟು ಅರಣ್ಯ ಪ್ರದೇಶವಿದೆ. ಅದರಲ್ಲಿ ಒತ್ತುವರಿಯಲ್ಲಿ ಕೃಷಿ ಮಾಡಿದ್ದೇವೆ ನಮಗೆ ಅವಕಾಶ ಮಾಡಿಕೊಡಬೇಕೆಂದು ಅರ್ಜಿಗಳನ್ನು ಸಹ ನೀಡಿದ್ದಾರೆ. ಇರುವುದೇ ಶೇಕಡ 3 ರಷ್ಟು ಅರಣ್ಯ ಪ್ರದೇಶ. ಉಳಿದ ಭಾಗ ಸಾರ್ವಜನಿಕರ ಉಪಯೋಗಕ್ಕಾಗಿ ಇದೆ. ಅದರಲ್ಲಿ ಒತ್ತುವರಿ ಮಾಡಿಕೊಂಡು ಕೃಷಿ ಮಾಡಿದ್ದೇವೆ ಅದಕ್ಕೆ ರಿಯಾಯಿತಿ ಕೊಡಬೇಕೆಂದು ಕೇಳಿದರೆ ಹೇಗೆ? ಬಿಜಾಪುರ ಜಿಲ್ಲೆಯಲ್ಲಿಯೂ ಸಹ ಇದೇ ಪರಿಸ್ಥಿತಿಯಿದೆ. ಕೆಲವು ಬಾರಿ ಕೆಲವು ಜನ ಒತ್ತುವರಿ ಕೃಷಿ ಮಾಡಿದ್ದಾರೆ. ಬಹುಶಃ ಇರುವುದು ಶೇಕಡ 4 ರಷ್ಟು ಅಥವಾ 5 ರಷ್ಟು ಅರಣ್ಯ ಪ್ರದೇಶ. ಉಳಿದ ಶೇಕಡ 80 ರಷ್ಟು ಅಥವಾ 85 ರಷ್ಟು ಪ್ರದೇಶ ಸಾರ್ವಜನಿಕರ ಉಪಯೋಗಕ್ಕಾಗಿ ಇದೆ. ಈ ಒತ್ತುವರಿಯನ್ನು ನಿಯಂತ್ರಣ ಅಥವಾ ತೆರವು ಮಾಡತಕ್ಕಂತಹ ಕೆಲಸ ಮಾಡಿದರೆ ಖಂಡಿತವಾಗಿ ನಾವು ಅರಣ್ಯವನ್ನು ಉಳಿಸತಕ್ಕಂತಹ ಒಂದು ದೊಡ್ಡ ಕೆಲಸ ಮಾಡಿದ್ದಂತಾಗುತ್ತದೆ ಎನ್ನತಕ್ಕಂತಹ ಮಾತನ್ನು ಹೇಳಿದ್ದಾರೆ. ನಾನು ಈ ಮೊದಲೇ ಹೇಳಿದೆ, ಮೊದಲು ಮರ ಕಡಿಯಲಿಕ್ಕೆ ಯಾವುದೇ ನಿರ್ಬಂಧವಿರಲಿಲ್ಲ. ಅರಣ್ಯ ಸಂರಕ್ಷಣೆ ಕಾಯಿದೆ, ಶ್ರೀಮತಿ ಇಂದಿರಾಗಾಂಧಿಯವರು ತಂದಿರತಕ್ಕಂತಹ ಕಾಯಿದೆಯಾಗಿದ್ದು, ಅದಕ್ಕಿಂತಲೂ ಪೂರ್ವದಲ್ಲಿ ಲಕ್ಷಾಂತರ ಹೆಕ್ಟೇರ್ ಜಮೀನು ಅರಣ್ಯೇತರ ಉದ್ದೇಶಕ್ಕಾಗಿ ಹೋಗುತ್ತಿತ್ತು.

(ಮುಂದುವರೆದಿದೆ...)



"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ರಮಾನಾಥ್ ರೈ(ಮುಂದು):-** ಅರಣ್ಯ ಸಂರಕ್ಷಣೆ ಕಾಯಿದೆ ಬಂದ ಮೇಲೆ ನಮ್ಮ ರಾಜ್ಯದಲ್ಲಿ ಮೂವತ್ತು ಸಾವಿರ ಚಿಲ್ಲರೆ ಎಕರೆ ಜಾಗ ಸಾರ್ವಜನಿಕ ಉದ್ದೇಶಕ್ಕಾಗಿ ಹೋಗುತ್ತಿದೆ. ಕಾಯಿದೆ ಬರುವುದಕ್ಕಿಂತ ಪೂರ್ವದಲ್ಲಿ ಲಕ್ಷಾಂತರ ಹೆಕ್ಟೇರ್ ಜಮೀನು ಸಾರ್ವಜನಿಕ ಉದ್ದೇಶಕ್ಕಾಗಿ ಹೋಗುತ್ತಿತ್ತು. ವನ್ಯಜೀವಿ ಸಂರಕ್ಷಣೆ ಕಾಯಿದೆ ಬಂದ ಮೇಲೆ ವನ್ಯಜೀವಿಗಳ ರಕ್ಷಣೆಯು ಆಗುತ್ತಿದೆ. ದೇಶದಲ್ಲಿಯೇ ಅತಿ ಹೆಚ್ಚು ವನ್ಯಜೀವಿಗಳು ಇರುವುದು ನಮ್ಮ ರಾಜ್ಯದಲ್ಲಿ. ಆನೆಗಳು, ಹುಲಿಗಳು, ಸಿಂಗಳಿಕ ಪ್ರಾಣಿ, ಚಿರತೆ ಇವುಗಳು ನಮ್ಮ ರಾಜ್ಯದಲ್ಲಿಯೇ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಇವೆ. ಕಾಯಿದೆ ಎಂದ ಮೇಲೆ ಅದು ಕಡ್ಡಾಯವಾಗಿ ಆಗಬೇಕಾಗುತ್ತದೆ. ಒಳ್ಳೆಯ ಕಾಳಜಿಯನ್ನು ಇಟ್ಟುಕೊಂಡು ಮಾನ್ಯ ಸದಸ್ಯರು ಈ ಪ್ರಶ್ನೆಯನ್ನು ಕೇಳಿದ್ದಾರೆ. ಅವರ ಕಾಳಜಿಗೆ ನನ್ನ ಗೌರವವನ್ನು ಸೂಚಿಸುತ್ತೇನೆ. ಖಂಡಿತವಾಗಿ ಇಂತಹ ಕೆಲಸಗಳನ್ನು ನಾವು-ನೀವು ಎಲ್ಲರೂ ಸೇರಿ ಮಾಡಬೇಕಾಗಿದೆ. ದಾರಿಯಲ್ಲಿ ಟ್ರಕ್‌ನಲ್ಲಿ ಮರವನ್ನು ಸಾಗಿಸುತ್ತಿರುವುದನ್ನು ನೋಡಿ ಇದು ಅಕ್ರಮ ಇರಬಹುದು ಎಂದು ತಾವು ಕೆಡಿಪಿ ಮೀಟಿಂಗ್‌ನಲ್ಲಿಯು ಪ್ರಸ್ತಾಪ ಮಾಡಿದ್ದೀರಿ. ಇದು ನಿಮ್ಮ ಕಾಳಜಿಯನ್ನು ಸೂಚಿಸುತ್ತದೆ. ಅದಕ್ಕಾಗಿ ಧನ್ಯವಾದಗಳು. ನನಗೆ ಸಾಧ್ಯವಾದಮಟ್ಟಿಗೆ ಇದನ್ನು ರಕ್ಷಣೆ ಮಾಡಲು ಪ್ರಮಾಣಿಕ ಪ್ರಯತ್ನವನ್ನು ಮಾಡುತ್ತೇನೆ.

**ಆ) ವಿಷಯ: ರಾಜ್ಯದ ಹಲವಾರು ನಗರ ಪ್ರದೇಶಗಳಲ್ಲಿ ಬಡ್ಡಿ ಆಮಿಷಕ್ಕೆ ಒಳಗಾಗಿ ಹಣ ಕಳೆದುಕೊಂಡ ಪ್ರಕರಣಗಳ ಕುರಿತು.**

------

**ಶ್ರೀ ಶ್ರೀನಿವಾಸ.ವಿ.ಮಾನೆ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಹುಬ್ಬಳ್ಳಿ-ಧಾರವಾಡ ಮಹಾನಗರ ಒಳಗೊಂಡಂತೆ ರಾಜ್ಯದ ಇನ್ನೂ ಹಲವಾರು ನಗರ ಪ್ರದೇಶದಲ್ಲಿ ಬಡ್ಡಿ ಆಮಿಷಕ್ಕೆ ಒಳಗಾಗಿ, ಹಣ ಕಳೆದುಕೊಂಡ ಜನರ ಪ್ರಕರಣಗಳನ್ನು ಸಿ.ಐ.ಡಿ ಗೆ ವಹಿಸುವುದಕ್ಕೆ ಸಂಬಂಧಿಸಿದಂತೆ, ಇತ್ತೀಚೆಗೆ ಧಾರವಾಡ ಜಿಲ್ಲೆಯ ಕಲಘಟಗಿ ತಾಲ್ಲೂಕಿನ ಹರ್ಷ ಎಂಟರ್‌ಟೇನ್‌ಮೆಂಟ್ ಕಂಪನಿ ಹುಟ್ಟುಹಾಕಿ ಭಾರಿ ಪ್ರಮಾಣದ ಬಡ್ಡಿ ನೀಡುವ ಆಮಿಷವೊಡ್ಡಿ ಸಾವಿರಾರು ಕೋಟಿ ರೂ.ಗಳನ್ನು ಸಂಗ್ರಹಿಸಿ ನಾಪತ್ತೆಯಾಗಿದ್ದ ಹರ್ಷ ಅಲಿಯಾಸ್ ಸತ್ಯಬೋಧ ಮತ್ತು ಸಹೋದರರನ್ನು ಸಿ.ಐ.ಡಿ ಅಧಿಕಾರಿಗಳು ಅತ್ಯಂತ ಯಶಸ್ವಿಯಾಗಿ ಬಂಧಿಸಿದ್ದು, ಈ ಭಾಗದ ಜನರ ಪ್ರಶಂಸೆಗೆ ಕಾರಣವಾಗಿದೆ, ಅದೇ ರೀತಿಯಾಗಿ ಹುಬ್ಬಳ್ಳಿ-ಧಾರವಾಡ ಒಳಗೊಂಡಂತೆ ಈ ಭಾಗದ ಇನ್ನೂ ಅನೇಕ ನಗರ ಪ್ರದೇಶಗಳಲ್ಲಿಯೂ ಕೂಡ ಇಂತಹ ಅನೇಕ ಪ್ರಕರಣಗಳು ಬೆಳಕಿಗೆ ಬಂದಿರುತ್ತವೆ. ಆದರೆ ಇಲ್ಲಿಯವರೆಗೂ ಈ ಪ್ರಕರಣಗಳ ಆರೋಪಿಗಳನ್ನು ಬಂಧಿಸಲು ಅಸಾಧ್ಯವಾಗಿರುತ್ತದೆ. ಆದ್ದರಿಂದ ಹುಬ್ಬಳ್ಳಿ-ಧಾರವಾಡ ಒಳಗೊಂಡಂತೆ ಈ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಭಾಗದ ಇನ್ನೂ ಅನೇಕ ನಗರ ಪ್ರದೇಶಗಳಲ್ಲಿ ವಂಚನೆಗೆ ಒಳಗಾಗಿರುವ ಜನರಿಗೆ ನ್ಯಾಯ ಒದಗಿಸಿ ಕೊಡುವ ನಿಟ್ಟಿನಲ್ಲಿ ಇಲ್ಲಿಯ ಪ್ರಕರಣಗಳನ್ನು ಕೂಡ ಸಿ.ಐ.ಡಿ ಗೆ ವಹಿಸಬೇಕೆಂದು ಕೋರುತ್ತೇನೆ.

**ಶ್ರೀ ಟಿ.ಬಿ.ಜಯಚಂದ್ರ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):-** ಮಾನ್ಯ ಸಭಾಪತಿಗಳೆ, ಮಾನ್ಯ ಗೃಹ ಸಚಿವರ ಗಮನಕ್ಕೆ ತಂದು ಉತ್ತರವನ್ನು ಒದಗಿಸಲಾಗುತ್ತದೆ.

**ಇ) ವಿಷಯ: ಆರ್ಯವೈಶ್ಯ ಸಮಾಜ ಜಾತಿ ಪ್ರಮಾಣ ಪತ್ರ ಮತ್ತು ಆದಾಯ ಪ್ರಮಾಣ ಪತ್ರ ಪಡೆಯಲು ತೊಂದರೆಯಾಗುತ್ತಿರುವ ಬಗ್ಗೆ.**

---------

**ಶ್ರೀ ಟಿ.ಎ.ಶರವಣ(ವಿಧಾನಸಭೆಯಿಂದ ಆಯ್ಕೆಯಾದವರು):-** ಮಾನ್ಯ ಸಭಾಪತಿಗಳೆ, ಕರ್ನಾಟಕ ರಾಜ್ಯದಲ್ಲಿ ಈಗ ಪದವಿ ಪೂರ್ವ, ಪದವಿ, ಇಂಜಿನೀಯರಿಂಗ್, ವೈದ್ಯಕೀಯ ಮತ್ತು ಇತರೆ ವೃತಿಪರ ವಿದ್ಯಾಭ್ಯಾಸಕ್ಕೆ ನೊಂದಣಿ ಪ್ರಕ್ರಿಯೆ ಚಾಲನೆಯಲ್ಲಿದ್ದು, ಈ ಪ್ರಕ್ರಿಯೆಗೆ ಜಾತಿ ಪ್ರಮಾಣ ಹಾಗೂ ಆದಾಯ ಪ್ರಮಾಣ ಪತ್ರಗಳು ಅತಿ ಅವಶ್ಯಕ. ಅಲ್ಪಸಂಖ್ಯಾತರಲ್ಲಿ ಅಲ್ಪ ಸಂಖ್ಯೆಯ ಜನರಿರುವ ಆರ್ಯವೈಶ್ಯ ಸಮುದಾಯದಲ್ಲಿ ಕೂಡ ಬಹಳಷ್ಟು ಕಡು ಬಡವರ ವರ್ಗವಿದ್ದು ಆ ವರ್ಗದ ಜನರ ಮಕ್ಕಳಿಗೆ ಅನುಕೂಲವಾಗಲು ಜಾತಿ ಪ್ರಮಾಣ ಪತ್ರ ಮತ್ತು ಆದಾಯ ಪ್ರಮಾಣ ಪತ್ರ ಪಡೆಯುವುದು ದುಸ್ತರವಾಗಿದೆ. ಬಹಳಷ್ಟು ಕಡೆ ಈ ಪ್ರಮಾಣ ಪತ್ರಗಳು ಲಭ್ಯವಿಲ್ಲವೆಂದು ಕೂಡ ಮಾಹಿತಿ ನೀಡಿದ್ದಾರೆ. ಒಂದು ಕುಟುಂಬದಲ್ಲಿ ಒಬ್ಬ ಮಗು ವಿದ್ಯಾಭ್ಯಾಸ ಮಾಡಿದರೆ ಅದು ಇಡೀ ಕುಟುಂಬಕ್ಕೆ ಆಸರೆಯಾಗುತ್ತದೆ. ಪ್ರಮಾಣ ಪತ್ರಗಳ ಅಲಭ್ಯದಿಂದ ನಮ್ಮ ಸಮುದಾಯದ ಮಕ್ಕಳು ಅವಕಾಶ ವಂಚಿತರಾಗಿರುವ ಬಹಳಷ್ಟು ಪ್ರಕರಣಗಳು ನನ್ನ ಗಮನಕ್ಕೆ ಬಂದಿದೆ. ಆದ್ದರಿಂದ ಸರ್ಕಾರ ಕೂಡಲೇ ಸಂಬಂಧಪಟ್ಟ ಎಲ್ಲಾ ಇಲಾಖೆಗಳಿಗೆ ಸೂಚನೆಯನ್ನು ನೀಡುವುದರ ಮೂಲಕ ಆರ್ಯವೈಶ್ಯ ಸಮುದಾಯದ ಅವಶ್ಯಕ ವಿದ್ಯಾರ್ಥಿಗಳಿಗೆ ಕೂಡಲೆ ಜಾತಿ ಪ್ರಮಾಣ ಪತ್ರ ಹಾಗೂ ಆದಾಯ ಪ್ರಮಾಣ ಪತ್ರ ನೀಡುವ ವ್ಯವಸ್ಥೆ ಮಾಡಬೇಕೆಂದು ಸರ್ಕಾರಕ್ಕೆ ಒತ್ತಾಯಿಸುತ್ತೇನೆ.

**ಶ್ರೀ ಟಿ.ಬಿ.ಜಯಚಂದ್ರ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):-** ಮಾನ್ಯ ಸಭಾಪತಿಗಳೆ, ಆದಾಯ ಮತ್ತು ಜಾತಿ ಪ್ರಮಾಣ ಪತ್ರವನ್ನು ಒದಗಿಸುವ ವಿಚಾರದ ಬಗ್ಗೆ ಮಾನ್ಯ ಸಮಾಜ ಕಲ್ಯಾಣ ಸಚಿವರ ಗಮನಕ್ಕೆ ತಂದು ಉತ್ತರವನು ಒದಗಿಸಲಾಗುತ್ತದೆ.

**ಈ) ವಿಷಯ: ಹಾಪ್‌ಕಾಮ್ಸ್‌ನಲ್ಲಿ ಮಾವಿನ ಹಣ್ಣುಗಳನ್ನು ಹಣ್ಣು ಮಾಡಲು ಕ್ಯಾಲ್ಸಿಯಂ ಕಾರ್ಬೈಡ್ ಬಳಸುತ್ತಿರುವ ಬಗ್ಗೆ.**

-----

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ: 10ನೇ ಮೇ 2017ರ ವಿಜಯವಾಣಿ ದಿನ ಪತ್ರಿಕೆಯಲ್ಲಿ, ಕರ್ನಾಟಕ ರಾಜ್ಯದ ಸರ್ಕಾರಿ ಸ್ವಾಮ್ಯಕ್ಕೆ ಒಳಪಡುವ ಸಹಕಾರಿ ಸಂಸ್ಥೆಯಾದ ಹಾಪ್‌ಕಾಮ್ಸ್‌ನಲ್ಲಿ ಮಾವಿನ ಕಾಯಿಗಳನ್ನು ಹಣ್ಣು ಮಾಡಲು ಕ್ಯಾಲ್ಸಿಯಂ ಕಾರ್ಬೈಡ್‌ನ್ನು ಬಳಸುತ್ತಿರುವ ಬಗ್ಗೆ ರಿಯಾಲಿಟಿ ಚೆಕ್‌ಮಾಡಿ ಪ್ರಯೋಗಾಲಯದಲ್ಲಿ ಪರೀಕ್ಷಿಸಿ ಮಾವಿನ ಹಣ್ಣಿನಲ್ಲಿ ಆಸಿಟಲಿನ್ ಇರುವುದನ್ನು ದೃಡಪಡಿಸಲಾಗಿದೆ. ಹೀಗೆ ಆಸಿಟಲಿನ್‌ನಿಂದ ಹಣ್ಣಾಗಿಸುವ ಮಾವು ಆರೋಗ್ಯಕ್ಕೆ ಮಾರಕ ಎಂದು ಪ್ರಯೋಗಾಲಯದಲ್ಲಿ ಹೇಳಲಾಗಿದೆ ಎಂದು ವರದಿ ಮಾಡಲಾಗಿದೆ. ಆದರೆ ಇದರ ಕುರಿತಾಗಿ ನಾನು ಕೇಳಲಾದ ಪ್ರಶ್ನೆಗೆ ಮಾನ್ಯ ಸಚಿವರು ಸಂಸ್ಥೆಯಲ್ಲಿ ಮಾವಿನ ಹಣ್ಣುಗಳನ್ನು ರಾಸಾಯನಿಕ ಮುಕ್ತವಾಗಿ ಮಾಗಿಸಿ ಉತ್ತಮ ಗುಣಮಟ್ಟದ ಮಾವಿನ ಹಣ್ಣುಗಳನ್ನು ಮಾರಾಟ ಮಾಡಲಾಗುತ್ತಿದೆ ಎಂದು ಉತ್ತರಿಸಿರುತ್ತಾರೆ. ಆದರೆ ಇದು ಸಚಿವರು ಸದನಕ್ಕೆ ತಪ್ಪು ಉತ್ತರವನ್ನು ನೀಡಿರುತ್ತಾರೆ ಎಂದು ನಾನು ಭಾವಿಸುತ್ತೇನೆ ಮತ್ತು ಹಾಪ್‌ಕಾಮ್ಸ್‌ನಲ್ಲಿ ಮಾವಿನ ಹಣ್ಣುಗಳನ್ನು ಮಾಗಿಸಲು ರಾಸಾಯನಿಕಗಳನ್ನು ಬಳಸುತ್ತಿದ್ದು ಇದು ಗ್ರಾಹಕರಿಗೆ ಮಾಡುತ್ತಿರುವ ಮೋಸ ಎಂದು ಭಾವಿಸುತ್ತೇನೆ. ಆದುದರಿಂದ ಉತ್ತಮ ಗುಣಮಟ್ಟದ ಹಣ್ಣುಗಳನ್ನು ನೀಡಲು ಸೂಕ್ತ ಕ್ರಮಕೈಗೊಳ್ಳುವಂತೆ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಟಿ.ಬಿ.ಜಯಚಂದ್ರ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):-** ಮಾನ್ಯ ಸಭಾಪತಿಗಳೆ, ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಸಚಿವರ ಗಮನಕ್ಕೆ ತಂದು ಉತ್ತರವನ್ನು ಒದಗಿಸಲಾಗುತ್ತದೆ.

**ಉ) ವಿಷಯ: ಸರ್ಕಾರದ ಯೋಜನೆ "ಸಕಾಲ" ದುರ್ಬಲಗೊಳ್ಳುತ್ತಿರುವ ಬಗ್ಗೆ.**

-----------

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಇಂದಿನ ಪ್ರಜಾವಾಣಿ ದಿನಪತ್ರಿಕೆಯ ಮುಖಪುಟದಲ್ಲಿ ಸರ್ಕಾರದ ಮಹತ್ವಾಂಕಾಕ್ಷಿಯ ಸಕಾಲ ಯೋಜನೆ ಸಂಪೂರ್ಣ ದುರ್ಬಲಗೊಂಡ ಬಗ್ಗೆ ಸಕಾಲ ಯೋಜನೆಯ ಆಡಳಿತಾಧಿಕಾರಿ ಸರಕಾರದ ಮುಖ್ಯ ಕಾರ್ಯನಿರ್ವಣಾಧಿಕಾರಿಗೆ ವರದಿ ಮಾಡಿ ಸಂಕಟ ತೋಡಿಕೊಂಡ ಬಗ್ಗೆ ಸಮಗ್ರ ಮಾಹಿತಿ ಪ್ರಕಟವಾಗಿದೆ. ಸಾರ್ವಜನಿಕರಿಗೆ ಕಾಲಮಿತಿಯೊಳಗೆ ಸೇವೆ ಖಾತರಿ ನೀಡಿ ಕೇಂದ್ರ ಸರಕಾರದ ಪ್ರಶಸ್ತಿಗೆ ಕಾರಣವಾದ ಸಕಾಲ ಯೋಜನೆ ಬಗ್ಗೆ ಸರಕಾರ ದಿವ್ಯ ನಿರ್ಲಕ್ಷವಹಿಸಿದ್ದು ಈ ವರದಿಯಿಂದ ಸ್ಪಷ್ಟವಾಗಿದೆ. ವರದಿಯ ವಿವರದಲ್ಲಿ ಸರಕಾರದ ಹಿರಿಯ ಅಧಿಕಾರಿ ಶಾಲಿನಿ ರಜನೀಶ ಸಕಾಲ ಯೋಜನೆಯ ನಿರ್ದೇಶಕರಾಗಿದ್ದಾಗ ' ಸಕಾಲ' ಜನರಿಗೆ ಹತ್ತಿರವಾಗಿತ್ತು ನಂತರ ಬಂದಿರುವ ಅಧಿಕಾರಿಗಳಿಂದ ಇಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಕಾಲ ಯೋಜನೆ ಹಳ್ಳ ಹಿಡಿದಿದೆ ಎಂದು ವಿವರಿಸಲಾಗಿದೆ. ಯೋಜನೆಯ ಆಡಳಿತಾಧಿಕಾರಿಯ ವಾಹನಗಳು, ಕಂಪ್ಯೂಟರ್ ಹಾಗೂ ಸಿಬ್ಬಂದಿಗಳನ್ನು ಕೆಲಸದಿಂದ ವಿಮುಕ್ತಿಗೊಳಿಸಿ ಕಳೆದ ಬಾರಿಯ ಖರ್ಚು ವೆಚ್ಚಗಳ ಹಣ ದುರುಪಯೋಗವಾಗಿದೆ. "ಸಕಾಲ" ಯೋಜನೆಯಿಂದ ಕಳೆದ ವರ್ಷ ನ್ಯಾಯ ಕೋರಿ ಬಂದ 35 ಸಾವಿರ ಅರ್ಜಿಗಳು ಬಾಕಿ ಇದ್ದರೂ ಬಡವರಿಗೆ ನ್ಯಾಯ ದೊರಕಿಲ್ಲ ಎಂದು ಸಕಾಲ ಯೋಜನೆಯ ಆಡಳಿತಾಧಿಕಾರಿ ಮಥಾಯಿಸ್ ಸರಕಾರಕ್ಕೆ ನೀಡಿದ ವರದಿಯಲ್ಲಿ ತಿಳಿಸಿದ್ದಾರೆ. ರಾಜ್ಯ ಸರ್ಕಾರದ ಸಕಾಲ ಯೋಜನೆ ರಾಷ್ಟ್ರಮಟ್ಟದಲ್ಲಿ ಪ್ರಶಸ್ತಿಗೆ ಪಾತ್ರವಾಗಿದೆ ಎಂದು ಹಲವು ಬಾರಿ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದಾರೆ. ವಾಸ್ತವಿಕವಾಗಿ ಸಕಾಲ ಮಾಸಿಕ ಪ್ರಗತಿಯ ವರದಿಯು ನಿಂತು ಹೋಗಿದೆ ಎಂಬುದು ಆತಂಕಕಾರಿ. ಸಕಾಲ ಯೋಜನೆ ಸರಕಾರದ ಸಚಿವಾಲಯ ಮತ್ತು ನಿರ್ದೇಶನಾಲಯದವರೆಗೆ ವಿಸ್ತರಿಸಬೇಕೆಂದು ಇದೇ ಸದನದಲ್ಲಿ ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಒತ್ತಾಯಿಸುತ್ತಾರೆ. ಆದರೆ ಇಲ್ಲಿಯವರೆಗೂ ಸರ್ಕಾರದಿಂದ ಖಚಿತ ನಿರ್ಧಾರಗಳಿಲ್ಲ ಅಲ್ಲದೆ ಈಗಿರುವ ಸಕಾಲ ಯೋಜನೆಯು ಹಳ್ಳ ಹಿಡಿದಿರುವುದರಿಂದ ಸದರಿ ಪ್ರಕರಣವನ್ನು ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರ ಮೇಲೆ ಕ್ರಮ ಕೈಗೊಂಡು ಸಕಾಲ ಯೋಜನೆಯ ಅನುಷ್ಠಾನಕ್ಕೆ ಒತ್ತು ನೀಡಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳನ್ನು ಈ ಮೂಲಕ ಆಗ್ರಹಿಸುತ್ತೇನೆ.

**ಶ್ರೀ ಟಿ.ಬಿ.ಜಯಚಂದ್ರ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):-** ಮಾನ್ಯ ಸಭಾಪತಿಗಳೆ, ಇದು ಮಾನ್ಯ ಮುಖ್ಯಮಂತ್ರಿಗಳ ಖಾತೆಗೆ ಬರುತ್ತದೆ. ಅವರ ಜೊತೆ ಚರ್ಚೆ ಮಾಡಿ, ಪರಿಶೀಲನೆ ಮಾಡಿ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರವನ್ನು ಕೊಡಿಸುತ್ತೇವೆ. ನಂತರ ತಾವು ಚರ್ಚೆ ಮಾಡಬಹುದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-**ಮಾನ್ಯ ಸಭಾಪತಿಗಳೆ, ರಾಜ್ಯಪಾಲರ ಭಾಷಣದಲ್ಲಿ ಕೇಂದ್ರ ಸರ್ಕಾರದ ಸಕಾಲ ಯೋಜನೆಯನ್ನು ...

**ಶ್ರೀ ಐವನ್ ಡಿ'ಸೋಜಾ:-** ಶೂನ್ಯವೇಳೆಯಲ್ಲಿ ಚರ್ಚೆ ಮಾಡುವುದು ಸರಿಯೇ.

**ಶ್ರೀ ಟಿ.ಬಿ.ಜಯಚಂದ್ರ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):-** ಮಾನ್ಯ ಸಭಾಪತಿಗಳೆ, ಉತ್ತರವನ್ನು ಒದಗಿಸಲಾಗುತ್ತದೆ ಎಂದು ನಾವು ಹೇಳಿದ್ದೇವೆ. ಈಗ ಚರ್ಚೆ ಬೇಡ. ಉತ್ತರ ಬಂದಮೇಲೆ ಏನಾದರೂ ಮಾತನಾಡುವುದು ಇದ್ದರೆ ಮಾತನಾಡಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

---

**ಸಭಾಪತಿಯವರು:–** ಧನ್ಯವಾಗಳು, ಈಗ ಗಮನ ಸೆಳೆಯುವ ಸೂಚನೆಗಳನ್ನು ತೆಗೆದುಕೊಳ್ಳಲಾಗುತ್ತದೆ. ಒಂದು ವಿಚಾರವನ್ನು ಸದನದ ಗಮನಕ್ಕೆ ತರಲು ಬಯಸುತ್ತೇನೆ. ಸದನ ನಡೆಯುವುದೇ 10 ದಿನಗಳ ಕಾಲ. ಅದರಲ್ಲಿ ಒಂದು ದಿನ ಮೃತರ ಗೌರವಾರ್ಥ ಸದನವನ್ನು ಮುಂದೂಡಲಾಯಿತು. ಉಳಿದಿರುವುದು 9 ದಿನಗಳ ಮಾತ್ರ. ನಿನ್ನೆ ದಿವಸ ರಾತ್ರಿ 8 ಗಂಟೆಯವರೆಗೆ ಸದನವನ್ನು ನಡೆಸಲಾಯಿತು. ಹೆಚ್ಚಿನ ವಿಷಯಗಳು ಚರ್ಚೆಯಾಗಲಿ ಎಂದು ಇವತ್ತು ಸ್ವಲ್ಪ ಜಾಸ್ತಿ ವಿಷಯವನ್ನು ಹಾಕಿಕೊಳ್ಳಲಾಗಿದೆ. ಪ್ರತಿಯೊಬ್ಬರಿಗೂ ಅವರು ಮಾತನಾಡುವಾಗ ನನಗೆ ಸಮಯ ಸಾಕಾಗಲಿಲ್ಲ ಎನ್ನುವ ಆತಂಕವಿದೆ. ಆದರೆ ದಯಮಾಡಿ ಸ್ವಲ್ಪ ಸಮಯದಲ್ಲಿಯೇ ಬಹಳಷ್ಟು ವಿಷಯಗಳನ್ನು ಪ್ರಸ್ತಾಪ ಮಾಡಲು ಎಲ್ಲರೂ ಶಕ್ತರಾಗಿದ್ದೀರಿ. ಆ ರೀತಿ ಮಾಡಿದರೆ within the time limit, ಇವತ್ತು ಸಾಯಂಕಾಲದೊಳಗೆ ಅಜೆಂಡಾದಲ್ಲಿ ಹಾಕಿಕೊಂಡಿರುವ ಎಲ್ಲ ವಿಷಯಗಳನ್ನು ಮುಗಿಸಲು ಸಾಧ್ಯವಾಗುತ್ತದೆ. ಆದರೆ ನಿಮ್ಮೆಲ್ಲರ ಸಹಕಾರವನ್ನು ನಾನು ಕೇಳುತ್ತೇನೆ. ವಿಷಯವನ್ನು ಪ್ರಸ್ತಾಪ ಮಾಡುವವರಲ್ಲಿ ಮತ್ತು ಸರ್ಕಾರದ ಸಚಿವರಲ್ಲಿಯೂ ನಾನು ವಿನಂತಿ ಮಾಡಿಕೊಳ್ಳುವುದು ಏನೆಂದರೆ ಉತ್ತರ short and to the point ಇದ್ದರೆ ಸಭೆಯಲ್ಲಿ ಚರ್ಚೆ ಮಾಡಲು ಅನುಕೂಲವಾಗುತ್ತದೆ. ದಯಮಾಡಿ ಈ ವಿಚಾರವನ್ನು ಗಮನದಲ್ಲಿ ಇಟ್ಟುಕೊಂಡು ಮಾತನಾಡಿ.

**ಶ್ರೀ ಕೆ.ಬಿ. ಶಾಣಪ್ಪ:–** ಬಜೆಟ್ ಮೇಲೆ ಚರ್ಚೆ ಮಾಡಲು ಈ ಸದನವನ್ನು ಕರೆಯಲಾಗಿದೆ, ಅಲ್ಲವೆ.

**ಸಭಾಪತಿಯವರು:–** ಬಜೆಟ್ ಮೇಲೆ ಚರ್ಚೆಗೆ ಈ ಸದನವನ್ನು ಕರೆಯಲಾಗಿಲ್ಲ. ಅದರ ಬಗ್ಗೆ ಇವತ್ತಿನ ಬಿಎಸಿ ಯಲ್ಲಿ ಚರ್ಚೆ ಮಾಡೋಣ.

**Sri K.B. SHANAPPA:-** We are prepared for the discussion, department wise.

ಮುಂದು)

(585) 07.06.2017 / YL-VK /1.10

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೆ.ಬಿ.ಶಾಣಪ್ಪ (ನಾಮನಿರ್ದೇಶನ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಈ ಚಿಣಣಬುಣಣಜಜ ನೋಡಿದರೆ, ಈ ಬಜೆಟ್ ಮೇಲೆ ಯಾವ ಚರ್ಚೆ ನಡೆಯುವ ಹಾಗೆ ಕಾಣಿಸುತ್ತಿಲ್ಲ.

**ಸಭಾಪತಿಯವರು:–** ನೀವು ಕೇಳುತ್ತಿರುವುದನ್ನು ಸರ್ಕಾರ ಹೇಳಬೇಕು. ನಾನೇನು ಮಾಡಲು ಆಗುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಬಿ.ಶಾಣಪ್ಪ:–** ಮಾನ್ಯ ಸಭಾಪತಿಯವರೆ, ತಾವೇ ಹೇಳಿರುವುದು.

**ಸಭಾಪತಿಯವರು:–** ನಾನು ಹೇಳುತ್ತಿಲ್ಲ. ಸಚಿವರು ಹೇಳುತ್ತಿರುವುದು.

**ಶ್ರೀ ಕೆ.ಬಿ.ಶಾಣಪ್ಪ:–** ಮಾನ್ಯ ಸಭಾಪತಿಯವರೆ, ಈ ಬಜೆಟ್ ಮೇಲೆ ಚರ್ಚೆಯಾಗುವುದು ಸಚಿವರಿಗೆ ಬೇಡವೇ?

**ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ಎಲ್ಲಾ ವಿಚಾರಗಳನ್ನು ಚರ್ಚೆ ಮಾಡೋಣ. ಅದಕ್ಕೆ ನಮ್ಮ ಅಭ್ಯಂತರವೇನಿಲ್ಲ. ನಾವು ವಿಧೇಯಕವನ್ನು ಪಾಸ್ ಮಾಡಬೇಕಾಗಿತ್ತು. ಪಾಸ್ ಮಾಡಿ ಕೊಟ್ಟಿದ್ದೇವೆ. ಅದೇ ರೀತಿ ಬಜೆಟ್ ಮೇಲೆ ಚರ್ಚೆಯಾಗಬೇಕಲ್ಲವೇ? ಈ ಅಧಿವೇಶನದಲ್ಲಿ ಮುಖ್ಯವಾಗಿ ನಡೆಯಬೇಕಾದ ವಿಚಾರವೇ ಬಜೆಟ್ ಬಗ್ಗೆ. ಆದರೆ, ನಿನ್ನೆ ದಿವಸ ನೋಡಿದರೆ ಬೇರೆ ಬೇರೆ ವಿಷಯಗಳು ಇತ್ತು. ಇವತ್ತು ಬೇರೆ ಬೇರೆ ವಿಷಯಗಳು ಬಂದಿದೆ. ಹೀಗಾಗಿ ಬಜೆಟ್ ಮೇಲೆ ಚರ್ಚೆ ಮಾಡುವುದಕ್ಕೆ ಈ ಸದನದಲ್ಲಿ ಅವಕಾಶವೇ ಇಲ್ಲವಾಗಿದೆ. ಅದಕೋಸ್ಕರ ನಿಮ್ಮ ಮೂಲಕ ಒತ್ತಾಯ ಮಾಡುತ್ತಿದ್ದೇನೆ. ಇಲ್ಲವೆಂದರೆ, ಪ್ರತಿಯೊಂದು ದಿನವೂ ನಾವು ಒಂದು ಂಜರಿಠಡಿಟಟಜಟಣ ಒಠಣುಠಟ ತಂದು, ಒಂದೇ ವಿಷಯವನ್ನು ಸೀಮಿತ ಮಾಡುವುದಕ್ಕಿಂತಲೂ, ಬಜೆಟ್ ಮೇಲೆ ಚರ್ಚೆಯಾಗುವುದಕ್ಕೆ ತಾವು ದಯವಿಟ್ಟು ಅವಕಾಶ ಮಾಡಿಕೊಡಬೇಕು. ಇದು ಸರ್ಕಾರದ ಕರ್ತವ್ಯ. ಇದಕ್ಕೆ ನಿಮ್ಮ ಉತ್ತರವೇನೆಂಬುದನ್ನು ಹೇಳಿ.

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಇಲಾಖೆಗಳ ಬೇಡಿಕೆ ಮೇಲೆ ನಾವು ಚರ್ಚೆ ಮಾಡಬೇಕಾಗುತ್ತದೆ. ಇಲಾಖೆಗಳಲ್ಲಿ ಏನೇನು ಬೇಡಿಕೆ ಇದೆ ಎಂಬುದರ ಬಗ್ಗೆ ನಾವು ಚರ್ಚೆ ಮಾಡಬೇಕಲ್ಲವೇ?

**ಸಭಾಪತಿಯವರು:–** ಕಾರ್ಯಕಲಾಪಗಳ ಸಲಹಾ ಸಮಿತಿಯಲ್ಲಿ ಚರ್ಚೆ ಮಾಡುವುದು ಒಳ್ಳೆಯದೆಂದು ನನಗನ್ನಿಸುತ್ತದೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಇದು ಕಾರ್ಯಕಲಾಪಗಳ ಸಲಹಾ ಸಮಿತಿಯ ಪ್ರಶ್ನೆಯಲ್ಲ. ಈ ವಿಷಯವು ಕಾರ್ಯಕಲಾಪಗಳ ಸಲಹಾ ಸಮಿತಿಗೆ ಸಂಬಂಧವೇ ಪಡುವುದಿಲ್ಲ.

**ಸಭಾಪತಿಯವರು:–** ಸದಸ್ಯರು ಕೇಳುತ್ತಿರುವ ಬಗ್ಗೆ ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಏನಾದರೂ ಇದ್ದರೆ ಮಾತನಾಡಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಟಿ.ಬಿ.ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ ಹಾಗೂ ಸಣ್ಣ ನೀರಾವರಿ ಇಲಾಖೆ):-** ಮಾನ್ಯ ಸಭಾಪತಿಯವರೆ, ನಾವು 2.00 ಗಂಟೆಗೆ ಹೇಗೋ ಬೇಟಿಯಾಗುತ್ತಿದ್ದೇವೆ. ಹಾಗಾಗಿ ಕಾರ್ಯಕಲಾಪಗಳ ಸಲಹಾ ಸಮಿತಿಯಲ್ಲಿ ಕುಳಿತು ಚರ್ಚೆ ಮಾಡೋಣ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಅದು ಮಾನ್ಯ ಸಚಿವರ ಕೆಲಸ.

**ಸಭಾಪತಿಯವರು:-** ಕಾರ್ಯಕಲಾಪಗಳ ಸಲಹಾ ಸಮಿತಿಯಲ್ಲಿ ಮಾತನಾಡಿ ನಿಮ್ಮ ತೀರ್ಮಾನವೇನೆಂಬುದನ್ನು ಹೇಳಿದರೆ, ನಾನು ಆಯ್ಕೆ ನಡೆಸುತ್ತೇನೆ.

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೆ, it is the Government which has to decide about the departmental demands which have to be discussed. ನಾನು ಸಹ 30 ವರ್ಷದಿಂದ ನೋಡಿದ್ದೇನೆ. ಈ ಅಧಿವೇಶನದಲ್ಲಿ ಏಕೋ ಬಜೆಟ್ ಬಗ್ಗೆ ಚರ್ಚೆಯೇ ನಡೆಯುತ್ತಿಲ್ಲವಲ್ಲ?

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೆ, ಕಾರ್ಯಕಲಾಪಗಳ ಸಲಹಾ ಸಮಿತಿ ಇರುವುದೇ ಬಜೆಟ್ ಮೇಲೆ ಚರ್ಚೆ ಮಾಡುವುದಕ್ಕೋಸ್ಕರವಲ್ಲವೇ?

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಈ ವಿಷಯವು ಸದರಿ ಸಮಿತಿಗೆ ಸಂಬಂಧವೇ ಪಡುವುದಿಲ್ಲ. ನಾನು ಏಕೆ ಈ ವಿಚಾರವನ್ನು ಹೇಳುತ್ತಿದ್ದೇನೆಂದರೆ, ಕಾರ್ಯಕಲಾಪಗಳ ಸಲಹಾ ಸಮಿತಿಯಲ್ಲಿ ಯಾವ ವಿಷಯವನ್ನು ಚರ್ಚೆ ಮಾಡಬೇಕೋ, ಆ ವಿಷಯವನ್ನು ಚರ್ಚೆ ಮಾಡೋಣ. ಆದರೆ, ಇದು ನಾವು voting ಮಾಡಿ ಪಾಸ್ ಮಾಡಿಕೊಟ್ಟಿದ್ದೇವೆ. ಇದು ಸರ್ಕಾರದ ಕರ್ತವ್ಯ. ಕಾರ್ಯಕಲಾಪಗಳ ಸಲಹಾ ಸಮಿತಿಗೆ ಸಂಬಂಧಪಡುವುದಿಲ್ಲ. ಇಲ್ಲವೆಂದರೆ, ನಾವೆಲ್ಲರೂ ಪ್ರತಿದಿನವೂ Adjournment Motion ನ್ನು ಒಂದೇ ವಿಷಯದ ಬಗ್ಗೆ ತರಬೇಕಾಗುತ್ತದೆ. ಒಂದೇ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಎಲ್ಲರೂ ಮೇಜು ಕುಟ್ಟಬೇಕಾಗುತ್ತದೆ. ಈ ರೀತಿಯಾದರೆ, ಉಳಿದ ಇಲಾಖೆಗಳ ಗತಿಯೇನು? ಅದಕ್ಕಾಗಿ ನಾನು ಹೇಳುತ್ತಿರುವುದು. ಇದು ಸರ್ಕಾರದ ಕರ್ತವ್ಯ, ಕಾರ್ಯಕಲಾಪಗಳ ಸಲಹಾ ಸಮಿತಿಯ ಕರ್ತವ್ಯವಲ್ಲ. ಅದಕ್ಕಾಗಿ ಈ ವಿಷಯದ ಬಗ್ಗೆ ಮಾತನಾಡುವುದಕ್ಕೆ ಸಭಾಪತಿಯವರು ಮಾನ್ಯ ಸಚಿವರಿಗೆ ಅವಕಾಶ ಮಾಡಿಕೊಡಬೇಕು.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೆ, ನಾನು ಇದರ ಬಗ್ಗೆ ಚರ್ಚೆ ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

3. **ಗಮನಸೆಳೆಯುವ ಸೂಚನೆಗಳು**

**ವಿಷಯಃ–** ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ 10 ವರ್ಷಕ್ಕೂ ಮೇಲ್ಪಟ್ಟು ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಆಯುಷ್ ವೈದ್ಯರನ್ನು ಖಾಲಿ ಇರುವ ಹುದ್ದೆಗಳಿಗೆ ಸಕ್ರಮಗೊಳಿಸುವ ಕುರಿತು.

****

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)ಃ–** ಮಾನ್ಯ ಸಭಾಪತಿಯವರೆ, ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ, ಅದರಲ್ಲಿರುವಂತಹ ಮಾಹಿತಿಯನ್ನು ಗಮನಿಸಿದ್ದೇನೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಬಹಳ ಹಿರಿಯರು. ಒಂದಿಷ್ಟು ಈ ಸಂತ್ರಸ್ಥರ ನೋವಿಗೆ ಕಾನೂನಿನಲ್ಲಿ ಅವಕಾಶ ಸಿಗಬೇಕು ಮತ್ತು ಬದ್ಧತೆ ಬರಬೇಕೆನ್ನುವುದಕೋಸ್ಕರ ಈ ವಿಷಯವನ್ನು ಗಮನ ಸೆಳೆಯುವ ಸೂಚನೆಯಲ್ಲಿ ತಂದಿದ್ದೇನೆ.

(ಈ ಹಂತದಲ್ಲಿ ಉಪ ಸಭಾಪತಿಯವರು ಪೀಠವನ್ನು ಅಲಂಕರಿಸಿದ್ದರು)

ಆಯುಷ್ ವೈದ್ಯಾಧಿಕಾರಿಗಳಾದ 67 ಜನರು ಹೇಳುವ ಮಾತನ್ನು ತಾವು ಗಮನಿಸಬೇಕಾಗುತ್ತದೆ; **"**ಕಳೆದ 8–9 ವರ್ಷದ ಕೆಳಗೆ ಸುಮಾರು 67ಕ್ಕೂ ಹೆಚ್ಚು ಮಂದಿ ಆಯುಷ್ ವೈದ್ಯಾಧಿಕಾರಿಗಳಾಗಿ ನಾವು ಸರ್ಕಾರದಲ್ಲಿ ಸೇವೆ ಸಲ್ಲಿಸುತ್ತಿದ್ದೇವೆ. ನಮ್ಮನ್ನು ರೋಸ್ಟರ್ ಮತ್ತು ಅರ್ಹತಾ ಪದ್ಧತಿ ಆಧಾರದ ಮೇಲೆ ಸರ್ಕಾರಿ ಆಸ್ಪತ್ರೆಗಳಲ್ಲಿ ಸೇವೆಗೆ ನಿಯುಕ್ತಿಗೊಳಿಸಲಾಗಿದೆ. ಇದೇ ರೀತಿಯಲ್ಲಿ ಎಂ.ಬಿ.ಬಿ.ಎಸ್. ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯರನ್ನು ಕೇವಲ 3 ವರ್ಷಗಳಲ್ಲಿ ಖಾಯಂಗೊಳಿಸಿರುವಂತಹ ಉದಾಹರಣೆಗಳು ನಮ್ಮಲ್ಲಿದೆ. ಅದೇ ರೀತಿ ನಾವು 8–9 ವರ್ಷದಿಂದ ಸೇವೆ ಸಲ್ಲಿಸುತ್ತಿದ್ದೇವೆ. ಆದರೆ, ನಮ್ಮನ್ನು ವಿನಾಕಾರಣ ಸಂದರ್ಶನವಾಗಬೇಕು, ನಿಮ್ಮನ್ನು ಕರೆದಾಗ ಖಾಯಂಗೊಳಿಸುತ್ತೇವೆ ಎನ್ನುವುದರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬದಲು, 8-9 ವರ್ಷದಿಂದ ಸೇವೆ ಸಲ್ಲಿಸುತ್ತಿರುವಂತಹ ನಮ್ಮನ್ನು ನಿಯುಕ್ತಿಗೊಳಿಸುವುದಕ್ಕೆ ಅಥವಾ ಖಾಯಂಗೊಳಿಸುವುದಕ್ಕೆ ಯಾವ ಕಾನೂನಿನ ಅಡೆತಡೆಗಳು ಇಲ್ಲ. ಸರ್ಕಾರ ಇದನ್ನು ಗಮನಿಸಬೇಕು" ಎನ್ನುವಂತಹ ವಿನಂತಿಯನ್ನು ಕಾಲಕಾಲಕ್ಕೆ ಆಯುಷ್ ವೈದ್ಯರು ಮಾಡಿಕೊಂಡಿದ್ದಾರೆ. ವಿಶೇಷ ನೇರ ನೇಮಕಾತಿ ನಿಯಮದಡಿ ಅವಕಾಶ ಕಲ್ಪಿಸಿದ್ದರೆ, 10 ವರ್ಷಕ್ಕೂ ಮೇಲ್ಪಟ್ಟು ಸೇವೆ ಸಲ್ಲಿಸುತ್ತಿರುವಂತಹ ನಮಗೆ ಅವಕಾಶವಿದೆ. ಇದರಿಂದ ವಂಚಿತರಾಗುವಂತೆ ಮಾಡಬಾರದೆಂಬ ಕಳಕಳಿ ಆಯುಷ್ ವೈದ್ಯರದ್ದಾಗಿದೆ. ಆದರೆ, ನಿಮ್ಮಲ್ಲಿ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ.....

**ಉಪ ಸಭಾಪತಿಯವರು:-** ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೆ, ಮೊದಲು ಗಮನ ಸೆಳೆಯಿರಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೆ, ಈಗಾಗಲೇ ಗಮನವನ್ನು ಸೆಳೆಯಲಾಗಿದೆ. ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆ ಉತ್ತರದ ಆಧಾರದ ಮೇಲೆ ಸ್ವಲ್ಪ ವಿಚಾರವನ್ನು ಹೇಳುವುದಕ್ಕೆ ಬಯಸುತ್ತೇನೆ. 20-25 ವರ್ಷಗಳ ಹಿಂದೆ ನಾವು ಶಿಕ್ಷಣವನ್ನು ಪಡೆದಿದ್ದೇವೆ. ವಿದ್ಯಾರ್ಥಿಗಳು ನಾವು ಇರುವಂತಹ ಪರಿಸ್ಥಿತಿಯಲ್ಲಿ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ನಮಗೆ ಸ್ಪರ್ಧಿಸುವುದು ಬಹಳ ಕಷ್ಟವಾಗುತ್ತದೆ ಎನ್ನುವ ವಿಚಾರವನ್ನು ಮಾನ್ಯ ಸಚಿವರ ಗಮನಕ್ಕೂ ತಂದಿದ್ದಾರೆ. ನಾನು ಕೂಡ ಸದನದ ಮೂಲಕ ತಮಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ದಯವಿಟ್ಟು ವಿಶೇಷ ನೇರ ನೇಮಕಾತಿಯಲ್ಲಿ ವೈದ್ಯಾಧಿಕಾರಿಗಳನ್ನು ಸಕ್ರಮಗೊಳಿಸಬೇಕು ಎನ್ನುವುದು ನನ್ನ ವಿನಂತಿ.

**ಶ್ರೀ ಕೆ.ಆರ್.ರಮೇಶ್ ಕುಮಾರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೆ, ...

**ಉಪ ಸಭಾಪತಿಯವರು:-** ಮಾನ್ಯ ಸಚಿವರೆ, ಒಂದು ನಿಮಿಷ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನರವರು ಮಾತನಾಡುತ್ತಾರೆ.

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಆರೋಗ್ಯ ಸಚಿವರು ಕೋಟ ಶ್ರೀನಿವಾಸ ಪೂಜಾರಿಯವರು ನಿಯಮ 72 ರಡಿಯಲ್ಲಿ ತಂದಿರತಕ್ಕಂಥ ಆಯುಷ್ ವೈದ್ಯಾಧಿಕಾರಿಯವರ ಬಗ್ಗೆ ಸವಿಸ್ತಾರವಾಗಿರುವಂತಹ ಉತ್ತರವನ್ನು ಕೊಟ್ಟಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿರತಕ್ಕಂಥ ಬಹಳಷ್ಟು ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆಯನ್ನು ನೀಗಿಸಿ, ಅಲ್ಲಿರತಕ್ಕಂಥ ಗ್ರಾಮೀಣ ಜನರ ಆರೋಗ್ಯದ ಜವಾಬ್ದಾರಿಯನ್ನು ಆಯುಷ್ ವೈದ್ಯಾಧಿಕಾರಿಗಳು ಹಲವಾರು ವರ್ಷಗಳಿಂದ ತೆಗೆದುಕೊಂಡಿರುತ್ತಾರೆ. ಅವರ ಒಂದು ನೆರವಿಗೆ ಸರ್ಕಾರ ಇವತ್ತು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬರಬೇಕೆನ್ನುವುದು ನಮ್ಮೆಲ್ಲರ ಒತ್ತಾಯ. ಅದಕ್ಕಾಗಿ ದಯವಿಟ್ಟು ನಿಯಮಾವಳಿಗಳನ್ನು ಮೀರಿ ಮಾಡಬೇಕೆಂದು ನಾವು ಹೇಳುವುದಿಲ್ಲ. ಆದರೆ, ಬಹಳಷ್ಟು ವರ್ಷಗಳಿಂದ ಮಾನವೀಯ ಆಧಾರದ ಮೇಲೆ ಸೇವೆ ಸಲ್ಲಿಸಿರತಕ್ಕಂಥ ಈ ಆಯುಷ್ ವೈದ್ಯರ ರಕ್ಷಣೆಗೆ ಸರ್ಕಾರ ಮುಂದಾಗಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರನ್ನು ವಿನಂತಿಸುತ್ತೇನೆ.

**ಶ್ರೀ ಕೆ.ಆರ್.ರಮೇಶ್ ಕುಮಾರ್:-** ಮಾನ್ಯ ಸಭಾಪತಿಯವರೆ, ಪರೀಕ್ಷಾ ವಿಧಾನ ಮೊದಲು ಇರುವುದಕ್ಕೂ, 8-9 ವರ್ಷಗಳ ಕೆಳಗೆ ಇರುವುದಕ್ಕೂ, ಈಗ ಇರುವುದಕ್ಕೂ ವ್ಯತ್ಯಾಸವಿದೆ. ಆಯುಷ್ ವೈದ್ಯರು 8-9 ವರ್ಷಗಳು ಮೇಲ್ಪಟ್ಟು ಕೆಲಸ ಮಾಡಿದ್ದಾರೆ. ಹಾಗಾಗಿ ಮಾರ್ಕ್ಸ್ ತೆಗೆದುಕೊಳ್ಳುವುದು ಬಹಳ ಸುಲಭ. ಆದರೆ, ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ನಮಗೆ ಸ್ಪರ್ಧಿಸಿ ಎಂದರೆ ಹೇಗೆ ಎಂದು ಹೇಳುತ್ತಾರೆ. ನಾವು ಇದೆಲ್ಲವನ್ನು ಗಮನದಲ್ಲಿಟ್ಟುಕೊಂಡು ಅವರ ಸೇವಾ ಅವಧಿಯನ್ನು ಲೆಕ್ಕ ಹಾಕಿಕೊಂಡು ವಯೋಮಿತಿ ಸಡಿಲಿಕೆ ಕೊಟ್ಟಿದ್ದೇವೆ. ಅದರ ಜೊತೆಗೆ ಒಂದು ವರ್ಷದ ಸೇವೆಗೆ 2 ಅಂಕವೆಂದು ಪರಿಗಣಿಸಿ, 20 ಅಂಕದವರೆಗೆ ಗ್ರೇಸ್ ಮಾರ್ಕ್ಸ್ ಕೊಡುತ್ತಿದ್ದೇವೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಮಂಜೂರುಗೊಂಡು ಖಾಲಿ ಇರುವ ಎಂ.ಬಿ.ಬಿ.ಎಸ್., ವೈದ್ಯರ ಹುದ್ದೆಯಲ್ಲಿ ಇವರು ಕೆಲಸ ಮಾಡುತ್ತಿರುವವರಾಗಿರುತ್ತಾರೆ. ಹಾಗಾಗಿ ಈ 67 ಜನರಿಗೂ ಉದ್ಯೋಗ ಸಿಗುತ್ತದೆ. ಯಾವುದೇ ಸಮಸ್ಯೆಯಾಗುವುದಿಲ್ಲ. ವಿಶೇಷ ನೇಮಕಾತಿ ಆದೇಶವನ್ನು ಹೊರಡಿಸಿದ್ದೇವೆ, process commence ಆಗಿದೆ. ಯಾರಿಗೂ ಆತಂಕ ಬೇಡ. ಆಯುಷ್ ವೈದ್ಯರು ಕಷ್ಟಕಾಲದಲ್ಲಿ ಬಂದು ನಮ್ಮ ಜೊತೆ ನಿಂತು ಕೆಲಸ ಮಾಡಿದ್ದಾರೆ. ಆಯುಷ್ ವೈದ್ಯರನ್ನು ಕಳೆದುಕೊಳ್ಳುವ ಪ್ರಶ್ನೆ ಇಲ್ಲ. ಇವರಿಗೆ ಆತಂಕ ಜಾಸ್ತಿ. ಮನಸ್ಸು ಬಿಚ್ಚಿ ಮಾತನಾಡುತ್ತಾರೆ. ಈ ರೀತಿಯ ಒಂದು ಗುಂಪು ಸಿಕ್ಕಿದರೆ ಸಾಕು. ಅರೆಕಾಲಿಕ ಉಪನ್ಯಾಸಕರದ್ದೇ ಒಂದು ಸಂಘಟಣೆ. ಆ ಗುಂಪಿಗೆ ಒಬ್ಬರು ನಾಯಕರು. ಮತ್ತೆ ಅವರ ಜೊತೆಗೆ ವ್ಯಾಪಾರ ಮಾಡುವವರು. ಇವರೆಲ್ಲರನ್ನು ಮುರಿದು ಬಿಟ್ಟಿದ್ದೇನೆ. ಅವರು ನನ್ನ ಹತ್ತಿರ ಬಂದಾಗ, ಅವರಿಗೆ ಬೈದು ಕಳುಹಿಸಿದ್ದೇನೆ. ನೇರವಾಗಿ ನಾವು ಆಸಕ್ತಿ ವಹಿಸಿ ಮಾಡುತ್ತೇವೆ. ಯಾರೊಬ್ಬರಿಗೂ ತೊಂದರೆಯಾಗದಂತೆ we will see that they are all with us.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರ ಕಳಕಳಿ ನಮಗೆ ನಿಜಕ್ಕೂ ಮೆಚ್ಚುಗೆಯಾಗಿದೆ. ಅದರಲ್ಲಿ ಯಾವ ಅನುಮಾನವಿಲ್ಲ. ಈ 67 ಜನ ಯಾರಿದ್ದಾರೆ. ಈ 67 ಜನಕ್ಕೂ ಕೂಡ ಒಂದು ರೀತಿಯಲ್ಲಿ ಮಾನ್ಯ ಸಚಿವರು ನೀಡಿರುವ ಉತ್ತರದ ಪ್ರಕಾರ ಆಯುಷ್ ವೈದ್ಯರಿಗೆ ಅವಕಾಶ ಸಿಗುತ್ತದೆಂದು ಸಂದೇಶ ಹೋಗಿದೆ ಎಂಬುದಾಗಿದೆ. ಹಾಗೆಯೇ ಇನ್ನೊಂದು ವಿಚಾರವನ್ನು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಚಿವರು ಹೇಳಿದ್ದಾರೆ. ಅದೇನೆಂದರೆ, ಬೇರೆ ಬೇರೆ ಇಲಾಖೆಗಳಲ್ಲಿಯೂ ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಆಯುಷ್ ವೈದ್ಯರಿದ್ದಾರೆಂದು ಹೇಳಿದ್ದಾರೆ. ಗುತ್ತಿಗೆ ಆಧಾರದ ಮೇಲೆ ಬೇರೆ ಬೇರೆ ಇಲಾಖೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವವರೂ ಕೂಡ 10-15 ವರ್ಷ ಸೇವೆ ಸಲ್ಲಿಸಿರುವವರಾಗಿರುತ್ತಾರೆ. ಅವರಿಗೂ ಅವಕಾಶವಿದ್ದರೆ ಏಕೆ ಮಾಡಬಾರದು? ಯಾರಾದರೂ ಮಧ್ಯವರ್ತಿಗಳಿದ್ದರೆ ಅವರಿಗೆ ಬೇಕಾದರೆ ಕಡಿವಾಣ ಹಾಕಿ ಮೂಲೆಗೆ ತಳ್ಳಬೇಕಾದರೆ ತಳ್ಳಿ. ಅದರಲ್ಲಿ ಯಾವ ಅನುಮಾನವಿಲ್ಲ. ಆದರೆ, ಇಲ್ಲಿ ಇರತಕ್ಕಂಥ ಪ್ರಶ್ನೆಯೇನೆಂದರೆ ಮಾನ್ಯ ಸಚಿವರ ಕೈಯಲ್ಲಿ ಅವಕಾಶವಿದ್ದರೆ, 67 ಜನರನ್ನು ಖಾಯಂ ಮಾಡಿ. ಉಳಿದ ಇಲಾಖೆಯವರನ್ನು ಬೇಕಾದರೆ ನೀವು ಕರೆಯಿರಿ. ಇದರಲ್ಲಿ ಏನು ತಪ್ಪಿದೇ?

**ಶ್ರೀ ಕೆ.ಆರ್.ರಮೇಶ್ ಕುಮಾರ್:-** ಮಾನ್ಯ ಸಭಾಪತಿಯವರೆ, ನಮ್ಮಲ್ಲಿ ಈ ರೀತಿ ಮಾಡುವುದಕ್ಕೆ ಏನು ಸಮಸ್ಯೆಯಿಲ್ಲ. ನಮ್ಮಲ್ಲಿ ಅದಕ್ಕಾಗಿಯೇ ನಾವು ಬೇರೆಯವರ ಸಲಹೆಗಳನ್ನೆಲ್ಲಾ ಪಕ್ಕದಲ್ಲಿಟ್ಟು ಮಾನವೀಯತೆಯ ಆಧಾರದ ಮೇಲೆ ವಿಶೇಷ ನೇಮಕಾತಿ ನಿಯಮಗಳನ್ನು ರೂಪಿಸಿದ್ದೇವೆ. ಈಗಾಗಲೇ ಅಧಿಸೂಚನೆಯನ್ನು ಸಹ ಹೊರಡಿಸಲು ಕೊಟ್ಟಿದ್ದೇವೆ. ಅದೆಲ್ಲವೂ ಪೂರ್ಣಗೊಂಡ ನಂತರ ಹಾಗೆಯೇ ಅವರಿಗೆ ಗ್ರೇಸ್ ಮಾರ್ಕ್ಸ್ ಸೇರಿಸಿಕೊಂಡು, ವಯಸ್ಸಿನ ಮಿತಿಯಲ್ಲಿಯೂ ಸಹ relax ಮಾಡಿ ಮಾಡುತ್ತೇವೆ. ಇತರ ಇಲಾಖೆಗಳ ವಿಚಾರಗಳ ಬಗ್ಗೆ ಮುಖ್ಯಮಂತ್ರಿಗಳು ಅಥವಾ ಸಂಸದೀಯ ವ್ಯವಹಾರ ಸಚಿವರು ಉತ್ತರವನ್ನು ಕೊಡುತ್ತಾರೆ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ ಒಂದು ನಿಮಿಷ. ಮಾನ್ಯ ಸಚಿವರ ಗಮನ ಸೆಳೆಯತಕ್ಕಂಥದ್ದು, ಆಯುಷ್ ವೈದ್ಯರ ಬಗ್ಗೆ. ಆಯುಷ್ ವೈದ್ಯರಲ್ಲಿ ಶುಶ್ರೂಷಕಿಯರಿದ್ದಾರೆ. ಪದವಿಯನ್ನು ಪಡೆದ ಮೇಲೆ 3½ ವರ್ಷ ಡಿಪ್ಲೋಮಾ ಪಾಸ್ ಮಾಡಿದ್ದಾರೆ. ಅವರ ಜೊತೆ ಇವತ್ತು RHM? ಎಂದು ನೇಮಕ ಮಾಡಿದ್ದಾರೆ. ಅವರಿಗೆ ರೂ.10,000/- consolidated salary. ಈಗ ನಮ್ಮ ಶಾಸಕರ ಭವನದಲ್ಲಿಯೇ ಮೂರು ಜನರಿದ್ದಾರೆ. ಅವರು ರೂ.10,000/- ಗಳಷ್ಟು ಸಂಬಳವನ್ನು ತೆಗೆದುಕೊಂಡು ಬೆಂಗಳೂರಿನಲ್ಲಿ ಹೇಗೆ ಜೀವನ ಮಾಡುತ್ತಾರೆ? ಅವರು ಪದವಿಯನ್ನು ಪಡೆದು, ನಂತರ ಡಿಪ್ಲೋಮಾದಲ್ಲಿ ಉತ್ತೀರ್ಣರಾಗಿದ್ದಾರೆ. ಅವರುಗಳು Therapist ಗಳಾಗಿದ್ದಾರೆ, scientific ಆಗಿ ಕೆಲಸ ಮಾಡುತ್ತಾರೆ. ಅಂತಹವರನ್ನು ನೋಡಿ ನಮ್ಮ ಮಂತ್ರಿಗಳು, ಜೊತೆಗೆ ಹಲವಾರು ಜನರು ಹೋಗಿ ಸಂತೋಷಪಟ್ಟಿದ್ದಾರೆ. ಅಂತಹವರ ಸೇವೆಯನ್ನು ಏಕೆ ನೀವು consider ಮಾಡುವುದಿಲ್ಲ? ನಮ್ಮ ಸಭಾಪತಿಯವರಿಗೆ ಹಾಗೂ ಅಧ್ಯಕ್ಷರಿಗೆ ಶುಶ್ರೂಷಕಿಯರನ್ನು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

regularise ಮಾಡಬೇಕು ಅಥವಾ ಅವರಿಗೆ ಸ್ವಲ್ಪ ಜಾಸ್ತಿ ಸಂಬಳ ಕೊಡಬೇಕೆಂದು.... ಆದರೆ, ಇವತ್ತಿನವರೆವಿಗೂ 150 ಜನ ಶಾಸಕರಿಗೂ ಮರ್ಯಾದೆ ಇಲ್ಲದ ಮೇಲೆ, ನಾವು ಬೇರೆ ಕಡೆ ಏನು ನ್ಯಾಯ ಕೇಳುವುದಕ್ಕಾಗುತ್ತದೆ. ಆದ್ದರಿಂದ ದಯವಿಟ್ಟು ಮಾನ್ಯ ಉಪ ಸಭಾಪತಿಯವರಲ್ಲಿ ಮನವಿ ಮಾಡುವುದೇನೆಂದರೆ, RHM ಎಂಬುವವರನ್ನು ಏನು ನೇಮಕ ಮಾಡಿದ್ದೀರಿ, ಅವರ ಜೊತೆಯೇ ಈ ಶುಶ್ರೂಷಕಿಯರನ್ನು ಸೇರಿಸಬೇಕೆನ್ನುವುದು ನನ್ನ ಮನವಿ.

**ಶ್ರೀ ಶರಣಪ್ಪ ಮಟ್ಟೂರ್ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಬಿ.ಜೆ.ಪುಟ್ಟಸ್ವಾಮಿಯವರು ಹೇಳಿದ್ದರು RHM ಅಲ್ಲ, ಅದು NRHM ಕೆಳಗಡೆ ಅವರಿಗೆ ಹತ್ತು ಸಾವಿರಗಳನ್ನು ಕೊಡುತ್ತಿದ್ದು, ನಮ್ಮ ಶಾಸಕರ ಭವನದ ಆಯುಷ್ ಸೆಂಟರ್‌ನಲ್ಲಿ ಅವರು ಈಗಾಗಲೇ ಮೂರು ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ.

(ಮುಂದು) . . .

(586)/7-6-2017/1-20/ಬಿಎಸ್‌ಡಿ(ಎಲ್‌ಎಂ)/ಬಿಎನ್‌ಎಸ್ (ಉಪಸಭಾಪತಿಯವರ ಉಪಸ್ಥಿತಿ)

**ಶ್ರೀ ಶರಣಪ್ಪ ಮಟ್ಟೂರು**(ಮುಂದು):- ಇಲ್ಲಿ ಅವರನ್ನು regularise ಮಾಡಬೇಕು ಎಂದು ಅವರಿಗೆ 10,000 ರೂ.ಗಳ ex-gratia ಕೊಡೋಣ ಎಂದು ತಮ್ಮ ಕಡೆಯಿಂದ ಪ್ರಪೋಸಲ್ ಕಳುಹಿಸಲಾಗಿತ್ತು.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಅವರಿಗೆ ex-gratia ಕೊಡಬೇಕು ಎಂದು ಅಲ್ಲ permanent ಮಾಡಬೇಕು ಎಂದು ಪ್ರಪೋಸಲ್ ಕೊಡಲಾಗಿದೆ.

**ಶ್ರೀ ಶರಣಪ್ಪ ಮಟ್ಟೂರ:-** ಖಾಯಂ ಮಾಡಲು, there is a condition. ಅದನ್ನು ಹೇಳುತ್ತಾ ಹೋದರೆ ಅರ್ಧ ಗಂಟೆ ಸಮಯ ಬೇಕಾಗುತ್ತದೆ. ಈಗ ಬಂದಿರುವ ವಿಷಯವನ್ನು ಮಾನ್ಯ ಸಚಿವರು ಸರಿಯಾಗಿ ಅರ್ಥೈಸಿಕೊಂಡಿದ್ದಾರೆ. 10 ವರ್ಷದಿಂದ ಕೆಲಸ ಮಾಡುತ್ತಿರುವ AYUSH ವೈದ್ಯರನ್ನು regularise ಮಾಡಲು ಯಾವ ರೀತಿ ಅವರಿಗೆ each year service ಗೆ two marks ನ್ನು ಕೊಟ್ಟು upto 20 marks ವರೆಗೆ ಕೊಡಬೇಕು ಎನ್ನುವ ಬಗ್ಗೆ ಒಂದು Judgment ಸಹ ಇದೆ. ಅದರ ಬಗ್ಗೆ ಮಾನ್ಯ ಮಂತ್ರಿಗಳಿಗೆ ಅರಿವಿದೆ. He is a Senior Minister and he knows very well about this issue. ಅವರನ್ನು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

regularise ಮಾಡಲು 2 marks ಕೊಡಿ ಎನ್ನುವುದು ಅವರ ಬೇಡಿಕೆಯಾಗಿದೆ. ಅವರಿಗೆ ಎರಡು ಅಂಕಗಳನ್ನು ಕೊಟ್ಟರೆ ಅವರನ್ನು ಖಾಯಂ ಮಾಡಲು ಅನುಕೂಲವಾಗುತ್ತದೆ ಎನ್ನುವ ಮಾತನ್ನು ಮಾನ್ಯ ಪುಟ್ಟಸ್ವಾಮಿಯವರ ಜೊತೆಯಲ್ಲಿ ಪೂರಕವಾಗಿ ನಾನು submit ಮಾಡಲು ಬಯಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಗಳೆ, ಮಾನ್ಯ ರಮೇಶ್‌ಕುಮಾರ್‌ರವರನ್ನು ಅವರ ಸರ್ಕಾರ ಮಂತ್ರಿ ಮಾಡದೆ ಇದ್ದಾಗಲೂ ಅವರು ಮಂತ್ರಿಗಳಾಗಬೇಕು ಎಂದು ಆಸೆ ಪಟ್ಟವರು ನಾವು. ಏಕೆಂದರೆ ಅವರಿಂದ ರಾಜ್ಯದ ಜನತೆಗೆ ಒಳ್ಳೆಯದಾಗಲಿ ಎಂದು. ವಯೋಮಿತಿ ಸಡಲಿಕೆ ಮತ್ತು ಪ್ರತಿ ವರ್ಷ ಸಲ್ಲಿಸಿದ ಸೇವೆಗೆ ಎರಡರಂತೆ ಅಂಕಗಳನ್ನು ಕೊಟ್ಟು ಗರಿಷ್ಠ 20 ಅಂಕಗಳಿಗೆ ಸೀಮಿತಗೊಳ್ಳುವಂತೆ ಮಾಡಿ ಅವರನ್ನು ತೆಗೆದುಕೊಳ್ಳುತ್ತೇವೆ ಎಂದು ಮಾನ್ಯ ಮಂತ್ರಿಗಳು ಸ್ಪಷ್ಟವಾದ ಉತ್ತರದ ಮೂಲಕ ಭರವಸೆಯನ್ನು ಕೊಟ್ಟಿದ್ದಾರೆ. ಈ ಅಂಕಗಳು ಎಲ್ಲಿಯಾದರೂ ಕಡಿಮೆಯಾಗಿ ಆ 67 ಜನರಲ್ಲಿ ಕೆಲವರು ಹೊರಗೆ ಉಳಿಯುವಂತಹ ಅಪಾಯವಿದೆ ಅನ್ನಿಸುತ್ತದೆ. ಏಕೆಂದರೆ, ಮೊದಲು ಮೆರಿಟ್ ಮತ್ತು ರೋಸ್ಟರ್‌ನಲ್ಲಿಯೇ ತೆಗೆದುಕೊಳ್ಳಲಾಗಿತ್ತು. ಹೀಗಾಗಿ ಅಗತ್ಯವಿದ್ದರೆ ಈ ಅಂಕಗಳನ್ನು ಜಾಸ್ತಿಯಾದರೂ ಮಾಡಿ. ಒಟ್ಟಿನಲ್ಲಿ 67 ಜನರಲ್ಲಿ ಯಾರನ್ನೂ ಬಿಡದಂತೆ ಯೋಜನೆಯನ್ನು ರೂಪಿಸಿ ಎನ್ನುವುದು ನಮ್ಮ ವಿನಂತಿ.

**ಶ್ರೀ ಕೆ.ಆರ್.ರಮೇಶಕುಮಾರ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):–** ಮಾನ್ಯ ಸಭಾಪತಿಗಳೆ, ಒಟ್ಟಾರೆ ನಮ್ಮ ಉದ್ದೇಶ, ಇವರುಗಳು ನಮ್ಮ ಕಷ್ಟದ ಕಾಲದಲ್ಲಿ ನಮ್ಮ ಜೊತೆ ಬಂದು ಹತ್ತು–ಹನ್ನೊಂದು ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ಇವರನ್ನು ನಿರಾಶ್ರಿತರನ್ನಾಗಿ ಮಾಡಬಾರದು. ತತ್ವಶ: ಈ ಮಾತಿಗೆ ನಾನು ಬದ್ಧನಾಗಿದ್ದೇನೆ. ಈಗ ಒಂದು ನಿಯಮವನ್ನು ರೂಪಿಸಿದ್ದೇವೆ. ಇದರ ವ್ಯಾಪ್ತಿಯಲ್ಲಿ ಬಹುತೇಕ ಎಲ್ಲರೂ ಬರಬಹುದು. ಒಂದು ವೇಳೆ ಈ ವ್ಯಾಪ್ತಿಯಿಂದ ಯಾರಾದರೂ ಹೊರಗೆ ಉಳಿದರೆ ಖಂಡಿತವಾಗಿ ಅವರನ್ನು ಕೈಬಿಡುವುದಿಲ್ಲ. ಬೇರೆ ಯಾವುದಾದರೂ ರೀತಿಯಲ್ಲಿ ಅವರ ಸೇವೆಯನ್ನು ಮುಂದುವರೆಸಿಕೊಂಡು ಹೋಗುತ್ತೇವೆ. ಮಾನ್ಯ ಪುಟ್ಟಸ್ವಾಮಿಯವರು ಒಂದು ವಿಚಾರವನ್ನು ಕೇಳಿದ್ದಾರೆ. 'National Health Mission', ಇದು ಕೇಂದ್ರ ಸರ್ಕಾರದ ಅಭಿಯಾನ. ಇದರಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರ ಎರಡು ಬರುತ್ತವೆ. ಇದರಲ್ಲಿ ತೆಗೆದುಕೊಂಡವರು ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿದ್ದಾರೆ. ಅವರಿಗೆ consolidated salary ಯನ್ನು ಕೊಡಲಾಗುತ್ತದೆ. ಅವರಿಗೂ ಅವಕಾಶವನ್ನು ಕೊಡಬೇಕು ಎನ್ನುವ ಉದ್ದೇಶದಿಂದ ಮೊದಲನೆಯ ಬಾರಿಗೆ ಅರೆ ವೈದ್ಯಕೀಯ ಹುದ್ದೆಗಳು ಅಂದರೆ Lab Technicians, Pharmacists, Nurses,

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Auxiliary Nurse Midwives (ANMs) ಈ ಎಲ್ಲ ಹುದ್ದೆಗಳು ನಮ್ಮಲ್ಲಿ ಎಷ್ಟು ಖಾಲಿ ಇದ್ದವೋ ಅವುಗಳನ್ನು ಭರ್ತಿ ಮಾಡಲು special recruitment ಮಾಡಿ, ಈಗಾಗಲೇ on-line ಮೂಲಕ ಅರ್ಜಿಗಳನ್ನು ಕರೆದಿದ್ದೇವೆ. ಅಲ್ಲಿಯು ಕೂಡಾ same yardstick apply ಮಾಡುತ್ತೇವೆ. ಅವರು ಎಲ್ಲಿಯು ಇಲ್ಲದಂತೆ ಆಗಬಾರದು. They have done their job sincerely. ಖಂಡಿತವಾಗಿ, we will take this view into consideration. AYUSH ವೈದ್ಯರಿಗೆ ಮಾಡಿದ್ದೇವೆ, ಇವರಿಗೂ ಅದನ್ನು extend ಮಾಡುತ್ತೇವೆ. Recruitment ನಲ್ಲಿ all of them will get absorbed. It is a good suggestion.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಧನ್ಯವಾದಗಳು.

**ಉಪಸಭಾಪತಿಯವರು:–** ಧನ್ಯವಾದಗಳು. ಮುಂದಿನ ಗಮನ ಸೆಳೆಯುವ ಸೂಚನೆ ಬಗ್ಗೆ ಮಾನ್ಯ ಶ್ರೀ ವಿ.ಎಸ್.ಉಗ್ರಪ್ಪನವರು ಮಾತನಾಡಬೇಕು.

**ಶ್ರೀ ಶರಣಪ್ಪ ಮಟ್ಟೂರ:–** ಅವರು ಇದನ್ನು ಮಧ್ಯಾಹ್ನ ತೆಗೆದುಕೊಳ್ಳಲು ವಿನಂತಿ ಮಾಡಿಕೊಂಡು ಈಗ ಹೊರಗೆ ಹೋಗಿದ್ದಾರೆ.

**ಉಪಸಭಾಪತಿಯವರು:–** ಮಧ್ಯಾಹ್ನ ಅವರಿಗೆ ಅವಕಾಶ ಕೊಡುವುದಿಲ್ಲ. ಮುಂದಿನ ಗಮನ ಸೆಳೆಯುವ ಸೂಚನೆ ಮಾನ್ಯ ಪುಟ್ಟಣ್ಣನವರದು, ಅವರೂ ಸದನದಲ್ಲಿ ಇಲ್ಲ. ಅವರಿಗೆ ಮತ್ತೆ ಅವಕಾಶವನ್ನು ಕೊಡುವುದಿಲ್ಲ. ಈಗ ಭೋಜನ ವಿರಾಮಕ್ಕಾಗಿ ಸದನವನ್ನು ಮಧ್ಯಾಹ್ನ 3–00ಗಂಟೆವರೆಗೆ ಮುಂದೂಡಲಾಗುತ್ತದೆ.

**( 1ಗಂಟೆ 24 ನಿಮಿಷಕ್ಕೆ ಭೋಜನಕ್ಕಾಗಿ ಮುಂದೂಡಲ್ಪಟ್ಟ ಸದನವು ಮತ್ತೆ 3ಗಂಟೆ 41ನಿಮಿಷಕ್ಕೆ ಸಮಾವೇಶಗೊಂಡಿತು)**

(587) 07.06.2017/ 3.40/ ಕೆಹೆಚ್/ಜಿಆರ್

**(ಸಭಾಪತಿಯವರಾದ ಶ್ರೀ ಡಿ.ಹೆಚ್.ಶಂಕರಮೂರ್ತಿ ಯವರು ಪೀಠದಲ್ಲಿ ಉಪಸ್ಥಿತರಿದ್ದರು)**

**ಸಭಾಪತಿಯವರು:–** ಇದು ನಿಯಮ 330 ರಡಿಯಲ್ಲಿ 4–5 ಜನ ಗೌರವಾನ್ವಿತ ಸದಸ್ಯರು ಒಟ್ಟಾಗಿ ಸೇರಿ ಆಲಮಟ್ಟಿ ಕೃಷ್ಣ ಮೇಲ್ದಂಡೆ ಯೋಜನೆಯ ಬಗ್ಗೆ ಕೊಟ್ಟಿರುವಂತಹ ವಿಷಯ. ಅದರಲ್ಲಿ ಮೊದಲಿಗರಾಗಿ ಶ್ರೀ ಬಸನಗೌಡ ಪಾಟೀಲ್ . . .

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”**

**ಶ್ರೀ ವಿ.ಎಸ್.ಉಗ್ರಪ್ಪ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೆ, ನನ್ನದೊಂದು Calling Attention Notice ಇದೆ.

**ಸಭಾಪತಿಯವರು:–** ಶ್ರೀ ವಿ.ಎಸ್.ಉಗ್ರಪ್ಪನವರೆ, ಈ ಮೊದಲು ನಿಮ್ಮ ಹೆಸರನ್ನು ಪ್ರಸ್ತಾಪಿಸಿದಾಗ, ನೀವು absent ಆಗಿದ್ದಿರಿ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಒಂದು ನಿಮಿಷ. ನಾನು ಕಡತವನ್ನು ತರುವುದಕ್ಕೆ ಹೊರಗಡೆ 10 ನಿಮಿಷ ಹೋಗಿ ಬಂದಿದ್ದೇನೆ. ಆದರೆ ಒಂದೊಂದು ಬಾರಿ ಒಂದೊಂದು ರೀತಿಯ ನಿಯಮಾವಳಿಗಳನ್ನು . . . ಯಾವತ್ತಾದರೂ ಸಹ Calling Attention Notice ವಿಷಯವನ್ನು ಕರೆದ ತಕ್ಷಣ ಇಲ್ಲವೆಂದು ಹೇಳಿದರೆ, ಅವಕಾಶ ಕೊಡದಿರುವ ಯಾವುದಾದರೂ ಘಟನೆ ಇದೆಯೇ? ತಾವು ಅಧ್ಯಕ್ಷರಿದ್ದೀರಿ. ದಯಮಾಡಿ ಇದು ನನ್ನ ಸ್ವಂತ ಪ್ರತಿಷ್ಠೆಯ ಪ್ರಶ್ನೆಯಲ್ಲ. ಇದು ಒಂದು ರೀತಿಯಲ್ಲಿ ರಾಜ್ಯದ ಮತ್ತು ಬೆಂಗಳೂರು ನಗರದ ವಿಚಾರವಾಗಿ ಪ್ರಸ್ತಾಪ ಮಾಡುವಂತಹ ವಿಚಾರ.

**ಸಭಾಪತಿಯವರು:–** ಶ್ರೀ ವಿ.ಎಸ್.ಉಗ್ರಪ್ಪನವರೆ, ನಾನು ಈ ವಿಚಾರದ ಬಗ್ಗೆ ನಂತರ ನೋಡುತ್ತೇನೆ. ಏನು ನಡೆಯಿತೆಂದು ವಿಚಾರಿಸುತ್ತೇನೆ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, atleast after the matter under Rule 330 ಅವಕಾಶ ಮಾಡಿಕೊಡಿ.

**ಸಭಾಪತಿಯವರು:–** ಶ್ರೀ ವಿ.ಎಸ್.ಉಗ್ರಪ್ಪನವರೆ, ನೀವು ಈಗ ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದೀರಿ. ಅದರ ಬಗ್ಗೆ ನಾನು ನಿರ್ಣಯವನ್ನು ಹೇಳಲಿಲ್ಲ. ನಿರ್ಣಯವನ್ನು ಹೇಳುವುದಕ್ಕೆ ಮೊದಲು, ನಿಮ್ಮ ಹತ್ತಿರ ಮಾತನಾಡಿ ನಿರ್ಣಯವನ್ನು ಹೇಳುತ್ತೇನೆ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ನಾನು ಮಾತೇ ಆಡುವುದಿಲ್ಲ. ಈ ಸದನದ ಇತಿಹಾಸದಲ್ಲಿ ಯಾವುದಾದರೂ ಸಂದರ್ಭದಲ್ಲಿ Calling Attention Notice ಅನ್ನು ಕರೆದರೂ ಸಹ ಮಾನ್ಯ ಸದಸ್ಯರು ಇಲ್ಲ. ಇದನ್ನು ತೆಗೆದುಕೊಳ್ಳುವುದಿಲ್ಲ ಎನ್ನುವಂತಹ ತೀರ್ಮಾನ ಯಾವ ದಿನವಾದರೂ ಆಗಿದೆಯೇ ಎಂದು ಹೇಳಿದರೆ . . .

**ಸಭಾಪತಿಯವರು:–** ಶ್ರೀ ವಿ.ಎಸ್.ಉಗ್ರಪ್ಪನವರೆ, ಆ ರೀತಿಯ ಪ್ರಶ್ನೆಯನ್ನು ಕೇಳಬೇಡಿ. ನನಗೂ ಸಹ ಆ ರೀತಿಯ ತೊಂದರೆಯಾಗಿದೆ. ಆ ವಿಷಯವೆಲ್ಲ ಬೇಡ. ಈಗ ಶ್ರೀ ಉಗ್ರಪ್ಪನವರು ಕಾಫಿ

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕುಡಿಯುವುದಕ್ಕೆ ಹೊರಗಡೆ ಹೋದಾಗ ಎಂದರೆ 6 ರಿಂದ 8 ನಿಮಿಷ ಮಧ್ಯದಲ್ಲಿ ನಡೆದಿರುವಂತಹ ಒಂದು ಸಣ್ಣ ಘಟನೆ. ಅದರ ಬಗ್ಗೆ ತಾವು ಒಂದು ಮನವಿಯನ್ನು ನನ್ನ ಮುಂದಿಟ್ಟಿದ್ದೀರಿ. ಅದನ್ನು ನನಗೆ ಬಿಡಿ. ಅದನ್ನು ನಾನು ತೀರ್ಮಾನ ಮಾಡುತ್ತೇನೆ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ದಯಮಾಡಿ ಅವಕಾಶ ಮಾಡಿಕೊಡಿ.

**ಸಭಾಪತಿಯವರು:-** ಶ್ರೀ ವಿ.ಎಸ್.ಉಗ್ರಪ್ಪನವರೆ, ಮನವಿಯನ್ನು ಇಟ್ಟಿದ್ದೀರಿ. Don't compare it to something else. ಅದನ್ನು ನೋಡೋಣ. I will decide. ನಿಮ್ಮ ಹತ್ತಿರ ಒಂದು ನಿಮಿಷ ಮಾತನಾಡಿ ನಿರ್ಧಾರ ತೆಗೆದುಕೊಳ್ಳುತ್ತೇನೆ. ಮೊದಲನೆಯದಾಗಿ ಶ್ರೀ ಬಸನಗೌಡ ಆರ್ ಪಾಟೀಲ್ (ಯತ್ನಾಳ್) ರವರು ಮಂಡಿಸುತ್ತೀರೋ ಅಥವಾ ಬೇರೆ ಯಾರಾದರೂ ಸರಿ. ಇದರೊಳಗೆ ಶ್ರೀ ಬಸನಗೌಡ ಆರ್ ಪಾಟೀಲ್ (ಯತ್ನಾಳ್), ಶ್ರೀ ನಿರಾಣಿ ಹಣಮಂತ್ ರುದ್ರಪ್ಪ, ಶ್ರೀ ಅರುಣ ಶಹಾಪುರ, ಶ್ರೀಮತಿ ತಾರಾ ಅನೂರಾಧ, ಶ್ರೀ ಅಮರನಾಥ ಪಾಟೀಲ್ ಹಾಗೂ ಶ್ರೀ ಸೋಮಣ್ಣ ಮ. ಬೇವಿನಮರದ ಇಷ್ಟು ಜನರ ಹೆಸರುಗಳಿವೆ. ಈಗ ಇಷ್ಟು ಜನರ ಪೈಕಿ ಯಾರಾದರೂ ಒಬ್ಬರೋ, ಇಬ್ಬರೋ ಮಾತನಾಡಿ. ಮಾನ್ಯ ಸಚಿವರು ಉತ್ತರವನ್ನು ಕೊಟ್ಟ ಮೇಲೆ ಉಳಿದವರು ಮಾತನಾಡಿ. ಎಲ್ಲರೂ ನಾನು ಮಾತನಾಡಬೇಕು ಎಂದರೆ ಕಷ್ಟವಾಗುತ್ತದೆ. ನೀವು ಮಾತನಾಡಿಕೊಳ್ಳಿ. ಇಬ್ಬರು ಅಥವಾ subject divide ಮಾಡಿಕೊಂಡು ಮೂರು ಅಥವಾ ನಾಲ್ಕು ಜನ ಮಾತನಾಡಬಹುದು.

**ಶ್ರೀ ಬಸನಗೌಡ ಆರ್.ಪಾಟೀಲ್ (ಯತ್ನಾಳ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಕೃಷ್ಣ ಮೇಲ್ದಂಡೆ ಯೋಜನೆ ಎನ್ನುವಂತಹದ್ದು ಕರ್ನಾಟಕದ ಶೇಕಡಾ 60 ಭಾಗದಷ್ಟು ನೀರಾವರಿಯಾಗುವಂತಹ ಒಂದು ದೊಡ್ಡ ಯೋಜನೆ. 4 ಲಕ್ಷಕ್ಕಿಂತ ಹೆಚ್ಚು ಹೆಕ್ಟೇರ್ ಭೂಮಿ ಮುಳುಗಡೆಯಾಗುವಂತಹದ್ದು. ಇಂತಹ ವಿಚಾರ ಬಂದಾಗ ತಾವು ದೊಡ್ಡ ಮನಸ್ಸು ಮಾಡಿ, ನಿನ್ನೆಯ ದಿವಸ ಯಾವುದೋ ಒಂದು ಶಿಕ್ಷಣದ . . . ಈ ಸದನ ಎಂದರೆ ಶಿಕ್ಷಣದ ಸಲುವಾಗಿ ಅಷ್ಟೇ ಇದೆಯೇ?

**ಸಭಾಪತಿಯವರು:-** ಮಾನ್ಯ ಸದಸ್ಯರೆ, ನಿನ್ನೆಯ ದಿವಸ ಇದೇ ತಪ್ಪಾಯಿತು. ಇವತ್ತು ಸಹ ಅದೇ ತಪ್ಪನ್ನು ಮಾಡಿ ಎಂದು ಹೇಳುತ್ತೀದ್ದೀರಾ?

**ಶ್ರೀ ಬಸನಗೌಡ ಆರ್.ಪಾಟೀಲ್ (ಯತ್ನಾಳ್):-** ಮಾನ್ಯ ಸಭಾಪತಿಯವರೆ, ವಿಧಾನ ಪರಿಷತ್ತನ್ನು ಶಿಕ್ಷಕರ ಕ್ಷೇತ್ರಕ್ಕೆ ಎಂದು ಮಾಡಿಬಿಟ್ಟಿದ್ದೀರಿ.

**ಸಭಾಪತಿಯವರು:-** ಮಾನ್ಯ ಸದಸ್ಯರೆ, ಮಾತನಾಡಿ ಎಂದು ಕರೆಯುತ್ತಿದ್ದೇನಲ್ಲವೇ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಶಿಕ್ಷಣ ಸರಿಯಾಗಿ ಇದ್ದರೆ ಬೇರೆ ಎಲ್ಲ ಸರಿಹೋಗುತ್ತದೆ.

**ಶ್ರೀ ಬಸನಗೌಡ ಆರ್.ಪಾಟೀಲ್ (ಯತ್ನಾಳ್):–** ಮಾನ್ಯ ಸಭಾಪತಿಯವರೆ, ಶಿಕ್ಷಣ ಎಲ್ಲಿ ಸರಿಯಾಗಿದೆ. ಎಂದಿಗೂ ಸಹ ಸರಿಯಾಗುವುದಿಲ್ಲ.

**ಸಭಾಪತಿಯವರು:–** ಮಾನ್ಯ ಸದಸ್ಯರೆ, ನಾನು ಏನು ಹೇಳಿದೆ.

**ಶ್ರೀ ಬಸನಗೌಡ ಆರ್.ಪಾಟೀಲ್ (ಯತ್ನಾಳ್):–** ಮಾನ್ಯ ಸಭಾಪತಿಯವರೆ, ನಾವು . . .

**ಸಭಾಪತಿಯವರು:–** ಮಾನ್ಯ ಸದಸ್ಯರೆ, ಇಷ್ಟು ಜನ ಕೊಟ್ಟಿದ್ದೀರಿ, ಎಲ್ಲರೂ ಮಾತನಾಡುವುದಾದರೆ ಮಾತನಾಡಿ ಅಥವಾ ವಿಷಯವನ್ನು ಹಂಚಿಕೆ ಮಾಡಿಕೊಂಡು ಮಾತನಾಡಿ, ರಿಪೀಟ್ ಮಾಡಬೇಡಿ ಎಂದು ನಾನು ಹೇಳಿದ್ದು.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಈ ಪಂಚಾಯತ್ ರಾಜ್ ವ್ಯವಸ್ಥೆಯ ಪ್ರಕಾರ ಭಾರತ ಸಂವಿಧಾನ ಆರ್ಟಿಕಲ್–243 ಪ್ರಕಾರ ಹೋದರೆ 29 ಇಲಾಖೆಗಳು, ಶಿಕ್ಷಣ ಇಲಾಖೆಯೂ ಸೇರಿದಂತೆ ಪಂಚಾಯತ್ ರಾಜ್ ವ್ಯವಸ್ಥೆಗೆ ಬರುತ್ತದೆ. ಬೇಲೂರು ಘೋಷಣೆಯ ಪ್ರಕಾರ ಇರಬಹುದು, ಭಾರತ ಸಂವಿಧಾನದ ಆರ್ಟಿಕಲ್ 243 ಪ್ರಕಾರ ಇರಬಹುದು, ಹಾಗಾಗಿ ಶ್ರೀ ಬಸನಗೌಡ ಪಾಟೀಲ್‌ರವರು ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಪ್ರತಿನಿಧಿಸುವಂತಹವರು ಇದ್ದಾರೆ. ಮಾನ್ಯ ಸದಸ್ಯರು ನೀರಾವರಿಯ ಬಗ್ಗೆ ಮಾತನಾಡಬಹುದು, ಆರೋಗ್ಯದ ಬಗ್ಗೆ ಮಾತನಾಡಬಹುದು, ವಸತಿಯ ಬಗ್ಗೆ ಮಾತನಾಡಬಹುದು, ಶಿಕ್ಷಣದ ಬಗ್ಗೆ ಮಾತನಾಡಬಹುದು, Sky is the limit. ಯಾವ ವಿಚಾರವನ್ನಾದರೂ ಪ್ರಸ್ತಾಪ ಮಾಡುವುದಕ್ಕೆ ಅವಕಾಶವಿದೆ. ದಯಮಾಡಿ ಇದು ಮಹತ್ತರವಾಗಿರುವಂತಹ ವಿಚಾರ. ತಾವೇ ಪ್ರಸ್ತಾಪ ಮಾಡಿ. ನಾವೆಲ್ಲರೂ ಸಹ ಧ್ವನಿಗೂಡಿಸುತ್ತೇವೆ.

**ಸಭಾಪತಿಯವರು:–** ಮಾತನಾಡಿ. ಮಾತನಾಡಿ.

**ಶ್ರೀ ಬಸನಗೌಡ ಆರ್.ಪಾಟೀಲ್ (ಯತ್ನಾಳ್):–** ಮಾನ್ಯ ಸಭಾಪತಿಯವರೆ, ಶ್ರೀ ಉಗ್ರಪ್ಪನವರು ನನ್ನ ಮೇಲೆ ವಿಶೇಷವಾದ ಪ್ರೀತಿಯನ್ನು ತೋರಿಸುತ್ತಿದ್ದಾರೆ. ನೀವು ಏಕೆ ತೋರಿಸುತ್ತಿಲ್ಲ?

**ಸಭಾಪತಿಯವರು:–** ಮಾನ್ಯ ಸದಸ್ಯರೆ, ಮಾತನಾಡಿ ಎಂದು ನಾನೇ ಹೇಳಿದೆ. ಅಲ್ಲವೇ? ನಿಮ್ಮನ್ನೇ ಮಾತನಾಡಿ ಎಂದು ಕರೆದೆನಲ್ಲವೇ?

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸನಗೌಡ ಆರ್.ಪಾಟೀಲ್ (ಯತ್ನಾಳ್):–** ಮಾನ್ಯ ಸಭಾಪತಿಯವರೆ, ಈ ಅಧಿವೇಶನದಲ್ಲಾದರೂ ಶ್ರೀ ಉಗ್ರಪ್ಪನವರು ವಿಶೇಷ ಪ್ರೀತಿಯನ್ನು ತೋರಿಸಿದ್ದಾರೆಂದು ಖುಷಿಯಾಗುತ್ತದೆ.

**ಸಭಾಪತಿಯವರು:–** ಮಾನ್ಯ ಸದಸ್ಯರೆ, ನಾನೇನು ನಿಮಗೆ ನೀವು ಮಾತನಾಡುವುದು ಬೇಡವೆಂದು ಎಲ್ಲಿ ಹೇಳಿದೆ. ನಿಮ್ಮನ್ನೇ ನಾನು ಕರೆದದ್ದು.

**ಶ್ರೀ ಬಸನಗೌಡ ಆರ್.ಪಾಟೀಲ್ (ಯತ್ನಾಳ್):–** ಮಾನ್ಯ ಸಭಾಪತಿಯವರೆ, ಶ್ರೀ ನಿರಾಣಿಯವರು ಮಾತನಾಡಿದ ಮೇಲೆ ನಾನು ಮಾತನಾಡುತ್ತೇನೆ.

**ಸಭಾಪತಿಯವರು:–** ಮಾತನಾಡಲಿ, ನಾನು ನಾಲ್ಕೈದು ಜನರ ಹೆಸರಿದೆ ಎಂದು ಹೇಳಿದೆ. ಎಲ್ಲರೂ ಮಾತನಾಡುವುದಾದರೆ ಎಲ್ಲರೂ ಹಂಚಿಕೊಂಡು ಮಾತನಾಡಿ. ಇಬ್ಬರು ಮಾತನಾಡಿದ ಮೇಲೆ ಮಾನ್ಯ ಸಚಿವರು ಉತ್ತರವನ್ನು ಕೊಡುತ್ತಾರೆ. ನಂತರ ಮತ್ತೆ ನಿಮಗೆ ಅವಕಾಶ ಸಿಗುತ್ತದೆ. ಆ ರೀತಿ ಪ್ಲಾನ್ ಮಾಡಿಕೊಳ್ಳಿ. ಏಕೆಂದರೆ ಒಬ್ಬರಾದ ಮೇಲೆ ಒಬ್ಬರು ನಿರಂತರವಾಗಿ ಮಾತನಾಡುತ್ತಿದ್ದರೆ ಕಷ್ಟವಾಗುತ್ತದೆಂದು ಹೇಳಿದೆ. ಮೊದಲು ಶ್ರೀ ನಿರಾಣಿಯವರು ಮಾತನಾಡುತ್ತಾರೆ. ನಂತರ ಶ್ರೀ ಬಸನಗೌಡ ಪಾಟೀಲ್‌ರವರು ಮಾತನಾಡುತ್ತಾರೆ. ನಂತರ ನೋಡೋಣ. ಅವಕಾಶವನ್ನು ಕೊಡುತ್ತೇನೆ. ಮಾನ್ಯ ಸಚಿವರು ಉತ್ತರವನ್ನು ಕೊಟ್ಟಮೇಲೆ ಬೇರೆ ಎಲ್ಲರಿಗೂ ಮಾತನಾಡುವ ಅಧಿಕಾರ ಬರುತ್ತದೆ. Not necessarily ನೋಟಿಸ್ ಕೊಟ್ಟವರು ಮಾತ್ರವಲ್ಲ. ಇಡೀ ಸದನದಲ್ಲಿ ಯಾರು ಬೇಕಾದರೂ ಮಾತನಾಡಬಹುದು. ಆ ರೀತಿ ನಮ್ಮ ಅಲ್ಪಗತಿ ಬೆಳೆದಿದೆ.

**ಶ್ರೀ ಬಸನಗೌಡ ಆರ್.ಪಾಟೀಲ್ (ಯತ್ನಾಳ್):–** ಮಾನ್ಯ ಸಭಾಪತಿಯವರೆ, ಈ ಸದನದಲ್ಲಿ ಮತ್ತು ವಿಧಾನಮಂಡಲದಲ್ಲಿ ಕಾವೇರಿ ನದಿ ನೀರಿನ ವಿಷಯದ ಬಗ್ಗೆ ವಿಶೇಷ ಅಧಿವೇಶನಗಳನ್ನು ಕರೆದಿದ್ದೀರಿ. ಕೃಷ್ಣ ಮೇಲ್ದಂಡೆ ಯೋಜನೆ ಬಗ್ಗೆ ಮಲತಾಯಿ ಧೋರಣೆ ನಿರಂತರವಾಗಿ ನಡೆಯುತ್ತಿದೆ. ಉತ್ತರ ಕರ್ನಾಟಕದ ಕೃಷ್ಣೆ ಇವು ತಬ್ಬಲಿ ಮಕ್ಕಳಾಗಿವೆ. ತಾವು ಮಧ್ಯ ಕರ್ನಾಟಕದವರು. ಆದ್ದರಿಂದ ತಾವು ಸರಿಯಾಗಿ ತಕ್ಕಡಿ ಹಿಡಿದು ನೀವು . . . .

**ಶ್ರೀ ಎಂ.ಬಿ.ಪಾಟೀಲ್:–** ಮಾನ್ಯ ಸಭಾಪತಿಯವರೆ, ಮಂತ್ರಿಯವರೆ ಉತ್ತರ ಕರ್ನಾಟಕದವರು.

**ಸಭಾಪತಿಯವರು:–** ಮಾನ್ಯ ಸಚಿವರೆ, ಅದನ್ನೇ ನಾನು ಹೇಳುವುದಕ್ಕೆ ಹೊರಟಿದ್ದು. ಈಗ ಪುಣ್ಯವಶಾತ್ ಮಂತ್ರಿಗಳೇ ಹೇಳಿದ್ದಾರೆ. ಮಂತ್ರಿಗಳು ಏನೇನು ಮಾಡುತ್ತಾರೆ ನೋಡೋಣ. ಶ್ರೀ ನಿರಾಣಿಯವರೇ, ಮಾತನಾಡುವುದಕ್ಕೆ ಪ್ರಾರಂಭ ಮಾಡಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**4. ನಿಯಮ 330 ರ ಮೇರೆಗೆ ಚರ್ಚೆ**

**ವಿಷಯ: ಆಲಮಟ್ಟಿ ಕೃಷ್ಣ ಮೇಲ್ದಂಡೆ ಯೋಜನೆಯಿಂದ ಬಾಧಿತಗೊಂಡ ಸಂತ್ರಸ್ತ ಕುಟುಂಬಗಳಿಗೆ ಏಕರೂಪ ಪರಿಹಾರ ನಿಗಧಿಪಡಿಸುವ ಕುರಿತು.**

* * *

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಇದು ಅತ್ಯಂತ ಮಹತ್ವವಾಗಿರುವಂತಹ ವಿಷಯ. ಆಲಮಟ್ಟಿ ಕೃಷ್ಣ ಮೇಲ್ದಂಡೆ ಯೋಜನೆಯಿಂದ ಭಾದಿತಗೊಂಡ ಸಂತ್ರಸ್ತ ಕುಟುಂಬಗಳಿಗೆ ಪರಿಹಾರವನ್ನು ಒದಗಿಸಿಕೊಡುವಂತಹದ್ದು. ಸಂತ್ರಸ್ತ ಕುಟುಂಬಗಳಿಗೆ ಪುನರ್ವಸತಿ ಕೇಂದ್ರಗಳನ್ನು ನಿರ್ಮಿಸುವ ಕುರಿತು ನಿಯಮ 330ರ ಮೇರೆಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟಿರುವಂತಹ ತಮಗೆ ಅನಂತ ಅಭಿನಂದನೆಗಳನ್ನು ಸಲ್ಲಿಸುತ್ತಾ, ಈಗಾಗಲೇ ಹಿರಿಯರಾಗಿರುವಂತಹ ಶ್ರೀ ಬಸನಗೌಡ ಪಾಟೀಲ್ ರವರು ಹೇಳಿದ ಹಾಗೆ ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕದ ಎರಡು ಭಾಗಗಳಲ್ಲಿ ಅದರಲ್ಲೂ ದಕ್ಷಿಣ ಕರ್ನಾಟಕದಲ್ಲಿ ಕಾವೇರಿ ನದಿ ಪವಿತ್ರವಾಗಿರುವಂತಹ ಜೀವನದಿಯಾಗಿದೆ. ಹಾಗೆಯೇ ಉತ್ತರ ಕರ್ನಾಟಕದಲ್ಲಿ ಕೂಡ ಕೃಷ್ಣ ನದಿಯು ಅಷ್ಟೇ ಪಾವನವಾಗಿರುವಂತಹದ್ದು ಮತ್ತು ಜೀವನದಿಯಾಗಿರುವಂತಹದ್ದು ತಮಗೆಲ್ಲರಿಗೂ ತಿಳಿದಿರುವಂತಹ ವಿಷಯವಾಗಿದೆ. ಆ ಹಿನ್ನೆಲೆಯಲ್ಲಿ ಕೃಷ್ಣ ನದಿಯ ಹಿನ್ನೆಲೆಯನ್ನು ತೆಗೆದುಕೊಂಡಾಗ ಮಹಾರಾಷ್ಟ್ರದ ಸಹಕಾರ ಜಿಲ್ಲೆಯ ಮಹಾಬಲೇಶ್ವರದಲ್ಲಿರುವಂತಹ ಮತ್ತು ಪವಿತ್ರವಾಗಿರುವಂತಹ ಸ್ಥಳದಲ್ಲಿ ಕೃಷ್ಣ ನದಿಯು ಉಗಮವಾಗಿ ಗೋಮತಿಯಿಂದ ಹರಿದು ಪುಷ್ಕರಣಿಯಲ್ಲಿ ಕೃಷ್ಣ ನದಿಯು ಸುಮಾರು 1400 ಕಿ.ಮೀಗಳ ಉದ್ದದಲ್ಲಿ ಮಹಾರಾಷ್ಟ್ರ, ಕರ್ನಾಟಕ, ಆಂಧ್ರ ಪ್ರದೇಶದ ಮುಖಾಂತರ ಬಂಗಾಳ ಕೊಲ್ಲಿ ಉಪಸಾಗರವನ್ನು ಸೇರುವಂತಹ ಮಹತ್ತರವಾಗಿರುವಂತಹ ಒಂದು ನದಿ ಇದಾಗಿದೆ. ಪ್ರಾರಂಭದಲ್ಲಿ ಮಹಾಬಲೇಶ್ವರದಲ್ಲಿ ಹುಟ್ಟುವಂತಹ ಈ ನದಿಗೆ ಹತ್ತು ಉಪನದಿಗಳು ಸೇರಿ ಬಂಗಾಳ ಕೊಲ್ಲಿ ಸಾಗರವನ್ನು ಸೇರುವಂತಹ ಈ ನದಿಯು ಬಹಳ ವಿಶಾಲವಾಗಿರುವಂತಹ ನದಿಯಾಗಿದೆ. ರಾಜ್ಯದ ಒಟ್ಟು ಭೌಗೋಳಿಕ ಕ್ಷೇತ್ರದ 1,90,641 ಚದರ ಕಿ.ಮೀ ಇರುವಂತಹ ಈ ಪ್ರದೇಶದಲ್ಲಿ ಸುಮಾರು ಕೃಷ್ಣ ಕಣಿವೆ ಒಟ್ಟು ವಿಸ್ತೀರ್ಣ 2570 ಲಕ್ಷ ಚದರ ಕಿ.ಮೀ ಎನ್ನುವುದು ಕೂಡ ಇವತ್ತಿನ ದಿವಸ ಗಮನಿಸಬೇಕಾಗುತ್ತದೆ. ಈ ರೀತಿ 3 ರಾಜ್ಯಗಳಲ್ಲಿ ಹರಿದು ಬರುವಂತಹ ಕೃಷ್ಣ ನದಿಯು ಮಹಾರಾಷ್ಟ್ರದಲ್ಲಿ ಶೇಕಡ 68.8 ರಷ್ಟು, ಆಂಧ್ರಪ್ರದೇಶದಲ್ಲಿ ಶೇಕಡ 29.4 ರಷ್ಟು ಹಾಗೂ ಕರ್ನಾಟಕದ ಪಾಲು ಶೇಕಡ 43.80 ರಷ್ಟು, ಒಟ್ಟು ಸರಾಸರಿ 1,12,600 ಚದರ ಕಿ.ಮೀ.ಗಳಷ್ಟು ವಿಸ್ತೀರ್ಣವನ್ನು ಹೊಂದಿರುವಂತಹ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮತ್ತು ಈ ಭೂ ಪ್ರದೇಶದಲ್ಲಿರುವಂತಹ ಕೃಷ್ಣ ನದಿಯು ಕರ್ನಾಟಕದಲ್ಲಿ ಸುಮಾರು ಶೇಕಡಾ 44 ರಷ್ಟು ಕ್ಷೇತ್ರದಲ್ಲಿ ಬರುವಂತಹದ್ದನ್ನು ನಾವು ಗಮನಿಸಬೇಕಾಗುತ್ತದೆ.

(ಮುಂದು)

588/7-6-2017/3-50/bkp-md

**ಶ್ರೀ ನಿರಾಣಿ ಹನಮಂತ್ ರುದ್ರಪ್ಪ:(ಮುಂದು. .)**

ಈ ಒಂದು ಕೃಷ್ಣಾ ನದಿಗೆ ಅಖಂಡ ಬಿಜಾಪುರ ಜಿಲ್ಲೆಯ ಆಲಮಟ್ಟಿಯ ಹತ್ತಿರ ಜಲಾಶಯವನ್ನು ಕಟ್ಟುವುದರ ಮುಖಾಂತರ ಈ ಭಾಗದಲ್ಲಿ ನೀರಾವರಿಯನ್ನು ಮಾಡಬೇಕೆನ್ನುವ ಹಿನ್ನೆಲೆಯಲ್ಲಿ ಅಂದಿನ ಪ್ರಧಾನ ಮಂತ್ರಿಗಳಾಗಿದ್ದಂತಹ ಲಾಲ್ ಬಹುದ್ದೂರ್ ಶಾಸ್ತ್ರಿಯವರು ದಿನಾಂಕ: 22–05–1964 ರಲ್ಲಿಯೇ ಶಂಕುಸ್ಥಾಪನೆಯನ್ನು ಮಾಡಿದರು. ಇಲ್ಲಿಗೆ ಸುಮಾರು 50 ವರ್ಷಗಳನ್ನು, 5 ದಶಕಗಳನ್ನು ದಾಟಿದ್ದರೂ ಕೂಡ ಇವತ್ತಿಗೂ ಕೂಡ ಈ ಯೋಜನೆ ಪೂರ್ತಿಯಾಗದೇ ಇರತಕ್ಕದ್ದನ್ನು ನೋಡಿದರೆ ಕೃಷ್ಣ ಕಣಿವೆಯಲ್ಲಿರುವಂತಹ ಕಾಮಗಾರಿ ಎಷ್ಟು ವಿಳಂಬವಾಗುತ್ತಿದೆ ಎನ್ನುವುದನ್ನು ನಾವೆಲ್ಲರೂ ಕೂಡ ಗಮನಿಸಬೇಕು. ಪ್ರಾರಂಭದಲ್ಲಿ ಕೇವಲ 37 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಈ ಒಂದು ಯೋಜನೆಯನ್ನು ಪ್ರಾರಂಭಿಸಲಾಗಿತ್ತು. ಇವತ್ತು 519.6 ಮೀಟರ್‌ಗೆ ಒಂದು ಮತ್ತು ಎರಡನೇ ಹಂತದ ನೀರಾವರಿಯನ್ನು ಮಾಡಲಿಕ್ಕೆ ಡ್ಯಾಮ್ ಎತ್ತರ ಮಾಡುವಲ್ಲಿ ಸಾಕಷ್ಟು ಹಣವನ್ನು ಖರ್ಚು ಮಾಡಿ 123 ಟಿಎಂಸಿ ನೀರನ್ನು ಬಳಕೆ ಮಾಡತಕ್ಕಂತಹ ಕೆಲಸ ಆಗಿದೆ. ಈ ಒಂದು ಸಂದರ್ಭದಲ್ಲಿ 157 ಗ್ರಾಮಗಳು ಕೂಡ ಮುಳುಗಡೆಯಾಗಿ, ಆ 157 ಗ್ರಾಮಗಳನ್ನು ಸ್ಥಳಾಂತರ ಮಾಡುವಂತಹ ಕೆಲಸವಾಗಿದೆ. ಆ ಒಂದು ಹಿನ್ನೆಲೆಯಲ್ಲಿ 519.6 ಮೀಟರ್‌ಗೆ ಒಂದು ಮತ್ತು ಎರಡನೇ ಹಂತದ ನೀರಾವರಿಯನ್ನು ಮಾಡಲಿಕ್ಕೆ 5.90 ಲಕ್ಷ ಹೆಕ್ಟೇರ್ ಭೂಮಿಯಷ್ಟು ನೀರಾವರಿ ಮಾಡಿಕೊಳ್ಳಲಿಕ್ಕೆ ಇವತ್ತಿನ ದಿವಸ ಸಾಧ್ಯವಾಗಿದೆ. ಅದರ ಜೊತೆಯಲ್ಲಿ ಕೃಷ್ಣಾ ಪ್ರಾಧಿಕಾರದ ಆಯೋಗ ರಚನೆಯೂ ಕೂಡ ಬಂದಿರುವುದರಿಂದ ಕೆಲಸ ವಿಳಂಬ ಆಗಲಿಕ್ಕೆ ಕಾರಣವಾಯಿತು. ನ್ಯಾಯಮೂರ್ತಿ ಶ್ರೀಮಾನ್ ಆರ್.ಎಸ್. ಬಚಾವತ್ ಆಯೋಗ ರಚನೆಯಾಗಿ 1975 ರಲ್ಲಿ ವರದಿ ನೀಡಿ ಯಾವ್ಯಾವ ಹಂತದಲ್ಲಿ ನಾವು ನೀರನ್ನು ಬಳಸಿಕೊಳ್ಳಬೇಕೆನ್ನುವ ನಿರ್ಣಯವನ್ನು ತೆಗೆದುಕೊಂಡಿದ್ದು, ಆ ಒಂದು ನಿರ್ಣಯ ಇವತ್ತು ಒಂದು ಅಂತಿಮ ಹಂತವನ್ನು ತಲುಪಿದೆ. ನಂತರ ಶ್ರೀಮಾನ್ ಬ್ರಿಜೇಶ್ ಕುಮಾರ್ ನೇತೃತ್ವದ ಕೃಷ್ಣ ನ್ಯಾಯಾಧೀಕರಣ ರಚನೆಯಾಗಿ, ನಿರಂತರ ವಿಚಾರಣೆಯ ನಂತರ 30ನೇ ಡಿಸೆಂಬರ್, 2010 ರಂದು ಒಂದು ತೀರ್ಪನ್ನು ನೀಡಲಾಯಿತು. ಅದರ ನಂತರ ಎರಡನೆ ಹಂತದ ತೀರ್ಪಿನಲ್ಲಿ 27–11–

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

2013 ರಂದು ಎರಡನೇ ಹಾಗೂ ಅಂತಿಮ ವರದಿಯನ್ನು ನೀಡಿದ್ದು, ನ್ಯಾಯಮೂರ್ತಿ ಶ್ರೀಮಾನ್ ಬ್ರಿಜೇಶ್ ಕುಮಾರ್‌ರವರ ವರದಿಯ ಪ್ರಕಾರ ನಾವು ಮತ್ತೆ 130 ಟಿಎಂಸಿ ನೀರನ್ನು ಬಳಸಿಕೊಳ್ಳಲಿಕ್ಕೆ ಅವಕಾಶವನ್ನು ಕೊಟ್ಟಿದ್ದಾರೆ. ಆ ಒಂದು 130 ಟಿಎಂಸಿ ನೀರನ್ನು ಆಲಮಟ್ಟಿ ಜಲಾಶಯದಲ್ಲಿ ಶೇಖರಣೆ ಮಾಡತಕ್ಕಂತಹ ಕೆಲಸ ಪ್ರಾರಂಭವಾಗಿದೆ. ಈ ಒಂದು ಹಂತದಲ್ಲಿ ಈ ಒಂದು ಯೋಜನೆಯನ್ನು ಪ್ರಾರಂಭ ಮಾಡತಕ್ಕಂತಹ ಸಂದರ್ಭದಲ್ಲಿ ಸುಮಾರು ಸಾಕಷ್ಟು ಕ್ಷೇತ್ರದ ಭೂಸ್ವಾಧೀನ ಪ್ರಕ್ರಿಯೆ ಕೂಡ ಪ್ರಾರಂಭವಾಗಿದೆ. 524.256 ಮೀಟರ್‌ಗೆ ನಾವು ಜಲಾಶಯವನ್ನು ಎತ್ತರಿಸುವುದರಿಂದ ಈ ಒಂದು ಭಾಗದಲ್ಲಿ ಸಾಕಷ್ಟು ಭೂಮಿಯನ್ನು ಇವತ್ತು ಭೂ ಸ್ವಾಧೀನಕ್ಕೆ ಒಳಪಡುವಂತಹದ್ದು ಪ್ರಕ್ರಿಯೆ ಸಹ ಪ್ರಾರಂಭವಾಗಿದೆ. ಈ ಒಂದು 130 ಟಿಎಂಸಿ ನೀರನ್ನು ಬಳಕೆ ಮಾಡುವುದರಿಂದ ಈ ಭಾಗದಲ್ಲಿ ಸಾಕಷ್ಟು ನೀರಾವರಿ ಯೋಜನೆಗಳು ಕೂಡ ಪ್ರಾರಂಭವಾಗುತ್ತಿವೆ. ಈ 130 ಟಿಎಂಸಿ ನೀರನ್ನು ಬಳಸಲಿಕ್ಕೆ ಮುಳವಾಡ, ಚಿಮ್ಮಲಗಿ, ಇಂಡಿ ಹಡೆದಂಡೆ, ನಾರಾಯಣಪುರ ಬಲದಂಡೆ, ರಾಂಪುರ, ಮಲಭಾಗ, ಕೊಪ್ಪಳ ಯಡಕಲ್ ಹೀಗೆ ಹತ್ತು-ಹಲವಾರು ಏತ ನೀರಾವರಿ ಯೋಜನೆಗಳು ಕೂಡ ಪ್ರಾರಂಭ ಮಾಡಿ, ಈ ನೀರನ್ನು ಸಮರ್ಪಕವಾಗಿ ಬಳಕೆ ಮಾಡಿಕೊಳ್ಳಬೇಕಾಗಿದೆ. ಅದರ ಜೊತೆಯಲ್ಲಿ ಮುಖ್ಯವಾಗಿರುವಂತಹ ವಿಷಯ ಇವತ್ತು ಕೃಷಿಗೆ ಬಳಸತಕ್ಕಂತಹ ಈ ಒಂದು ನೀರಿನ ನೀರಾವರಿ ಯೋಜನೆಯ ಜೊತೆಗೆ ಔದ್ಯೋಗಿಕಕ್ಕೆ ಕೂಡ ಬಳಕೆಯಾಗಬೇಕಾಗಿರುವುದು ಕೂಡ ನಾವು ಇವತ್ತು ಇಲ್ಲಿ ಗಮನಿಸಬೇಕಾಗುತ್ತದೆ. ಅದರ ಹಿನ್ನೆಲೆಯಲ್ಲಿ ಈ ಒಂದು 524.256 ಮೀಟರ್ ಎತ್ತರಕ್ಕೆ ಭೂಸ್ವಾಧೀನ ಮಾಡತಕ್ಕಂತಹ ಕೆಲಸವನ್ನು ನಾವು ಇವತ್ತು ಗಮನಿಸಿದರೆ ಸುಮಾರು 75,630 ಎಕರೆ ಜಮೀನನ್ನು ಹಿನ್ನೀರಿನಿಂದ ಭಾದೀತವಾದ ಪ್ರದೇಶದಲ್ಲಿ ಭೂಸ್ವಾಧೀನ ಮಾಡಿಕೊಳ್ಳಬೇಕಾಗಿದೆ.

**ಸನ್ಮಾನ್ಯ ಸಭಾಪತಿಯವರೆ,** ಏಷ್ಯಾ ಖಂಡದಲ್ಲಿಯೇ ಇದು ಅತ್ಯಂತ ದೊಡ್ಡದಾಗಿರತಕ್ಕಂತಹ ಈ ಒಂದು ಭೂಸ್ವಾಧೀನ ಪ್ರಕ್ರಿಯೆಯ ಜಲಾಶಯ ಕೂಡ ಆಗಿರುವುದರಿಂದ ಮೊದಲನೆ ಹಂತದಲ್ಲಿಯೂ ಕೂಡ ನಾವು 1,36,000 ಎಕರೆ ಜಮೀನನ್ನು ನಾವು ಕಳೆದುಕೊಂಡಿದ್ದೇವೆ. ಈ ಹಂತದಲ್ಲಿಯೂ ಕೂಡ 75,630 ಎಕರೆ ಜಮೀನು ಭೂಸ್ವಾಧೀನಕ್ಕೆ ಒಳಪಟ್ಟಿದೆ. ಅದರ ಜೊತೆಯಲ್ಲಿ ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಮಾಡುವಂತಹ ಕೆಲಸ ಕಾರ್ಯದಲ್ಲಿ ಸುಮಾರು 6,640 ಎಕೆರೆ ಜಮೀನನ್ನು rehabilitation centre ಸಲುವಾಗಿ ಈಗಾಗಲೇ ಭೂಸ್ವಾಧೀನ ಪ್ರಕ್ರಿಯೆ ಆಗಿದೆ. ಇದಲ್ಲದೇ ಏನು ಏತ ನೀರಾವರಿಯನ್ನು ಮಾಡಬೇಕೆನ್ನುವ ಯೋಜನೆ ಇದರ ಜೊತೆಯಲ್ಲಿ ಇದೆ, ಆ ಒಂದು ಯೋಜನೆಯೂ ಕೂಡ ಸುಮಾರು 51,837 ಎಕರೆ ಜಮೀನು ಕೂಡ canal ಮತ್ತು ಮೂಲಭೂತ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸೌಲಭ್ಯಗಳಿಗಾಗಿ ಸ್ವಾಧೀನ ಆಗತಕ್ಕಂತಹ ಪ್ರಕ್ರಿಯೆ ಈಗಾಗಲೇ ನಡೆದಿದೆ. ಒಟ್ಟಿನಲ್ಲಿ 1,34,000 ಎಕರೆ ಜಮೀನನ್ನು ಇವತ್ತು ಭೂಸ್ವಾಧೀನಕ್ಕೆ ಒಳಪಟ್ಟಿರುವಂತಹ ದೊಡ್ಡ ಯೋಜನೆಯನ್ನು ಎನ್ನುವುದನ್ನು ನಾವೆಲ್ಲರೂ ಇವತ್ತು ಗಮನಿಸಬೇಕು. ಈ ಒಂದು ಯೋಜನೆಯಿಂದ ಮೊದಲನೆ ಹಂತದಲ್ಲಿಯೂ ಕೂಡ 1,36,000 ಎಕರೆ ಜಮೀನನ್ನು ನಾವು ಕಳೆದುಕೊಂಡಿದ್ದೇವೆ. ಎರಡನೇ ಹಂತದಲ್ಲಿಯೂ ಕೂಡ 1,34,000 ಎಕರೆ ಜಮೀನನ್ನು ಕಳೆದುಕೊಂಡಿರುವಂತಹ ಸಂತ್ರಸ್ತರ ಸಂಖ್ಯೆ ಎಷ್ಟು ಎನ್ನುವುದನ್ನು ನಾವು ಇವತ್ತು ಗಮನದಲ್ಲಿ ತೆಗೆದುಕೊಂಡರೆ ಈಗಾಗಲೇ 157 ಗ್ರಾಮಗಳು ಮುಳಗಡೆಯಾಗಿವೆ. 524.256 ಮೀಟರ್ ಎತ್ತರಿಸಿದಾಗ 20 ಗ್ರಾಮಗಳನ್ನು ಮತ್ತೆ ಸ್ಥಳಾಂತರ ಮಾಡಬೇಕಾಗುತ್ತದೆ. ಆ 20 ಗ್ರಾಮಗಳ ಜೊತೆಗೆ ಬಾಗಲಕೋಟೆ ಜಿಲ್ಲೆಯ 10 ವಾರ್ಡ್‌ಗಳನ್ನು ಕೂಡ ಸ್ಥಳಾಂತರ ಮಾಡಬೇಕಾದ ಕೆಲಸ ಇವತ್ತು ಸರ್ಕಾರದ ಮುಂದೆ ಇದೆ. ಈ ಒಂದು ಹಂತದಲ್ಲಿ ಸುಮಾರು 20 ಗ್ರಾಮಗಳು ಸೇರಿ 23,331 ಕುಟುಂಬಗಳನ್ನು ಅಥವಾ ಕಟ್ಟಡಗಳನ್ನು ಭೂಸ್ವಾಧೀನ ಮಾಡಿಕೊಳ್ಳಲಾಗಿದೆ. ಅದರ ಜೊತೆಗೆ ಬಾಗಲಕೋಟೆ ನಗರದ 10 ವಾರ್ಡ್‌ಗಳು ಸೇರಿ 2,330 ಕಟ್ಟಡಗಳಿಗೂ ಕೂಡ ಇವತ್ತು ಪರಿಹಾರಧನವನ್ನು ಒದಗಿಸಬೇಕಾಗಿರುವಂತಹದ್ದು ಕೂಡ ಸರ್ಕಾರದ ಮುಂದೆ ಇದೆ. ಈ ಒಂದು ಹಂತದಲ್ಲಿ ಸುಮಾರು 25 ಸಾವಿರ ಕುಟುಂಬಗಳನ್ನು ಕೂಡ ಈ 3ನೇ ಹಂತದಲ್ಲಿ ಸ್ಥಳಾಂತರ ಮಾಡಬೇಕಾದ ಬಹು ದೊಡ್ಡ ಕಾರ್ಯ ಇವತ್ತು ಸರ್ಕಾರದ ಮುಂದೆ ಇದೆ ಎನ್ನುವುದನ್ನೂ ಕೂಡ ನಾನು ಹೇಳಲಿಕ್ಕೆ ಬಯಸುತ್ತಿದ್ದೇನೆ. ಇದರ ಜೊತೆಯಲ್ಲಿ 25 ಸಾವಿರ ಕುಟುಂಬಗಳನ್ನು. ಒಂದು ಕುಟುಂಬದಲ್ಲಿ 5 ಜನ ಎಂದು ತಿಳಿದುಕೊಂಡರೂ ಸಹ 1,25,000 ಕ್ಕಿಂತ ಹೆಚ್ಚು ಜನರು ಸ್ಥಳಾಂತರವಾಗಬೇಕಾದ ಪರಿಸ್ಥಿತಿ ಇವತ್ತು ಬಾಗಲಕೋಟೆ ಮತ್ತು ಬಿಜಾಪುರ ಜಿಲ್ಲೆಯಲ್ಲಿ ಇದೆ. ಈ 1,25,000 ಜನರು ಈ 3ನೇ ಹಂತದ ಸಂತ್ರಸ್ತರು. ಇನ್ನು ಒಂದು ಮತ್ತು ಎರಡನೇ ಹಂತದಲ್ಲಿ ಸುಮಾರು 2,56,000 ಜನರು ಈಗಾಗಲೇ ಸ್ಥಳಾಂತರಗೊಂಡಿದ್ದಾರೆ. ಸ್ಥಳಾಂತರಗೊಂಡಿರತಕ್ಕಂತ ಕುಟುಂಬಗಳಲ್ಲಿ ಇನ್ನು ಕೂಡ ಹಳೆ ಗ್ರಾಮಗಳಲ್ಲಿ ವಾಸವಾಗಿದ್ದಾರೆ. ಕೆಲವರು ಪುನರ್ ವಸತಿಗೆ ಹೋಗಿರತಕ್ಕಂತಹದ್ದು ಇದೆ. ಒಟ್ಟಿನಲ್ಲಿ 5 ಲಕ್ಷದಷ್ಟು ಜನರನ್ನು ಸ್ಥಳಾಂತರ ಮಾಡತಕ್ಕಂತಹ ಇದು ಒಂದು ಬಹು ದೊಡ್ಡ ಯೋಜನೆಯಾಗಿದೆ ಎಂದು ಈ ಸಂದರ್ಭದಲ್ಲಿ ನಾನು ಹೇಳಲಿಕ್ಕೆ ಬಯಸುತ್ತಿದ್ದೇನೆ. ಈ ಒಂದು ಹಂತದಲ್ಲಿ ಇಷ್ಟು ದೊಡ್ಡ ಪ್ರಮಾಣದಲ್ಲಿ ಭೂಸ್ವಾಧೀನ ಮಾಡತಕ್ಕಂತಹ ಸಂದರ್ಭದಲ್ಲಿ ಯಾವ ಸಂತ್ರಸ್ತರು ಕೂಡ ಈ ಯೋಜನೆಗೆ ಅಡಚಣೆಯನ್ನು ಮಾಡಿರುವುದಿಲ್ಲ. ನಾವು ಬೇರೆ ಬೇರೆ ಕಡೆ ಭೂಸ್ವಾಧೀನ ಮಾಡಿಕೊಳ್ಳಲಿಕ್ಕೆ ಹೋದಾಗ ತಮಗೆಲ್ಲರಿಗೂ ಗೊತ್ತಿರುವಂತೆ ಗದಗದಲ್ಲಿ POSCO Steel Plant Project ಗಾಗಿ ಭೂಸ್ವಾಧೀನ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿರುವುದಾಗಿರಬಹುದು, ಏರ್‌ಪೋರ್ಟ್‌ಗೆ ಭೂಸ್ವಾಧೀನ ಮಾಡಿರುವುದಾಗಿರಬಹುದು, ಯಾವುದೋ ಒಂದು ಇಂಡಸ್ಟ್ರಿಗೆ ಭೂಸ್ವಾಧೀನ ಮಾಡಿರುವುದಾಗಿರಬಹುದು. ಅದೇ ರೀತಿ railway track ಮಾಡುವಂತಹ ಸಂದರ್ಭದಲ್ಲಿ ಸಾಕಷ್ಟು ಅಡಚಣೆಗಳು ಬಂದರೂ ಸಹ ಭೂಸ್ವಾಧೀನವಾಗದೇ ಇರುವುದನ್ನು ನಾವು ಗಮನಿಸಿದ್ದೇವೆ. ಆದರೆ, ಕೃಷ್ಣ ಮೇಲ್ದಂಡೆ ಯೋಜನೆಯಲ್ಲಿನ ಸಂತ್ರಸ್ತರು ಈ ದೇಶಕ್ಕಾಗಿ, ಈ ನಾಡಿಗಾಗಿ, ತಮ್ಮ ಸರ್ವಸ್ವವನ್ನು ತ್ಯಾಗ ಮಾಡತಕ್ಕ ಸಂತ್ರಸ್ತರು ಇರುವುದರಿಂದ ಯಾವುದೇ ಹಂತದಲ್ಲಿಯೂ ಇವರು ಕೂಡ ಭೂಸ್ವಾಧೀನಕ್ಕೆ ಅಡ್ಡಿ ಮಾಡಿರುವುದಿಲ್ಲ. ಆದರೆ, ನಮ್ಮ ಕಳಕಳಿ ಏನೆಂದರೆ, ಇವತ್ತು ಏನು ಈ 5 ಲಕ್ಷ ಜನ ಸಂತ್ರಸ್ತರು ಸುಮಾರು ಎರಡು-ಮೂರು ಲಕ್ಷಕ್ಕಿಂತ ಹೆಚ್ಚು ಎಕರೆ ಜಮೀನನ್ನು ಕಳೆದುಕೊಂಡ ಸಂತ್ರಸ್ತರಿಗೆ ಯೋಗ್ಯವಾಗಿರುವಂತಹ ಮತ್ತು ನ್ಯಾಯೋಚಿತವಾಗಿರುವಂತಹ ಪರಿಹಾರವನ್ನು ಒದಗಿಸಿಕೊಡಬೇಕೆನ್ನುವ ಕಳಕಳಿಯ ಪ್ರಾರ್ಥನೆಯನ್ನು ನಾನು ಈ ಸದನದ ಮೂಲಕ ಸರ್ಕಾರಕ್ಕೆ ಮಾಡಿಕೊಳ್ಳುತ್ತಿದ್ದೇನೆ.

ತಮಗೆಲ್ಲರಿಗೂ ಗೊತ್ತಿರುವ ಹಾಗೆ ನೂತನ ಭೂಸ್ವಾಧೀನ ಕಾಯಿದೆ 2013 ಬಂದ ಮೇಲೆ ವಿಶೇಷವಾಗಿ ಭೂಮಿಯನ್ನು ಕಳೆದುಕೊಂಡ ಸಂತ್ರಸ್ತರಿಗೆ ಹೆಚ್ಚಿನ ಸೌಲಭ್ಯಗಳನ್ನು ಮತ್ತು ಅನುಕೂಲತೆಗಳನ್ನು ಸಾಕಷ್ಟು ಒದಗಿಸಿ ಕೊಟ್ಟಿರುವಂತಹದ್ದನ್ನು ನಾವು ಗಮನಿಸಬೇಕಾಗುತ್ತದೆ. ಆ ಹಿನ್ನೆಲೆಯಲ್ಲಿ ಸ್ವಾಧೀನಪಡಿಸಿಕೊಂಡಿರುವ ಭೂಮಿಗೆ ಮಾರುಕಟ್ಟೆ ಬೆಲೆಯನ್ನು ನಿಗದಿ ಮಾಡುವಂತಹ ಸಮಯದಲ್ಲಿ ಕಾನೂನಿನಲ್ಲಿ ಏನಿದೆ ಎಂದರೆ, ತಮಗೆಲ್ಲರಿಗೂ ಗೊತ್ತಿರುವಂತೆ ನ್ಯಾಯೋಚಿತ ಬೆಲೆಯನ್ನು ಗುರುತಿಸುವಾಗ ಆ ಗ್ರಾಮದಲ್ಲಿರುವಂತಹ ಅಥವಾ ಆ ಸ್ಥಳದಲ್ಲಿರುವಂತಹ Sub Registrar valuation ಅನ್ನು ಗಣನೆಗೆ ತೆಗೆದುಕೊಂಡು ಏನು guidance value ಆಧಾರದ ಮೇಲೆ ಇವತ್ತಿನ ದಿವಸ ಮಾರುಕಟ್ಟೆ ಬೆಲೆಯನ್ನು ನಿಗದಿ ಮಾಡಬೇಕೆಂದು ಭೂಸ್ವಾಧೀನ ಕಾಯಿದೆ ಹೇಳುತ್ತಿದೆ. ಆ ಒಂದು ಕಾನೂನಿನ ಪ್ರಕಾರ ನಾವು ಹೋದರೆ ಇವತ್ತು ಯಾವ ಒಂದು ಗ್ರಾಮದಲ್ಲಿಯೂ ಕೂಡ ನ್ಯಾಯೋಚಿತ ಬೆಲೆಯನ್ನು ಪಡೆಯಲಿಕ್ಕೆ ಸಾಧ್ಯವಾಗುವುದಿಲ್ಲ. ಕಾರಣ ಇಷ್ಟೆ, Sub Registrar valuation ಅನ್ನು ಮೊದಲಿನಿಂದಲೂ ಕೂಡ 10 ವರ್ಷಕ್ಕೋ, 15 ವರ್ಷಕ್ಕೋ ಹೆಚ್ಚು ಮಾಡುತ್ತಾ ಬಂದಿದ್ದಾರೆ. ಹೀಗಾಗಿ ಅಲ್ಲಿ ಇರತಕ್ಕಂತಹ ಬೆಲೆಯೂ ಕೂಡ ಬಹಳ ಕಡಿಮೆ ಇರುವುದರಿಂದ ಸಂತ್ರಸ್ತರಿಗೆ ಇವತ್ತಿನ ದಿವಸ ವಾಸ್ತವಿಕ ಬೆಲೆ ಸಿಗುವುದು ಬಹಳ ಕಷ್ಟವಾಗಿದೆ ಎನ್ನುವುದನ್ನೂ ಕೂಡ ನಾನು ಹೇಳಲಿಕ್ಕೆ ಬಯಸುತ್ತಿದ್ದೇನೆ. ಆ ಹಿನ್ನೆಲೆಯಲ್ಲಿ ಪ್ರತಿ ವರ್ಷ guidance value ಹೆಚ್ಚಾಗುತ್ತಾ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಂದಿದ್ದರೆ ಇವತ್ತು ಮಾರುಕಟ್ಟೆ ಬೆಲೆಯೂ ಸಹ ಯೋಗ್ಯವಾಗಿರುತ್ತಿತ್ತು ಎನ್ನುವುದನ್ನು ನಾನು ಹೇಳಲಿಕ್ಕೆ ಬಯಸುತ್ತೇನೆ.

**ಮುಂದು. . .**

(589) 07.06.2017 SPR-MD 4.00 **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಮುಂದು):-**

ಇವತ್ತಿನ ದಿವಸ ಹೊಸ ಕಾನೂನಿನ ಪ್ರಕಾರ ಒಂದೊಂದು ಗ್ರಾಮದ ಜಮೀನುಗಳಿಗೆ ಒಂದೊಂದು ರೀತಿಯಾದ ಬೆಲೆಗಳಿರುವುದರಿಂದ ಕೃಷ್ಣಾ ಮೇಲ್ದಂಡೆ ಯೋಜನೆಗಾಗಿ ಭೂಮಿಯನ್ನು ಕಳೆದುಕೊಂಡಿರುವ ಸಂತ್ರಸ್ತರಿಗೆ ಒಂದೇ ರೀತಿಯಾದ ಬೆಲೆಯನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ನಾನು ಈ ಸದನದ ಮುಖಾಂತರ ಸರ್ಕಾರವನ್ನು ಒತ್ತಾಯ ಮಾಡುವುದೇನೆಂದರೆ ನ್ಯಾಯೋಚಿತವಾಗಿರುವಂತಹ ಬೆಲೆಯನ್ನು consent award ಹಾಗೂ ಒಪ್ಪಿಗೆ ಐ-ತೀರ್ಪಿನ ಮುಖಾಂತರ ನೀಡಿ ಸಂತ್ರಸ್ಥರಿಗೆ ನ್ಯಾಯವನ್ನು ಒದಗಿಸಿಕೊಡಬೇಕೆಂಬ ಕಳಕಳಿಯ ಪ್ರಾರ್ಥನೆಯನ್ನು ನಾನು ಮಾಡಿಕೊಳ್ಳಲಿಕ್ಕೆ ಬಯಸುತ್ತೇನೆ. ಈಗಾಗಲೇ ಕಾನೂನಿನಲ್ಲಿ ಕೂಡ ಇದಕ್ಕೆ ಅವಕಾಶವಿದೆ. ಭೂಸ್ವಾಧೀನ ಕಾಯ್ದೆ-2013 ರ ಕಲಂ 109 ರನ್ವಯ ಕಾನೂನಿನಲ್ಲಿ ಬದಲಾವಣೆಯನ್ನು ತಿದ್ದುಪಡಿ ಮುಖಾಂತರ ತಂದು consent award ಮಾಡಲಿಕ್ಕೆ ಅವಕಾಶವಿದೆ ಎನ್ನುವುದನ್ನು ಕೂಡ ನಾನು ಹೇಳಲಿಚ್ಛಿಸುತ್ತೇನೆ.

ಈಗಾಗಲೇ ಬೇರೆ ಬೇರೆ ಕಡೆ ಕೂಡ ಹೊಸ ಕಾನೂನು ಬಂದ ಮೇಲೆ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಗೆ ಭೂಸ್ವಾಧೀನವನ್ನು ಮಾಡಿಕೊಳ್ಳುವಂತಹ ಹಂತದಲ್ಲಾಗಿರಬಹುದು ಅಥವಾ ಕೆರೆ ಕಟ್ಟಡಗಳನ್ನು ನಿರ್ಮಿಸುವ ಹಂತದಲ್ಲಾಗಿರಬಹುದು consent award ಮುಖಾಂತರ ಬೆಲೆಯನ್ನು ಕೊಟ್ಟಿರುವಂಥದ್ದನ್ನು ನಾವಿಲ್ಲಿ ಗಮನಿಸುತ್ತಿದ್ದೇವೆ. ಈ ಹಿನ್ನೆಲೆಯಲ್ಲಿ ಈ ಭಾಗದಲ್ಲಿಯೂ ಕೂಡ ಸಂತ್ರಸ್ತರಿಗೆ ಒಪ್ಪಂದದ ಐ-ತೀರ್ಪಿನ ಮುಖಾಂತರ ಬೆಲೆಯನ್ನು ನಿಗದಿಪಡಿಸಬೇಕೆಂದು ಈ ಸದನವನ್ನು ನಾನು ಒತ್ತಾಯಿಸುತ್ತೇನೆ.

ಇದರ ಜೊತೆಗೆ ಈಗಾಗಲೇ 1996-97 ರಲ್ಲಿ ಎರಡನೇ ಹಂತದ ಭೂಸ್ವಾಧೀನವು 519.6 ಎಕರೆಯಷ್ಟು ಆದಾಗ ಆ ಭಾಗದಲ್ಲಿಯೂ ಸುಮಾರು 1,50,000 ಎಕರೆಯಷ್ಟು ಭೂಸ್ವಾಧೀನವಾಗಿದ್ದಂತಹ ಸಂದರ್ಭದಲ್ಲಿ ಅಂದಿನ ಮುಖ್ಯಮಂತ್ರಿಗಳಾದ ದಿವಂಗತ ಜೆ.ಹೆಚ್.ಪಟೇಲ್ ರವರ ನೇತೃತ್ವದಲ್ಲಿ ಸಲಹಾ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಮಿತಿ ಹಾಗೂ ಭೂ ನಿರ್ಧಾರಣಾ ಸಮಿತಿಯನ್ನು ಮಾಡಿ, ಸದರಿ ಸಮಿತಿಗಳ ಮುಖಾಂತರ consent award ನ್ನು ಕೊಟ್ಟಿರುವುದನ್ನು ಇವತ್ತಿನ ದಿವಸ ನಾವೆಲ್ಲರೂ ಕೂಡ ಗಮನಿಸಬಹುದು. ಇದೇ ಹಿನ್ನೆಲೆಯಲ್ಲಿ ಇವತ್ತಿನ ದಿವಸ ಮುಖ್ಯ ಮಂತ್ರಿಗಳ ನೇತೃತ್ವದಲ್ಲಿ ಒಂದು ಸಮಿತಿಯನ್ನು ಆದಷ್ಟು ಶೀಘ್ರದಲ್ಲಿ ರಚನೆ ಮಾಡಿ consent award ಕೊಡುವಂತಹ ಕ್ರಮವನ್ನು ಕೈಗೊಳ್ಳಿ. ಎಲ್ಲರಿಗೂ ಕೂಡ ಒಳ್ಳೆಯ ಬೆಲೆಯನ್ನು ಕೊಡುವಂತಹ ಕೆಲಸಗಳಾಗಬೇಕು ಎನ್ನುವ ಮನವಿಯನ್ನು ಸದನದ ಗಮನಕ್ಕೆ ತರಲಿಚ್ಛಿಸುತ್ತೇನೆ. ಸದರಿ ಸಮಿತಿಯಲ್ಲಿ ಆ ಭಾಗದ ಅಂದರೆ ಭಾದಿತಗೊಂಡ ಪ್ರದೇಶದ ಜನಪ್ರತಿನಿಧಿಗಳು, ಅಧಿಕಾರಿಗಳು, ಮುಳುಗಡೆ ಸಮಿತಿಯ ಹೋರಾಟದ ಅಧ್ಯಕ್ಷರನ್ನೊಳಗೊಂಡ ಸಮಿತಿಯೊಂದನ್ನು ರಚಿಸಲಾಗಿತ್ತು. ಅದೇ ರೀತಿಯಾಗಿ ಈಗಲೂ ಕೂಡ ಸಮಿತಿಯನ್ನು ರಚನೆ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಅಂದಿನ ಹೋರಾಟವನ್ನು ಇವತ್ತಿನ ದಿವಸ ನಾವೆಲ್ಲರೂ ಗಮನಕ್ಕೆ ತಂದುಕೊಂಡರೆ, ದಿವಂಗತ ವಾಸನ್ ದೇಸಾಯಿರವರಂತಹ ವ್ಯಕ್ತಿಯು ಹಿತರಕ್ಷಣಾ ಸಮಿತಿಯ ಅಧ್ಯಕ್ಷರಾಗಿ ಆ ಭಾಗದ ಜನರಿಗೆ ಸಾಕಷ್ಟು ನ್ಯಾಯವನ್ನು ಒದಗಿಸಿಕೊಟ್ಟಿರುವಂತಹ ಸಂಗತಿಯನ್ನು ನಾನು ನೆನಪಿಸಿಕೊಳ್ಳುವುದಕ್ಕೆ ಬಯಸುತ್ತೇನೆ. ಅದೇ ಮಾದರಿಯಲ್ಲಿ ಇವತ್ತಿನ ದಿವಸ consent rateನ್ನು ಕೊಡುವ ಕೆಲಸವನ್ನು ಸರ್ಕಾರ ಮಾಡಿದರೆ ನಮ್ಮ ಸಂತ್ರಸ್ತರ ಬದುಕಿಗೆ ನ್ಯಾಯವನ್ನು ಒದಗಿಸಿಕೊಟ್ಟಂತಾಗುತ್ತದೆ ಎನ್ನುವ ವಿಚಾರವನ್ನು ಕೂಡ ನಾನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ.

ನಾನು consent awardಗೆ ಹೆಚ್ಚು ಮಹತ್ವವನ್ನು ಏಕೆ ಕೊಡುತ್ತಿದ್ದೇನೆಂದರೆ ಸಂತ್ರಸ್ತರೆಲ್ಲರೂ ಕೂಡ ಒಂದೇ ಆಗಿದ್ದೇವೆ ; ಎಲ್ಲರಿಗೂ ಒಂದೇ ರೀತಿಯ ಬೆಲೆ ಸಿಗಲಿ ಎನ್ನುವ ಭಾವನೆಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ಇವತ್ತಿನ ದಿವಸ ಹೊಸ ಕಾನೂನಿನ ಪ್ರಕಾರ ಒಂದು ಗ್ರಾಮಕ್ಕೆ ಒಂದು ರೀತಿಯಾದ ಬೆಲೆ ಸಿಗುತ್ತಿದೆ. ಈಗಾಗಲೇ ಸಾಕಷ್ಟು ಜಮೀನುಗಳಿಗೆ ಹೊಸ ಕಾನೂನಿನ ಪ್ರಕಾರ ಬೆಲೆಯನ್ನು ನಿಗದಿಪಡಿಸುವಂತಹ ಕೆಲಸ ನಡೆದಿದೆ. ಈ ಹಿನ್ನೆಲೆಯಲ್ಲಿ ಉದಾಹರಣೆಗೆ ಹೇಳುವುದಾದರೆ, ಬಾಗಲಕೋಟೆ ತಾಲ್ಲೂಕಿನಲ್ಲಿ ರಸ್ತೆಯ ಒಂದೆ ಕಡೆ ಕಲಾದಿ ಗ್ರಾಮ ಮತ್ತೊಂದು ಕಡೆ ಅಂಕಲಿ ಗ್ರಾಮಗಳಿವೆ. ಈ ಗ್ರಾಮಗಳ ಮಧ್ಯದಲ್ಲಿ ರಸ್ತೆ ಹಾದು ಹೋಗುತ್ತದೆ. ಈ ರಸ್ತೆಯ ಪಕ್ಕದಲ್ಲಿ ಸೇತುವೆ ಮತ್ತು ಅಣೆಕಟ್ಟನ್ನು ನಿರ್ಮಿಸಲು ಒಟ್ಟಾರೆ 4.5 ಎಕರೆ ಜಮೀನನ್ನು ಭೂಸ್ವಾಧೀನ ಪಡಿಸಿಕೊಳ್ಳುತ್ತಿದ್ದಾರೆ. ಆ ಪೈಕಿ ಎರಡು ಎಕರೆ ಜಮೀನು ಕಲಾದಿ ಗ್ರಾಮದ್ದಾಗಿದ್ದು ಇನ್ನೆರೆಡು ಎಕರೆ ಜಮೀನು ಅಂಕಲಿ ಗ್ರಾಮಕ್ಕೆ ಸೇರಿದ್ದಾಗಿದೆ. ಮಾರ್ಗಸೂಚಿಯ ಪ್ರಕಾರ ಬೆಲೆಯನ್ನು ನಿಗದಿಪಡಿಸಿದಾಗ ಕಲಾದಿ ಗ್ರಾಮದ ಜಮೀನಿನ ಒಂದು ಎಕರೆಗೆ ರೂ.4,20,000/-ಗಳಾಗುತ್ತವೆ. ಆದರೆ ಅದೇ ರಸ್ತೆಯ ಪಕ್ಕದಲ್ಲಿರುವ ಅಂಕಲಿ ಗ್ರಾಮದ ಜಮೀನಿನ ಒಂದು ಎಕರೆಗೆ ರೂ.19,48,000/- ಗಳಷ್ಟು ಹಣವನ್ನು ಕೊಡುತ್ತಿದ್ದಾರೆ. ಈಗಾಗಲೇ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಗಿರುವ ಐ–ತೀರ್ಪಿನ ಪ್ರಕಾರ ಇಂತಹ ಬೆಲೆಯನ್ನು ನಿಗದಿಪಡಿಸಲಾಗಿದೆ. ಬೆಲೆ ನಿಗದಿಯ ಪ್ರತಿಯು ನನ್ನ ಬಳಿ ಲಭ್ಯವಿದೆ. ಇಂತಹ ಬೆಲೆಯ ತಾರತಮ್ಯವನ್ನು ಸರ್ಕಾರವು ಗಮನಿಸಬೇಕು. ಒಂದೇ ರಸ್ತೆಯ ಪಕ್ಕದಲ್ಲಿ ಚಕ್ಕಡಿ ದಾರಿ, ಕಾಲು ದಾರಿಗಳಿವೆ. ಇಂತಹ ರಸ್ತೆಯನ್ನು 66 ಅಡಿ ರಸ್ತೆಯ ವಿಶಾಲವಾದ ರಸ್ತೆಯನ್ನಾಗಿ ಮಾಡಲು ಹೊರಟಾಗ 4 ಎಕರೆಯಷ್ಟು ಜಮೀನು ಸ್ವಾಧೀನಪಡಿಸಿಕೊಳ್ಳುವಂತಹ ಪ್ರಸಂಗ ಉದ್ಭವಿಸಿದಾಗ ಒಂದು ಗ್ರಾಮದ ಜಮೀನಿನ ಎಕರೆಯೊಂದಕ್ಕೆ ರೂ.4,20,000/– ಹಾಗೂ ಮತ್ತೊಂದು ಗ್ರಾಮದ ಜಮೀನಿನ ಎಕರೆಯೊಂದಕ್ಕೆ ರೂ.19,48,000/– ಬೆಲೆಯನ್ನು ನಿಗದಿಪಡಿಸಿರುವುದರಿಂದ ಅನ್ಯಾಯವಾಗುತ್ತಿದೆ ಎನ್ನುವ ಅಂಶವನ್ನು ಸದನದ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ.

ಇದೇ ರೀತಿಯಾಗಿ ಉಷ್ಣ ಸ್ಥಾವರದ ಹತ್ತಿರದಲ್ಲಿರುವ ಬಸವನಬಾಗೇವಾಡಿ ತಾಲ್ಲೂಕಿನ ಕಾಲುವೆಗಳ ನಿರ್ಮಾಣಕ್ಕಾಗಿ ಭೂಸ್ವಾಧೀನ ಪಡಿಸಿಕೊಂಡ ಜಮೀನುಗಳ ಪೈಕಿ ಖುಷ್ಕಿ ಜಮೀನಿಗೆ ಎಕರೆಯೊಂದಕ್ಕೆ ಕೇವಲ ರೂ.2,80,000/–ಗಳನ್ನು ಹಾಗೂ ನೀರಾವರಿ ಜಮೀನುಗಳಿಗೆ ಎಕರೆಯೊಂದಕ್ಕೆ ರೂ.4,40,000/– ಗಳನ್ನು ನಿಗದಿಪಡಿಸಲಾಗಿದೆ. ಇದೇ ರೀತಿಯಾಗಿ ಹತ್ತು ಹಲವಾರು ಜಮೀನುಗಳಿಗೆ ಬೆಲೆಯ ಐ–ತೀರ್ಪು ಆಗಿರುವುದನ್ನು ನಾವು ಗಮನಿಸಿದರೆ ಇವತ್ತಿನ ದಿವಸ ಯಾವುದೇ ಒಬ್ಬ ರೈತನು ಕೂಡ ತಾವು ಒಂದು ಎಕರೆ ಜಮೀನನ್ನು ಕಳೆದುಕೊಂಡರೆ ಅರ್ಧ ಎಕರೆ ಜಮೀನನ್ನು ಖರೀದಿಸಲು ಸಾಧ್ಯವಾಗದಂತಹ ಪರಿಸ್ಥಿತಿ ಆ ಭಾಗದಲ್ಲಿ ನಿರ್ಮಾಣವಾಗಿದೆ. ಈ ಹಿನ್ನೆಲೆಯಲ್ಲಿ ಬಸವನಬಾಗೇವಾಡಿ ತಾಲ್ಲೂಕಿನ ಕೂಡಗಿ ಎನ್ನುವ ಪ್ರದೇಶದಲ್ಲಿ ಉಷ್ಣ ಸ್ಥಾವರವನ್ನು ಆರಂಭಿಸುವ ಯೋಜನೆಯಲ್ಲಿ ಕಳೆದ ಆರು ವರ್ಷಗಳ ಹಿಂದೆ ಖುಷ್ಕಿ ಜಮೀನಿನ ಎಕರೆಯೊಂದಕ್ಕೆ ರೂ.7,25,000/–ಗಳನ್ನು ಹಾಗೂ ನೀರಾವರಿ ಜನೀಮಿನ ಎಕರೆಯೊಂದಕ್ಕೆ ರೂ.9,00,000/–ಗಳನ್ನು ನಿಗದಿಪಡಿಸಲಾಗಿದೆ. ಇಂತಹ ಒಪ್ಪಿಗೆ ಐ–ತೀರ್ಪಿನ ಹಿನ್ನೆಲೆಯಲ್ಲಿ ಒಟ್ಟು 4,500 ಎಕರೆ ಜಮೀನನ್ನು ಭೂಸ್ವಾಧಿನಪಡಿಸಿಕೊಂಡಿರುವ ಸಂಗತಿಯನ್ನು ನಾನು ಸದನದ ಗಮನಕ್ಕೆ ತರಲಿಚ್ಛಿಸುತ್ತೇನೆ. ಅದೇ ಮಾದರಿಯಲ್ಲಿ consent rateನ್ನು ಇವತ್ತಿನ ದರದ ಅನುಗುಣವಾಗಿ ಮಾಡಬೇಕು ಎನ್ನುವುದು ನನ್ನ ಆಗ್ರಹವಾಗಿದೆ.

ಇದೇ ರೀತಿಯಾಗಿ ಬಾಗಲಕೋಟೆ ಜಿಲ್ಲೆಯ ಬಾಗಲಕೋಟೆ ಹೋಬಳಿಯ ಕಂದಾಯ ಪ್ರದೇಶದ ವ್ಯಾಪ್ತಿಯಲ್ಲಿರುವ ಎರಡೂ ತಾಲ್ಲೂಕುಗಳಲ್ಲಿಯೂ ಕೂಡ ರೈಲ್ವೆ ಮಾರ್ಗ ಹಾದು ಹೋಗುವಂತಹ ಸಂದರ್ಭದಲ್ಲಿ ಖುಷ್ಕಿ ಜಮೀನಿನ ಎಕರೆಯೊಂದಕ್ಕೆ ರೂ.9,00,000/– ಹಾಗೂ ನೀರಾವರಿ ಜಮೀನಿನ ಎಕರೆಯೊಂದಕ್ಕೆ ರೂ.12,00,000/– ಗಳನ್ನು ಕೊಟ್ಟು ಕಳೆದ ನಾಲ್ಕು ವರ್ಷಗಳ ಹಿಂದೆ consent

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

award ಮುಖಾಂತರ ರೈಲ್ವೆ ಹಳಿಯನ್ನು ನಿರ್ಮಿಸಲು ಭೂಸ್ವಾಧೀನಪಡಿಸಿಕೊಂಡ ಅಂಶವನ್ನು ನಾವು ಗಮನಿಸಬೇಕು. ಮೇಲ್ಕಂಡ ಎಲ್ಲಾ ಅಂಶಗಳನ್ವಯ ಇವತ್ತಿನ ದಿವಸ ಎರಡೂ ಜಿಲ್ಲೆಗಳಲ್ಲಿನ ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಳ್ಳುವಂತಹ ವಿಚಾರವನ್ನು ಹಾಗೂ ಈ ಸಂಬಂಧ ಐ–ತೀರ್ಪಿನ ಪ್ರಕಾರ ಬೆಲೆಯನ್ನು ನಿಗದಿಪಡಿಸಿರುವಂತಹ ವಿಚಾರಗಳನ್ನು ನಾವು ಗಮನಿಸಿದಾಗ ಸಂತ್ರಸ್ತರ ಸ್ಥಿತಿ ಬಹಳ ಚಿಂತಾಜನಕವಾಗಿದೆ. ಸುಮಾರು 1,34,000 ಎಕರೆಯಷ್ಟು ಜಮೀನನ್ನು ಕಳೆದುಕೊಂಡ ರೈತರು ತ್ನನ್ನ ಬದುಕಿಗೆ ಆಸರೆಯಾಗಲಿಕ್ಕೆ ನ್ಯಾಯೋಚಿತವಾದ ಒಳ್ಳೆಯ ಬೆಲೆ ಸಿಗುತ್ತಿದೆಯೆ ಎನ್ನುವುದು ಇವತ್ತಿನ ದಿವಸದ ಯಕ್ಷ ಪ್ರಶ್ನೆಯಾಗಿದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ. ಆದಷ್ಟು ಶೀಘ್ರದಲ್ಲಿ ಹೆಚ್ಚಿನ ಪರಿಹಾರವನ್ನು ಕೊಡುವಂತಹ ಕೆಲಸಗಳು ಇವತ್ತಿನ ದಿವಸ ಸರ್ಕಾರದಿಂದಾಗಬೇಕು ಎನ್ನುವ ಮಾತನ್ನು ಕೂಡ ನಾನು ಈ ಸಂಬಂರ್ಧದಲ್ಲಿ ಹೇಳಲಿಚ್ಛಿಸುತ್ತೇನೆ.

ಇವುಗಳ ಜೊತೆಗೆ ಬೆಲೆ ನಿರ್ಧಾರ ಸಮಿತಿಯನ್ನು ಅತೀ ಶೀಘ್ರದಲ್ಲಿ ರಚಿಸಬೇಕು ಹಾಗೂ consent award ಮುಖಾಂತರ ಭೂಸ್ವಾಧೀನ ಪ್ರಕ್ರಿಯೆಯು ಇನ್ನಷ್ಟು ಶೀಘ್ರವಾಗಿ ಆಗಬೇಕೆನ್ನುವ ವಿಚಾರವನ್ನು ಇಲ್ಲಿ ಪ್ರಸ್ತಾಪಿಸುತ್ತೇನೆ. ಇವುಗಳ ಜೊತೆಗೆ ಬಹಳ ಮಹತ್ವವಾದ ಮತ್ತೊಂದು ವಿಚಾರವೇನೆಂದರೆ ಬೆಲೆ ನಿರ್ಧಾರ ಸಮಿತಿಯ ರಚನೆ. ಇವತ್ತಿನ ದಿವಸ ಹೊಸ ಕಾನೂನಿನ ಪ್ರಕಾರ ನಮಗೆಲ್ಲರಿಗೂ ನ್ಯಾಯ ಸಿಗುತ್ತಿದೆ ಎಂದರೆ ಮಾರ್ಗಸೂಚಿಯ ಬೆಲೆ ಇವತ್ತು ಇರುವುದಿಲ್ಲ. ಇದರ ಜೊತೆಗೆ ಭೂಸ್ವಾಧೀನ ಪ್ರಕ್ರಿಯೆಯು ಕೂಡ ಕಳೆದ ನಾಲ್ಕು ವರ್ಷಗಳಿಂದ ನಡೆಯುತ್ತಿದೆ. 75,000 ಎಕರೆ ಜಮೀನಿನ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡು ಈಗಾಗಲೇ ಮೂರ್‍ನಾಲ್ಕು ವರ್ಷಗಳಾಯಿತು. ಕಾನೂನಿನ ಪ್ರಕಾರ ಭೂಸ್ವಾಧೀನ ಪಡಿಸಿಕೊಂಡ ಒಂದು ವರ್ಷದ ಅವಧಿಯೊಳಗಾಗಿ ಭೂ ಮಾಲೀಕರಿಗೆ ಭೂಸ್ವಾಧೀನ ಕಾಯ್ದೆಯ ಕಲಂ 11(1) ರನ್ವಯ ನೋಟೀಸ್‌ನ್ನು ನೀಡುತ್ತಿದ್ದಾರೆ. ನೋಟೀಸು ಕೊಟ್ಟ ಒಂದು ವರ್ಷದ ಅವಧಿಯೊಳಗೆ 2ನೇ ಹಂತದ ಪರಿಹಾರ ಮೊತ್ತವನ್ನು ಕೊಡಬೇಕಾಗುತ್ತದೆ. ಈ ಪ್ರಕ್ರಿಯೆಗಳು ಆಗದಂತಹ ಸಂದರ್ಭದಲ್ಲಿ ಅಲ್ಲಿನ ಭೂಸ್ವಾಧೀನಾಧಿಕಾರಿಗಳು ಅಥವಾ ಆಯುಕ್ತರು ಒಂದು ವರ್ಷದ ಕಾಲ ಸಕಾರಾತ್ಮಕವಾಗಿರುವ ಉತ್ತರವನ್ನು ಒದಗಿಸುವುದರ ಮುಖಾಂತರ ಒಂದು ವರ್ಷದ ಅವಧಿಯನ್ನು ವಿಸ್ತರಣೆ ಮಾಡುವಂತಹ ಅನುಕೂಲ ಕಾನೂನಿನಲ್ಲಿದೆ. ಒಂದು ವರ್ಷ ಅವಧಿ ಕ್ರಮಬದ್ಧವಾಗಿದೆ. ಅವಧಿ ವಿಸ್ತರಣೆ ಮಾಡಿ ಮೂರ್‍ನಾಲ್ಕು ವರ್ಷಗಳು ಕಳೆದರೂ ಕೂಡ ಐ–ತೀರ್ಪನ್ನು ಮಾಡದಿರುವುದು ಬಹಳ ನೋವಿನ ಸಂಗತಿಯಾಗಿದೆ ಎನ್ನುವ ಮಾತನ್ನು ಈ ಸದನದಲ್ಲಿ ಹೇಳುತ್ತೇನೆ. ಇವತ್ತಿನ ದಿವಸ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡು ಮೂರು ವರ್ಷಗಳಾಗಿದೆ. ಸ್ವಾಧೀನ ಪಡಿಸಿಕೊಂಡ ಭೂಮಿಯ ಮಾಲೀಕರಾದ ರೈತ ಜಮೀನಿನ ಆಧಾರದ ಮೇಲೆ ಸಾಲವನ್ನು ಪಡೆಯಲು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಆಗುವುದಿಲ್ಲ, ಜಮೀನು ಇನ್ನೇನು ಮುಳುಗಡೆಯಾಗುತ್ತದೆ ಎನ್ನುವ ಭಯದಿಂದ ಅಭಿವೃದ್ಧಿ ಮಾಡಲಿಕ್ಕೆ ಸಾಧ್ಯವಾಗುತ್ತಿಲ್ಲ, ಜಮೀನಿನಲ್ಲಿ ಬೋರನ್ನು ಕೊರೆಸಲು, ಪೈಪ್‌ಲೈನ್‌ನ್ನು ಅಳವಡಿಸಲಾಗದಿರುವಂತಹ ಸಂಕಷ್ಟದ ಪರಿಸ್ಥಿತಿಯಲ್ಲಿ ಆ ಭಾಗದ ರೈತರು ನರಳಾಡುತ್ತಿದ್ದಾರೆ. ಅದಕ್ಕಾಗಿ ನಾನು ಈ ಸದನದ ಮುಖಾಂತರ ಸರ್ಕಾರವನ್ನು ಕೇಳಬಯಸುವುದೇನೆಂದರೆ ಸ್ವಾಧೀನ ಪಡಿಸಿಕೊಂಡ ಜಮೀನಿಗೆ ಈಗಾಗಲೇ ಕಾನೂನಿನ ವ್ಯಾಪ್ತಿಯಲ್ಲಿ ಪ್ರಕ್ರಿಯೆ ಪ್ರಾರಂಭವಾಗಿದೆ. ಒಂದು ವೇಳೆ ಪ್ರಕ್ರಿಯೆ ಪ್ರಾರಂಭವಾಗದೇ ಇದ್ದರೂ ಕೂಡ ಮತ್ತೊಮ್ಮೆ ಪ್ರಾರಂಭಿಸಿ ಭೂಸ್ವಾಧೀನ ಪ್ರಕ್ರಿಯೆಗೆ ಚಾಲನೆ ನೀಡಿ ಎನ್ನುವಂತಹ ವಿನಂತಿಯನ್ನು ನಾನು ಮಾಡಿಕೊಳ್ಳುತ್ತಿದ್ದೇನೆ.

**ಶ್ರೀ ವಿ.ಎಸ್.ಉಗ್ರಪ್ಪ(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಜಮೀನಿನ ಭೂಸ್ವಾಧೀನ ಪ್ರಕ್ರಿಯೆಯು ಕಾಯ್ದೆಯ ಕಲಂ 4(1) ರನ್ವಯ ಯಾವಾಗ ಮಾಡಲಾಗಿದೆ?

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-** ಮಾನ್ಯ ಸಭಾಪತಿಯವರೆ, ಹೊಸ ಕಾಯ್ದೆಯ ಪ್ರಕಾರ 11(1) ಎಂದು ಹೇಳುತ್ತಿದ್ದಾರೆ. ಎಲ್ಲಾ ಜಮೀನುಗಳ ಭೂಸ್ವಾಧೀನ ಪ್ರಕ್ರಿಯೆಯು ಒಂದೇ ಬಾರಿಗೆ ಆಗಿಲ್ಲ. ಒಂದೊಂದು ಹಂತದಲ್ಲಿ ಒಂದೊಂದು ಗ್ರಾಮದಲ್ಲಿ ವಿವಿಧ ದಿನಾಂಕಗಳಂದು ಭೂಸ್ವಾಧೀನವಾಗಿದೆ. 2014-15 ನೇ ಸಾಲಿನಿಂದ ಭೂಸ್ವಾಧೀನ ಪ್ರಕ್ರಿಯೆಯು ಆರಂಭವಾಗಿದೆ. 2012-13 ನೇ ಸಾಲಿನಲ್ಲಿಯೂ ಕೂಡ ಸುಮಾರು 10,000 ಎಕರೆಗಳಷ್ಟು ಜಮೀನಿನ ಭೂಸ್ವಾಧೀನವು ಕಾಯ್ದೆಯ ಕಲಂ 4(1) ರನ್ವಯ ಮಾಡಿಕೊಳ್ಳಲಾಗಿದೆ. ಹೊಸ ಕಾಯ್ದೆಯ ಪ್ರಕಾರ ಕಲಂ 11(1) ರನ್ವಯ ಭೂಸ್ವಾಧೀನ ಮಾಡಿದ ನಂತರ ಒಂದು ವರ್ಷದಲ್ಲಿ ಐ-ತೀರ್ಪಿನ ಪ್ರಕಾರ ಬೆಲೆಯನ್ನು ನಿಗದಿಪಡಿಸಬೇಕು. ಒಂದು ವೇಳೆ ಇದಕ್ಕೇನಾದರೂ ಕಾನೂನು ತೊಡಕುಗಳಿದ್ದರೆ ಹೆಚ್ಚುವರಿಯಾಗಿ ಒಂದು ವರ್ಷದವರೆಗೆ ಅವಧಿಯನ್ನು ವಿಸ್ತರಿಸುವ ಅಧಿಕಾರ ಭೂಸ್ವಾಧೀನಾಧಿಕಾರಿಗಳಿಗಿದೆ. ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡ ಎರಡು ವರ್ಷಗಳ ನಂತರವೂ ಕೂಡ ಐ-ತೀರ್ಪು ಆಗದಿದ್ದರೆ ಅದನ್ನು ಸ್ವಯಂಚಾಲಿತವಾಗಿ ಪ್ರಾರಂಭಿಸುವ ಪ್ರಸಂಗವಿದೆ. ನಾವು ಐ-ತೀರ್ಪನ್ನು ಪ್ರಾರಂಭಿಸಿ ಎಂದು ಒತ್ತಾಯಿಸಲು ಕಾರಣವೇನೆಂದರೆ ನಂತರದಲ್ಲಿ ಮಾರ್ಗಸೂಚಿಯ ಬೆಲೆಗಳು ಜಾಸ್ತಿಯಾಗಿರುತ್ತವೆ. ಇದರಿಂದಾಗಿ ರೈತರಿಗೆ ಲಾಭ ಸಿಗುತ್ತದೆ ಎನ್ನುವ ವಿಚಾರವನ್ನು . . .

**ಶ್ರೀ ಬಸವರಾಜ ರಾಯರೆಡ್ಡಿ (ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೆ, ಯೋಜನೆ ಅವಧಿಯ ವಿಸ್ತರಣೆಯಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ನಮ್ಮ ಮುಂದೆ ಎರಡು ಆಯ್ಕೆಗಳಿವೆ. ಮೊದಲನೆಯದು ಪರಿಹಾರದ ಮೊತ್ತ ಜಾಸ್ತಿಯಾಗಬೇಕು. ಎರಡನೆಯದು ನೀರಿನ ಸೌಲಭ್ಯವನ್ನು ಬಳಸಿಕೊಂಡು ರಾಜ್ಯವು ಅಭಿವೃದ್ಧಿ ಹೊಂದಬೇಕು. ಹಾಗಾಗಿ ಇವತ್ತು ಎಷ್ಟು ಸಾವಿರ ಎಕರೆ ಪ್ರದೇಶ ಸ್ವಾಧೀನಗೊಂಡಿದೆ, ಅದಕ್ಕೆ ಪರಿಹಾರವನ್ನು ಕೊಡತಕ್ಕಂಥ ವಿಚಾರವನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡುತ್ತಿದ್ದು, ಅದು ನಿಜಕ್ಕೂ ಸೂಕ್ತವಾಗಿರುವಂಥದ್ದಾಗಿದೆ.

(ಮುಂದು)

(590) 07.06.2017 MSS-AK 4.10

**ಶ್ರೀ ವಿ.ಎಸ್.ಉಗ್ರಪ್ಪ(ಮುಂದು):-**

ಎಷ್ಟು ಎಕರೆ ಭೂಮಿಯನ್ನು ಸರ್ಕಾರ ಸ್ವಾಧೀನ ಪಡಿಸಿಕೊಂಡಿದೆ ಅದಕ್ಕೆ ಪರಿಹಾರವನ್ನು ಕೊಡತಕ್ಕಂತಹ ವಿಚಾರವನ್ನು ಏನು ಮಾನ್ಯ ಸದಸ್ಯರು ಮಂಡನೆ ಮಾಡುತ್ತಿದ್ದಾರೆ ಅದು ನಿಜಕ್ಕೂ ಕೂಡ ಸೂಕ್ತವಾಗಿರತಕ್ಕಂಥದ್ದು. ತಕ್ಷಣ ಪರಿಹಾರವನ್ನು ಕೊಟ್ಟು ಈಗ ಏನು ಟ್ರಿಬ್ಯೂನಲ್-2 ರಲ್ಲಿ Justice Brijesh Kumar ರವರ ಅವಾರ್ಡ್ ಪ್ರಕಾರವಾಗಿ ನಮಗೆ ಏನು ಬಂದಿರತಕ್ಕಂಥದ್ದು ಒಟ್ಟಾರೆ 1006 ಅಥವಾ 1009 ಟಿಎಂಸಿ ನೀರು ಎಂದು ಕಾಣುತ್ತದೆ. ಈಗ ಹೆಚ್ಚುವರಿಯಾಗಿ 130 ಟಿಎಂಸಿ ನೀರು ನಮ್ಮ ಪಾಲಿಗೆ ಬಂದಿರುವುದು. ಹಾಗಾಗಿ ಅದನ್ನು ಬಳಕೆ ಮಾಡಿಕೊಳ್ಳುವಂತಹ ಸಂದರ್ಭದಲ್ಲಿ acquisition matters ನಲ್ಲಿ ಏನಾದರು ಅಭಿವೃದ್ಧಿಗೆ ಕುಂಠಿತವಾಗುತ್ತದೆ. ಮಾನ್ಯ ಸದಸ್ಯರು ಹೇಳುತ್ತಿರುವುದು ಸರಿಯಾಗಿದೆ. ನಾನು ಇದರ ಬಗ್ಗೆ ಆಮೇಲೆ ಮಾತನಾಡುತ್ತೇನೆ.

**ಶ್ರೀ ನಿರಾಣಿ ಹಣವಂತ ರುದ್ರಪ್ಪ:-** ಮಾನ್ಯ ಸಭಾಪತಿಯವರೆ, ಈಗಾಗಲೇ ಹಿರಿಯ ಸದಸ್ಯರು ಹೇಳಿದ ಹಾಗೆ ಭೂ ಸ್ವಾಧೀನ ಕೂಡ ಆಗಬೇಕು ಮತ್ತು ಭೂಮಿಯನ್ನು ಕಳೆದುಕೊಂಡಂತಹ ರೈತರಿಗೆ ಆದಷ್ಟು ಬೇಗ ಪರಿಹಾರವನ್ನು ಕೂಡ ಕೊಡಬೇಕು. ಒಳ್ಳೆಯ ಪರಿಹಾರದ ಹಣವನ್ನು ಕೊಡಬೇಕೆಂದು ತಮ್ಮ ಮುಖಾಂತರ ಸರ್ಕಾರವನ್ನು ಕೇಳಿಕೊಳ್ಳುತ್ತಿದ್ದೇನೆ. ಅದರ ಜೊತೆಯಲ್ಲಿ ಕಾನೂನು ತೊಡಕುಗಳು ಕೂಡ ಬಹಳಷ್ಟು ಇದ್ದರೂ ಕೂಡ ಅದನ್ನು ಮೀರಿ ಇವತ್ತಿನ ದಿವಸ ಸಂತ್ರಸ್ಥರಿಗೆ ನೆಲೆಯನ್ನು ಹೂಡಿಕಿ ಕೊಡಬೇಕು ಎನ್ನುವುದನ್ನು ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಹೇಳುತ್ತಿದ್ದೇನೆ. ಜೊತೆಗೆ Consent Award ಮಾಡುವುದಕ್ಕೆ ಬರುವುದಿಲ್ಲ ಎನ್ನುವಂತಹ ಕೂಗು ಇವತ್ತಿನ ದಿವಸ ಕೇಳಿ ಬಂದರೂ ಕೂಡ ಮಾನ್ಯ ಸಚಿವರ ಗಮನಕ್ಕೆ ಒಂದು ವಿಷಯವನ್ನು ತರುವುದೇನಂದರೆ, ರೈಲ್ವೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಟ್ರ್ಯಾಕ್‌ಗಾಗಿ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪ್ರತಿ ಎಕರೆಗೆ 19,60,20,000 Consent Award ರೈಲ್ವೆ ಮುಖಾಂತರ ಬೆಲೆಯನ್ನು ಒದಗಿಸಿರುವಂತಹ ಉದಾಹರಣೆ ನಮ್ಮ ಮುಂದಿದೆ. ಮತ್ತೆ ವಾಣಿಜ್ಯ ಮಳಿಗೆಗಳಿಗೆ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿರುವುದರಲ್ಲಿ 29,40,30,000 ರೂಪಾಯಿಗಳಷ್ಟು ಒಂದು ಎಕರೆಗೆ ಪರಿಹಾರದ ಹಣವನ್ನು ಕೊಟ್ಟಿದ್ದಾರೆ. ಅಂದರೆ ನಾವು ಇಷ್ಟು ಪರಿಹಾರದ ಹಣವನ್ನು ಒಂದು ಎಕರೆಗೆ ಕೊಡಬೇಕೆಂದು ಕೇಳುತ್ತಿಲ್ಲ. ಆದರೆ consent ಗೆ ಪ್ರಾವಿಜನ್ ಇದೆ ಎನ್ನುವುದನ್ನು ನಾನು ಸರ್ಕಾರಕ ಗಮನಕ್ಕೆ ತಮ್ಮ ಮುಖಾಂತರ ತರುತ್ತಿದ್ದೇನೆ. ಜೊತೆಗೆ ಇವತ್ತಿನ ದಿವಸ consent ಅಥವಾ ಭೂ ಸ್ವಾಧೀನ ಕಾಯ್ದೆಯ ಪ್ರಕಾರವಾಗಿ ರೆಗ್ಯೂಲರ್ ಅಗಿ ಅವಾರ್ಡ್ ಮಾಡಲಾಗುತ್ತದೆ. ಆದರೆ ಎಲ್ಲಿ consent ಅಗುವುದಿಲ್ಲ ಅಲ್ಲಿ ನ್ಯಾಯಾಲಯಕ್ಕೆ ಹೋಗಿ ತೆಗೆದುಕೊಳ್ಳುವಂತಹ ಅವಕಾಶ ಕೂಡ ಇದೆ. ಈಗಾಗಲೇ ಸಾಕಷ್ಟು ಪ್ರಕರಣಗಳು ಕೂಡ ನ್ಯಾಯಾಲಯದಲ್ಲಿ ಜನರಲ್ ಅವಾರ್ಡ್ ಅಗಿ, ಅದು ಹಳೆಯ ಕಾನೂನು ಪ್ರಕಾರವಾಗಿದೆ ಕೆಲವು ಹೊಸ ಕಾನೂನು ಪ್ರಕಾರವಾಗಿ ಮಿಕ್ಸ್ ಅಗಿದೆ. ಸುಮಾರು 5,000 ಕ್ಕೂ ಹೆಚ್ಚು ಪ್ರಕಾರಗಳು ನ್ಯಾಯಾಲಯಕ್ಕೂ ಕೂಡ ಹೋಗದೇ S.L.A.O. (Special Land Acquisition Officer) Office ನಲ್ಲಿ ಪೆಂಡಿಂಗ್ ಇದೆ. ಭೂಸ್ವಾಧೀನ ಪಡಿಸಿಕೊಂಡು ಅವಾರ್ಡ್ ಆದ 45 ದಿವಸಗಳಲ್ಲಿ ಪ್ರಾಧಿಕಾರಕ್ಕೆ ಆ ರೆಫರೆನ್ಸ್‌ಗಳನ್ನು ನಾವು ಸಲ್ಲಿಸಬೇಕು. ಪ್ರಾಧಿಕಾರಕ್ಕೆ ಆ ರೆಫರೆನ್ಸ್‌ಗಳನ್ನು ಸಲ್ಲಿಸದೇ ಇದ್ದಾಗ ರೆಫರೆನ್ಸ್‌ಗಳು ರಿಜೆಕ್ಟ್ ಅಗುವಂಥದ್ದು ಕಾನೂನು ವ್ಯಾಪ್ತಿಯಲ್ಲಿದೆ. ಪ್ರಾಧಿಕಾರಕ್ಕೆ ನಾವು ಸಲ್ಲಿಸಬೇಕು ಆದರೆ ಇವತ್ತಿನ ದಿವಸದವರೆಗೂ ಪ್ರಾಧಿಕಾರ ರಚನೆಯಾಗಿಲ್ಲ. ಪ್ರಾಧಿಕಾರ ರಚನೆಗೆ ಈಗಾಗಲೇ ಸಕಾರ ಆದೇಶ ಮಾಡಿದೆ. ಮೊದಲು ಪ್ರತಿಯೊಂದು ರೆವಿನ್ಯೂ ಜಿಲ್ಲೆಗೆ ಒಂದೊಂದು ಪ್ರಾಧಿಕಾರವನ್ನು ಮಾಡಬೇಕೆಂದು ನಿರೀಕ್ಷೆ ಇಟ್ಟುಕೊಂಡು ಮಾಡಿದ್ದರು. ಅದನಂತರ ಕೂಡ ಪ್ರತಿಜಿಲ್ಲೆಗೆ ಒಂದರಂತೆ ಪ್ರಾಧಿಕಾರವನ್ನು ಮಾಡುತ್ತೇವೆ ಎನ್ನುವಂತಹ ಒಂದು ಹೇಳಿಕೆಯನ್ನು ಕೂಡ ಕೊಟ್ಟಿದ್ದಾರೆ. ಸುಮಾರು ನ್ಯಾಯಾಲಯದಲ್ಲಿ ಮತ್ತು S.L.A.O. Office ನಲ್ಲಿ ಬಾಕಿ ಇರುವಂತಹ ಒಟ್ಟು ಪ್ರಕರಣಗಳು 11,363 ಇದೆ. 11,363 ರೆಫರೆನ್ಸ್ ಎಂದರೆ 11,363 ಸಂತ್ರಸ್ಥರು. ಅವರು ಇವತ್ತಿನ ದಿವಸ ನ್ಯಾಯಾಲಯಕ್ಕೆ ಹೋಗುವುದಕ್ಕಾಗುತ್ತಿಲ್ಲ. ಪ್ರಾಧಿಕಾರದ ಮುಂದೆ ಕೂಡ ಹೋಗುವುದಕ್ಕಾಗುತ್ತಿಲ್ಲ. ಇವೆಲ್ಲಾ ರೆಫರೆನ್ಸ್‌ಗಳು S.L.A.O. Office ನಲ್ಲಿ ಅಥವಾ ಭೂಸ್ವಾಧೀನ ಅಧಿಕಾರಿಗಳಲ್ಲಿ ಪೆಂಡಿಂಗ್ ಇರುವಂಥದ್ದು ಕೂಡ ತಾವು ಗಮನಿಸಬೇಕೆಂದು ಹೇಳುತ್ತಾ, ಅದರಲ್ಲಿಯೂ ಕೃಷ್ಣ ಮೇಲ್ದಂಡೆ ಜಲಾಶಯವನ್ನು 524.56 ಮೀಟರ್‌ಗೆ ಎತ್ತರಿಸಿದಾಗ ಬಾಗಲಕೋಟೆಯ ಸುಮಾರು 10 ವಾರ್ಡ್‌ಗಳು ಮುಳುಗಡೆಯಾಗಿ ಸುಮಾರು 2,300 ಕುಟುಂಬಗಳನ್ನು ಸ್ಥಳಾಂತರವಾಗಬೇಕಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆದರೆ ವಾಸ್ತವಿಕವಾಗಿ ಕಾನೂನಿನಲ್ಲಿ ಎಷ್ಟು ಭೂ ಪ್ರದೇಶದಲ್ಲಿ ನೀರು ನಿಲುಗಡೆಯಾಗುತ್ತದೆ ಅಷ್ಟು ಜಾಗಕ್ಕೆ ಮಾತ್ರ ಪರಿಹಾರವನ್ನು ಕೊಡಬೇಕೆಂದು ಹೊಸ ಕಾನೂನಿನಲ್ಲಿ ಹೇಳುತ್ತಿದೆ. ಆದರೆ ಅಲ್ಲಿ ನದಿ ಪಕ್ಕದಲ್ಲಿ ಜನರು ವಾಸ ಮಾಡುವುದಕ್ಕಾಗುವುದಿಲ್ಲ. ಈ ದಿಸೆಯಲ್ಲಿ 527 ಮೀಟರ್ ಎತ್ತರದವರೆಗೂ ಮಾಡಿದಾಗ ಏನು ನೀರು ನಿಲ್ಲುತ್ತದೆ ಅಲ್ಲಿಯವರೆಗೆ ಭೂ ಸ್ವಾಧೀನವಾಗಬೇಕೆಂದು, ಅಲ್ಲಿಯ ಭೂ ಸಂತ್ರಸ್ಥರ ಬೇಡಿಕೆ ಇದೆ. ಆ ಹಿನ್ನಲೆಯಲ್ಲಿ ಸರ್ಕಾರ ಕೂಡ ಒಪ್ಪಿಗೆಯನ್ನು ಸೂಚಿಸುವುದನ್ನೂ ಕೂಡ ಮಾನ್ಯ ಸಚಿವರ ಗಮನವನ್ನು ತಮ್ಮ ಮುಖಾಂತರ ಸೆಳೆಯುತ್ತಿದ್ದೇನೆ. ಒಟ್ಟಿನಲ್ಲಿ ಬೃಹತ್ ಆಕಾರವಾಗಿರುವಂತಹ ಸಮಸ್ಯೆ ಈ ಕೃಷ್ಣ ಮೇಲ್ದಂಡೆ ಯೋಜನೆಯಲ್ಲಿ ಭೂಸ್ವಾಧೀನ ಮತ್ತು ಪರಿಹಾರಕ್ಕೆ ಸರಿಯಾದ ಬೆಲೆಯನ್ನು ಕೊಡುವುದರಲ್ಲಿಯೂ ಕೂಡ ಸಮಸ್ಯೆ ಇದೆ ಎನ್ನುವುದನ್ನು ಗಮನಿಸಬೇಕೆಂದು ತಮ್ಮ ಮುಖಾಂತರ ಸರ್ಕಾರಕ್ಕೆ ಹೇಳುತ್ತಿದ್ದೇನೆ. ಭೂಸ್ವಾಧೀನ ಪ್ರಕ್ರಿಯೆಯೂ ಒಂದು ಭಾಗವಾದರೆ ಇನ್ನೊಂದು ಕಡೆ rehabilitation and resettlement ಎನ್ನುವುದನ್ನೂ ಕೂಡ ಮಾಡಬೇಕಾಗಿದೆ. ಈಗಾಗಲೇ ಅಗಿರುವಂತಹ 157 ಪುನರ್ ವಸತಿಗಳ ಪೈಕಿ ಸುಮಾರು 137 ಪುನರ್ ವಸತಿ ಕೇಂದ್ರಗಳನ್ನು ಸ್ಥಾಪನೆ ಮಾಡಲಾಗಿದೆ. 137 ಪುನರ್ ವಸತಿ ಕೇಂದ್ರಗಳಲ್ಲಿ 31 ಪುನರ್ ವಸತಿ ಕೇಂದ್ರಗಳನ್ನು ಗ್ರಾಮ ಪಂಚಾಯಿತಿಗೆ ಹಸ್ತಾಂತರ ಮಾಡಲಾಗಿದೆ. ಗ್ರಾಮ ಪಂಚಾಯಿತಿಗೆ ಹಸ್ತಾಂತರ ಮಾಡಿದ ಮೇಲೆ ಪುನರ್ ವಸತಿ ಅಧಿಕಾರಿಗಳು ಅಲ್ಲಿರತಕ್ಕಂತಹ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತಿಲ್ಲ. ಗ್ರಾಮ ಪಂಚಾಯಿತಿಯವರು ಕೂಡ ಕೆಲಸವನ್ನು ಮಾಡುತ್ತಿಲ್ಲ. ಇದರ ನಡುವೆ ಸಂತ್ರಸ್ಥರ ಪರಿಸ್ಥಿತಿ ಒಂದು ರೀತಿಯಲ್ಲಿ ಚಿಂತಜನಕವಾಗಿದೆ ಎನ್ನುವುದನ್ನು ತಮ್ಮ ಮುಖಾಂತರ ಮಾನ್ಯ ಸಚಿವರಿಗೆ ಹೇಳುತ್ತಿದ್ದೇನೆ.

**ಶ್ರೀ ಎಂ.ಬಿ.ಪಾಟೀಲ್(ಜಲ ಸಂಪನ್ಮೂಲ ಸಚಿವರು):-** ಮಾನ್ಯ ಸಭಾಪತಿಯವರೆ, ಹಳೆಯ ಪುನರ್ ವಸತಿ ಕೇಂದ್ರಗಳ ಅಭಿವೃದ್ಧಿಗಾಗಿ ಜಿಲ್ಲಾ ಪಂಚಾಯಿತಿಗೆ ಹಣವನ್ನು ವರ್ಗಾವಣೆ ಮಾಡಲಾಗಿದೆ. 50% ನಷ್ಟು ಜನರು ಎಲ್ಲಿ ಜನರು ಪುನರ್ ವಸತಿ ಕೇಂದ್ರ ಶಿಫ್ಟ್ ಅಗಿದ್ದಾರೆ ಅಲ್ಲಿಗೆ ಇನ್ನು ಏನಾದರು ಮಾಡುವುದಕ್ಕಾಗಿ ಜಿಲ್ಲಾ ಪಂಚಾಯಿತಿಗೆ ಹಣವನ್ನು ವರ್ಗಾವಣೆ ಮಾಡಲಾಗಿದೆ. ಆದರೆ ಪುನರ್ ವಸತಿ ಕೇಂದ್ರ ಇನ್ನು ಯಾರು ಶಿಫ್ಟ್ ಅಗಿಲ್ಲ ಅಂತಹ ಕೆಲವು ಕೇಂದ್ರಗಳಿದೆ. ಆದರೆ 192 ಹಳ್ಳಿಗಳು ಬರುವಂತಹ 50% ಗಿಂತಲೂ ಹೆಚ್ಚು ಮನೆಗಳು ಶಿಫ್ಟ್ ಅಗಿರುವಂತಹ ಕಡೆಯಲ್ಲಿ ಅಭಿವೃದ್ಧಿಯನ್ನು ಮಾಡಲು 400 ಕೋಟಿ ರೂಪಾಯಿಗಳ ಪ್ರಸ್ತಾವನೆ ಇತ್ತು. ಅದಕ್ಕೆ 200 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಆದರೆ ಎಲ್ಲಿ ಒಂದು ಮನೆಯೂ ಕೂಡ ಶಿಫ್ಟ್ ಅಗಿಲ್ಲ ಅಲ್ಲಿ ಕೆಲಸ ಮಾಡಿದರೆ ಮತ್ತೆ ಹಳೆಯದಾಗಿ ಹೋಗುತ್ತದೆ. ಅದರಿಂದ ಪ್ರಯೋಜನವಾಗುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಕಳೆದ ಬಾರಿ ತಮಗೆ ಗೊತ್ತಿದೆ. ದಿನಾಂಕ 23.11.2016ಕ್ಕೆ ಇದೇ ಪ್ರಶ್ನೆ ಬಂದಿತ್ತು. ತಾವು ಕೂಡ ಉತ್ತರವನ್ನು ಕೊಟ್ಟಿದ್ದೀರಿ. ಈಗ ನೀಡಿರುವ ಲಿಖಿತ ಉತ್ತರದಲ್ಲಿಯೂ ಕೂಡ ಬಹಳ ಸ್ಪಷ್ಟವಾಗಿ ಕೊಟ್ಟಿದ್ದೀರಿ. ಆದರೆ ಪ್ರಶ್ನೆ ಬಂದಿರುವುದೇನೆಂದರೆ, ಅವತ್ತಿನ ದಿವಸ ಉತ್ತರವನ್ನು ಕೊಡುವಂತಹ ಸಂದರ್ಭದಲ್ಲಿಯೂ ಮಾನ್ಯ ಸಚಿವರು ಬಹಳ ಕ್ಲಿಯರ್ ಅಗಿ ಹೇಳಿದ್ದೀರಿ. ಭೂಸ್ವಾಧೀನ ಮಾಡಿಕೊಂಡಾಗ ಒಂದೇ ರೀತಿಯ ಬೆಲೆಯನ್ನು ಕೊಡಬೇಕೆಂದು.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೆ, ಅದರ ಬಗ್ಗೆ ಕೂಡ ಚರ್ಚೆ ನಡೆಯುತ್ತಿದೆ. ಹಳೆಯ ಪುನರ್ ವಸತಿ ಕೇಂದ್ರಗಳು ಬಹಳ ಕೆಟ್ಟ ಪರಿಸ್ಥಿತಿಯಲ್ಲಿದೆ ಎಂದು ಹೇಳಿದ್ದಾರೆ. ಅದನ್ನು ನಾವು ಅಂದಾಜು ಮಾಡಿ 400 ಕೋಟಿಗಳ ಪ್ರಸ್ತಾವನೆ ಬಂದಿತ್ತು. ಅದರಲ್ಲಿ 400 ಹಳ್ಳಿಗಳು ಬರುತ್ತದೆ. 400 ಹಳ್ಳಿಗಳನ್ನು ಅಪ್‌ಡೇಟ್ ಮಾಡಿ ಹ್ಯಾಂಡ್‌ಓವರ್ ಮಾಡಬೇಕೆಂದು ಹೇಳಿದ್ದೇವೆ. ಅದರಲ್ಲಿ 192 ಹಳ್ಳಿಗಳು ಈಗಾಗಲೇ ಶಿಫ್ಟ್ ಅಗಿದೆ. 192 ಪುನರ್ ವಸತಿ ಕೇಂದ್ರಗಳಲ್ಲಿ ಕೆಲಸವನ್ನು ಮಾಡಲು 192 ಕೋಟಿ ರೂಪಾಯಿಗಳ ಹಣವನ್ನು ಬಿಡುಗಡೆ ಮಾಡಿ ಜಿಲ್ಲಾ ಪಂಚಾಯಿತಿಗಳಿಗೆ ವರ್ಗಾವಣೆ ಮಾಡಿದ್ದೇವೆ. ಅವರು ಹ್ಯಾಂಡ್ ಓವರ್ ಮಾಡುತ್ತಾರೆ. ನಮ್ಮ ರಾಜ್ಯದಲ್ಲಿ ಭೂಮಿಯನ್ನು ಭೂಸ್ವಾಧೀನ ಪಡಿಸಿಕೊಂಡಿದ್ದಕ್ಕೆ ಏಕಾ ರೂಪದಲ್ಲಿ ಹಣವನ್ನು ಕೊಡಬೇಕು ಎನ್ನುವುದರ ಬಗ್ಗೆ ಚರ್ಚೆ ನಡೆಯುತ್ತಿದೆ. ಇನ್ನು ಯಾರ್‍ಯಾರು ಸದಸ್ಯರುಗಳು ಅದರ ಬಗ್ಗೆ ಮಾತನಾಡುತ್ತಾರೆ ನಂತರ ಅದರ ಬಗ್ಗೆ ಉತ್ತರವನ್ನು ಕೊಡುತ್ತೇನೆ. It is just an intervention for this specific point.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ನಂತರ ಉತ್ತರ ಕೊಟ್ಟರೆ ತೊಂದರೆ ಇಲ್ಲ.

**ಶ್ರೀ ನಿರಾಣಿ ಹಣಮಂತ ರುದ್ರಪ್ಪ:-** ಮಾನ್ಯ ಸಭಾಪತಿಯವರೆ, 192 ಕೋಟಿ ರೂಪಾಯಿಗಳನ್ನು ಪುನರ್ ವಸತಿ ಕೇಂದ್ರಗಳನ್ನು ಅಭಿವೃದ್ಧಿಗೆ ಈ ವರ್ಷದ ಬಜೆಟ್‌ನಲ್ಲಿ ಹಣವನ್ನು ಮೀಸಲು ಇಡಲಾಗಿದೆ. ಇದಕ್ಕಾಗಿ ಮಾನ್ಯ ಸಚಿವರಿಗೆ ಅಭಿನಂದಿಸುತ್ತೇವೆ. ನಮ್ಮ ಕಡೆ 176 ಗ್ರಾಮಗಳು ಮುಳುಗಡೆಯಾಗುತ್ತಿದೆ. ಒಂದು ಪುನರ್ ವಸತಿ ಕೇಂದ್ರಕ್ಕೆ ಒಂದು ಕೋಟಿ ರೂಪಾಯಿಗಳು ಕೂಡ ಬರುತ್ತಿಲ್ಲ. ಈ ರೀತಿಯಾಗಿ ಇಷ್ಟು ಹಣವನ್ನು ಕೊಟ್ಟರೆ ಸಂಪೂರ್ಣವಾಗಿ ಯಾವ ರೀತಿಯಾಗಿ ಅಭಿವೃದ್ಧಿಯಾಗುವುದಕ್ಕೆ ಸಾಧ್ಯವಾಗುತ್ತದೆ? ಹಳೆಯ ಗ್ರಾಮದಲ್ಲಿ 10 ಎಕರೆಯ ಪ್ರದೇಶದಲ್ಲಿ ಒಂದು ಗ್ರಾಮ ಇದ್ದರೆ ಪುನರ್ ವಸತಿ ಕೇಂದ್ರಕ್ಕೆ ಶಿಫ್ಟ್ ಆದಾಗ ಸುಮಾರು 40 ಎಕರೆಯಷ್ಟು ಜಮೀನು ಇರುತ್ತದೆ. ಆ 40 ಎಕರೆ ಪ್ರದೇಶದಲ್ಲಿ ಪುನರ್ ವಸತಿ ಕೇಂದ್ರವನ್ನು ಪ್ರಾರಂಭ ಮಾಡಿದಾಗ ಎಷ್ಟು ರಸ್ತೆ, ಚರಂಡಿಗಳು ಬರುತ್ತದೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಎನ್ನುವುದನ್ನು ಲೆಕ್ಕ ಹಾಕಿದರೆ ಒಂದು ಪುನರ್ ವಸತಿ ಕೇಂದ್ರದಲ್ಲಿ ಒಂದು ಕೋಟಿ ರೂಪಾಯಿಗಳಿಂದ ಚರಂಡಿಯನ್ನು ಕೂಡ ಮಾಡುವುದಕ್ಕಾಗುವುದಿಲ್ಲ. ಅದಕ್ಕಾಗಿ ಹೆಚ್ಚಿನ ಹಣವನ್ನು ಸರ್ಕಾರ ಕೊಡಬೇಕೆಂದು ನನ್ನ ಆಗ್ರಹ.

**ಶ್ರೀ ಎಂ.ಬಿ.ಪಾಟೀಲ್(ಜಲ ಸಂಪನ್ಮೂಲ ಸಚಿವರು):-** ಮಾನ್ಯ ಸಭಾಪತಿಯವರೆ, ಮೊದಲು ಪುನರ್ ವಸತಿ ಕೇಂದ್ರ ಅಭಿವೃದ್ಧಿಯಾಗಿದೆ. ಇವುಗಳನ್ನು ಅಪ್‌ಡೇಟ್ ಮಾಡಿಕೊಡುವುದಕ್ಕೆ 192 ಕೋಟಿ ರೂಪಾಯಿಗಳನ್ನು ಕೊಟ್ಟಿರುವಂಥದ್ದು. ಮೊದಲು ಅಭಿವೃದ್ಧಿಯಾಗಿಲ್ಲವೆಂದಲ್ಲ. ಅಪ್‌ಡೇಟ್ ಮಾಡಿ ಹ್ಯಾಂಡ್‌ಓವರ್ ಮಾಡಬೇಕಾದರೆ ಏನೆಲ್ಲಾ ಉಳಿದಂತಹ ಕಾರ್ಯಗಳು ಅಥವಾ ಹಾಳಾಗಿರುವಂತಹ ಕಾಮಗಾರಿಯನ್ನು ರಿಪೇರಿ ಮಾಡಿ ಕೊಡುವುದಕ್ಕೆ ಹಣವನ್ನು ಕೊಟ್ಟಿರುವುದು.

**ಶ್ರೀ ನಿರಾಣಿ ಹಣವಂತ ರುದ್ರಪ್ಪ:-** ಮಾನ್ಯ ಸಭಾಪತಿಯವರೆ, ಈಗಾಗಲೇ ಅನುದಾನವನ್ನು ಕೊಟ್ಟಿದ್ದಾರೆ. ನಾನು ಕೊಟ್ಟಿಲ್ಲವೆಂದು ಹೇಳುತ್ತಿಲ್ಲ. ಸಾಕಷ್ಟು ಕೆಲಸ, ಕಾರ್ಯಗಳು ಕೂಡ ನಡೆದಿದೆ. ಇಲ್ಲವೆಂದು ನಾನು ಹೇಳುತ್ತಿಲ್ಲ. ಆದರೆ ಪೂರ್ಣವಾಗಿ ಅಭಿವೃದ್ಧಿಯಾಗಬೇಕಾದರೆ ಹಣ ಸಾಕಾಗುತ್ತಿಲ್ಲವಾದರಿಂದ ಹೆಚ್ಚು ಹಣವನ್ನು ಒದಗಿಸಬೇಕೆಂದು ಆಗ್ರಹ ಅಷ್ಟೇ. ಏಕೆಂದರೆ ಇವತ್ತಿನ ದಿವಸ ಯಾವುದೇ ಒಂದು ಲೇಔಟ್ ಅನ್ನು ನಾವು N.A. (Non-Agricultural) land ಎಂದು ಕನ್ವರ್ಟ್ ಮಾಡಬೇಕಾದರೆ ನಾವು ಯಾವಾಗ ಪೂರ್ತಿಯಾಗಿ N.A. land ಎಂದು ಹ್ಯಾಂಡ್‌ಓವರ್ ಮಾಡುತ್ತೇವೆಂದು ಅಲ್ಲಿ ಎಲ್ಲಾ ರೀತಿಯ ಮೂಲಭೂತ ಸೌಕರ್ಯವನ್ನು ಒದಗಿಸಿಕೊಟ್ಟ ಮೇಲೆ ಆ N.A. land ಪೂರ್ಣವಾಗುತ್ತದೆಂದು ನಾನು ತಮ್ಮ ಮುಖಾಂತರ ಹೇಳುತ್ತಿದ್ದೇನೆ. ಪುನರ್ ವಸತಿ ಕೇಂದ್ರಗಳನ್ನು ಸಂತ್ರಸ್ಥರಿಗೆ ಕೊಡಬೇಕಾದರೆ ಅಲ್ಲಿಯ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿಕೊಡಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರು ಹೇಳುತ್ತಿದ್ದೇನೆ.

**. . . ಮುಂದು**

(591) 4.20 sv/ak

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ನಿರಾಣಿ ಹನಮಂತ್ ರುದ್ರಪ್ಪ(ಮುಂದು):-**

ಈಗಾಗಲೇ 15 ವರ್ಷಗಳ ಹಿಂದೆ ಸ್ಥಳಾಂತರಗೊಂಡಿರತಕ್ಕಂತಹ 13 ಪುನರ್ವಸತಿ ಕೇಂದ್ರಗಳಲ್ಲಿ ಇಂದಿಗೂ ಸ್ಮಶಾನದ ಜಾಗವಿರುವುದಿಲ್ಲ. ಆ 13 ಪುನರ್ವಸತಿ ಕೇಂದ್ರಗಳಲ್ಲಿ ಯಾರಾದರೂ ಮೃತ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪಟ್ಟಲ್ಲಿ ಅವರ ಹಳೆಯ ಗ್ರಾಮಕ್ಕೆ ಹೋಗಿ ಅಂತ್ಯಸಂಸ್ಕಾರ ಮಾಡುವಂತಹ ಕೆಲಸ ನಡೆಯುತ್ತಿದೆ. ಮತ್ತೊಂದು ಗ್ರಾಮಕ್ಕೆ ಹೋಗಿ ಅಂತ್ಯಸಂಸ್ಕಾರ ಮಾಡುವಂತಹ ಕೆಲಸ ಮಾಡಲು ಮೃತರ ಕುಟುಂಬದವರು ಮಾನಸಿಕವಾಗಿ ಸಿದ್ಧರಿಲ್ಲದಿರಬಹುದು. ಕಳೆದ ಸದನದಲ್ಲಿಯೂ ಕೂಡ ಕಂದಾಯ ಸಚಿವರು ಇದರ ಬಗ್ಗೆ ಹೇಳಿಕೆಯನ್ನು ನೀಡಿದ್ದರು. ಪ್ರತಿಯೊಂದು ಗ್ರಾಮಕ್ಕೂ ಸಹ ಸ್ಮಶಾನವನ್ನು ಕೊಡುತ್ತೇವೆಂಬ ವಿಚಾರವನ್ನು ಪ್ರಸ್ತಾಪ ಮಾಡಿದ್ದರು. 13 ಪುನರ್ವಸತಿ ಕೇಂದ್ರಗಳಲ್ಲಿಯೂ ಸಹ ಇಂದಿಗೂ ಸ್ಮಶಾನದ ಜಾಗ ಇರುವುದಿಲ್ಲ. ಹೀಗಾಗಿ ಅವರಿಗೆ ಮೂಲಸೌಕರ್ಯಗಳನ್ನು ಕೊಡಬೇಕಾಗಿದೆ. ಸಾಕಷ್ಟು ಕೆಲಸ ಆಗಿದೆ. ಇಲ್ಲ ಎಂದು ಹೇಳುತ್ತಿಲ್ಲ. ಆದರೆ ಆಗಬೇಕಾಗಿರುವುದು ಇನ್ನೂ ಬಹಳಷ್ಟು ಇರುವುದರಿಂದ ಹೆಚ್ಚಿನ ಗಮನವನ್ನು ಹರಿಸಬೇಕಾಗಿದೆ. ಗ್ರಾಮ ಪಂಚಾಯ್ತಿಗಳಿಗೆ ಮೂಲಸೌಕರ್ಯಗಳ ಅಭಿವೃದ್ಧಿ ಕೆಲಸವನ್ನು ವಹಿಸಿಕೊಟ್ಟಿರುವುದು ಒಳ್ಳೆಯದೇ. ಆದರೆ ಗ್ರಾಮ ಪಂಚಾಯ್ತಿಗಳವರು ಈ ಒಂದು ವಿಶಾಲವಾದ ಪುನರ್ವಸತಿ ಕೇಂದ್ರಗಳ ವಿದ್ಯುದ್ದೀಪಗಳನ್ನು ಕೂಡ ಹಾಕುವುದಕ್ಕೆ ಆಗುವುದಿಲ್ಲ. ಉದಾಹರಣೆಗೆ ಹೇಳಬೇಕಾದರೆ ಬೀಳಗಿ ತಾಲ್ಲೂಕಿನಲ್ಲಿ ಸ್ವರ್ಣಗ್ರಾಮ ಇದೆ. ಸ್ವರ್ಣಗ್ರಾಮದಲ್ಲಿ ಸುಮಾರು 6,000 ಜನಸಂಖ್ಯೆ ಇದೆ. 180 ಎಕರೆ ಜಮೀನು ಭೂಸ್ವಾಧೀನವಾಗಿ 180 ಎಕರೆಯಲ್ಲಿಯೂ ಕೂಡ ಪ್ಲಾಟ್‌ಗಳನ್ನು ಕೊಟ್ಟಿದ್ದಾರೆ. ಆ 180 ಎಕರೆಯ ಪ್ರದೇಶದಲ್ಲಿಯೂ ಕೂಡ ವಿದ್ಯುತ್ ಕಂಬಗಳನ್ನು ಹಾಕಿ ಲೈಟ್‌ಗಳನ್ನು ಹಾಕಿದರೆ ಅದರ ವಿದ್ಯುತ್ ಬಿಲ್ಲನ್ನು ಕಟ್ಟುವುದಕ್ಕೆ ಸಹಿತ ಅವರಿಗೆ ಸಾಧ್ಯವಿಲ್ಲ. ಪುನರ್ವಸತಿ ಕೇಂದ್ರಗಳಲ್ಲಿ ಹೆಚ್ಚಿನ ವ್ಯವಸ್ಥೆಯನ್ನು ಕಲ್ಪಿಸಲು ಯಾವ ಪಂಚಾಯ್ತಿಗಳಿಗೆ ವಿಶೇಷ ಅನುದಾನವನ್ನು ಸರ್ಕಾರದಿಂದ ಹಸ್ತಾಂತರ ಮಾಡಲಾಗಿದೆ ಹಾಗೂ ಅಂತಹ ಗ್ರಾಮಪಂಚಾಯ್ತಿಗಳಿಗೆ ಏನಾದರೂ ವಿಶೇಷ ಪ್ಯಾಕೇಜುಗಳನ್ನು ಕೊಡುವ ಮುಖಾಂತರ ಇನ್ನಷ್ಟು ಅಭಿವೃದ್ಧಿ ಕೆಲಸಗಳು ಆಗಬೇಕು ಎನ್ನುವುದು ಸರ್ಕಾರಕ್ಕೆ ನನ್ನ ಆಗ್ರಹವಾಗಿದೆ.

**ಶ್ರೀ ಕಾಗೋಡು ತಿಮ್ಮಪ್ಪ:–** ಮಾನ್ಯ ಸಭಾಪತಿಯವರೆ, ಮುಳುಗಡೆಯ ನೋವು ನನಗೆ ಬಹಳ ಚೆನ್ನಾಗಿ ಗೊತ್ತು.

**ಸಭಾಪತಿಯವರು:–** ನಿಮಗಿಂತ ಹೆಚ್ಚು ಇಲ್ಲಿರುವ ಯಾರಿಗೂ ಗೊತ್ತಿಲ್ಲ.

**ಶ್ರೀ ಕಾಗೋಡು ತಿಮ್ಮಪ್ಪ:–** ಅಂದು ಮುಳುಗಡೆಯಾಗಿ ಹೋದಂತಹ ಜನರು ಇನ್ನೂ ಶಾಶ್ವತವಾಗಿ ನೆಲೆಯೂರಿ ನಿಂತಿಲ್ಲ.

**ಸಭಾಪತಿಯವರು:–** ಅವರು ಇಂದಿಗೂ ಸಂತ್ರಸ್ತರೇ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೆ, ಇಂದು ಎಲ್ಲರೂ ಹೊಸಯುಗದಲ್ಲಿದ್ದಾರೆ. ಅಂದು ಇದ್ದಂತಹ ಪರಿಸ್ಥಿತಿಗೂ, ಇಂದು ಇರತಕ್ಕಂತಹ ಪರಿಸ್ಥಿತಿಗೂ ವ್ಯತ್ಯಾಸವಿದೆ. ಪುನರ್ವಸತಿ ಕೇಂದ್ರಗಳನ್ನು ಮಾಡುವುದು, ಪಂಚಾಯ್ತಿಗಳಿಗೆ ವಹಿಸಿಕೊಡುವುದು ಎಂದೆಲ್ಲಾ ಹೇಳುತ್ತಾರೆ. ಈ ಪಂಚಾಯ್ತಿಗಳು ಹೇಗಿವೆ ಎಂಬುದು ನನಗೆ ಗೊತ್ತಿದೆ. ಅವು ಈಗ ತಾನೇ ಕಣ್ಣುಬಿಡುತ್ತಿವೆ. ಆ ಪ್ರದೇಶದ ಚುನಾಯಿತ ಪ್ರತಿನಿಧಿಗಳೆಲ್ಲಾ ಸೇರಿ ಒಂದು ದೃಷ್ಟಿ ಇಟ್ಟುಕೊಂಡು ಸರ್ವರೀತಿಯಿಂದಲೂ ಪುನರ್ವಸತಿಯನ್ನು ಕಲ್ಪಿಸಲು ಎಂದರೆ ರಸ್ತೆ, ಕುಡಿಯುವ ನೀರು, ಶಾಲೆ ಇತ್ಯಾದಿಗಳನ್ನು ಕಲ್ಪಿಸಲು ಪ್ರಯತ್ನಿಸಿದಲ್ಲಿ ಸರ್ಕಾರವು ನಿಮ್ಮ ಜೊತೆಯಲ್ಲಿರುತ್ತದೆ. ನಮ್ಮ ಜಿಲ್ಲೆಯಲ್ಲಿ ಲಿಂಗನಮಕ್ಕಿ ಅಣೆಕಟ್ಟಿನ ನಿರ್ಮಾಣದ ಸಂದರ್ಭದಲ್ಲಿ ಅಲ್ಲಿದ್ದಂತಹ ಜನರಿಗೆ ನೀರಾವರಿ ಪ್ರದೇಶಕ್ಕೆ ಹೋಗಿ ಎಂದರೆ ಒಬ್ಬರೂ ಹೋಗಲಿಲ್ಲ. ಇಲ್ಲಿ ಬಂದರೆ ದನಗಳನ್ನು ಮೇಯಿಸುವುದಕ್ಕೆ ಜಾಗ ಇಲ್ಲ, ಸೌದೆ ಸಿಗುವುದಿಲ್ಲ ಎಂದು ಹೇಳಿ ಅರಣ್ಯದ ಕಡೆ ಹೋದರು. ಇಂದಿನವರೆವಿಗೂ ಅವರು ಪುನರ್ವಸತಿಯನ್ನು ಹೊಂದಲೇ ಇಲ್ಲ. ಮುಳುಗಡೆಯಾಗಿ ಸ್ಥಳಾಂತರಗೊಂಡಿರುವ ಜನರು ಸಂತೋಷದಿಂದ ಬದುಕುವುದಕ್ಕೆ ಒಂದು ಪ್ರಯತ್ನವನ್ನು ಮಾಡಿ. ಅವರ ಆಶೀರ್ವಾದದಿಂದಲೇ ಆ ಪ್ರದೇಶ ಅಭಿವೃದ್ಧಿಯಾಗುತ್ತದೆ. ಹಣ ಎಷ್ಟೇ ಖರ್ಚಾದರೂ ಸಹ ನೀವೆಲ್ಲಾ ಸೇರಿ ಒಂದು ಪ್ರಯತ್ನವನ್ನು ಮಾಡಿ. ಪುನರ್ವಸತಿಯ ವ್ಯವಸ್ಥೆಯಲ್ಲಿ ಎಲ್ಲವೂ ಇರುತ್ತದೆ. ಎಲ್ಲಾ ರೀತಿಯಾದಂತಹ ವ್ಯವಸ್ಥೆಯನ್ನು ಮಾಡಿ ಅಲ್ಲಿ ಹೋಗುವಂತಹ ಜನರು ಖುಷಿಯಿಂದ ನಗುನಗುತಾ ಹೋಗಬೇಕು. ಆಗ ನೀವು ಮಾಡಿರತಕ್ಕಂತಹ ಕೆಲಸಕ್ಕೆ ಒಂದು ಒಳ್ಳೆಯ ಹೆಸರು ಬರುತ್ತದೆ. ಆ ರೀತಿಯ ವಿಚಾರವನ್ನು ಎಲ್ಲರೂ ಸೇರಿ ಮಾಡಿ.

**ಸಭಾಪತಿಯವರು:-** ಬಹಳ ಗಂಭೀರವಾದಂತಹ ವಿಷಯವನ್ನು ಮಾನ್ಯ ಕಂದಾಯ ಸಚಿವರು ಪ್ರಸ್ತಾಪ ಮಾಡಿದರು. ನಾನೂ ಸಹ ಇದನ್ನು ಪ್ರಸ್ತಾಪ ಮಾಡಬೇಕೆಂದಿದ್ದೆ. ಬಹುಶಃ ನಾನು ಮತ್ತು ಅವರು ಇಬ್ಬರೂ ಸಂತ್ರಸ್ತರಿಗೆ ನ್ಯಾಯಯುತವಾಗಿ ಕೊಡಿಸಬೇಕಾದಂತಹ ಸೌಲಭ್ಯಗಳನ್ನು ಕೊಡಿಸುವಲ್ಲಿ ಕಳೆದ 55-60 ವರ್ಷಗಳಿಂದ ವಿಫಲರಾಗಿದ್ದೇವೆ. ಆ ದುಃಖ ನಮಗೆ ಇದೆ. ನಮ್ಮ ಜಿಲ್ಲೆಯ ಜನ ಏನು ಅನುಭವಿಸಿದರು ಎಂಬುದು ನಮಗೆ ಗೊತ್ತಿದೆ. ಸ್ಮಶಾನ ಇಲ್ಲ ಎಂದು ಮಾನ್ಯ ಸದಸ್ಯರು ಹೇಳಿದರು. ಕನಿಷ್ಠ ಸ್ಮಶಾನದ ವ್ಯವಸ್ಥೆಯನ್ನಾದರೂ ಕಲ್ಪಿಸಿಕೊಡಿ. ಶಾಲೆ, ಸ್ಮಶಾನ, ಆಸ್ಪತ್ರೆ, ಕುಡಿಯುವ ನೀರು ಇವುಗಳನ್ನು ಕಲ್ಪಿಸುವ ಬಗ್ಗೆ ಒಂದು ಪವರ್‌ಪಾಯಿಂಟ್ ಪ್ರೆಸೆಂಟೇಷನ್ ಏಕೆ ಮಾಡಬಾರದು? ನಮ್ಮ ಸದಸ್ಯರನ್ನೆಲ್ಲಾ ಕರೆಸಿ ಅವರಿಗೆ ಒಂದು ಪವರ್‌ಪಾಯಿಂಟ್ ಪ್ರೆಸೆಂಟೇಷನ್ ಮಾಡಿ ತೋರಿಸಿ. ಮಾನ್ಯ ಶ್ರೀ ತಿಮ್ಮಪ್ಪನವರು ಮಾತನಾಡಿದಾಗ ನನ್ನ ಹೃದಯ ತುಂಬಿ ಬಂದಿತು. ಆ ಕಷ್ಟ ಏನು ಅನುಭವಿಸಿದ್ದೇವೆ ಎಂಬುದು ನಮಗೇ ಗೊತ್ತು. ದಯವಿಟ್ಟು ಅದರ ಕಡೆ ಗಮನಿಸಬೇಕಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಾಧ್ಯವಿದ್ದರೆ ಒಂದು ಪವರ್‌ಪಾಯಿಂಟ್ ಪ್ರೆಸೆಂಟೇಷನ್ ಅನ್ನು ಮಾಡಿ. ಬಹಳ ಜವಾಬ್ದಾರಿಯಿಂದ ಒಂದು ಮಾತನ್ನು ಹೇಳುತ್ತೇನೆ. ಯಾವ ಅಧಿಕಾರಿಗಳನ್ನು ನೀವು ಅಲ್ಲಿಗೆ ಕೆಲಸ ಮಾಡುವುದಕ್ಕೆ ನಿಯುಕ್ತಿಗೊಳಿಸುತ್ತೀರೋ, ಅವರನ್ನು ನಿಯುಕ್ತಿಗೊಳಿಸುವುದಕ್ಕೆ ಮುನ್ನ ತಾವು ಒಂದು ಮಾತನ್ನು ಕೇಳಬೇಕು. ನಿಗದಿತ ಕೆಲಸ ಪೂರ್ಣ ಮಾಡಿ ಬರುವವರೆವಿಗೂ ನಿಮಗೆ ವರ್ಗಾವಣೆ ಮಾಡುವುದಿಲ್ಲ ಎಂದು ಹೇಳಬೇಕು. ಒಂದು ಕಾಮಗಾರಿ ನಡೆಯಬೇಕಾದರೆ ಬಾಗಿಲು ಇಡುವವನೊಬ್ಬ, ಗುಂಡಿ ತೋಡುವವನು ಇನ್ನೊಬ್ಬ, ಹೆಂಚು ಹಾಕುವವನು ಮತ್ತೊಬ್ಬ. ಅಧಿಕಾರಿಗಳು ಮೂರು ತಿಂಗಳಿಗೆ, ಆರು ತಿಂಗಳಿಗೆ ಓಡಿಹೋಗುತ್ತಾರೆ. ಕೆಲಸವನ್ನು ಪೂರ್ಣ ಮಾಡುವುದಿಲ್ಲ. ಈ ಮಾತನ್ನು ಬಹಳ ದುಃಖದಿಂದ ಹೇಳುತ್ತೇನೆ. ಈ ತರಹದ ಅಧಿಕಾರಿಗಳಿಗೆ ಬದ್ಧತೆ ಇರುವುದಿಲ್ಲ. ಒಳ್ಳೆಯ ಅಧಿಕಾರಿಗಳು ಇಲ್ಲವೆಂದಲ್ಲ. They are not pro-people. ಅವರ ಡಿಗ್ರಿ ಏನು ಎಂದು ನೀವು ಹುಡುಕುವುದಕ್ಕೆ ಆಗುವುದಿಲ್ಲ. ಅಧಿಕಾರಿಗಳಿಗೆ ಒಂದು ಜವಾಬ್ದಾರಿಯನ್ನು ನಿಗದಿ ಪಡಿಸಿ. ಮಾನ್ಯ ಶ್ರೀ ತಿಮ್ಮಪ್ಪನವರು ಹೇಳಿದಂತೆ ಸಂತ್ರಸ್ತರು ಖುಷಿಯಿಂದ ನಾನು ಹೋಗುತ್ತೇನೆ ಎನ್ನುವಂತೆ ಮಾಡಬೇಕು. ಅದನ್ನು ಮಾಡುವುದಕ್ಕೆ ಇವೆಲ್ಲವನ್ನೂ ಮಾಡದಿದ್ದರೆ ಆಗುವುದಿಲ್ಲ.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೆ, ತಾವು ಹೇಳಿದಂತೆ ಹಿಂದೆ ಭೂಸ್ವಾಧೀನವಾದಾಗ ಪ್ರಾಜೆಕ್ಟ್ ಆಗಿ, ಕಾಲುವೆಯನ್ನು ಮಾಡಿದ್ದಾರೆ. ಪರಿಹಾರವನ್ನು ಕೊಟ್ಟಿರುವುದಿಲ್ಲ. ಇಂತಹ ಪ್ರಸಂಗಗಳು ಬಹಳಷ್ಟು ಬರುತ್ತವೆ. ಇದು ಬೀದರ್ ಮುಂತಾದ ಕಡೆಗಳಲ್ಲಿ ಕಂಡು ಬರುತ್ತದೆ. ಆದರೆ ಕೃಷ್ಣಾ ಮೇಲ್ದಂಡೆ ಯೋಜನೆ-Iರಲ್ಲಿ ಭೂಸ್ವಾಧೀನವಾದ ಸಂದರ್ಭದಲ್ಲಿ ಕನ್ಸೆಂಟ್ ಅವಾರ್ಡ್ ಅನ್ನು ಕೊಟ್ಟಿದ್ದೇವೆ. ಕನ್ಸೆಂಟ್ ಅವಾರ್ಡ್ ಎಂದರೆ ಒಪ್ಪಿಗೆ ನೀಡಿ ಕೊಟ್ಟಿರುವಂತಹದ್ದು. ಆಗ ಅಲ್ಲಿನ ಭೂಮಿಯ ಮಾರುಕಟ್ಟೆ ಬೆಲೆ ಸುಮಾರು 50,000 ಇತ್ತು. A much higher compensation was given. ರೂ.1,48,000 ಪರಿಹಾರವನ್ನು ತೆಗೆದುಕೊಂಡು ಒಂದು ಎಕರೆಯನ್ನು ಬಿಟ್ಟುಕೊಟ್ಟರು. ಎರಡು ಎಕರೆಯನ್ನು ತೆಗೆದುಕೊಂಡರು. ಆ ಸಮಸ್ಯೆ ಇವತ್ತಿನ ದಿನ ಇರುವುದಿಲ್ಲ. ಪರಿಹಾರ ಧನಕ್ಕೆ ಸಂಬಂಧಿಸಿದಂತೆ ಅದು ಹಿಂದೆ ಆಗಿದ್ದು, ಆಗ ಹಳೆಯ ಭೂಸ್ವಾಧೀನ ಕಾಯ್ದೆ ಜಾರಿಯಲ್ಲಿತ್ತು. ಈಗ ಹೊಸ ಭೂಸ್ವಾಧೀನ ಕಾಯ್ದೆ 2013 ಬಂದಿದೆ. ಇದು ಬಂದ ಮೇಲೆ ಬಹಳಷ್ಟು ಮಾರ್ಪಾಡುಗಳನ್ನು ಮಾಡಲಾಗಿದೆ. ಯಾವುದಾದರೂ ಯೋಜನೆಗಾಗಿ ರೈತ ಭೂಮಿಯನ್ನು ಕಳೆದುಕೊಳ್ಳುತ್ತಾನೆ; ಅದು ನೀರಾವರಿ ಇರಬಹುದು ಮತ್ತೊಂದಿರಬಹುದು. ಆ ಭೂಮಿಯ ಬೆಲೆಯನ್ನು 4 ಪಟ್ಟು ಹೆಚ್ಚಿಸಲಾಗುತ್ತದೆ. ಆರ್ & ಆರ್ ಪ್ಯಾಕೇಜ್ ಅಡಿಯಲ್ಲಿ ಇಂತಿಷ್ಟು ಪರ್ಸೆಂಟೇಜ್ ಕೊಟ್ಟರೆ ಅವರಿಗೆ ಇಷ್ಟು ಕೊಡಬೇಕೆಂದು ಹೇಳಿ ಎಲ್ಲವೂ ಕೂಡ ಇದೆ. ನನಗೂ ಕೂಡ ಗೊತ್ತಿದೆ. ಏಕೆಂದರೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾನೂ ಸಹ ಆ ಭಾಗದವನೇ. ನನ್ನ ಮತಕ್ಷೇತ್ರದಲ್ಲಿಯೂ ಸಹ ಇಂದು ಒಂದು ಹೋಬಳಿ ಮುಳುಗಡೆಯಾಗಲಿದೆ. 4 ಪಟ್ಟು ಗೈಡೆನ್ಸ್ ವ್ಯಾಲ್ಯೂ ಮಾಡಿದರೂ ಸಹ ಒಂದು ಗ್ರಾಮಕ್ಕೆ ಒಂದು ಗೈಡೆನ್ಸ್ ವ್ಯಾಲ್ಯೂ ಇದೆ. ಕೃಷ್ಣಾ ಮೇಲ್ದಂಡೆ ಯೋಜನೆ 3 ಅನ್ನು ಪ್ರಾಜೆಕ್ಟ್ ಮಾಡಿದಾಗ ರೂ.17,206 ಕೋಟಿ ರೂಪಾಯಿಗಳು ಇದಕ್ಕೆ ಖರ್ಚಾಗುತ್ತದೆ ಎಂದು ಹಿಂದಿನ ಸರ್ಕಾರದಲ್ಲಿ ಅಂದಾಜಿಸಲಾಗಿತ್ತು. It was based on the guidance value of Rs.2,20,000/-. ಪ್ರತಿಯೊಂದು ಗ್ರಾಮದಲ್ಲಿಯೂ ಭೂಮಿಯನ್ನು ರಿಜಿಸ್ಟ್ರೇಷನ್ ಮಾಡುವಾಗ ಬೇರೆ ಬೇರೆ ಬೆಲೆ ಇರುತ್ತದೆ. ಉದಾಹರಣೆಗೆ ಶ್ರೀ ನಿರಾಣಿಯವರು ಅವರ ಗ್ರಾಮದಲ್ಲಿ ರೂ.1,00,000/-ಕ್ಕೆ ರಿಜಿಸ್ಟ್ರೇಷನ್ ಮಾಡಿಸಿರುತ್ತಾರೆ. ನಾನು ರೂ.1,20,000/-ಕ್ಕೆ ಮಾಡಿಸಿರುತ್ತೇನೆ. ಮತ್ತೊಬ್ಬರು ರೂ.1,30,000/-ಕ್ಕೆ ಮಾಡಿಸಿರುತ್ತಾರೆ. ಮಗದೊಬ್ಬರು ರೂ.1,50,000/-ಕ್ಕೆ ಮಾಡಿಸಿರುತ್ತಾರೆ.

(...ಮುಂದು)

(592)/7-6-2017/4-30/RC-RN

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಂ.ಬಿ.ಪಾಟೀಲ್,ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು(ಮುಂದು):-** ಗ್ರಾಮದಿಂದ ಗ್ರಾಮಕ್ಕೆ guidance value ವ್ಯತ್ಯಾಸ ಆಗುತ್ತದೆ. ನಾಲ್ಕರಷ್ಟು ಗುಣಿಸಿದಾಗಲೂ ಸಹ 2 ಲಕ್ಷ ಇದ್ದವರದ್ದು 8 ಲಕ್ಷ ರೂಪಾಯಿ ಆಗುತ್ತದೆ, 1 ಲಕ್ಷ ರೂಪಾಯಿ ಇದ್ದವರದ್ದು 4 ಲಕ್ಷ ರೂಪಾಯಿ ಆಗುತ್ತದೆ. 50 ಸಾವಿರ ಇದ್ದವರದ್ದು 2 ಲಕ್ಷ ರೂಪಾಯಿ ಆಗುತ್ತದೆ. ಈ ರೀತಿ ವ್ಯತ್ಯಾಸವಾಗುತ್ತದೆ. ಈಗ ಯಾರಿಗೆ ಹೆಚ್ಚಿಗೆ ಸಿಗುತ್ತದೆ ಅವರಿಗೆ ಸಮಸ್ಯೆ ಇಲ್ಲ. ಆದರೆ ಬಹಳಷ್ಟು ಜನರಿಗೆ ಕಡಿಮೆ ಸಿಗುತ್ತದೆ. ಉದಾಹರಣೆಗೆ ಬೀಳಗಿ ಬಗ್ಗೆ ಹೇಳಬೇಕೆಂದರೆ, ನಮ್ಮ ನಿರಾಣಿ ಅವರಿಗೆ ತೊಂದರೆ ಇಲ್ಲ, ಏಕೆಂದರೆ ಬೀಳಗಿಯಲ್ಲಿ guidance value ತುಂಬಾ ಜಾಸ್ತಿ ಇದೆ. ಉಳಿದ ಕಡೆ ಕಡಿಮೆ ಇದೆ. ಅಂದರೆ ಇಲ್ಲಿ ವ್ಯತ್ಯಾಸವಿದೆ. ಆದುದರಿಂದ ಇದರ ಬಗ್ಗೆ ಸರ್ಕಾರ ಸಾಕಷ್ಟು ಚಿಂತನೆ ಮಾಡುತ್ತಿದೆ. ಇದರ ಬಗ್ಗೆ ನಮ್ಮದೂ ಸಹ ಬಹಳ ಕಳಕಳಿ ಇದೆ. ಇದರಲ್ಲಿ higher levelಗೆ ಏನು ಉಳಿಯುತ್ತದೆ, ಅವರಿಗೆ ನಾವೇನು ಮಾಡುವುದಕ್ಕೂ ಆಗುವುದಿಲ್ಲ. ಆದರೆ ಕೆಳಗಡೆ ಯಾರಿದ್ದಾರೆ ಅವರನ್ನು ಮೇಲಕ್ಕೆ ಎತ್ತುವಂತಹ ಪ್ರಯತ್ನ ಮಾಡುತ್ತಿದ್ದೇವೆ. ಈ ಪ್ರಯತ್ನಗಳು ಈಗ ಒಂದು ಹಂತಕ್ಕೆ ಬರುತ್ತಿದೆ. ಇಷ್ಟೇ ಅಲ್ಲದೆ ನನ್ನ ಬಳಿ ಬಹಳಷ್ಟು ವಿಚಾರಗಳಿವೆ. ನಂತರ ಅವುಗಳಿಗೆ ಉತ್ತರ ಕೊಡುತ್ತೇನೆ. ಈಗಾಗಿ ನಿಮ್ಮ ಕಾಲದಲ್ಲಿ ಇದ್ದಂತಹ ಕೆಟ್ಟ ಪರಿಸ್ಥಿತಿ ಇವತ್ತಿನ ದಿವಸ ಇಲ್ಲ. ಯು.ಕೆ.ಪಿ. ಸ್ಟೇಜ್-1 ರಲ್ಲಿ ಇವತ್ತಿನ ದಿವಸ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಳ್ಳೆಯ ಪರಿಹಾರ ಸಿಕ್ಕಿದೆ. ಇನ್ನು ಮಾನ್ಯ ಸದಸ್ಯರು ಹೇಳಿದಂತೆ ಬಹಳಷ್ಟು ಗ್ರಾಮಗಳು ಶಿಫ್ಟ್ ಆಗಲಿಲ್ಲ. ಈಗ ಕೆಲವೊಂದು ಹಳ್ಳಿಗಳು ಮುಳುಗಡೆ ಆಗಿಲ್ಲ. ಈಗ ನಮ್ಮಲ್ಲಿ ಕೆಲವು ಹಳ್ಳಿಗಳು ಮುಳುಗಡೆ ಆಗದೆ ಇದ್ದರೂ ಸಹ ಪರಿಹಾರ ತೆಗೆದುಕೊಂಡು ಇಲ್ಲಿಯವರೆಗೂ ಅನುಭವಿಸಿದ್ದಾರೆ. ಅದರ ಬಗ್ಗೆ ಎರಡು ಮಾತಿಲ್ಲ. ಆದರೆ ಈಗ ಈ ಸಮಸ್ಯೆ ನಮ್ಮ ಮುಂದೆ ಇದೆ. ಮಾನ್ಯ ಸದಸ್ಯರು ಹೇಳಿದಂತೆ new Land Acquisition Act ನಲ್ಲಿ consent ಎನ್ನುವಂತಹ ಪ್ರಾವಿಜನ್ ಇಲ್ಲ. Somehow we have to bring that, ಎಲ್ಲರಿಗೂ ಒಪ್ಪಿಗೆ ಆಗುವಂತೆ ಮಾಡಬೇಕಾಗಿದೆ, ಆ ಪ್ರಕ್ರಿಯೆ ನಡೆದಿದೆ.

ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಒಳ್ಳೆಯ ಅಧಿಕಾರಿಗಳ ಬಗ್ಗೆ ಪ್ರಸ್ತಾಪ ಮಾಡಿದರು. ನಮಗೆ ಅಧಿಕಾರಿಗಳು ಸಿಕ್ಕಿದರೆ ಸಾಕಾಗಿದೆ. ಮಾನ್ಯ ಸಭಾಪತಿಯವರೆ, land acquisition and rehabilitation & resettlement ಗೆ SLAO (Special Land Acquisition Officer) ಆಗಿ ಹೋಗುವುದಕ್ಕೆ ಯಾರೂ ಸಹ ತಯಾರಿಲ್ಲ. ಎಲ್ಲರೂ Assistant Commissioner ಆಗಬೇಕೆಂದು ಬಯಸುತ್ತಾರೆ. ಪ್ರತಿ ವರ್ಷ ಪ್ರತೀ ವರ್ಗಾವಣೆಯಲ್ಲಿ 3 ರಿಂದ 4 ಜನರು ಹೋಗುತ್ತಾರೆ. ಆದರೆ ನಾನು ಈ ಸಂದರ್ಭದಲ್ಲಿ ಒಂದು ವಿಷಯವನ್ನು ಹೇಳಬಯಸುತ್ತೇನೆ. On the floor of this House, appreciate ಮಾಡಬೇಕು. R & R Commissioner ಇದ್ದಾರೆ. He is one of the finest officers. ಅವರಿಗೆ ಬಹಳಷ್ಟು commitment ಇದೆ, ಬದ್ಧತೆ ಇದೆ. ಒಬ್ಬ ಒಳ್ಳೆಯ ಅಧಿಕಾರಿ ಇದ್ದಾರೆ. ಆದರೆ ಅವರು ಒಂದು ಸಂದರ್ಭದಲ್ಲಿ ನನಗೆ ಏನು ಹೇಳಿದರು ಎಂದರೆ, ಸರ್ ನಾನು ಇಲ್ಲಿಗೆ ಮೀಟಿಂಗ್‌ಗೆ ಬರಬೇಕಾದರೆ ಕಚೇರಿಯ ಬೀಗ ಹಾಕಿಕೊಂಡು ಬರಬೇಕಾಗುತ್ತದೆ ಎಂದು ಹೇಳಿದರು. ನಾನು ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ, ನನ್ನ ಪಕ್ಕದಲ್ಲಿ ಮಾನ್ಯ ಕಂದಾಯ ಸಚಿವರು ಕುಳಿತುಕೊಂಡಿದ್ದಾರೆ. ನಮ್ಮ ನೋವು ಅವರಿಗೆ ಗೊತ್ತಾಗಲಿ ಎನ್ನುವ ಕಾರಣಕ್ಕೋಸ್ಕರ ಈ ಮಾತನ್ನು ಹೇಳುತ್ತಿದ್ದೇನೆ. ಅಲ್ಲಿ SLAO and Surveyors ಕೊಟ್ಟಿದ್ದಾರೆ, Commissioners ಮಾಡಿದ್ದೇವೆ. ಅಷ್ಟು ಸಾಲದು. ಆದರೆ ಇಷ್ಟು ಪ್ರಮಾಣ ಏನಿದೆ, 1,34,000 ಎಕರೆ ಆಗುತ್ತದೆ. ಇದರಲ್ಲಿ 74 ಸಾವಿರ ಎಕರೆ ಮುಳುಗಡೆ ಆಗುವಂಥದ್ದು, ಇನ್ನು ಸುಮಾರು 45 ಹಳ್ಳಿಗಳನ್ನು ಸ್ಥಳಾಂತರ ಮಾಡಬೇಕಾಗುತ್ತದೆ. ಅದಕ್ಕಾಗಿ ಸುಮಾರು 4,827 ಎಕರೆ ಬೇಕಾಗುತ್ತದೆ. ಈಗ submergence ನಲ್ಲಿ 75 ಸಾವಿರ ಎಕರೆ,

canal ಗೆ 51 ಸಾವಿರ ಎಕರೆ ಬೇಕಾಗುತ್ತದೆ. ಈ ರೀತಿ ಇರುವಾಗ ಇದಕ್ಕೆ ಬಹಳ ದೊಡ್ಡ ಪ್ರಮಾಣದಲ್ಲಿ ಅಧಿಕಾರಿಗಳು ಬೇಕು. ಅಂದರೆ SLAOs ಬೇಕು, Surveyors ಬೇಕು. ನಾವು ಸಹ ಇದರ ಬಗ್ಗೆ ಬಹಳಷ್ಟು ಹೋರಾಟ ಮಾಡುತ್ತಿದ್ದೇವೆ. ಮಾನ್ಯ ಕಂದಾಯ ಸಚಿವರಲ್ಲಿಯೂ ಸಹ ವಿನಂತಿ ಮಾಡಿಕೊಳ್ಳುತ್ತಿದ್ದೇವೆ, ಅವರೂ ಕೂಡ ಯಾರನ್ನೋ ಪೋಸ್ಟಿಂಗ್ ಮಾಡುತ್ತಾರೆ ಅವರು ಒಂದು ಆರು ತಿಂಗಳು ಕಳೆದ ಮೇಲೆ ನಮ್ಮಂಥ ಶಾಸಕರನ್ನು ಹಿಡಿದುಕೊಂಡು ವರ್ಗಾವಣೆ ಮಾಡಿಕೊಂಡು ಹೋಗುತ್ತಾರೆ.

**ಡಾ॥ ಜಯಮಾಲ ರಾಮಚಂದ್ರ:-** ಮಾನ್ಯ ಸಭಾಪತಿಯವರೆ, ಒಂದು ಸಣ್ಣ ಮಾತು ಹೇಳಬಯಸುತ್ತೇನೆ. ಮಾನ್ಯ ಸಚಿವರು ಉಳ್ಳವರ ಬಗ್ಗೆ ಮಾತ್ರ ಹೇಳುತ್ತಿದ್ದಾರೆ, ದಯವಿಟ್ಟು ಒಂದು ಪುನರ್ವಸತಿ ಮತ್ತು ಪುನರ್ ನಿರ್ಮಾಣ ಆಗುವಾಗ ಅಲ್ಲಿ ಏನೂ ಇಲ್ಲದವರ ಬಗ್ಗೆ ಚಿಂತನೆ ಮಾಡಬೇಕಾಗುತ್ತದೆ. ಅವರಿಗೆ ಯಾವ ರೀತಿಯಾದಂತಹ ಹಣವನ್ನು ನೀಡುತ್ತಿದ್ದಾರೆ ಎನ್ನುವ ಬಗ್ಗೆ ಚಿಂತನೆ ಆಗಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು guidance value ಬಗ್ಗೆ ಹೇಳಿದರು. ನಮ್ಮ ರಾಜ್ಯದ ಜನತೆಗೆ ತಪ್ಪು ಸಂದೇಶ ಹೋಗಬಾರದು. ಏಕೆಂದರೆ, ಇದರಲ್ಲಿ ಸುಮಾರು 400 ಹಳ್ಳಿಗಳು ಸುಮಾರು ಒಂದೂ ಮುಕ್ಕಾಲು ಲಕ್ಷ ಎಕರೆಗಳಷ್ಟು ಜಮೀನು involve ಆಗಿರುವಂಥದ್ದು. ಎಷ್ಟೇ value ಗೆ registration ಆಗಿರಬಹುದು. ಒಬ್ಬನಿಗೆ ಒಂದು ಲಕ್ಷ ರೂಪಾಯಿ, ಇನ್ನೊಬ್ಬನಿಗೆ ಒಂದೂಕಾಲು ಲಕ್ಷ ರೂಪಾಯಿ, ಇನ್ನೊಬ್ಬನಿಗೆ ಎರಡು ಲಕ್ಷ ರೂಪಾಯಿಗೆ registration ಆಗಿರಬಹುದು. ಆದರೆ ಸರ್ಕಾರ guidance value ಏನು ಫಿಕ್ಸ್ ಮಾಡಿರುತ್ತದೆ, ಅದರ ಕೆಳಗಡೆ ಯಾರಾದರು registration ಮಾಡಿಸಿದರೆ ಅದನ್ನು under valuation ಎಂದು ಮಾಡುತ್ತೇವೆ. ಇದು ವಕೀಲನಾಗಿ ನನಗೆ ಗೊತ್ತಿರುವಂಥದ್ದು. Fixation ಆಗಿರುವಂತಹ ಅಮೌಂಟ್ ಏನಿದೆ, ಅದರ ನಾಲ್ಕು ಪಟ್ಟು ಕೊಡಬೇಕು. ಅಂದರೆ ಅದರಲ್ಲಿರುವಂತಹ ಗಿಡ, ಮರ, structures ನ ಗಣನೆಗೆ ತೆಗೆದುಕೊಂಡು ಹಳೆಯ Act ಪ್ರಕಾರ 4(1) 6(1) 11 ಮತ್ತು 16 preliminary notification, final notification, award and taking of possession of land, ಈ ನಾಲ್ಕು ಪ್ರಾವಿಜನ್ಸ್‌ನ ಹಿನ್ನೆಲೆಯಲ್ಲಿ ನಾವು ಪರಿಹಾರದ ಹಣವನ್ನು ಕೊಡಬೇಕಾದರೆ ಯಾವಾಗಲೂ ತೆಗೆದುಕೊಳ್ಳುವಂಥದ್ದು ಯಾರ‍್ಯಾರೋ registration

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿದ್ದಾರೆ ಅಂತಲ್ಲ, ultimately, ಸರ್ಕಾರ ಫಿಕ್ಸ್ ಮಾಡಿರುವಂಥದ್ದು ಇದೆಯಲ್ಲ, that is the value on which we have to decide the compensation. ಹಾಗಾಗಿ ದಯಮಾಡಿ ಸರ್ಕಾರ ambiguity ಇಟ್ಟುಕೊಳ್ಳುವುದರಲ್ಲಿ ಅರ್ಥವಿಲ್ಲ.

**ಶ್ರೀ ಎಂ.ಬಿ.ಪಾಟೀಲ:-** ಮಾನ್ಯ ಸಭಾಪತಿಯವರೇ, ನನ್ನಿಂದ ತಪ್ಪು ಮಾಹಿತಿ ಹೋಗುವುದಿಲ್ಲ. ಮಾನ್ಯ ಸದಸ್ಯರು ಹೇಳಿದಂತೆ guidance value fix ಮಾಡುವಂಥದ್ದು, ರೈತರು ಖರೀದಿ ಮಾಡಿರುವಂಥದ್ದಲ್ಲ, ಅದು ವಾರ್ಷಿಕವಾಗಿ ಆಗುತ್ತದೆ.

**ಶ್ರೀ ವಿ.ಎಸ್.ಉಗ್ರಪ್ಪ:-** ತಾವು ಏನು ಹೇಳಿದಿರಿ ಎಂದರೆ, ಒಬ್ಬೊಬ್ಬರು ಒಂದೊಂದು ಅಮೌಂಟ್‌ಗೆ register ಮಾಡಿಸಿರುತ್ತಾರೆ, ಆಗ ಒಬ್ಬೊಬ್ಬರಿಗೆ 4 ಲಕ್ಷ ರೂಪಾಯಿ ಸಿಗುತ್ತದೆ, ಇನ್ನೊಬ್ಬರಿಗೆ 8 ಲಕ್ಷ ರೂಪಾಯಿ ಸಿಗುತ್ತದೆ ಎಂದು ಹೇಳಿದಿರಿ. ನಿಮಗೆ ಈ ambiguity ಏಕೆ?

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ambiguity ನನ್ನಲ್ಲಿ ಇಲ್ಲ. ಅದರ ಬಗ್ಗೆ ತಮಗೆ ಹೇಳುತ್ತೇನೆ. ಅದರ ಬಗ್ಗೆ ತಮಗೆ ಕ್ಲ್ಯಾರಿಫಿಕೇಶನ್ ಕೊಡುತ್ತೇನೆ. ಒಂದು ಗ್ರಾಮದಲ್ಲಿ guidance value fix ಮಾಡುವುದು ಸರ್ಕಾರ. Guidance value ಮಾಡುವಂಥದ್ದು ನಮ್ಮ Registration Department. ಅಲ್ಲಿಯ District Registrar, Sub-registrar ಸೇರಿ ನಿಗಧಿ ಪಡಿಸಿರುತ್ತಾರೆ. ಆ ಗ್ರಾಮದಲ್ಲಿ ಆಗಿರುವಂತಹ transactions ತೆಗೆದುಕೊಂಡು average ಮಾಡಿಕೊಳ್ಳುವಂತಹ ಒಂದು ಪದ್ಧತಿ ಇದೆ. ಆ ಪದ್ಧತಿ ಪ್ರಕಾರ ಅವರು ಕಳುಹಿಸುತ್ತಾರೆ. ಅದರ ಮೇಲೆ ಇವತ್ತಿನ ದಿವಸ guidance value notification ಆಗುತ್ತದೆ. ಅದು ಕೇವಲ ಒಬ್ಬರದಲ್ಲ. ಎಲ್ಲರದ್ದು ಸೇರಿಸಿ ಅದಕ್ಕೆ average ಮಾಡುತ್ತಾರೆ.

**ಸಭಾಪತಿಯವರು:-** ಮಾನ್ಯ ಉಗ್ರಪ್ಪನವರೆ, ತಾವು ಒಂದು ವಿಷಯವನ್ನು ಗಮನಿಸಬೇಕು. ಮಾನ್ಯ ಸಚಿವರು ಹೇಳುವಾಗ ಏನು ಹೇಳಿದರು ಎಂದರೆ, guidance value ಸಹ ಗ್ರಾಮದಿಂದ ಗ್ರಾಮಕ್ಕೆ ವ್ಯತ್ಯಾಸವಿದೆ. ಬೀಳಗಿಯಲ್ಲಿ ಜಾಸ್ತಿ ಇದೆ, ಬೇರೆ ಕಡೆ ಕಡಿಮೆ ಇದೆ ಎಂದು ಅದರ ಬಗ್ಗೆ ಹೇಳಿದರು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ಬಿ.ಪಾಟೀಲ್:–** ಮಾನ್ಯ ಸಭಾಪತಿಯವರೇ, sale transactions ಎಂದು ಇದೆ. ಅಂದರೆ ಆ ಗ್ರಾಮದಲ್ಲಿರುವಂತಹ sale transactions ತೆಗೆದುಕೊಳ್ಳುತ್ತಾರೆ. ಅದನ್ನು average ಮಾಡಿಕೊಂಡು ಮಾಡುತ್ತಾರೆ. ಈ ವಿಷಯದ ಬಗ್ಗೆ ಮಾನ್ಯ ನಿರಾಣಿ ಅವರಿಗೆ ಜಾಸ್ತಿ ಗೊತ್ತಿದೆ. ಅದರ ಬಗ್ಗೆ ಹೇಳಿ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:–** ಮಾನ್ಯ ಸಭಾಪತಿಯವರೆ, ಮಾನ್ಯ ಹಿರಿಯ ಸಚಿವರಾಗಿರುವಂತಹ ಸನ್ಮಾನ್ಯ ಕಾಗೋಡು ತಿಮ್ಮಪ್ಪನವರು ಸಂತ್ರಸ್ತರ ಬಗ್ಗೆ ಅಪಾರವಾದಂತಹ ಅಭಿಮಾನವನ್ನು ವ್ಯಕ್ತಪಡಿಸಿದ್ದಕ್ಕಾಗಿ ಇಡೀ ಯು.ಕೆ.ಪಿ. ಸಂತ್ರಸ್ತರ ಪರವಾಗಿ ಒಬ್ಬ ಶಾಸಕನಾಗಿ ಅವರಿಗೆ ಅನಂತ ಅಭಿನಂದನೆಯನ್ನು ಸಲ್ಲಿಸುವುದಕ್ಕೆ ಬಯಸುತ್ತೇನೆ.

ಇದೇ ಒಂದು ಸಂದರ್ಭದಲ್ಲಿ guidance value ಎನ್ನುವಂಥದ್ದರ ಬಗ್ಗೆ ನಮ್ಮ ಹಿರಿಯ ಶಾಸಕರು ಮಾತನಾಡಿದ್ದಾರೆ. ಇಲ್ಲಿ ಇರುವಂಥದ್ದು, ಕೃಷ್ಣಜಲಭಾಗ್ಯ ನಿಗಮದಲ್ಲಿ ಎರಡು ಹಂತಗಳಿವೆ. ಒಂದು ಭೂಸ್ವಾಧೀನ, ಪುನರ್ವಸತಿ ಮತ್ತು ಪುನರ್ ನಿರ್ಮಾಣ. ಭೂ–ಸ್ವಾಧೀನ ಪ್ರಕ್ರಿಯೆಯಲ್ಲಿ ಭೂಮಿಯ ಬೆಲೆಯನ್ನು ನಿರ್ಧಾರ ಮಾಡುವಂಥದ್ದು ಒಂದು ಭಾಗ. ಅದರ ಜೊತೆಯಲ್ಲಿ ಪುನರ್ವಸತಿ ಕೇಂದ್ರಗಳಲ್ಲಿ ಸರ್ಕಾರ ಈಗಾಗಲೆ ಭೂ–ಸ್ವಾಧೀನ ಮಾಡಿ 157 ಹಳ್ಳಿಗಳಿಗೆ ಸ್ಥಳಾಂತರ ಪ್ರಕ್ರಿಯೆ ಆರಂಭವಾಗಿದೆ. 20 ಗ್ರಾಮಗಳನ್ನು ಸ್ಥಳಾಂತರ ಮಾಡುವಂತಹ ಹಂತದಲ್ಲಿ ಅನೇಕ ಪುನರ್ವಸತಿ ಕೇಂದ್ರಗಳನ್ನು ಸ್ವಾಧೀನಪಡಿಸಿಕೊಳ್ಳುವಂತಹ ಕೆಲಸ ಆಗುತ್ತಿದೆ. ಆದರೆ ಇಲ್ಲಿ ಯಾವ ಸಂತ್ರಸ್ತರಿಗೆ ಪುನರ್ ವಸತಿ ಕೇಂದ್ರದಲ್ಲಿ ಪ್ಲಾಟುಗಳನ್ನು ಕೊಡುತ್ತಿದ್ದಾರೆ ಎನ್ನುವಂಥ ವಿಷಯವನ್ನು ಸಹ ಇವತ್ತಿನ ದಿವಸ ಗಮನಿಸಬೇಕಾಗುತ್ತದೆ. ಇಲ್ಲಿಯವರೆಗೆ ಇದ್ದಂತಹ ನಿಯಮವೇನೆಂದರೆ, ಯಾರು ಮನೆಯನ್ನು ಕಳೆದುಕೊಂಡಿರುತ್ತಾರೆ, ಅಂದರೆ ಗ್ರಾಮಪಂಚಾಯಿತಿಯ ಆಸ್ತಿಯ ಪುಸ್ತಕ ನಂ 9ರಲ್ಲಿ ಯಾವ ಸಂತ್ರಸ್ತರ ಹೆಸರು ಇದೆ, ಆ ಸಂತ್ರಸ್ತರನ್ನು ಮುಖ್ಯ ಸಂತ್ರಸ್ತರೆಂದು ಕರೆದು, ಅವರ ಇಬ್ಬರು ವಯಸ್ಕ ಮಕ್ಕಳಿಗೆ ಭೂ–ಸ್ವಾಧೀನ ಆಗುವಂತಹ ಅಂದರೆ 4(1) notification ಆಗುವಂತಹ ಸಂದರ್ಭದಲ್ಲಿ 18 ವರ್ಷ ಮೇಲ್ಪಟ್ಟ ಇಬ್ಬರು ಮಕ್ಕಳಿಗೆ ಮಾತ್ರ ಪುನರ್ವಸತಿ ಕೇಂದ್ರದಲ್ಲಿ ಸ್ಥಳಾವಕಾಶವನ್ನು ಅಥವಾ ಪ್ಲಾಟನ್ನು ಹಂಚುತ್ತಿದ್ದಾರೆ. ಇಲ್ಲಿ ಇರುವಂತಹ ಅಡಚಣೆ ಏನೆಂದರೆ, ಒಬ್ಬ ಸಂತ್ರಸ್ತ ಮನೆಯ ಮುಖ್ಯಸ್ಥನ ಹೆಸರಿನಲ್ಲಿ ಮನೆ ಇದ್ದರೆ ಅವನ ಹೆಸರಿನಲ್ಲಿ ಒಂದು ಪ್ಲಾಟು ಕೊಡುತ್ತಿದ್ದಾರೆ. ಅಂದರೆ ಅವನ ಮೊದಲ ಮತ್ತು ಎರಡನೆ ಮಕ್ಕಳಿಗೆ ಪ್ಲಾಟನ್ನು ಕೊಡುತ್ತಿದ್ದಾರೆ. ಅದೇ ರೀತಿ ನಾಲ್ಕು ಜನ ಹೆಣ್ಣು ಮಕ್ಕಳು ಅಥವಾ ಐದು ಜನ ಗಂಡು ಮಕ್ಕಳಿದ್ದರೆ ಅಲ್ಲಿ ಉಳಿದಿರುವಂತಹ ಇಬ್ಬರು ಮಕ್ಕಳಿಗೆ ಪುನರ್ ವಸತಿ ಕೇಂದ್ರಗಳಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸ್ಥಳವನ್ನೇ ಕೊಡುವುದಿಲ್ಲ, ಪ್ಲಾಟನ್ನೇ ಅಲಾಟ್ ಮಾಡುತ್ತಿಲ್ಲ. ಇದು ಮೊದಲಿನಿಂದಲೂ ಬಂದಿದೆ.

(ಮುಂದು)

(593) 07.06.2017 KG.RN 4.40

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಮುಂದು....):-** ಈ ಸರ್ಕಾರ ನಾಗರಿಕರ ಸರ್ಕಾರ ಆಗಿರುವಂತಹ ಸಂದರ್ಭದಲ್ಲಿ ಆ ಗ್ರಾಮಗಳಲ್ಲಿ ಇರುವಂತಹ ಪ್ರತಿಯೊಬ್ಬ ಸಂತ್ರಸ್ತ ಕುಟುಂಬಗಳ ಮಕ್ಕಳಿಗೆ ಪುನರ್ವಸತಿ ಕೇಂದ್ರಗಳಲ್ಲಿ ಸ್ಥಳಾವಕಾಶವನ್ನು ಕೊಡಬೇಕೆಂದು ನಾನು ಕೇಳಬಯಸುತ್ತೇನೆ. ಅದರ ಜೊತೆಯಲ್ಲಿ ಇಬ್ಬರು ವಯಸ್ಸಿಗೆ ಬಂದಿರುವಂತಹ ಗಂಡು ಮಕ್ಕಳಿಗೆ ಸರ್ಕಾರ ಪ್ಲಾಟ್‌ನ್ನು ಹಂಚಿಕೆ ಮಾಡುತ್ತಿದೆ. ಅದೇ ರೀತಿ ವಯಸ್ಸಿಗೆ ಬಂದ ಇಬ್ಬರು ಹೆಣ್ಣು ಮಕ್ಕಳು ಇದ್ದರೆ ಅವರಿಗೆ ಪ್ಲಾಟ್ ಕೊಡುತ್ತಿಲ್ಲ. ನಮ್ಮ ಮಹಿಳಾ ಕಾನೂನು ಹೊಸದಾಗಿ 2005 ರಲ್ಲಿ amendment ಆಗಿದೆ. ಅದರ ಪ್ರಕಾರ, ಎಲ್ಲಾ ಆಸ್ತಿಯಲ್ಲಿಯೂ ಸಮಾನ ಹಕ್ಕು ಪಡೆದುಕೊಳ್ಳುವ ಅವಕಾಶ ಮಹಿಳೆಯರಿಗೆ ಇದೆ. ಈ ಕಾನೂನು ಬಂದು ಇವತ್ತಿಗೆ ಅಂದರೆ, 2017 ನೇ ಸಾಲಿಗೆ 12 ವರ್ಷಗಳು ಕಳೆದರೂ ಸಹ, ಇವತ್ತಿಗೂ ಮಹಿಳೆಯರಿಗೆ ಪುನರ್ವಸತಿ ಕೇಂದ್ರದಲ್ಲಿ ಸ್ಥಳಾವಕಾಶ ಇಲ್ಲ. ನಮ್ಮ ಶಾಸಕರು ಈಗಾಗಲೇ ಯಾರಿಗೂ ಅನ್ಯಾಯವಾಗಬಾರದೆಂಬ ಕಳಕಳಿಯ ಮಾತನ್ನು ವ್ಯಕ್ತಪಡಿಸಿದ್ದಾರೆ. ಮಹಿಳೆಯರಿಗೆ ಪ್ಲಾಟ್ ಸಿಕ್ಕಿಲ್ಲ ಎನ್ನುವುದು ಅವರಿಗೆ ಗೊತ್ತಿದ್ದು, ಈ ಮಾತನ್ನು ಅವರು ಹೇಳಿರಬಹುದೆಂದು ನಾನು ಭಾವಿಸುತ್ತೇನೆ. ಆ ನಿಟ್ಟಿನಲ್ಲಿ ಮಹಿಳೆಯರಿಗೂ ಸಹ ಪುನರ್ವಸತಿ ಕೇಂದ್ರಗಳಲ್ಲಿ ಪ್ಲಾಟ್‌ಗಳನ್ನು ಕೊಡಬೇಕೆಂದು ಹಾಗೂ ಮುಖ್ಯ ಸಂತ್ರಸ್ತನಿಗೆ ಎಷ್ಟು ಜನ ಮಕ್ಕಳು ಇರುತ್ತಾರೆ, ಅವರು ಹೆಣ್ಣು ಮಕ್ಕಳು ಆಗಿರಲಿ ಅಥವಾ ಗಂಡು ಮಕ್ಕಳು ಆಗಿರಲಿ ಎಲ್ಲರಿಗೂ ಸಹ ಪ್ಲಾಟ್‌ಗಳನ್ನು ಕೊಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ.

ಮಾನ್ಯ ಸಭಾಪತಿಯವರೆ, ಅಲ್ಲಿ ಅವರವರ ಆಸ್ತಿಗಳನ್ನು ನೋಡಿಕೊಂಡು ಪ್ಲಾಟ್‌ಗಳನ್ನು ಹಂಚಿಕೆ ಮಾಡುತ್ತಿದ್ದಾರೆ. ಜಮೀನು ಇಲ್ಲದೆ ಇರುವವರಿಗೆ 1000 ಚದರ ಅಡಿಗಳು, ಚಿಕ್ಕ ಹಿಡುವಳಿದಾರರಿಗೆ 2000 ಚದರ ಅಡಿಗಳು, ಮಧ್ಯಮ ಹಿಡುವಳಿದಾರರಿಗೆ ಅಂದರೆ, 15 ಎಕರೆ ಜಮೀನು ಹೊಂದಿರುವವರಿಗೆ 3000 ಚದರ ಅಡಿಗಳು. 15 ಎಕರೆ ಜಮೀನಿಗಿಂತ ಹೆಚ್ಚು ಜಮೀನು ಹೊಂದಿರುವವರಿಗೆ 4000 ಚದರ ಅಡಿಗಳಿಗೆ ಪುನರ್ವಸತಿ ಕೇಂದ್ರಗಳಲ್ಲಿ ಹಕ್ಕು ಪತ್ರಗಳನ್ನು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಡುತ್ತಿದ್ದಾರೆ. 20 ಎಕರೆ ಜಮೀನು ಹೊಂದಿರುವಂತಹ ಒಬ್ಬ ರೈತ 4000 ಚದರ ಅಡಿಗಳಲ್ಲಿ ಮನೆಯನ್ನು ಕಟ್ಟಿಕೊಳ್ಳಬೇಕು ಮತ್ತು ಆತನಿಗೆ ಸೇರಿದ ಜಾನುವಾರುಗಳನ್ನು ಮತ್ತು ಇತರೆ ವ್ಯವಸಾಯಕ್ಕೆ ಉಪಯೋಗಿಸುವಂತಹ ಸಲಕರಣೆಗಳನ್ನು ಸಹ ಅದೇ 4000 ಚದರ ಅಡಿಗಳಲ್ಲಿ ಇಟ್ಟುಕೊಂಡು ಅವರು ಬದುಕನ್ನು ಸಾಗಿಸಬೇಕಾಗಿದೆ. ಅದು ಎಷ್ಟು ಕಷ್ಟ ಎಂಬುದನ್ನು ನಾವು ಯೋಚನೆ ಮಾಡಬೇಕಾಗಿದೆ. ಆ ಹಿನ್ನೆಲೆಯಲ್ಲಿ ಪುನರ್ವಸತಿ ಕೇಂದ್ರಗಳಲ್ಲಿ ಹೆಚ್ಚಿನ ಜಾಗವನ್ನು ಕೊಡಬೇಕು ಅಥವಾ ಬೆಲೆಯ ಆಧಾರದ ಮೇಲೆ ಆದರೂ ಸಹ, ಯಾರಿಗೆ ಅವಶ್ಯಕತೆ ಇದೆ ಅವರಿಗೆ ಕೊಡಬೇಕು. ಅವರ ಹಿಡುವಳಿಗೆ ಅನುಗುಣವಾಗಿ 2 ಸಾವಿರ ಚದರ ಅಡಿ ಆಗಿರಬಹುದು ಅಥವಾ 4 ಸಾವಿರ ಚದರ ಅಡಿಗಳನ್ನು ಕೊಡುವವರಿಗೆ ಇನ್ನೂ 2 ಸಾವಿರ ಚದರ ಅಡಿಗಳನ್ನು ಬೇಕಾದರೂ ಸಹ ಕೊಡುವಂತಹ ವ್ಯವಸ್ಥೆ ಆಗಬೇಕೆಂಬ ಕಳಕಳಿಯ ಮನವಿಯನ್ನು ನಾನು ಈ ಸಂದರ್ಭದಲ್ಲಿ ಮಾಡಿಕೊಳ್ಳಲಿಕ್ಕೆ ಬಯಸುತ್ತೇನೆ.

ಮಾನ್ಯ ಸಭಾಪತಿಯವರೆ, ಇದರ ಜೊತೆಗೆ ಪುನರ್ವಸತಿ ಕೇಂದ್ರಗಳು ಸುಸಜ್ಜಿತವಾಗಿ ನಡೆಯಬೇಕು. ಎಲ್ಲಾ ಪುನರ್ವಸತಿ ಕೇಂದ್ರಗಳಲ್ಲಿ ಶಾಲೆಗಳು ಮತ್ತು ಇತರೆ ಅವಶ್ಯಕವಾಗಿ ಬೇಕಾಗಿರುವಂತಹ ವ್ಯವಸ್ಥೆಯನ್ನು ಮಾಡಬೇಕು. ಈ ಹಿಂದೆ ಯಾವ ಗ್ರಾಮಗಳಲ್ಲಿ ಪ್ರೌಢ ಶಾಲೆ ಇತ್ತೋ, ಇಂದು ಆ ಪುನರ್ವಸತಿ ಕೇಂದ್ರಕ್ಕೆ ಮಾತ್ರ ಪ್ರೌಢ ಶಾಲೆ ಇದೆ. ಹಿಂದೆ ಹಳೆಯ ಗ್ರಾಮಗಳು ಅಕ್ಕ-ಪಕ್ಕದಲ್ಲಿ ಇದ್ದಾಗ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ವ್ಯವಸ್ಥೆ ಆಗಿತ್ತು. ಸಾಕಷ್ಟು ಶಾಲೆಗಳು ಹಳೆಯ ಗ್ರಾಮಗಳಲ್ಲಿ ಇಲ್ಲದೇ ಇದ್ದ ಕಾರಣ ಇವತ್ತು ಶಾಲೆ-ಕಾಲೇಜುಗಳನ್ನು ಆ ಪುನರ್ವಸತಿ ಕೇಂದ್ರಗಳಲ್ಲಿ ತೆಗೆದುಕೊಳ್ಳಲು ಸಾಧ್ಯವಾಗುತ್ತಿಲ್ಲ. ಆ ಹಿನ್ನೆಲೆಯಲ್ಲಿ ಪುನರ್ವಸತಿ ಕೇಂದ್ರಗಳಲ್ಲಿ ಶಿಕ್ಷಣಕ್ಕೂ ಸಹ ಹೆಚ್ಚಿನ ಒತ್ತನ್ನು ಕೊಡಬೇಕು ಎಂಬ ಕಳಕಳಿಯನ್ನು ನಾನು ಈ ದಿವಸ ಮಾಡಿಕೊಳ್ಳುತ್ತೇನೆ.

**ಶ್ರೀ ಐವನ್ ಡಿ' ಸೋಜಾ (ಸರ್ಕಾರಿ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೆ, ನಿನ್ನೆಯ ದಿವಸ ನಿಯಮ 330 ರ ಮೇಲೆ ನಾಲ್ಕೂವರೆ ಗಂಟೆಗಳ ಕಾಲ ಚರ್ಚೆ ಮಾಡಿದ್ದೇವೆ. ಇವತ್ತು ನಿಯಮ 330ರ ಮೇಲೆ ಈಗಾಗಲೇ ಒಂದೂವರೆ ಗಂಟೆಗಳ ಕಾಲ ಚರ್ಚೆ ಮಾಡಿದ್ದೇವೆ. ದಯವಿಟ್ಟು ಇದಕ್ಕೆ ಒಂದು ಸಮಯ ನಿಗದಿ ಮಾಡಿದರೆ ಬಹಳ ಒಳ್ಳೆಯದು. ನಿಯಮ 72 ಮತ್ತು ನಿಯಮ 330 ರಡಿ ಮೂರೂವರೆ ಗಂಟೆಗಳ ಕಾಲ, ನಾಲ್ಕೂವರೆ ಗಂಟೆಗಳ ಕಾಲ ಚರ್ಚೆ ಮಾಡಿದರೆ ಹೇಗೆ? ಎಷ್ಟು ಹೊತ್ತು ಚರ್ಚೆ ಮಾಡಬೇಕು?

(ಗೊಂದಲ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ||ಜಯಮಾಲ ರಾಮಚಂದ್ರ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಇದರ ಬಗ್ಗೆ ಚರ್ಚೆ ಆಗಬೇಕು. ದಯವಿಟ್ಟು ಇದಕ್ಕೆ ಹೆಚ್ಚಿನ ಕಾಲಾವಕಾಶ ನೀಡಿ.

(ಗೊಂದಲ)

**ಶ್ರೀ ಎಂ.ಬಿ.ಪಾಟೀಲ್ (ಜಲ ಸಂಪನ್ಮೂಲ ಸಚಿವರು):-** ಮಾನ್ಯ ಸಭಾಪತಿಯವರೆ, ಇದು ಬಹಳ ಗಂಭೀರವಾದಂತಹ ವಿಷಯ. ದಯವಿಟ್ಟು ಇದರ ಮೇಲೆ ಚರ್ಚೆ ಮಾಡಲು ಸಮಯ ಕೊಡಿ. ಇದು ಉತ್ತರ ಕರ್ನಾಟಕ ಭಾಗದ ಜನರ ಸಮಸ್ಯೆ. ಈ ಸಮಸ್ಯೆ ಬಹಳ ದೊಡ್ಡದು ಇದೆ. ಇದಕ್ಕೆ ದಯವಿಟ್ಟು ಕಾಲಾವಕಾಶ ಕೊಡಿ.

(ಗೊಂದಲ)

**ಸಭಾಪತಿಯವರು:-** ಮಾನ್ಯ ಸಚಿವರೆ, ಮುಖ್ಯ ಸಚೇತಕರೆ, ಸದಸ್ಯರೆ ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ನಾನು ನಿಮಗೆ ಸಮಯ ಕೊಡುವುದಕ್ಕೇ ಇರುವುದು. ನಾನು ಹೇಳುತ್ತೇನೆ....

(ಗೊಂದಲ)

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನಾನು ಇದನ್ನು ನಿಯಮದ ಪ್ರಕಾರ ಒಪ್ಪುತ್ತೇನೆ. ಇವತ್ತಿನ ದಿವಸ ಉತ್ತರ ಕರ್ನಾಟಕದಲ್ಲಿ ಪರಿಸ್ಥಿತಿಗಳಿಗೆ ಅನುಗುಣವಾಗಿ ಏನು ನಡೆಯುತ್ತಿದೆ ಎನ್ನುವುದು ಅಲ್ಲಿನ ಭಾಗದ ಜನರಿಗೆ ಮಾತ್ರ ಗೊತ್ತು. ಅದಕ್ಕೆ ದಯಮಾಡಿ ಸಮಯ ಕೊಡಿ. ಇವತ್ತು ಒಂದು ಗಂಟೆ ಕಾಲ ಹೆಚ್ಚಿಗೆ ಕುಳಿತುಕೊಂಡು ಚರ್ಚೆ ಮಾಡೋಣ. ಇದು ಅಷ್ಟೊಂದು ಮಹತ್ವದ ವಿಷಯ. ಇದರಲ್ಲಿ ಬಹಳಷ್ಟು ಸಮಸ್ಯೆಗಳು ಇವೆ. ಅದಕ್ಕೆ ದಯಮಾಡಿ ಸಮಯದ ಬಗ್ಗೆ ಚರ್ಚೆ ಮಾಡಿ ಇದೊಂದು ಸಾರಿ ಇದಕ್ಕೆ ಹೆಚ್ಚಿನ ಕಾಲಾವಕಾಶ ಮಾಡಿಕೊಡಿ.

(ಗೊಂದಲ)

**ಸಭಾಪತಿಯವರು:-** ಮಾನ್ಯ ಸದಸ್ಯರೆ, ಒಂದು ನಿಮಿಷ ಕೇಳಿ...

(ಗೊಂದಲ)

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅಲ್ಲಿ ತಲತಲಾಂತರದಿಂದ ಇದ್ದಂತಹ ಜನ ಇವತ್ತು ತಮ್ಮ ಇಡೀ ವ್ಯವಸ್ಥೆಯ ಬದುಕನ್ನು ಬದಲಾಯಿಸಿಕೊಳ್ಳುವಂತಹ ಸಂದರ್ಭಗಳಲ್ಲಿ ನಾವು ಅವರ ಕಷ್ಟವನ್ನು ಕೇಳಬೇಕಾಗುತ್ತದೆ. ಇವತ್ತು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವರು ಎಲ್ಲವನ್ನು ಬಿಟ್ಟು ಹೋಗಬೇಕು. ಅವರು ಒಂದು attachment ಅನ್ನು ಬಿಟ್ಟು ಹೋಗಬೇಕು. ಮತ್ತೆ ಅವರು ಎಲ್ಲವನ್ನು ಹೊಸದಾಗಿ ಕಟ್ಟಿಕೊಳ್ಳಬೇಕು. ದಯಮಾಡಿ ತಾಳ್ಮೆಯಿಂದ ಕೇಳೋಣ. ಇದರಲ್ಲಿ ಅವಸರ ಮಾಡುವುದು ಬೇಡ.

(ಗೊಂದಲ)

**ಸಭಾಪತಿಯವರು:–** ಮಾನ್ಯ ಸದಸ್ಯರೆ, ಅವರು ಕೇಳುವುದಕ್ಕೆ ತಯಾರು ಇದ್ದಾರೆ. ಒಂದು ನಿಮಿಷ ಕೇಳಿ. ಮುಖ್ಯ ಸಚೇತಕರು ಅವರು ಅವರ ಕೆಲಸವನ್ನು ಮಾಡಿದ್ದಾರೆ. ತಾವುಗಳು ತಮ್ಮ ಕೆಲಸವನ್ನು ಮಾಡಿದ್ದೀರಿ. ಇದನ್ನು ನಿರ್ಣಯ ಮಾಡುವುದಕ್ಕೆ ಸಭಾಪತಿಯ ಸ್ಥಾನದಲ್ಲಿ ನಾನು ಕುಳಿತುಕೊಂಡಿದ್ದೇನೆ. ಮಾನ್ಯ ಸಚಿವರಾದ ಎಂ.ಬಿ.ಪಾಟೀಲ್ ರವರು ಎದ್ದು ನಿಂತು ಇದಕ್ಕೆ ಸಮಯವನ್ನು ನಿಗಧಿ ಮಾಡುವುದಕ್ಕೆ ಹೋಗಬೇಡಿ ಈ ಬಗ್ಗೆ ಚರ್ಚೆ ನಡೆದು ಅದರ ವಿಷಯ ಹೊರಗಡೆ ಬರಲಿ ಎನ್ನುವಂತಹ ಮಾತನ್ನು ಹೇಳಿದ್ದಾರೆ. ಇದರಲ್ಲಿ ಎಷ್ಟು ಗಾಂಭೀರ್ಯ ಇದೆ ಎಂಬುದನ್ನು ತಾವೆಲ್ಲರೂ ಗಮನಿಸಿದ್ದೀರಿ. ಹಿರಿಯ ಸಚಿವರಾದ ಮಾನ್ಯ ಕಾಗೋಡು ತಿಮ್ಮಪ್ಪನವರು ಇದಕ್ಕೆ ಯಾವ ರೀತಿ ಸ್ಪಂದಿಸಿದ್ದಾರೆ ಎನ್ನುವುದನ್ನು ಸಹ ತಾವೆಲ್ಲರೂ ನೋಡಿದ್ದೀರಿ. ಆದರೆ, ಇದರಲ್ಲಿ ಗಾಂಭೀರ್ಯ ಏನಿದೆ ಎನ್ನುವಂತಹದ್ದು. ಆದರೆ, ಅವರು ಹೇಳಿದ್ದು ನೆನಪು ಇಟ್ಟುಕೊಂಡು ತಾವು ಏನೂ ಹೇಳಬೇಕು ಅದು ಯಾವುದನ್ನು ಕಡಿಮೆ ಮಾಡಬೇಡಿ. ಸ್ವಲ್ಪ ಸಮಯದ ನೆನಪಿಟ್ಟುಕೊಂಡು ಬೇರೆಯವರಿಗೂ ಮಾತನಾಡಲಿಕ್ಕೆ ಅವಕಾಶ ಕೊಟ್ಟು ಪ್ರಸ್ತಾವನೆ ಮಾಡಿ. ಮಾನ್ಯ ಸದಸ್ಯರೆ ಮುಂದುವರಿಸಿ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಕೃಷ್ಣ ಮೇಲ್ದಂಡೆ ಯೋಜನೆಯಲ್ಲಿ ಬಹಳ ಜ್ವಲಂತ ಸಮಸ್ಯೆಗಳಿವೆ. 1985 ನೇ ಸಾಲಿನಿಂದಲೂ ಹಂತ ಹಂತವಾಗಿ ಭೂಸ್ವಾಧೀನವಾಗಿ ಸಂತ್ರಸ್ತರು ಸ್ಥಳಾಂತರಗೊಳ್ಳುತ್ತಾ ಬಂದಿದ್ದಾರೆ. ಪ್ರತಿ ಕುಟುಂಬದಲ್ಲಿ ಇರುವಂತಹ ಮುಖ್ಯ ಸಂತ್ರಸ್ಥ ಮತ್ತು ಅವರಿಗೆ ವಯಸ್ಸಿಗೆ ಬಂದ ಇಬ್ಬರು ಮಕ್ಕಳನ್ನು ಸಂತ್ರಸ್ತರು ಎಂದು ಕರೆಯುತಕ್ಕವರಿಗೂ ಸಹ, ಮನೆಯನ್ನು ಸ್ಥಳಾಂತರ ಮಾಡಿಕೊಳ್ಳುವುದಕ್ಕೆ ಅಥವಾ ಮನೆಯನ್ನು ಕಟ್ಟಿಕೊಳ್ಳುವುದಕ್ಕೆ 22 ಸಾವಿರ ರೂಪಾಯಿಗಳನ್ನು ಅನುಕಂಪದ ಹಣವೆಂದು ನೀಡುವಂತಹದ್ದು ಸುಮಾರು 30 ವರ್ಷಗಳಿಂದ ಬಂದಿದೆ. 30 ವರ್ಷಗಳು ಕಳೆದರೂ ಸಹ, ಇವತ್ತಿಗೂ ಸಹ 22 ಸಾವಿರ ರೂಪಾಯಿಗಳನ್ನೇ ಕೊಡುತ್ತಿದ್ದಾರೆ. ಇವತ್ತು ಬೆಲೆಗಳು ಪ್ರತಿ ದಿವಸದಿಂದ ದಿವಸಕ್ಕೆ ಹೆಚ್ಚಾಗುತ್ತಿದೆ. ಅದುದರಿಂದ, ಸುಮಾರು 50 ರಿಂದ 60 ಸಾವಿರ ರೂಪಾಯಿಗಳನ್ನು ಸ್ಥಳಾಂತರದ ವೆಚ್ಚವೆಂದು ಕೊಡಬೇಕು ಎನ್ನುವುದು ನನ್ನ ಆಗ್ರಹ ಆಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಯವರೆ, ಜೊತೆಗೆ ಮುಳುಗಡೆ ಸಂತ್ರಸ್ತರಿಗೆ ಸರ್ಕಾರಿ ನೌಕರಿಯಲ್ಲಿ 5% ಮೀಸಲಾತಿಯನ್ನು 'ಡಿ' ದರ್ಜೆ ನೌಕರಿಗೆ ಕೊಡುತ್ತಾ ಬಂದಿದೆ. ಆದರೆ, ಇವತ್ತಿನ ದಿವಸ ಈ 5% ಮೀಸಲಾತಿ ಸಾಕಾಗುವುದಿಲ್ಲ. ಅದನ್ನು 10% ಮೀಸಲಾತಿಗೆ ಹೆಚ್ಚಿಸಬೇಕು ಎನ್ನುವುದು ಸಹ ಸಂತ್ರಸ್ತರ ಆಗ್ರಹ ಆಗಿದೆ. ಈ ಮೀಸಲಾತಿ ಸೌಲಭ್ಯ 'ಡಿ' ದರ್ಜೆ ನೌಕರರಿಗೆ ಮಾತ್ರ ಇದೆ. ಇದನ್ನು ಮೇಲ್ದರ್ಜೆ ನೌಕರರಿಗೂ ಸಹ ಕೊಟ್ಟರೆ ಅವರಿಗೂ ಸಹ ಸಾಕಷ್ಟು ಅನುಕೂಲವಾಗುತ್ತದೆ ಎಂದು ಈ ಸಂದರ್ಭದಲ್ಲಿ ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ. ಜೊತೆಗೆ ಸಂತ್ರಸ್ತರಾಗಿ ಮನೆ-ಮಠಗಳನ್ನು ಕಳೆದುಕೊಂಡು ನಿರಾಶ್ರಿತರು ಆಗಿರತಕ್ಕಂತಹ ಈ ಸಂತ್ರಸ್ತರ ಕುಟುಂಬಗಳ ಮಕ್ಕಳಿಗೆ ಎಲ್.ಕೆ.ಜಿ.ಯಿಂದ ಹಿಡಿದು ಪಿ.ಜಿ ಯವರೆಗೂ ಕಲಿಯತಕ್ಕಂತಹ ಶಾಲೆಯ ವೆಚ್ಚವನ್ನು ಸಹ ಸರ್ಕಾರ ಭರಿಸಿದರೆ ಬಹಳ ಉತ್ತಮ ಎನ್ನುವಂತಹದ್ದು ಸಹ ನಾನು ಹೇಳಲಿಕ್ಕೆ ಬಯಸುತ್ತೇನೆ. ಜಮೀನನ್ನು ಕಳೆದುಕೊಂಡ ಮೇಲೆ ಅದರಿಂದ ಪ್ರತಿವರ್ಷ ಬರುವಂತಹ ಆದಾಯ ನಿಂತು ಹೋಗಿರುತ್ತದೆ. ಹೀಗಾಗಿ, ಆ ಸಂತ್ರಸ್ತ ಕುಟುಂಬದ ಮಕ್ಕಳಿಗೆ ಹೆಚ್ಚಿನ ಶಿಕ್ಷಣ ಕೊಡಿಸುವುದಕ್ಕೆ ಆಗುತ್ತಿಲ್ಲ. ನಾವು ಬಹಳ ಕಡೆಗಳಲ್ಲಿ ಸಂತ್ರಸ್ತರನ್ನು ನೋಡಿದ್ದೇವೆ. ಇವತ್ತು ಎಸ್.ಎಸ್.ಎಲ್.ಸಿ. ಯವರೆಗೆ ಉಚಿತ ಶಿಕ್ಷಣ ಇದೆ. ಅದಾದ ನಂತರ ಬಹಳ ಜನ ಮಕ್ಕಳು ಶಾಲೆಯಿಂದ ವಂಚಿತರಾಗುತ್ತಿದ್ದಾರೆ. ಕಾರಣ ಇಷ್ಟೆ, ಆ ಸಂತ್ರಸ್ತರ ಮಕ್ಕಳನ್ನು ಶಾಲೆಗೆ ಕಳುಹಿಸಲಿಕ್ಕೆ ಸರ್ಕಾರಕ್ಕೆ ಹಣವು ಭಾರವಾಗಿದೆ ಎನ್ನುವಂತಹ ಸಂತ್ರಸ್ತರ ಅಳಲನ್ನು ನಾನು ಸ್ವತಃ ನೋಡಿದ್ದೇನೆ ಎನ್ನುವಂತಹ ಮಾತನ್ನು ಸಹ ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಸಂತ್ರಸ್ತರ ಮಕ್ಕಳ ಶಿಕ್ಷಣಕ್ಕೂ ಸಹ ಅವರಿಗೆ ಅನುಕೂಲತೆಯನ್ನು ಕೊಡಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಸಂತ್ರಸ್ತರ ಕುಟುಂಬಗಳಲ್ಲಿ ಉಳಿದಿರುವಂತಹ ಜಮೀನಿನಲ್ಲಿ ನೀರಾವರಿ ಮಾಡುವಂತಹದ್ದು, lift irrigation ಮಾಡುವಂತಹ ಯೋಜನೆಗಳು ಸಹ ಇವತ್ತು ಹೆಚ್ಚಿಗೆ ಬರಬೇಕಾಗಿದೆ. ಹಿನ್ನೀರನ್ನು ಬಳಸುವುದರಲ್ಲಿ ಸಹ ನ್ಯಾಯಾಧೀಕರಣ ಮಿತಿಯನ್ನು ಏರಿಸಿರುವುದರಿಂದ ಹೊಸ ಹೊಸ ಯೋಜನೆಗಳನ್ನು ಇವತ್ತು ಬ್ಯಾಕ್‌ವಾಟರ್‌ನಲ್ಲಿ ಇರುವಂತಹ ಸಂತ್ರಸ್ತರ ಉಳಿದ ಜಮೀನುಗಳಿಗೆ ತೆಗೆದುಕೊಳ್ಳಲು ಸಾಧ್ಯವಾಗುತ್ತಿಲ್ಲ. ಅದಕ್ಕೆ ಸರ್ಕಾರ ಒಂದು ಯೋಜನೆಯನ್ನು ಮಾಡುತ್ತೇವೆ ಎನ್ನುವಂತಹ ವಿಚಾರವನ್ನು ಹೇಳಿದೆ. ಆದರೆ, ಆ ನೀರನ್ನು ಬಳಸತಕ್ಕಂತಹ ಹಕ್ಕು ನಮಗೆ ಇಲ್ಲ. ಇದು ಏನಿದ್ದರೂ ಕೆನಾಲ್ ಮುಖಾಂತರ ಮುಂದೆ tail-end ಗೆ ಹೋಗಬೇಕು ಎಂದು ಹೇಳುತ್ತಾರೆ. ಹೀಗಾಗಿ, ಆ ಸಂತ್ರಸ್ತರ ಕುಟುಂಬಗಳು ಅಲ್ಲಿ ನೀರು ಇದ್ದರೂ ಸಹ, ಅದನ್ನು ಬಳಸುವುದರಿಂದ ವಂಚಿತರಾಗಿದ್ದಾರೆ.

(594) 4:50 07-06-2017 CS.VK

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ(ಮುಂದು):-**

ಮಾನ್ಯ ಸಭಾಪತಿಗಳೇ, ತಮ್ಮ ಗಮನಕ್ಕೆ ತರತಕ್ಕ ವಿಚಾರ ಏನೆಂದರೆ ಜಮಖಂಡಿ ತಾಲ್ಲೂಕಿನ ಸಸಾಲ ಹಟ್ಟಿ ಗ್ರಾಮದ ಹತ್ತಿರ ಸಂತ್ರಸ್ತರು 50 ದಿವಸಗಳ ಕಾಲ ಹೋರಾಟವನ್ನು ನಡೆಸಿದರು. ಆ ಜನರು ಅಲ್ಲಿರುವ ಹೊಳೆಯಿಂದ ನೀರನ್ನು ಲಿಫ್ಟ್ ಮಾಡಿ ನಮಗೆ ಕೊಡಿ ಎಂದು ಕೇಳುತ್ತಿದ್ದಾರೆ. ಇಲ್ಲಿ ಸುಮಾರು 60-70 ಸಾವಿರ ಎಕರೆ ಭೂಮಿಗೆ ನೀರಾವರಿ ಆಗುತ್ತದೆ. ಸುಮಾರು 210 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಸುಮಾರು 60 ರಿಂದ 70 ಸಾವಿರ ಎಕರೆ ಜಮೀನಿಗೆ ನೀರಾವರಿ ನೀಡಲಿಕ್ಕೆ ಅವಕಾಶವಿದೆ. ಅದನ್ನು ಮಾಡಲು ಸರ್ಕಾರ ಕೂಡ ಮನಸ್ಸನ್ನು ಮಾಡಿದೆ. ಆದರೆ ಆತಂಕ ಏನೆಂದರೆ ಆ ಹಿನ್ನೀರನ್ನು ಬಳಸಲಿಕ್ಕೆ ಅವಕಾಶ ಇಲ್ಲ. ಸುಮಾರು ಎರಡೂವರೆಯಿಂದ ಮೂರು ಟಿಎಂಸಿ ನೀರು ಬೇಕಾಗುತ್ತದೆ, ಆ ಹಿನ್ನೀರನ್ನು ಬಳಸಲಿಕ್ಕೆ ಆಗುತ್ತಿಲ್ಲ ಎನ್ನುವ ಆತಂಕವನ್ನು ಸರ್ಕಾರ ಕೂಡ ವ್ಯಕ್ತ ಮಾಡಿದೆ. ಏಕೆಂದರೆ ಇದಕ್ಕೆ ಕಾನೂನಿನ ಅಡಚಣೆ ಇದೆ. ನ್ಯಾಯಾಧೀಕರಣದಲ್ಲಿಯೂ ಸಹ ಹಿನ್ನೀರಿನಿಂದ ಬಾಧಿತವಾಗಿರುವ ಪ್ರದೇಶ ಆ ನೀರನ್ನು ಬಳಸಬಹುದು ಎನ್ನುವ ಬಗ್ಗೆ ನಾವು ಹೋರಾಟವನ್ನು ಮಾಡಬೇಕಾಗುತ್ತದೆ. ಈ ಹಿನ್ನೀರಿನ ಬಳಕೆಯಿಂದ ಉಳಿದ ಜಮೀನಿಗೆ ನೀರನ್ನು ಒದಗಿಸುವ ಪ್ರಯತ್ನ ಆಗಬೇಕು ಎಂದು ಈ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ವಿನಂತಿಯನ್ನು ಮಾಡಿಕೊಳ್ಳುತ್ತಿದ್ದೇನೆ.

ಇನ್ನು ಸಾಕಷ್ಟು ಕೆಲಸ ಪುನರ್ವಸತಿವಿಭಾಗದಲ್ಲಿ ಆಗಬೇಕಾಗಿದೆ. ಯಾರು ಪುನರ್ವಸತಿ ಕೇಂದ್ರಗಳಿಗೆ ಜಮೀನುಗಳನ್ನು ನೀಡಿರುತ್ತಾರೆ, ಉದಾಹರಣೆಗೆ ಮುಳುಗಡೆಗೊಂಡ ಒಂದು ಗ್ರಾಮ ಮತ್ತೊಂದು ಪ್ರದೇಶಕ್ಕೆ ಶಿಫ್ಟ್ ಆಗುವಾಗ ಅಲ್ಲಿ ಸುಮಾರು 100-200 ಎಕರೆ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳುತ್ತಿದ್ದಾರೆ. ಆ ಸ್ವಾಧೀನಕ್ಕೆ ಒಳಪಟ್ಟಂತ ಜಮೀನುಗಳ ರೈತರನ್ನು ಕೂಡ ಸಂತ್ರಸ್ತರು ಎಂದು ಸರ್ಕಾರ ಪರಿಗಣಿಸಬೇಕಾಗುತ್ತದೆ. ಅವರಿಗೂ ಸಹ ಪ್ಲಾಟ್ ಕೊಡುವಂತಹ ವ್ಯವಸ್ಥೆ ಅಗಬೇಕು. ಕಾನೂನಿನಲ್ಲಿ ಇದಕ್ಕೆ ಅವಕಾಶ ಇಲ್ಲದ ಕಾರಣ ಪುನರ್ವಸತಿ ಕೇಂದ್ರಕ್ಕೆ 6600 ಎಕರೆ ಜಮೀನನ್ನು ಸಂತ್ರಸ್ತರು ಕಳೆದುಕೊಳ್ಳುತ್ತಿದ್ದಾರೆ. ಉದಾಹರಣೆಗೆ ಬಾಗಲಕೋಟೆ ಶಿಫ್ಟ್ ಆಗಿ ಮತ್ತೊಂದು ಕಡೆಗೆ ಹೋದಾಗ 4000 ಎಕರೆ ಜಮೀನು ಅಲ್ಲಿ ಮುಳುಗಡೆಯಾಗುತ್ತಿದೆ. ಆ ಭೂ ಸ್ವಾಧೀನಕ್ಕೆ ಒಳಗಾದ ರೈತರ ಕುಟುಂಬವನ್ನು ಕೂಡ ಸಂತ್ರಸ್ತರೆಂದು ಸರ್ಕಾರ ಭಾವಿಸಿ, ಅವರಿಗೂ ಸಹ ಪ್ಲಾಟ್‌ಗಳನ್ನು ನೀಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇವತ್ತು ಸರ್ಕಾರ ಭೂಸ್ವಾಧೀನ ಪ್ರಕ್ರಿಯೆಯಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಾಕಷ್ಟು ಕೆಲಸಗಳನ್ನು ಮಾಡಿದೆ. ಆದರೆ ಪರಿಹಾರವನ್ನು ಒದಗಿಸಿಕೊಡುವ ನಿಟ್ಟಿನಲ್ಲಿ ಐತೀರ್ಪು ಆಗತಕ್ಕ ಸಂದರ್ಭದಲ್ಲಿ ಹಿನ್ನೆಡೆಯಾಗಿದೆ ಎನ್ನುವ ಮಾತನ್ನು ಹೇಳಬಯಸುತ್ತೇನೆ. ನನ್ನ ಕಳಕಳಿ ಏನೆಂದರೆ ನಾವೆಲ್ಲರೂ "ರೈತರು ಶಿವಸ್ವರೂಪಿಗಳು, ಒಕ್ಕಲಿಗ ಬಿತ್ತದಿದ್ದರೆ ಬಿಕ್ಕುವುದು ಜಗವೆಲ್ಲ" ಎಂದು ಒಂದು ಕಡೆ ನಾವು ಹೇಳುತ್ತೇವೆ, 'ರೈತನೇ ರಾಷ್ಟ್ರದ ಬೆನ್ನೆಲುಬು' ಎಂದು ಮತ್ತೊಂದು ಕಡೆ ಹೇಳುತ್ತೇವೆ. ಆದರ ರೈತ ಇವತ್ತು ತನ್ನ ಜಮೀನನ್ನು ಕಳೆದುಕೊಂಡು ತನ್ನ ಆಸ್ತಿಪಾಸ್ತಿಗಳನ್ನು ಕಳೆದುಕೊಂಡು ತನ್ನ ಸಂಬಂಧಿಕರನ್ನು ಕಳೆದುಕೊಂಡು ಒಂದು ಗ್ರಾಮದ ಜೊತೆ ಇರತಕ್ಕ ಒಂದು ಭಾವನಾತ್ಮಕ ಸಂಬಂಧವನ್ನು ಕಳೆದುಕೊಂಡು ಬೇರೆ ಪ್ರದೇಶದಲ್ಲಿ ತನ್ನ ಬದುಕನ್ನು ಕಟ್ಟಿಕೊಳ್ಳಲಿಕ್ಕೆ ಹೋಗುವ ಈ ಸಂತ್ರಸ್ತ ರೈತರಿಗೆ ನ್ಯಾಯೋಚಿತವಾಗಿ ಒಳ್ಳೆಯ ಬೆಲೆಯನ್ನು ಕೊಡಿಸತಕ್ಕ ನಿಟ್ಟಿನಲ್ಲಿ ಒಪ್ಪಿ, ಐತೀರ್ಪಿಗೆ ಹೋಗಬೇಕಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳಿ ನಮ್ಮ ಉಗ್ರಪ್ಪನವರು ಹೇಳಿದ ಹಾಗೆ guidance value ನಲ್ಲಿ sub registrar valuation ಏನಿದೆ ಎನ್ನುವುದನ್ನು ಸೆಕ್ಷನ್ 25ರ ಹೊಸ ಕಾನೂನಿನಲ್ಲಿ ಹೇಳಲಾಗಿದೆ. Determination of market value ಎಂದು ಹೇಳುತ್ತಿದ್ದಾರೆ. ಮಾರುಕಟ್ಟೆ ಬೆಲೆ ಗ್ರಾಮೀಣ ಭಾಗದಲ್ಲಿ 3 ಪಟ್ಟು ಆದಲ್ಲಿ, ನಗರ ಪ್ರದೇಶಗಳಲ್ಲಿ 4 ಪಟ್ಟು ಇರುತ್ತದೆ ಎಂದು ಹೇಳುತ್ತಿದ್ದಾರೆ,

**ಶ್ರೀ ವಿ.ಎಸ್.ಉಗ್ರಪ್ಪ(ನಾಮ ನಿರ್ದೇಶಿತರು):-** ಅದರಲ್ಲಿ individually ಯಾವುದೇ ಲ್ಯಾಂಡಿಗೆ ಯಾವುದೇ ಕೇಸಿಗೆ guidance value ಅಥವಾ ಮಾರುಕಟ್ಟೆ ಬೆಲೆಯನ್ನು ನಿಗಧಿ ಮಾಡುವುದಕ್ಕೆ ಬರುವುದಿಲ್ಲ. ಆ ಗ್ರಾಮದಲ್ಲಿರುವ ಸರ್ವೆ ನಂಬರಿನ ಹಿನ್ನೆಲೆಯಲ್ಲಿ guidance value ಅನ್ನು ಅಧಿಕಾರಿಗಳು ನಿಗಧಿ ಮಾಡಬೇಕಾಗುತ್ತದೆ. ಅದರ ಮೇಲೆ registration ಮಾಡಬೇಕಾಗುತ್ತದೆ. suppose one lakh rupee ಇದ್ದರೆ ಅದನ್ನು 95,000 ರೂಪಾಯಿಗಳಿಗೆ ಮಾಡಿದರೆ ಅದು under valuation ಆಗುತ್ತದೆ. So, thousand rupee and above ಮಾಡಬೇಕಾಗುತ್ತದೆ. ಹಾಗೆ ಮಾಡಿದಾಗ compensation ಗೆ calculate ಮಾಡಬೇಕಾದರೆ ಆಗ guidance value or registration value vary ಆಗಬಹುದು. Guidance value same ಇರುತ್ತದೆ, ಅದು ಸೆಕ್ಷನ್ 25 ಇರಲಿ ಅಥವಾ ಬೇರೆ ಇರಲಿ one and the same principle.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಈಗ ಈ ವಿಷಯದ ಬಗ್ಗೆ 1 ಗಂಟೆಗಳ ಕಾಲ ಮಾತನಾಡಿದ್ದೀರಿ., ಇನ್ನು ಎಷ್ಟು ಹೊತ್ತು ಮಾತನಾಡುತ್ತೀರಿ, ಏಕೆಂದರೆ ನಾನು ಬೇರೆಯವರಿಗೂ ಸಹ ಮಾತನಾಡಲು ಅವಕಾಶ ನೀಡಬೇಕಲ್ಲವೇ? ನಾನು ಕ್ಯಾಬಿನೆಟ್ ಇರುವುದರಿಂದ ಇವತ್ತಿನ ಸಭೆಯನ್ನು ನಾನು 6 ಗಂಟೆಗೆ ಮುಗಿಸಬೇಕಿದೆ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಗಳೇ, ಸಂತ್ರಸ್ತ ಕುಟುಂಬಗಳಿಗೆ ಶೈಕ್ಷಣಿಕವಾಗಿ ಆರ್ಥಿಕವಾಗಿ ಬಲಗೊಳ್ಳುವುದಕ್ಕೆ ಸರ್ಕಾರ ಹೆಚ್ಚಿನ ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕೆಂದು ಸರ್ಕಾರಕ್ಕೆ ಆಗ್ರಹವನ್ನು ಮಾಡುವುದರ ಜೊತೆಗೆ, consent award ಮಾಡಲಿಕ್ಕೆ ಇದರಲ್ಲಿ ಅವಕಾಶವಿದೆ. ಆ ನಿಟ್ಟಿನಲ್ಲಿ ಸರ್ಕಾರ ಗಮನವನ್ನು ಹರಿಸಬೇಕು. ಹೊಸ ಕಾನೂನಿನಲ್ಲಿಯೂ ಸಹ ತಿದ್ದುಪಡಿಯನ್ನು ಮಾಡಿಕೊಂಡು, ಒಣಬೇಸಾಯ ಜಮೀನಿಗೆ ಸುಮಾರು 20 ಲಕ್ಷ ರೂಪಾಯಿಯಷ್ಟು, ನೀರಾವರಿ ಜಮೀನಿಗೆ ಸುಮಾರು 30 ಲಕ್ಷ ರೂಪಾಯಿಗಳ ಪರಿಹಾರಕ್ಕೆ ಸಂತ್ರಸ್ತರ ಬೇಡಿಕೆ ಇದೆ. ಅಂದರೆ ಸಂತ್ರಸ್ತರು ಬೇಡುತ್ತಿದ್ದಾರೆ ಎಂದು ಹೇಳುತ್ತಿಲ್ಲ. ಇವತ್ತು ವಾಸ್ತವಿಕವಾಗಿ ಬಾಗಲಕೋಟೆ ಮತ್ತು ವಿಜಯಪುರ ಭಾಗದಲ್ಲಿ ಭೂಮಿಯನ್ನು ಕಳೆದುಕೊಂಡ ಸಂತ್ರಸ್ತರ ಜಮೀನುಗಳ ವಾಸ್ತವಿಕ ಬೆಲೆ ಒಣ ಬೇಸಾಯ ಜಮೀನಿಗೆ ಸುಮಾರು 20 ಲಕ್ಷ ರೂಪಾಯಿಗಳಷ್ಟು, ನೀರಾವರಿ ಜಮೀನಿಗೆ ಸುಮಾರು 30 ಲಕ್ಷ ರೂಪಾಯಿಗಳಷ್ಟಿದೆ. ಆ ಹಿನ್ನೆಲೆಯಲ್ಲಿ ಇಷ್ಟು ಹಣವನ್ನು ಸಂತ್ರಸ್ತರಿಗೆ ನೀಡಬೇಕೆಂದು ಆಗ್ರಹಿಸುತ್ತೇನೆ. ಇದರ ಜೊತೆಗೆ ಹಿನ್ನೀರನ್ನು ಬಳಸತಕ್ಕ ನಿಟ್ಟಿನಲ್ಲಿ ಸರ್ಕಾರವಾಗಲೀ ಅಥವಾ ಪ್ರಾಧಿಕಾರದ ಹಂತದಲ್ಲಾಗಲಿ, ವಿಚಾರವನ್ನು ಮಾಡಿ, ಹಿನ್ನೀರಿನ ಮುಖಾಂತರ ಕೂಡ ಈ ಭಾಗದಲ್ಲಿರುವ ಉಳಿದಿರುವ ಒಣ ಬೇಸಾಯ ಭೂಮಿಗೆ ನೀರಾವರಿಯನ್ನು ಒದಗಿಸಿಕೊಡಬೇಕೆಂದು ಆಗ್ರಹಿಸಿ, ಸುದೀರ್ಘವಾಗಿ ಈ ವಿಚಾರದ ಬಗ್ಗೆ ಚರ್ಚೆ ಮಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಬಸನಗೌಡ ಆರ್ ಪಾಟೀಲ್(ಯತ್ನಾಳ್)((ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಗಳೇ, ಕರ್ನಾಟಕ ರಾಜ್ಯ ಆಹಾರ ಸ್ವಾವಲಂಬನೆ ಹೊಂದಬೇಕೆಂದು ಅಂದಿನ ಪ್ರಧಾನಿ ದಿವಂಗತ ಲಾಲ್ ಬಹಾದ್ದೂರ್ ಶಾಸ್ತ್ರಿಯವರ ಅಮೃತ ಹಸ್ತದಿಂದ ಕೃಷ್ಣ ಮೇಲ್ದಂಡೆ ಯೋಜನೆಯ ಶಿಲಾನ್ಯಾಸದ ಮೂಲಕ ಏಷ್ಯಾದಲ್ಲಿಯೇ ಅತ್ಯಂತ ದೊಡ್ಡದಾದ ನೀರಾವರಿ ಯೋಜನೆಯನ್ನು ರೂಪಿಸಲಾಯಿತು. ಈ ನೀರಾವರಿ ಯೋಜನೆ 1964ರಲ್ಲಿ 1000 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಯೋಜಿಸಲಾಗಿತ್ತು. ಇಂದು ನಾವು ಚರ್ಚೆ ಮಾಡತಕ್ಕ ಕಾಲದಲ್ಲಿ ಸರ್ಕಾರ ಇದಕ್ಕಾಗಿ 40,000 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗುತ್ತಿದೆ ಎಂದು ಹೇಳಿರುವುದನ್ನು ನಾವು ಕೇಳಿದ್ದೇವೆ. ಬಹಳ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದೀರ್ಘ ಕಾಲದ ಇತಿಹಾಸ ಕೃಷ್ಣ ಯೋಜನೆಗೆ ಇದೆ. ಕೃಷ್ಣೆ ಆ ಭಾಗದ ಜನರಿಗೆ ಅನ್ನ ನೀಡುವಂತಹ ಒಂದು ದೊಡ್ಡ ನದಿ. ಆದರೆ ಈ ಯೋಜನೆಯನ್ನು ತೆಗೆದುಕೊಂಡ ಮೇಲೆ ಅಲ್ಲಿನ ಜನರ ಕಷ್ಟ ಅವರು ಪಟ್ಟಂತಹ ಅತ್ಯಂತ ಕೆಟ್ಟ ದಿನಗಳು ಬಹುಶಃ ನಮ್ಮ ವೈರಿಗಳಿಗೂ ಸಹ ಬರಬಾರದು. ಇಂತಹ ಅತ್ಯಂತ ಕಷ್ಟದ ದಿನಗಳನ್ನು ಕಂಡಿದ್ದಾರೆ. ತಮ್ಮ ಜೀವನವನ್ನೇ ತ್ಯಾಗ ಮಾಡಿ ರಾಷ್ಟ್ರಕ್ಕೆ ಸಮರ್ಪಣೆಯನ್ನು ಮಾಡಿದ 4ಲಕ್ಷ ಎಕರೆ ಜಮೀನು ಭೂಸ್ವಾಧೀನಕ್ಕಾಗಿ, ಮುಳಗಡೆಗಾಗಿ ಮತ್ತು ಕಾಲುವೆಗಾಗಿ ಪುನರ್ವಸತಿಗಾಗಿ ಉಪಯೋಗವಾಗಿದೆ. ಈ ರೀತಿಯ ಅನೇಕ ಯೋಜನೆಗಳಿಗೆ ವಿಜಯಪುರ ಮತ್ತು ಬಾಗಲಕೋಟೆಯ ಜನರು ಬಹಳ ದೊಡ್ಡ ತ್ಯಾಗವನ್ನು ಮಾಡಿದ್ದಾರೆ. ಆದರೆ ಇಲ್ಲಿ ಕೆಲವೊಂದು ಸದಸ್ಯರು ನಿಮಗೆ ನೀರು ಬೇಕಾದರೆ ಕಷ್ಟ ಪಡಬೇಕೆಂದು ಹೇಳಿದರು. ಆದರೆ ನೀರು ನಮಗಷ್ಟೇ ಬೇಕಾ? ಕೇವಲ ವಿಜಯಪುರ ಮತ್ತು ಬಾಗಲಕೋಟೆಗೆ ಮಾತ್ರ ಇದರಿಂದ ನೀರಾವರಿ ಆಗುವುದಿಲ್ಲ. ಕರ್ನಾಟಕದಲ್ಲಿ 60 ಭಾಗ ಪ್ರದೇಶಕ್ಕೆ ನೀರಾವರಿ ಒದಗಿಸುವ ಸಾಮರ್ಥ್ಯ ಹೊಂದಿದೆ ಈ ಕೃಷ್ಣ ನದಿ. ಹಾಗಾಗಿ ಎಲ್ಲರಿಗೂ ನೀರನ್ನು ಒದಗಿಸುತ್ತಾ ನಮಗೆ ನೀರು ಇಲ್ಲದಂತಹ ಪರಿಸ್ಥಿತಿ ಉದ್ಭವವಾಗಿದೆ.

(ಮುಂದು)

**(595) 5.00 07-06-2017 ಎಂವಿ:ವಿಕೆ**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಬಸನಗೌಡ ಆರ್. ಪಾಟೀಲ್ ಯತ್ನಾಳ್** (ಮುಂದು...):–

ಮಾನ್ಯ ಸಭಾಪತಿಯವರೆ, ನಮಗೆ ಏನು ಬಂದರೂ ಸಹ lift irrigation ನಿಂದ ಬರಬೇಕು. ನಮಗೆ ಕಾಲುವೆ ಮೂಲಕ ಬಹಳ ಕಡಿಮೆ ಬರುತ್ತದೆ. Lift irrigation ಬಗ್ಗೆ ಅನೇಕ ತಂತ್ರಜ್ಞರು ಏನು ಹೇಳುತ್ತಾರೆಂದರೆ ಎಲ್ಲೂ success ಆಗುವುದಿಲ್ಲವೆಂದು ಬಹಳ ಸರಳವಾಗಿ ಸುಮ್ಮನೆ ಹೇಳಿಬಿಡುತ್ತಾರೆ. ಸುಮ್ಮನೆ ವಿದ್ಯುತ್ ಸಿಗುವುದಿಲ್ಲ, ಏನೂ ಸಿಗುವುದಿಲ್ಲ ಎಂದು ಹೇಳುತ್ತಾರೆ. ಇವತ್ತಿನ ದಿವಸ ನಾವು ಅಷ್ಟನೆಲ್ಲಾ ಕಳೆದುಕೊಂಡು ಮುಳುಗಡೆಯಾಗಿದ್ದೇವೆ, 172 ಹಳ್ಳಿಗಳು ಇರಬಹುದು ಈಗ ಹೊಸತ್ತೆ 22 ಹಳ್ಳಿಗಳು ಮುಳುಗಡೆಯಾಗುತ್ತಿವೆ. ಸಾವಿರಾರು ವರ್ಷದ ನಮ್ಮ ಒಂದು ಬಾಂಧವ್ಯ ಮತ್ತು ಊರಿನ ಸಂಬಂಧ ಏನು ಇತ್ತು, ಇವತ್ತಿನ ದಿವಸ ನಾವು ನೋಡುತ್ತೇವೆ ಫೇಸ್‌ಬುಕ್‌ನಲ್ಲಿ ಹಾಕುತ್ತಾರೆ, ಹಳೇ ಬೆಂಗಳೂರು ಹೇಗಿತ್ತು, ಹಳೇ ಮೈಸೂರು ಹೇಗಿತ್ತೆಂದು. ಆಗಿನ ಬೆಂಗಳೂರು ಹೇಗೆ ಇತ್ತು, ಆಗ ಮೈಸೂರು ಒಂದು ಕಾಲದಲ್ಲಿ ಯಾವ ರೀತಿ ಇತ್ತು ಎಂದು ನಾವು ಅದರ ಫೋಟೋ ನೋಡಿದಾಗ, ಅದರ ವೈಭವ ಹೇಗಿತ್ತು ಎನ್ನುವಂಥದ್ದನ್ನು, ನಾವು ಚಿಕ್ಕವರಿದ್ದಾಗ ನಾವು ಹಳ್ಳಿಯಲ್ಲಿ ಬೆಳೆದಂತಹವರಿಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಮ್ಮದೇ ಆದಂತಹ ಅಸ್ತಿತ್ವ ಇಲ್ಲ, ಅಲ್ಲಿ ಕಳೆದುಕೊಂಡಿದ್ದೇವೆ. ನಿಮಗೆ ಬಹಳ ಆಶ್ಚರ್ಯವೆನಿಸುತ್ತದೆ, ಮೊದಲ ಹಂತದಲ್ಲಿ ನಾರಾಯಣಪುರ ಡ್ಯಾಂಗಾಗಿ ನಮ್ಮ ರೈತರು ಭೂಮಿ ಕಳೆದುಕೊಂಡಿರುವುದಕ್ಕೆ ಒಂದು ಎಕರೆಗೆ ಒಂದು ಸಾವಿರ ಮತ್ತು ಎರಡು ಸಾವಿರ ರೂಪಾಯಿಗಳ ಪರಿಹಾರ ಸಿಕ್ಕಿದೆ. ನಾನು ಇವತ್ತಿನ ದಿವಸ ಇಲ್ಲಿ ಮಾಜಿ ಪ್ರಧಾನ ಮಂತ್ರಿಗಳಾದ ಮಾನ್ಯ ಶ್ರೀ ದೇವೇಗೌಡರನ್ನು ಮತ್ತು ಮಾಜಿ ಮುಖ್ಯಮಂತ್ರಿಗಳಾದ ಮಾನ್ಯ ಶ್ರೀ ಜೆ.ಹೆಚ್.ಪಟೇಲರನ್ನು ನಾನು ನೆನಪಿಸಿಕೊಳ್ಳಬೇಕಾಗುತ್ತದೆ. ಅವರ ಕಾಲದಲ್ಲಿ ಸ್ವಲ್ಪ ಗಟ್ಟಿಯಾದ ನಿರ್ಣಯಗಳನ್ನು ತೆಗೆದುಕೊಂಡರು. ಶ್ರಿ ಜೆ.ಹೆಚ್.ಪಟೇಲರನ್ನು ನಾವು ಸ್ಮರಣೆ ಮಾಡಿಕೊಳ್ಳಬೇಕು. ಏಕೆಂದರೆ, ಅವರು ಈ ಭೂಸ್ವಾಧೀನ ಮತ್ತು ಭೂ ಪರಿಹಾರದಲ್ಲಿ ಸ್ವಲ್ಪ ವಿಶಾಲ ಮನಸ್ಸು ಮಾಡಿ, ಶ್ರೀ ಜಾಮಧಾರ್ ಎಂಬ ಒಬ್ಬ ದಕ್ಷ ಅಧಿಕಾರಿಯನ್ನು ಯಾರ ಮುಲಾಜಿಲ್ಲದೆ ಗಟ್ಟಿಯಾಗಿ ಹಾಕಿದರು. ಅವರು ನಮಗೆ ಸಹಕಾರ ಕೊಡುವುದಿಲ್ಲ, ನಮಗೆ ಗೌರವ ಕೊಡವುದಿಲ್ಲವೆಂದು ಆಡಳಿತ ಪಕ್ಷದ ಶಾಸಕರು ಅವರನ್ನು ತೆಗೆದು ಹಾಕಬೇಕು, ಅವರನ್ನು ಕಿತ್ತುಹಾಕಬೇಕೆಂದರು. 1994ರಲ್ಲಿ ನಾನು ಸಹ ಶಾಸಕನಾಗಿದ್ದೆ, ಅದಕ್ಕೆ ಯಾವುದಕ್ಕೂ ಮಣಿಯದೆ, ಒಂದು ನಿರ್ಣಯ ತೆಗೆದುಕೊಂಡ ಮೇಲೆ, ಕೃಷ್ಣ ಮೇಲ್ದಂಡೆ ಯೋಜನೆಯು ನೀರಾವರಿ ಆಗುತ್ತದೆ ಎಂಬ ಆಶಾಭಾವನೆ ನಮ್ಮಲ್ಲಿ ಮೂಡಿತು. ಆದರೆ, ಮೊದಲಿನ ಪರಿಸ್ಥಿತಿ ನೋಡಿದರೆ ಇದು ನೀರಾವರಿ ಯೋಜನೆ ಆಗುವುದಿಲ್ಲವೆಂಬ ಪರಿಸ್ಥಿತಿ ಇತ್ತು. ಮುಂದೆ ಶ್ರೀ ಹೆಚ್.ಕೆ.ಪಾಟೀಲರು ಮತ್ತು ಶ್ರೀ ನಾಗೇಗೌಡರು ಬಂದರು, ಈ ರೀತಿ ಕುಂಟುತ್ತಾ, ಕುಂಟುತ್ತಾ, ಇವತ್ತಿನ ದಿವಸ ಪುನರ್ವಸತಿ ಕೇಂದ್ರಗಳ ಮತ್ತು ಹಳೇ ಪುನರ್ವಸತಿ ಕೇಂದ್ರಗಳ ಪರಿಸ್ಥಿತಿ ಬಹಳ ಗಂಭೀರವಿದೆ. ಆ ಪುನರ್ವಸತಿ ಕೇಂದ್ರಗಳ ಪ್ರದೇಶಕ್ಕೆ ಇನ್ನೂ ಜನ ಹೋಗಿಲ್ಲ, ಅಲ್ಲಿ ಅವರು ಕಟ್ಟಿದಂತಹ ಸರ್ಕಾರದ ಕಟ್ಟಡಗಳು, ಕಲ್ಯಾಣ ಮಂಟಪ, ಸಮುಧಾಯ ಭವನ, ಗ್ರಾಮಪಂಚಾಯಿತಿ ಕಟ್ಟಡಗಳು ಹಾಳು ಬಿದ್ದು ಕೊಂಪೆಯಾಗಿವೆ, ಅಲ್ಲಿಗೆ ಹೋದರೆ ಅವರಿಗೆ ಮೂಲಭೂತ ಸೌಕರ್ಯಗಳನ್ನು ಸರಿಯಾಗಿ ಕೊಟ್ಟಿಲ್ಲ. ಇವತ್ತಿನ ದಿವಸ ಅವರಿಗೆಲ್ಲಾ ನೀವು ಗ್ರಾಮಪಂಚಾಯಿತಿಗೆ handover ಮಾಡಿಕೊಳ್ಳಿ ಎಂದು ಒಂದು ಕಡೆ ಸರ್ಕಾರ ಒತ್ತಾಯ ಮಾಡುತ್ತಿದ್ದಾರೆ, ಇವೆಲ್ಲವೂ ಸಾಕಷ್ಟು ಹಳೆಯ ಪುನರ್ವಸತಿ ಕೇಂದ್ರಗಳನ್ನು 172 ಹಳ್ಳಿಗಳಲ್ಲಿ ನಿರ್ಮಾಣ ಮಾಡಿದ್ದೀರಿ ಅಲ್ಲಿ ಬಹಳ ಭಯಂಕರವಾದ ಸಮಸ್ಯೆಗಳಿವೆ. ನಾನು ಸ್ವತಃ ಈ ಸ್ಥಳೀಯ ಸಂಸ್ಥೆಗಳಿಂದ ಪಕ್ಷೇತರನಾಗಿ ಜನರು ನನ್ನನ್ನು ಆಯ್ಕೆ ಮಾಡಿದ ಮೇಲೆ, ಸುಮಾರು 200 ಗ್ರಾಮಪಂಚಾಯಿತಿಗಳಿಗೆ ನಾನು ಭೇಟಿ ಕೊಟ್ಟಿದ್ದೇನೆ. ನನ್ನ ಕ್ಷೇತ್ರದಲ್ಲಿ 405 ಗ್ರಾಮಪಂಚಾಯಿತಿಗಳು ಬರುತ್ತವೆ. ಇವತ್ತಿನ ದಿವಸ ಬಹಳ ಕೆಟ್ಟ ಪರಿಸ್ಥಿತಿಯಲ್ಲಿ ಜನ ತಮ್ಮ ಜೀವನವನ್ನು ಮಾಡುತ್ತಿದ್ದಾರೆ. ಆ ತಗಡಿನಲ್ಲಿ ಎಷ್ಟೋ ವರ್ಷ ವಾಸವಿದ್ದರು. ಅದರ ಒಳಗಡೆ ಹೋದರೆ, ನಮ್ಮ ಕಡೆ ಬೇಸಿಗೆಯಲ್ಲಿ 42ರಿಂದ 44ರವರೆಗೆ ಡಿಗ್ರಿಯಷ್ಟು ಬಿಸಿಲು ಇರುತ್ತದೆ, ಅಂತಹ ಕಡೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜನ ಜೀವನ ಮಾಡುತ್ತಿದ್ದರು. ಅಲ್ಲಿ ದನ ಕಟ್ಟುವುದಕ್ಕೂ ಆಗುವುದಿಲ್ಲ. ಒಂದು ಕುಟುಂಬ ಎಂದರೆ ನಾಲ್ಕರಿಂದ ಐದು ಜನ, ಅವರು ಸಹ ಇರುವುದಕ್ಕೆ ಆಗುವುದಿಲ್ಲ. ಅಷ್ಟೆಲ್ಲಾ ಕಷ್ಟಪಟ್ಟ ಮೇಲೆ ಸರ್ಕಾರ ಅವರ ಬಗ್ಗೆ ಈ ಹಿಂದೆ ಏನು ತಪ್ಪುಗಳಾಗಿವೆ, ಆ ತಪ್ಪುಗಳನ್ನು ತಿದ್ದಿಕೊಂಡು, ಇನ್ನು ಮುಂದೆ ಬರುವಂತಹ ಪುನರ್ವಸತಿಯಲ್ಲಿ ಸರಿ ಮಾಡಬೇಕಿತ್ತು. ಇವತ್ತಿನ ದಿವಸ ಭೂಸ್ವಾಧೀನ ಪ್ರಕ್ರಿಯೆ ನಡೆಯುತ್ತಿಲ್ಲ, ಇವತ್ತು ರೈತರು ಸ್ವಯಂಪ್ರೇರಿತರಾಗಿ ಕಾಲುವೆಗಳ ನಿರ್ಮಾಣಕ್ಕೆ ತಮ್ಮ ಜಮೀನನ್ನು ಬಿಟ್ಟುಕೊಟ್ಟಿದ್ದಾರೆ. ಆದರೆ, ಸರ್ಕಾರ ಅವರಿಗೆ ಇನ್ನೂ ಒಂದು ರೂಪಾಯಿ ಕೊಟ್ಟಿಲ್ಲ. ನಮ್ಮ ಜಿಲ್ಲೆಗೆ ನೀರು ಬರುತ್ತದೆ, ಒಂದಲ್ಲಾ ಒಂದು ದಿವಸ ನಾವು ಬಹಳ ಶ್ರೀಮಂತರಾಗುತ್ತೇವೆ, ನಾವು ಒಂದು ಮೋಟಾರು ಸೈಕಲ್‌ನಲ್ಲಿ ಓಡಾಡುತ್ತೇವೆ, ಜೀಪ್‌ನಲ್ಲಿ ಓಡಾಡುತ್ತೇವೆ, ಎನ್ನುವಂತಹ ಒಂದು ಕನಸು ಕಂಡು, ತಮ್ಮ ಮಕ್ಕಳ ಭವಿಷ್ಯದ ಸಲುವಾಗಿ, ಇವತ್ತಿಗೂ ಸರಿಯಾಗಿ ಪರಿಹಾರ ಕೊಡದೇ ಇದ್ದರೂ ಸಹ, ರೈತರು ಎಲ್ಲೆಲ್ಲೋ ಒಂದು ಸಣ್ಣ-ಪುಟ್ಟ ತೊಂದರೆಗಳನ್ನು ಮಾಡುತ್ತಾರೆ ಇಲ್ಲವೆಂದಲ್ಲ, ಗುತ್ತಿಗೆದಾರರು ನಮಗೆ ಯಾರಿಗಾದರೂ ಹೇಳಿದಾಗ ನಾವು ರೈತರಿಗೆ convince ಮಾಡುತ್ತೇವೆ. ಆ ಪರಿಹಾರ ಕೊಡಿಸುವ ಜವಾಬ್ದಾರಿ ನಮ್ಮದು, ನಾವು ಇದೇ ರೀತಿ ಅದನ್ನು ಬಿಟ್ಟಿದ್ದೇ ಆದರೆ, 1964ರಿಂದ ಇದೇ ರೀತಿ ಆಗಿದೆ, ದಯವಿಟ್ಟು ನೀವೆಲ್ಲರೂ ಸಹಕಾರ ಮಾಡಬೇಕು ಎಂದಾಗ, ರೈತರು ಇವತ್ತಿಗೂ ಸುಮಾರು 1,34,000 ಎಕರೆಯನ್ನು ಮತ್ತೆ ಕಳೆದುಕೊಂಡು, ಇವತ್ತಿನ ದಿವಸ ಕಾಲುವೆಗಳ ನಿರ್ಮಾಣ ಬಹಳ ವೇಗದಿಂದ ನಡೆಯುತ್ತಿದೆ. ಮಾನ್ಯ ಸಭಾಪತಿಯವರೆ, ಇವತ್ತಿನ ದಿವಸ ಬಹಳ ಗಂಭೀರವಾದಂತಹ ಚಿಂತನೆಯನ್ನು ನಾವು ಮಾಡುತ್ತಿದ್ದೇವೆ. ನಾನು ತಾರತಮ್ಯ ಮಾಡುವುದಕ್ಕೆ ಹೋಗುವುದಿಲ್ಲ ಕಾವೇರಿ ಮತ್ತು ಕೃಷ್ಣೆ ಎಂದು ಹೇಳಿ. ಏಕೆಂದರೆ ಅವುಗಳೆರಡೂ ಈ ರಾಜ್ಯದ ಕಣ್ಣುಗಳಿದ್ದ ಹಾಗೆ. ಕಾವೇರಿ ಭಾಗದಲ್ಲಿರುವಂತಹ ಜನಪ್ರತಿನಿಧಿಗಳು ಮೊದಲಿನಿಂದಲೂ ಬಹಳ ಜಾಗೃತರಾಗಿದ್ದರು. ಏಕೆಂದರೆ, ಮೈಸೂರು ಮಹಾರಾಜರ ಕೊಡುಗೆ ಬಹಳ ದೊಡ್ಡದಾಗಿತ್ತು. ನಮ್ಮ ಸರ್ ಎಂ.ವಿಶ್ವೇಶ್ವರಯ್ಯನವರು ಕಟ್ಟಿದಂತಹ ಕನ್ನಂಬಾಡಿ ಅಣೆಕಟ್ಟು, ಇದಕ್ಕೆ ಮೈಸೂರು ಮಹಾರಾಜರು ತಮ್ಮ ಬಂಗಾರವನ್ನು ಒತ್ತೆ ಇಟ್ಟು ಆ ಅಣೆಕಟ್ಟನ್ನು ನಿರ್ಮಾಣ ಮಾಡಿ, ಈ ಭಾಗದ ಜನರಿಗೆ ನೀರಾವರಿಯ ಮಹತ್ವ ಗೊತ್ತಿತ್ತು, ಅದು ಆರ್ಥಿಕವಾಗಿ ಗಟ್ಟಿಯಾಗಿತ್ತು. ಆದರೆ, ಉತ್ತರ ಕರ್ನಾಟಕದ ಜನಪ್ರತಿನಿಧಿಗಳು, ನಾನು ಪ್ರಾಮಾಣಿಕವಾಗಿ ಹೇಳುತ್ತೇನೆ, ಅವರು ಪ್ರಯತ್ನ ಮಾಡಲಿಲ್ಲ, ಒಗ್ಗಟ್ಟು ಇರಲಿಲ್ಲ, ಈಗಲೂ ಸಹ ಅದೇ ಸಂಸ್ಕೃತಿ ನಮ್ಮಲ್ಲಿದೆ. ಆದರೆ ಈಗೀಗ 10-20 ವರ್ಷದಲ್ಲಿ ಜನರು, ಕೆಲವರು ನಮ್ಮಂತಹವರು ಮಾತನಾಡುತ್ತಾರೆಂದು ನಮ್ಮನ್ನು ಕಳುಹಿಸುತ್ತಾರೆ, ಅದಕ್ಕೆ ನಾವು ಇವತ್ತಿನ ದಿವಸ ವಿಧಾನಮಂಡಲದಲ್ಲಿದ್ದೇವೆ. ನಾನು ಮೊದಲ ಬಾರಿಗೆ ಶಾಸಕನಾದಾಗ, ನನಗೂ ಸಹ ಕೂರಿಸಿಬಿಡುತ್ತಿದ್ದರು. ನಮ್ಮ ಶ್ರೀ ಯಡಿಯೂರಪ್ಪನವರು ಸುಮ್ಮನೆ

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕುಳಿತುಕೋ, ನಾನೇ ಮಾತನಾಡುತ್ತೇನೆ ಎನ್ನುತ್ತಿದ್ದರು, ಆಗ ನಾವು ಅವರ ಜೊತೆ ಜಗಳ ಮಾಡುತ್ತಿದ್ದೆವು. ಆಗ ಶ್ರೀ ಕೆ.ಆರ್.ರಮೇಶ್‌ಕುಮಾರ್ ರವರು ಸಭಾಧ್ಯಕ್ಷರಾಗಿದ್ದರು, ಶ್ರೀ ಬಸನಗೌಡ ಆರ್. ಪಾಟೀಲ್ ಯತ್ನಾಳ್ ಯುವಕನಿದ್ದಾನೆ, ಹೊಸದಾಗಿ ಬಂದಿದ್ದಾನೆ, ಮಾತನಾಡಲಿ ಬಿಡಿ ಎಂದಾಗ, ಸ್ವಲ್ಪ-ಸ್ವಲ್ಪ ಅವಕಾಶ ಕೊಡುತ್ತಿದ್ದರು, ಮಾತನಾಡುತ್ತಿದ್ದೆ. ಇವತ್ತಿನ ದಿವಸ ಉತ್ತರ ಕರ್ನಾಟಕದಲ್ಲಿ ಮಾತನಾಡುವಂತಹ ಜನಪ್ರತಿನಿಧಿಗಳು ಇರದೇ ಇರುವುದಕ್ಕೆ, ಕ್ರಿಯಾಶೀಲತೆ ಕಡಿಮೆ ಇರುವುದಕ್ಕೆ, ಆಲಮಟ್ಟಿ ಮತ್ತು ಉತ್ತರ ಕರ್ನಾಟಕಕ್ಕೆ ಅನ್ಯಾಯವಾಗಿದೆ-ಅನ್ಯಾಯವಾಗಿದೆ ಎಂದು ಹೇಳಿ, ಇವತ್ತಿನ ದಿವಸ ಯಾರು ಅನ್ಯಾಯ ಮಾಡಿದ್ದಾರೋ, ಯಾರಿಂದ ಅನ್ಯಾಯವಾಗಿತ್ತೋ ಅವರೇ ಭಾಷಣ ಮಾಡುತ್ತಾ ಹೋಗುತ್ತಿದ್ದಾರೆ. ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯವಾಗಬೇಕೆಂದು ಒಂದು ಕೂಗಿದೆ, ಏಕೆ ಪ್ರತ್ಯೇಕ ರಾಜ್ಯವಾಗಬೇಕು? ನೀವು ಮಾಡಿದ ತಪ್ಪಿಗೆ, 30 ವರ್ಷ ವಿಧಾನಸೌಧಕ್ಕೆ ರೊಟ್ಟಿ ಮತ್ತು ಬ್ಯಾಳಿ ತಂದು ಊಟ ಮಾಡಿ ಮಲಗಿಕೊಂಡು ಹೋಗಿದ್ದಾರೆ. ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯ ಏಕೆ ಬೇಕು? ನಮಗೆ ಪ್ರತ್ಯೇಕ ರಾಜ್ಯ ಬೇಡ, ನಮಗೆ ಅದರ ಅಭಿವೃದ್ಧಿ ಬೇಕಷ್ಟೇ, ನಾವು ಸಮಗ್ರ ಕರ್ನಾಟಕದ ಚಿಂತನೆ ಮಾಡೋಣ. ನೀವೆಲ್ಲರೂ ಅಂದರೆ ಈ ಕಡೆಯವರು ನಮ್ಮನ್ನು ಕೈಬಿಟ್ಟರೆ ಅನಿವಾರ್ಯವಾಗಿ ನಾವು ಉತ್ತರ ಕರ್ನಾಟಕವನ್ನು ಮಾಡಿಕೊಳ್ಳಬೇಕಾಗುತ್ತದೆ. ಅದಕ್ಕೆ ನಾನು ಬಹಳಷ್ಟು ಅಂಕೆ ಸಂಖ್ಯೆಗಳಿಗೆ ಹೋಗುವುದಿಲ್ಲ, ಏಕೆಂದರೆ ನಾನು ಗಣಿತದಲ್ಲಿ ಬುದ್ಧಿವಂತನಲ್ಲ, ಅದನ್ನೆಲ್ಲಾ ಮಾನ್ಯ ಸದಸ್ಯರಾದಂತಹ ಶ್ರೀ ನಿರಾಣಿ ಹಣಮಂತ್ ರುದ್ರಪ್ಪನವರಿಗೆ ಬಿಟ್ಟು ಬಿಟ್ಟಿದ್ದೇನೆ. ಇವತ್ತಿನ ದಿವಸ ಪುನರ್ವಸತಿಗಳ ಬಗ್ಗೆ ನಾನು ಹೇಳುವುದೇನೆಂದರೆ ಈಗ ಏನು ಹಳೆಯ ಪುನರ್ವಸತಿ ಕೇಂದ್ರಗಳಿವೆ, ಅವುಗಳಿಗೆ ಇನ್ನೂ ಮೂಲಭೂತ ಸೌಕರ್ಯಗಳನ್ನು ಕೊಟ್ಟಿಲ್ಲ. ಮತ್ತೆ ಈಗ ಯಾವ ಗ್ರಾಮಪಂಚಾಯಿತಿಗಳು ಪುನರ್ವಸತಿ ಕೇಂದ್ರಗಳಿಗೆ ಹೋಗುತ್ತಿವೆ, ಅದರ ಉಸ್ತುವಾರಿಯನ್ನು ಯಾರಿಗೆ ಕೊಟ್ಟಿದ್ದೀರಿ? ಆ ಪ್ರದೇಶದ ಗ್ರಾಮಪಂಚಾಯಿತಿಯವರಿಗೆ ಕೊಟ್ಟಿದ್ದೀರಿ. ಜಮಖಂಡಿ ತಾಲ್ಲೂಕಿನಲ್ಲಿ ಜಂಬಗಿ ಎಂಬುದಾಗಿ ಒಂದು ಗ್ರಾಮಪಂಚಾಯಿತಿ ಇದೆ, ಜಂಬಗಿ ಗ್ರಾಮಪಂಚಾಯಿತಿಯ ಮೂರೂ ಹಳ್ಳಿಗಳು ಮುಳುಗಡೆಯಾಗುತ್ತವೆ. ಅದರ ಉಸ್ತುವಾರಿಯನ್ನು ಯಾರಿಗೆ ಕೊಟ್ಟಿದ್ದೀರಿ? ಸಾವಳಗಿ ಗ್ರಾಮಪಂಚಾಯಿತಿಯವರಿಗೆ ಕೊಟ್ಟಿದ್ದೀರಿ. ನನ್ನ ಮನೆಯನ್ನು ನಾನು ಕಟ್ಟಿಕೊಳ್ಳಬೇಕೋ ಅಥವಾ ನನ್ನ ಮನೆಯನ್ನು ಮಾನ್ಯ ನೀರಾವರಿ ಸಚಿವರು ಕಟ್ಟಬೇಕೋ? ಮಾನ್ಯ ಸಭಾಪತಿಯವರೆ, ಸಮಸ್ಯೆ ಈ ರೀತಿಯಾಗಿದೆ.

**ಶ್ರೀ ಎಂ.ಬಿ.ಪಾಟೀಲ್ (ಜಲ ಸಂಪನ್ಮೂಲ ಸಚಿವರು):-** ಮಾನ್ಯ ಸಭಾಪತಿಯವರೆ, ಇದರಲ್ಲಿ ನಾವು 192 ಕೋಟಿ ರೂಪಾಯಿ ಹಣವನ್ನು ಬಿಡುಗಡೆ ಮಾಡಿದ್ದೇವೆ. ಯಾವ ಗ್ರಾಮಪಂಚಾಯಿತಿಗೂ ಸಹ ಅದನ್ನು ನೇರವಾಗಿ ಬಿಡುಗಡೆ ಮಾಡಿಲ್ಲ. ಏನೇನು ಬೇಕೆಂದು ಗ್ರಾಮಪಂಚಾಯಿತಿಯ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗ್ರಾಮಸಭೆಯಲ್ಲಿ ಅಭಿಪ್ರಾಯವನ್ನು ಸಂಗ್ರಹಿಸಿ ಕೊಡಿ. ಜಿಲ್ಲಾಪಂಚಾಯಿತಿ ಸಿ.ಇ.ಓ.ಗೆ ಬಿಡುಗಡೆ ಮಾಡಿದ್ದೇವೆ. ಮೊದಲು ನಾವು ಜಿಲ್ಲಾಧಿಕಾರಿಯವರಿಗೆ ಬಿಡುಗಡೆ ಮಾಡಿದ್ದೆವು. ಅಲ್ಲಿ ಕೆಲವೊಂದು ತಾಂತ್ರಿಕ ತೊಂದರೆಗಳು ಬಂದವು. ತಾಂತ್ರಿಕ ತೊಂದರೆಗಳು ಬರುವುದರಿಂದ ನಾವು ಜಿಲ್ಲಾಪಂಚಾಯತ್‌ನ ಸಿ.ಇ.ಓ. ಮುಖಾಂತರ ಆ ಕೆಲಸವನ್ನು ಮಾಡುತ್ತಿದ್ದೇವೆ. ನಾವು ಹಣವನ್ನು ಗ್ರಾಮಪಂಚಾಯಿತಿಗೆ ಬಿಡುಗಡೆ ಮಾಡುತ್ತಿಲ್ಲ, ಅದರ ಕೆಲಸ ಜಿಲ್ಲಾಪಂಚಾಯತ್ ಸಿ.ಇ.ಓ. ಮುಖಾಂತರ ನಡೆಯುತ್ತಿದೆ.

**ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್):-** ನೀವು ಈ ರೀತಿ ಹೇಳುತ್ತೀರಿ. ಆದರೆ, ಅಲ್ಲಿ ಏನಾಗಿದೆ ಎಂದರೆ, ಈ ಹಿಂದಿನ ಶುಕ್ರವಾರ ನಾನು ಜಮಖಂಡಿಯ ಏಳು ಗ್ರಾಮಪಂಚಾಯಿತಿಗಳಿಗೆ ಭೇಟಿ ನೀಡಿದ್ದೆ. ಅಲ್ಲಿಯ ಜನರ ಭಾವನೆ ಏನೆಂದರೆ, ನಮ್ಮ ಗ್ರಾಮಪಂಚಾಯಿತಿಗಳ ವ್ಯಾಪ್ತಿಗೆ ಬರುವಂತಹ ಹಳ್ಳಿಗಳು ಮುಳುಗುತ್ತಿವೆ. ಮತ್ತೊಂದು ಗ್ರಾಮಪಂಚಾಯಿತಿ ಸರ್ವೆ ನಂಬರು ಏನಿದೆ, ಉದಾಹರಣೆಗೆ ಜಂಬಗಿಯಲ್ಲಿ ಏನು ನೀವು ಪುನರ್ವಸತಿ ಕೇಂದ್ರವನ್ನು ಮಾಡುತ್ತಿದ್ದೀರಿ, ಅದರ ಸರ್ವೆ ನಂಬರು ಸಾವಳಗಿಯಲ್ಲಿದೆ, ನೀವು ಸಾವಳಗಿಯಲ್ಲಿ ಭೂ-ಸ್ವಾಧೀನ ಮಾಡಿದ್ದೀರಿ. ಅದರ ಉಸ್ತುವಾರಿಯನ್ನು ಯಾರಿಗೆ ಕೊಟ್ಟಿದ್ದೀರಿ? ಜಿಲ್ಲಾಪಂಚಾಯಿತಿಯವರಿಗೆ ಕೊಟ್ಟಿಲ್ಲ, ಸಾವಳಗಿ ಗ್ರಾಮ ಪಂಚಾಯಿತಿಯವರು ಅದರ ನಿರ್ವಹಣೆ ಮಾಡುತ್ತಿದ್ದಾರೆ.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೆ, ನಾವು ಈ 192 ಕೋಟಿ ರೂಪಾಯಿಗಳನ್ನು ಏನು update ಮಾಡುವುದಕ್ಕೆ ಕೊಟ್ಟಿದ್ದೇವೆ. ಅದನ್ನು ಯಾವ ಗ್ರಾಮಪಂಚಾಯಿತಿಗೂ ನೇರವಾಗಿ ಕೊಟ್ಟಿಲ್ಲ. ಬಾಗಲಕೋಟೆ ಸಿ.ಇ.ಓ ಮತ್ತು ಬಿಜಾಪುರ ಸಿ.ಇ.ಓ. ಅವರಿಗೆ ನಾವು ಕೊಟ್ಟಿರುವಂಥದ್ದು. ಮೊದಲು ಅದನ್ನು ಜಿಲ್ಲಾಧಿಕಾರಿಗಳ ಮೂಲಕ ಮಾಡಬೇಕೆಂದು ಇತ್ತು. ನಾವು ಬಹಳಷ್ಟು ವಿಚಾರಗಳನ್ನು ಮಾಡಿದ್ದೇವೆ, ಕೆಲವೊಂದು ತಾಂತ್ರಿಕ ತೊಂದರೆಗಳು ಇವೆ, ಏಕೆಂದರೆ, ಜಿಲ್ಲಾಧಿಕಾರಿಗಳಿಗೆ ಇಂಜಿನಿಯರ್ಸ್ ಇರುವುದಿಲ್ಲ. ಇದೆಲ್ಲವನ್ನು ನೋಡಿ ನಾವು ಸಿ.ಇ.ಓ.ಗಳಿಗೆ ಕೊಟ್ಟಿದ್ದೇವೆ.

**(ಮುಂದು...)**

(596) 07.06.2017 05.10 LL-BNS

**ಸಭಾಪತಿಯವರ ಉಪಸ್ಥಿತಿ**

ಶ್ರೀ ಬಸನಗೌಡ ಆರ್. ಪಾಟೀಲ್(ಯತ್ನಾಳ್) (ಮುಂದುವರೆದಿದ್ದು...)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಚಿವರು ಆ ವಿಚಾರವನ್ನು ಸ್ಪಷ್ಟೀಕರಿಸಲಿ. ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಯಾವ ಹಳ್ಳಿಗಳು ಮುಳುಗಡೆಯಾಗುತ್ತವೆ, ಆ ಹಳ್ಳಿಗಳ ಜನಗಳ ಭಾವನೆಯನ್ನು ತಮ್ಮ ಇಲಾಖೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಕೇಳುವುದಕ್ಕೆ ಹೇಳಲಿ. ಆದರೆ ಅವರು ಏನು ಮಾಡುತ್ತಿದ್ದಾರೆಂದರೆ, ಹೋಗಿ ಸಾವಳಗಿ ಗ್ರಾಮದವರನ್ನು, ಮತ್ತೊಬ್ಬರನ್ನು ಕೇಳುತ್ತಿದ್ದಾರೆ. ಬಿಜಾಪುರ ತಾಲ್ಲೂಕಿನ ಚಿಕ್ಕಗಲಗಲಿ ಮುಳುಗಡೆಯಾಗುತ್ತಿದೆ. ಆದರೆ, ಪುನರ್ವಸತಿ ಕೇಂದ್ರವನ್ನು 28 ಕಿಲೋಮೀಟರ್ ದೂರದಲ್ಲಿರುವ ಜಮಖಂಡಿ ಪಕ್ಕದಲ್ಲಿ ಹಾಕಿದ್ದಾರೆ. ಎಷ್ಟು ಅವೈಜ್ಞಾನಿಕವಾಗಿ ಪುನರ್ವಸತಿ ಕೇಂದ್ರಗಳನ್ನು ಸ್ಥಾಪನೆ ಮಾಡಿದ್ದಾರೆಂದರೆ, ಅಲ್ಲಿ ಅವರಿಗೆ ಯಾವುದೇ ಜಮೀನು, ಇನ್ನಿತರ ಸೌಲಭ್ಯಗಳು ಇರುವುದಿಲ್ಲ. ಇದನ್ನು ಮಾನ್ಯ ಸಚಿವರು ಮಾಡಿದ್ದಾರೆಂದು ನಾನು ಹೇಳುತ್ತಿಲ್ಲ. ಬಹಳಷ್ಟು ಕ್ಲಿಷ್ಟಕರವಾದಂತಹ ಸಮಸ್ಯೆಗಳನ್ನು ಸುಧಾರಣೆ ಮಾಡುವುದು ಒಮ್ಮೆಲೇ ಸಾಧ್ಯವೆಂದು ನಾನು ಹೇಳುವುದಿಲ್ಲ. ಆದರೆ ಎಲ್ಲೆಲ್ಲಿ ಸಾಧ್ಯತೆಯಿದೆ ಅದನ್ನು ಮಾಡಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ. ಇನ್ನು ರೈತರ ಭೂಸ್ವಾಧೀನಕ್ಕೆ ಸಂಬಂಧಪಟ್ಟಂತೆ, ಇವತ್ತು ರೈತರ ಮನವೊಲಿಸಿ, ಒಪ್ಪಿಸಿ ಅವರ ಜಮೀನುಗಳನ್ನು ಕೊಡಿಸಿದ್ದೇವೆ. ಅವರಿಗೆ ಪರಿಹಾರ ಧನವನ್ನು ನೀರಾವರಿ ಜಮೀನಿಗೆ ಎಕರೆಗೆ ಕನಿಷ್ಟ 40 ಲಕ್ಷ ರೂಪಾಯಿ, ಖುಷ್ಕಿ ಜಮೀನಿಗೆ ಎಕರೆಗೆ 30 ಲಕ್ಷ ರೂಪಾಯಿ ಪರಿಹಾರ ಧನ ಕೊಡಬೇಕು. ಮಾನ್ಯ ಸಚಿವರಿಗೂ ಈ ಬಗ್ಗೆ ಸಾಕಷ್ಟು ಗೊತ್ತಿದೆ. ಏಕೆಂದರೆ, ಮಾನ್ಯ ಸಚಿವರ ಕ್ಷೇತ್ರದಲ್ಲಿಯೂ ಸಹ ಇವತ್ತಿನ ದಿವಸ ಭೂಸ್ವಾಧೀನವಾಗುತ್ತಿದೆ. ಸರ್ಕಾರದವರು ಕಾಲುವೆ ನಿರ್ಮಾಣಕ್ಕಾಗಿ ಮತ್ತು ಇನ್ನಿತರ ಮುಂದಿನ ಕಾಮಗಾರಿಗಳ ಅಭಿವೃದ್ಧಿಗೆ ಭೂಸ್ವಾಧೀನ ಮಾಡಿಕೊಂಡು ಅದಕ್ಕೆ ಏನು valuation ನಿಗದಿ ಮಾಡುತ್ತಾರೆ, ಅದೇ ಮಾದರಿಯಲ್ಲಿಯೇ ಪರಿಹಾರ ಧನವನ್ನು ಕೊಡಬೇಕೆಂದು ನಾನು ತಮ್ಮಲ್ಲಿ ಒತ್ತಾಯ ಮಾಡುತ್ತಿದ್ದೇನೆ. ಈ ಹಿನ್ನೀರಿನಿಂದ ಸುಮಾರು 400-500ಮೀಟರ್ ಭೂಮಿ ಪೂರ್ತಿಯಾಗಿ ಸವೆಯುತ್ತದೆ. ಇದರಿಂದಾಗಿ, ಅಲ್ಲಿ ಕೃಷಿಗೆ ಯೋಗ್ಯವಾದಂತಹ ಒಂದು ಪರಿಸ್ಥಿತಿಯಿರುವುದಿಲ್ಲ. ಹಾಗಾದರೆ ರೈತರು ಏನು ಮಾಡಬೇಕು? ಏಕೆಂದರೆ, ಜಮೀನು ಅಂತೂ ಇದೆ, ಆದರೆ, ಅವರಿಗೆ ಭೂಸ್ವಾಧೀನದ ಯಾವುದೇ ಪರಿಹಾರಧನ ಸಿಗುವುದಿಲ್ಲ, ಅಲ್ಲದೇ, ಜಮೀನು ಕೂಡ ಹಾಳಾಗಿ ಹೋಗುತ್ತದೆ. ಆದುದರಿಂದ, ಹಿನ್ನೀರಿನಿಂದ ಕನಿಷ್ಟ ಒಂದು ಪ್ರದೇಶ ನಿಗದಿಪಡಿಸಿ, ಇಷ್ಟು ಪ್ರದೇಶ ಹಿನ್ನೀರಿನಿಂದ ಬಾಧಿತವಾಗಿ ಸವಳು ಹಿಡಿಯುವಂತಹ ಜಮೀನಿದೆ ಅದನ್ನೂ ಸಹ ಸರ್ಕಾರದವರು ಭೂಸ್ವಾಧೀನ ಮಾಡಿಕೊಳ್ಳವಂಥದ್ದನ್ನು ಮಾಡಬೇಕು. ಈಗ ಅದರ ಜೊತೆಗೆ ಕೆಲವು ನಡುಗಡ್ಡೆಗಳು ನಿರ್ಮಾಣವಾಗುತ್ತವೆ. ಆ ರೈತ ತನ್ನ ಹೊಲಕ್ಕೆ ಹೋಗಲಿಕ್ಕೆ ಬೋಟು...

**ಸಭಾಪತಿಯವರು:-** ಹೆಲಿಕಾಪ್ಟರ್‌ನಲ್ಲಿ ಹೋಗಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸನಗೌಡ ಆರ್. ಪಾಟೀಲ್(ಯತ್ನಾಳ್):-** ಮಾನ್ಯ ಸಭಾಪತಿಯವರೆ, ಹೌದು. ಹೆಲಿಕಾಪ್ಟರ್‌ನಲ್ಲಿ ಹೋಗಬೇಕು. ಹೆಲಿಕಾಪ್ಟರ್ ಹೊಂದುವಂತಹ ಆಸ್ಟ್ರೇಲಿಯಾ ಮತ್ತು ಅಮೇರಿಕಾ ದೇಶಗಳಂತಹ ಒಕ್ಕಲುತನ ನಮಗೆ ಬಂದಿಲ್ಲ. ಅದಕ್ಕಾಗಿ ಆ ಜಮೀನುಗಳನ್ನೂ ಸಹ ಭೂಸ್ವಾಧೀನ ಮಾಡಿಕೊಂಡು, ಅಂತಹ ಜಮೀನುಗಳನ್ನು ಸರ್ಕಾರ ತೆಗೆದುಕೊಳ್ಳಬೇಕು. ಮುಂದೆ ಹಿನ್ನೀರು ಯಾವ ರೀತಿ ಖಾಲಿಯಾಗುತ್ತಾ ನೀರಿನ ಮಟ್ಟ ಕೆಳಗಡೆ ಬರುತ್ತದೆ, ಅಂದರೆ, ಜನವರಿ ತಿಂಗಳಿನಿಂದ ನೀರಿನ ಮಟ್ಟ ಕೆಳಗಡೆ ಬರುವಾಗ, ಮುಂದೆ ಆ ಜಮೀನನ್ನು ದನಗಳ ಮೇವಿಗೆ, ರೈತರಿಗೆ ಕೃಷಿಗೆ ಭೂಮಿ ಬಳಕೆ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕು. ಅದೇ ರೀತಿ ಹೆಚ್ಚಾಗಿ ಪುನರ್ವಸತಿ ಕೇಂದ್ರಗಳನ್ನು ಸ್ಥಾಪನೆ ಮಾಡುವುದಕ್ಕೆ ಕೃಷಿಗೆ ಯೋಗ್ಯವಾದಂತಹ, ಫಲವತ್ತಾದಂತಹ ಜಮೀನನ್ನು ದಯವಿಟ್ಟು ಭೂಸ್ವಾಧೀನ ಮಾಡಿಕೊಳ್ಳಬಾರದು. ಅದಕ್ಕೆ ಕೃಷಿಗೆ ಯೋಗ್ಯವಾಗಿಲ್ಲದಂತಹ, ಬಂಜರು ಭೂಮಿಯಾಗಿರುವಂತಹ ಜಮೀನನ್ನು ಸ್ವಲ್ಪ ಹೆಚ್ಚಿಗೆ ಹಣ ಖರ್ಚು ಮಾಡಿ ಭೂಸ್ವಾಧೀನ ಮಾಡಿಕೊಂಡರೆ ಅನುಕೂಲವಾಗುತ್ತದೆ. ಏಕೆಂದರೆ, ಮೊದಲೇ ನಮ್ಮ ದೇಶದಲ್ಲಿ ಈ ರಿಯಲ್ ಎಸ್ಟೇಟ್ ಮಂದಿ ಬಂದು ಫಲವತ್ತಾದ ಭೂಮಿಯೆಲ್ಲವನ್ನು ಬರೀ ಬಿಳಿಯ ಕಲ್ಲನ್ನು ಹಾಕಿ, ಅದರಲ್ಲಿ ಗುಂಟಾಗಳನ್ನು ಹಾಕಿಕೊಂಡು ಇಡೀ ವ್ಯವಸ್ಥೆಯನ್ನೇ ಹಾಳು ಮಾಡಿಬಿಟ್ಟಿದ್ದಾರೆ. ಅಂತಹ ಫಲವತ್ತಾದ ಜಮೀನುಗಳು ಹೋದ ಮೇಲೆ ನೀರಾವರಿ ತೆಗೆದುಕೊಂಡು ಏನು ಮಾಡುವುದಕ್ಕೆ ಆಗುತ್ತದೆ? ಒಂದು ಎಕರೆ ಬಂಜರು ಭೂಮಿಯನ್ನು ಕೆರೆಯಿಂದ ಅಥವಾ ಬೇರೆ ಕಡೆಯಿಂದ ಮಣ್ಣು ತಂದು ತಯಾರು ಮಾಡಬೇಕಾದರೆ ಒಬ್ಬ ರೈತನಿಗೆ ಸುಮಾರು 15 ರಿಂದ 20 ಲಕ್ಷ ರೂಪಾಯಿಗಳಷ್ಟು ಹಣ ಬೇಕಾಗುತ್ತದೆ. ಅದರ ಬದಲಾಗಿ ಕೃಷಿಗೆ ಯೋಗ್ಯವಾದಂತಹ ಜಮೀನನ್ನು, ಈ ಪುನರ್ವಸತಿ ಕೇಂದ್ರಗಳಿಗೆ ಏನು ಭೂ ಸ್ವಾಧೀನ ಮಾಡುತ್ತಿದ್ದಾರೆ ದನ್ನು ಕೈಬಿಡಬೇಕು ಎನ್ನುವಂತಹ ವಿನಂತಿಯನ್ನು ಮಾಡುತ್ತಿದ್ದೇನೆ.

**(ಈ ಹಂತದಲ್ಲಿ ಮಾನ್ಯ ಉಪ ಸಭಾಪತಿಯವರು ಪೀಠವನ್ನು ಅಲಂಕರಿಸಿದರು.)**

ಆದುದರಿಂದ, ಈ clause ಅನ್ನು ತೆಗೆಯಬೇಕು. ಏಕೆಂದರೆ, ಈಗ ಒಂದು ಕುಟುಂಬವೆಂದರೆ ಸರ್ಕಾರದವರು ಏನು ಮಾಡುತ್ತಿದ್ದಾರೆಂದರೆ, ಗಂಡ, ಹೆಂಡತಿ ಮತ್ತು ಎರಡು ಮಕ್ಕಳು ಎಂದು ಪರಿಗಣಿಸುತ್ತಿದೆ. ಆದರೆ, ಒಂದು ರೈತನ ಕುಟುಂಬವೆಂದರೆ ಕೇವಲ ಗಂಡ, ಹೆಂಡತಿ, ಮಕ್ಕಳಲ್ಲ. ಆತನ ಜೊತೆಗೆ ದನ-ಕರುಗಳು ಇವೆ, ಕುರಿಗಳು ಇವೆ. ಎಲ್ಲಾ ಸಮುದಾಯದವರು ಇವತ್ತಿನ ದಿವಸ ಕುರಿ ಸಾಕಾಣಿಕೆ ಮಾಡುತ್ತಾರೆ. ಎಲ್ಲರ ಮನೆ ಮುಂದೆ ಒಂದೆರೆಡು ಎಮ್ಮೆ, ಆಕಳು ಇರುವುದು ಇವತ್ತಿನ ದಿವಸ ಸಹಜವಾದ ಕೃಷಿಕರಲ್ಲಿರತಕ್ಕಂತಹ ಒಂದು ವ್ಯವಸ್ಥೆಯಾಗಿದೆ. ಆದರೆ, ಸರ್ಕಾರ ಕೊಡುವಂತಹ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

20'X30' ಪ್ಲಾಟ್‌ನಲ್ಲಿ ಏನು ಮಾಡುವುದಕ್ಕಾಗುತ್ತದೆ? 'ಹಿಂದೂ ವಾರಸುದಾರ ಕಾಯಿದೆ 2005'ರ ಪ್ರಕಾರ, ಗಂಡು, ಹೆಣ್ಣು ಮಕ್ಕಳನ್ನೊಳಗೊಂಡಂತೆ ಎಲ್ಲಾ ಮಕ್ಕಳಿಗೂ ನಿವೇಶನ ಕೊಡಬೇಕು ಎನ್ನುವಂತಹದ್ದಾಗಿದೆ. ಉದಾಹರಣೆಗೆ, ಒಬ್ಬ ರೈತನ ಮನೆಯಲ್ಲಿ 14 ರಿಂದ 16ನೇ ವಯಸ್ಸಿನ ಇಬ್ಬರು ಮಕ್ಕಳಿರುತ್ತಾರೆ. ಇನ್ನೆರಡು–ಮೂರು ವರ್ಷಗಳಿಗೆ ಅವರು ಮೇಜರ್ ಆಗುತ್ತಾರೆ, ಮುಂದೆ ಲಗ್ನವಾಗುತ್ತಾರೆ. ಅವರಿಗೆ ಇವತ್ತಿನ ದಿವಸ ಸರ್ಕಾರದವರು ಪ್ಲಾಟ್‌ಗಳನ್ನು ಕೊಡುತ್ತಿಲ್ಲ. ಇವತ್ತಿನ ದಿವಸ ಕೂಲಿಕಾರರು ಎಂದು ನಾವು ಏನು ಕರೆಯುತ್ತಿದ್ದೇವೆ, ಅಂದರೆ ಭೂಮಿಯಿಲ್ಲದೇ ಇರುವಂತಹ ಜನರಿದ್ದಾರೆ, ಅವರಿಗೂ ಸಹ ಇವತ್ತಿನ ದಿವಸ ನಿವೇಶನಗಳನ್ನು ಕೊಡುವಂತಹದ್ದನ್ನು ಮಾಡಬೇಕೆಂದು ಹೇಳುವುದರ ಜೊತೆಗೆ ಈಗಾಗಲೇ ಮಾನ್ಯ ಸದಸ್ಯರಾದ ಶ್ರೀ ನಿರಾಣಿ ಹಣಮಂತ್ ರುದ್ರಪ್ಪನವರು ಹೇಳಿದಂತೆ, ಸರ್ಕಾರಿ ಹುದ್ದೆಯಲ್ಲಿ ಕನಿಷ್ಠ ಶೇಕಡ 10 ರಷ್ಟು ಈ ನಿರಾಶ್ರಿತರಿಗಾಗಿ ಭೂಮಿ ಕಳೆದುಕೊಂಡಂತಹ ರೈತನ ಮಕ್ಕಳಿಗೆ ಒಂದು ನೌಕರಿಯನ್ನು ಕೊಡಬೇಕು ಎನ್ನುವಂತಹದ್ದನ್ನು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಹಿಂದಿನ ಪುನರ್ವಸತಿ ಕೇಂದ್ರಗಳಲ್ಲಿ ಏನೇನು ತಪ್ಪುಗಳಾಗಿವೆ? ಯಾವ ಯಾವ ಕಹಿ ಅನುಭವಗಳಾಗಿವೆ? ಆ ಸಂದರ್ಭದಲ್ಲಿ ಇರುವಂತಹ ಅಧಿಕಾರಿಗಳು ಈಗ ಹೊಸದಾಗಿ ಪುನರ್ವಸತಿಗಳನ್ನು ಮಾಡುತ್ತಿದ್ದಾರೆ, ಅಲ್ಲಿನ ರೈತರ ಎಲ್ಲಾ ಸಮಸ್ಯೆಗಳನ್ನು ತಿಳಿದುಕೊಂಡು ಅವುಗಳನ್ನು ಪರಿಹರಿಸಬೇಕು. ಈ ಹಿಂದೆ ಭೂಸ್ವಾಧೀನದಲ್ಲಿ ನಾವು ಅನೇಕ ಸಮಸ್ಯೆಗಳನ್ನು ನೋಡಿದ್ದೇವೆ. ಈಗಾಗಲೇ ಮಾನ್ಯ ಸಚಿವರು ಸಹ ತಮ್ಮ ಉತ್ತರದಲ್ಲಿ ಈ ಬಗ್ಗೆ ಹೇಳಿದ್ದಾರೆ. ಆಲಮಟ್ಟಿ.., ಇದರ ಬಗ್ಗೆ ಇವರು ಕೊಟ್ಟಂತಹ ಉತ್ತರದಲ್ಲಿ, 2013 ರಲ್ಲಿ ನ್ಯಾಯಬದ್ಧ ಹಾಗೂ ಪಾರದರ್ಶಕ ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ ಕಾಯ್ದೆ ತರಲಾಗಿದೆ ಎಂದು ಹೇಳಿದ್ದಾರೆ. ಯು.ಪಿ.ಎ. ಸರ್ಕಾರದವರು ಇದನ್ನು ತಂದಿದ್ದಾರೆಂದು ಹೇಳಲೇಬೇಕಾಗುತ್ತದೆ ಮತ್ತು ಅದನ್ನು ಪ್ರಶಂಸೆ ಮಾಡಬೇಕಾಗಿದ್ದುದರಲ್ಲಿ ಧರ್ಮವಿದೆ, ಕರ್ತವ್ಯವಿದೆ, ಅದರಂತೆ ಅವರು ಹೇಳಿದ್ದಾರೆ. ಆದರೆ, ಒಂದಕ್ಕೆ ಐದು ಪಟ್ಟು ಕೊಡುತ್ತೇನೆಂದು ಹೇಳುವುದರಲ್ಲಿ ಏನಾದರೂ ಅರ್ಥವಿದೆಯೇ? ಅದನ್ನೆಲ್ಲಾ ನೋಡಿದರೆ ಸರ್ಕಾರದ ಕಾನೂನಿನ ಪ್ರಕಾರ ಒಂದು ಎಕರೆ ಜಮೀನನ್ನೂ ಸಹ ಭೂಸ್ವಾಧೀನ ಮಾಡುವುದಕ್ಕಾಗುವುದಿಲ್ಲ.

**ಶ್ರೀ ಎಂ.ಬಿ. ಪಾಟೀಲ್(ಜಲ ಸಂಪನ್ಮೂಲ ಸಚಿವರು):–** ಮಾನ್ಯ ಸಭಾಪತಿಯವರೆ, ಮಾನ್ಯ ಯತ್ನಾಳ್‌ರವರೆ ಒಂದು ನಿಮಿಷ... ಒಂದು ನಿಮಿಷ...

**ಶ್ರೀ ಬಸನಗೌಡ ಆರ್. ಪಾಟೀಲ್(ಯತ್ನಾಳ್):–** ಮಾನ್ಯ ಸಭಾಪತಿಯವರೆ, ಯು.ಪಿ.ಎ. ಸರ್ಕಾರದ ....

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ಬಿ. ಪಾಟೀಲ್:-** ಮಾನ್ಯ ಸಭಾಪತಿಯವರೆ, ಯು.ಪಿ.ಎ. ಸರ್ಕಾರ ಈ Land Acquisition Actಗೆ ತಿದ್ದುಪಡಿ ತರುವುದಕ್ಕೆ ಮುಂಚೆ ಅದು ಯಾವ ರೀತಿ ಇತ್ತು. ಮೊದಲು ಒಂದು ಪಟ್ಟು ಇತ್ತಲ್ಲವೇ? ನಂತರ ಅದರ ನಾಲ್ಕು ಪಟ್ಟು ಆಯಿತಲ್ಲವೇ? ಇದು, ಆ guidance value ನಲ್ಲಿ ಕೂಡ ಇದೆ, ಅದನ್ನು ನಾನು ಒಪ್ಪುತ್ತೇನೆ. ಆದರೆ, ಯು.ಪಿ.ಎ. ಸರ್ಕಾರ ಇದ್ದಾಗ ತಂದಂತಹ ಆಕ್ಟ್ ಮತ್ತು ಹಿಂದೆ ಇದ್ದಂತಹ ಆಕ್ಟ್ ಅರ್ಥ ಮಾಡಿಕೊಳ್ಳಬೇಕು. ಈಗ consent ಆಗಿದೆಯೆಂದು ಈ ಮಾತನ್ನು ಮಾತನಾಡುತ್ತಿದ್ದಾರೆ. ಒಂದು ವೇಳೆ consent ಆಗದೇ ಇದ್ದಿದ್ದರೆ ಒಂದು ಪಟ್ಟು ಪರಿಹಾರ ಸಿಗುತ್ತಿತ್ತು. ನಾಲ್ಕು ಪಟ್ಟು ಸಿಗುತ್ತಿರಲಿಲ್ಲ. ಅದಕ್ಕಾಗಿ ಯು.ಪಿ.ಎ. ಸರ್ಕಾರದ Land Acquisition Act ಬಗ್ಗೆ ಮಾತನಾಡಬೇಡಿ. ಯು.ಪಿ.ಎ. ಸರ್ಕಾರದ Land Acquisition Act ಬಗ್ಗೆ ಏತಕ್ಕೆ ಮಾನ್ಯ ಸದಸ್ಯರು ಈ ಮಾತನ್ನು ಮಾತನಾಡುತ್ತಿದ್ದಾರೆಂದರೆ ಹಿಂದೆ consent award ಆಗಿದೆಯೆಂದು ಈ ರೀತಿ ಮಾತನಾಡುತ್ತಿದ್ದಾರೆ. ಒಂದು ವೇಳೆ consent award ಇಲ್ಲದೇ ಇದ್ದಿದ್ದರೆ ಈಗ ಏನಾಗುತ್ತಿತ್ತು?

**ಶ್ರೀ ಬಸನಗೌಡ ಆರ್. ಪಾಟೀಲ್(ಯತ್ನಾಳ್):-** ಮಾನ್ಯ ಸಭಾಪತಿಯವರೆ, consent awardಗೆ ಈಗ ಸರ್ಕಾರ ಒಪ್ಪಿಕೊಳ್ಳುತ್ತಿಲ್ಲ. ನನ್ನ ಉತ್ತರ ಹೇಳುವುದಕ್ಕೂ ನನ್ನನ್ನು ಬಿಡುತ್ತಿಲ್ಲ.

**(ಗೊಂದಲ)**

**ಶ್ರೀ ಎಂ.ಬಿ. ಪಾಟೀಲ್:-** ಮಾನ್ಯ ಸಭಾಪತಿಯವರೆ, ನಾಲ್ಕು ಪಟ್ಟು ಆಗದೇ ಇದ್ದಿದ್ದರೆ? ನಮ್ಮ ಸರ್ಕಾರ ಕೇವಲ guidance valueವನ್ನೇ ಕೊಡುತ್ತೇವೆಂದು ಹೇಳಿದ್ದರೆ ಮುಂದೆ ಏನಾಗುತ್ತಿತ್ತು?

**(ಗೊಂದಲ)**

**ಶ್ರೀ ಬಸನಗೌಡ ಆರ್. ಪಾಟೀಲ್(ಯತ್ನಾಳ್):-** ಮಾನ್ಯ ಸಭಾಪತಿಯವರೆ...

**(ಗೊಂದಲ)**

**ಶ್ರೀ ಅರುಣ ಶಹಾಪುರ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ...

**ಶ್ರೀ ಎಂ.ಬಿ. ಪಾಟೀಲ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಿಗೆ ಅದು ಅರ್ಥವಾಗುತ್ತಿಲ್ಲ. **(ಗೊಂದಲ)** ಯು.ಕೆ.ಪಿ. 1 ಮತ್ತು 2 ರಲ್ಲಿ... ಒಂದು ನಿಮಿಷ ಮಾನ್ಯ ಅರುಣ ಶಹಾಪುರರವರೆ,

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯು.ಕೆ.ಪಿ. 1 ಮತ್ತು 2 ರಲ್ಲಿ guidance value ಏನೇ ಇದ್ದರೂ ಕೂಡ market value ಇವತ್ತಿನ ದಿವಸ ಆಗಿದ್ದರೂ ಕೂಡ consent award ಆಯಿತು. 30-40 ಸಾವಿರ ರೂಗಳಿದ್ದ ಬೆಲೆ 1.50 ಲಕ್ಷ ರೂಪಾಯಿ ಆಯಿತು. ಈಗ ಯು.ಪಿ.ಎ. ಸರ್ಕಾರದ Land Acquisition Act ಆದ ಮೇಲೆ ನಾಲ್ಕು ಪಟ್ಟು ಪರಿಹಾರ ಸಿಗುತ್ತಿದೆ. ಇವತ್ತಿನ ದಿವಸ guidance value ನಲ್ಲಿ ಇದು ಸಹ ಇದೆ. ಏಕೆಂದರೆ, ಅದು sales statistics ಮೇಲೆ ಹೋಗುತ್ತದೆ. ಒಂದು ವೇಳೆ ಅದು ಇರದೇ ಇದ್ದಿದ್ದರೆ ನಾಳೆ ದಿವಸ ಏನಾಗುತ್ತಿತ್ತು? ಆ ನಂತರ ಪ್ರತಿಯೊಬ್ಬನು ಕೂಡ ಉದ್ಯೋಗ ಕಳೆದುಕೊಳ್ಳುತ್ತಾನೆ. ಐದು ಲಕ್ಷ ರೂಪಾಯಿ ಇವತ್ತಿನ ದಿವಸ ಆ ರೈತನ ಕುಟುಂಬಕ್ಕೆ ಪರಿಹಾರ ಕೊಡುವಂತಹದ್ದು ಆಗಿದೆ. ಆದರೆ, ಯು.ಪಿ.ಎ. ಸರ್ಕಾರದ Land Acquisition Act ಬಹಳ ಚೆನ್ನಾಗಿದೆ. ಆದರೆ, ನಮ್ಮಲ್ಲಿರುವ ಪದ್ಧತಿ ಏನಿದೆ? Registration ಸಮಯದಲ್ಲಿ guidance value ಏನಿದೆ, ಅಲ್ಲಿ ಇವತ್ತಿನ ದಿವಸ ದೋಷವಿದೆ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಯು.ಪಿ.ಎ. ಕೊಟ್ಟಿರತಕ್ಕಂತಹ...

**ಉಪ ಸಭಾಪತಿಯವರು:-** ಮಾನ್ಯ ನಿರಾಣಿಯವರೆ, ದಯವಿಟ್ಟು... ಪ್ಲೀಸ್, ಪ್ಲೀಸ್...

**ಶ್ರೀ ಬಸನಗೌಡ ಆರ್. ಪಾಟೀಲ್(ಯತ್ನಾಳ್):-** ಮಾನ್ಯ ಸಭಾಪತಿಯವರೆ, ಹಾಗಾದರೆ ಸರ್ಕಾರ ರೈತರಿಗೆ ಎಷ್ಟು ಪರಿಹಾರ ಧನ ಕೊಡುತ್ತದೆ?

**ಶ್ರೀ ಎಂ.ಬಿ. ಪಾಟೀಲ್:-** ಮಾನ್ಯ ಸಭಾಪತಿಯವರೆ, guidance value ನಲ್ಲಿ ಇವತ್ತಿನ ದಿವಸ ವ್ಯತ್ಯಾಸ ಏನಾಗಿದೆಯೆಂದರೆ...

**ಶ್ರೀ ಬಸನಗೌಡ ಆರ್. ಪಾಟೀಲ್(ಯತ್ನಾಳ್):-** ಮಾನ್ಯ ಸಭಾಪತಿಯವರೆ, ಆ ಕಾನೂನಿನ ಪ್ರಕಾರ ಹೋದರೆ, ಐವತ್ತು ಸಾವಿರ...

**ಶ್ರೀ ಎಂ.ಬಿ. ಪಾಟೀಲ್:-** ಮಾನ್ಯ ಸಭಾಪತಿಯವರೆ, ಆ ಕಾನೂನಿನ ಪ್ರಕಾರ ಹೋಗದೇ ಇದ್ದರೆ ಏನಾಗುತ್ತಿತ್ತು..? ಅದನ್ನು ಹೇಳಲಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸನಗೌಡ ಆರ್. ಪಾಟೀಲ್(ಯತ್ನಾಳ್):–** ಮಾನ್ಯ ಸಭಾಪತಿಯವರೆ, ಈಗ ಏನಾಗಿದೆಯೆಂದರೆ, Sub-Registrar officeನಲ್ಲಿ ಐವತ್ತು ಸಾವಿರ ರೂಪಾಯಿ valuation ಇದೆ.

**ಶ್ರೀ ಬಸವರಾಜ ಹೊರಟ್ಟಿ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಸರ್ಕಾರ ಕೊಡುವುದಕ್ಕಾಗುವುದಿಲ್ಲವೆಂದರೆ ರೈತರೆಲ್ಲಾ ದಂಗೆಯೇಳುತ್ತಿದ್ದರು.

(ಮುಂದುವರೆದಿದೆ...)

(597)/7-6-2017/5-20/ಎಲ್ಎಂ/ಬಿಎನ್ಎಸ್

(ಉಪಸಭಾಪತಿಯವರ ಉಪಸ್ಥಿತಿ)

**ಶ್ರೀ ಬಸವರಾಜ ಎಸ್. ಹೊರಟ್ಟಿ:–** ಮಾಡಿರುವುದು ಸರಿ. ಆದರೆ ಇವತ್ತಿನ ಪರಿಸ್ಥಿತಿ ಈ ರೀತಿಯಾಗಿದೆ ಎನ್ನುವುದನ್ನು ಅವರು ಹೇಳುತ್ತಿದ್ದಾರೆ.

**ಶ್ರೀ ಎಂ.ಬಿ.ಪಾಟೀಲ್:–** ಅದನ್ನೇ ನಾವು ಹೇಳುತ್ತಿದ್ದೇವೆ. Land Acquisition Act ನಲ್ಲಿ four times ಮಾಡಿರುವುದು transparency, ಎಲ್ಲವು ಒಳ್ಳೆಯದಾಗಿವೆ.

**ಶ್ರೀ ಬಸವರಾಜ ಎಸ್. ಹೊರಟ್ಟಿ:–** ಒಂದು ಪಟ್ಟು ಇರುವುದನ್ನು ನಾಲ್ಕು ಪಟ್ಟು ಮಾಡಿರುವುದನ್ನು ನಾವು ಒಪ್ಪುತ್ತೇವೆ ಹಾಗೂ ಅದನ್ನು appreciate ಮಾಡುತ್ತೇವೆ. ಆದರೆ ಇವತ್ತು ಈ ಪರಿಸ್ಥಿತಿ ಇದೆ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:–** ಭಾಷಣ ಮಾಡಿರುವುದನ್ನು ಕೇಳಬೇಡಿ. ಭೂಮಿಯನ್ನು ಕಳೆದುಕೊಂಡಿರುವುದನ್ನು ಕೇಳಿ.

**ಶ್ರೀ ಬಸವರಾಜ ಎಸ್. ಹೊರಟ್ಟಿ:–** ನಾವು ಅದನ್ನೇ ಹೇಳುತ್ತಿದ್ದೇವೆ.

**ಉಪಸಭಾಪತಿಯವರು:–** ಮಾನ್ಯ ಯತ್ನಾಳರವರೆ ಬೇಗ ಮಾತನಾಡಿ ಮುಗಿಸಿ.

**ಶ್ರೀ ಬಸನಗೌಡ ರಾ. ಪಾಟೀಲ್ (ಯತ್ನಾಳ):–** ಮಾನ್ಯ ಸಭಾಪತಿಗಳೆ, ಯು.ಪಿ.ಎ ಸರ್ಕಾರದವರು ಭೂ ಸ್ವಾಧೀನದ ಬಗ್ಗೆ ತಮ್ಮ ಬೆನ್ನನೂ ತಾವೇ ಚಪ್ಪರಿಸಿಕೊಳ್ಳುತ್ತಿದ್ದಾರೆ. ಈ ದೇಶದ ಜನ ಇವರನ್ನು ಅಧಿಕೃತ ವಿರೋಧ ಪಕ್ಷದವರನ್ನಾಗಿಯು ಮಾಡಲಿಲ್ಲ. Land Acquisition ಇದ್ದಿದ್ದರೆ ಬಹಳ ಚೆನ್ನಾಗಿತ್ತು. ಇದರ ಬಗ್ಗೆ ನಾನು ಬಹಳ ಆಳಕ್ಕೆ ಹೋಗುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಗಳೆ, ಇದು ಸರಿಯಲ್ಲ. ಯಾವುದಕ್ಕೆ ಯಾವುದನ್ನು ಹೇಳುತ್ತಿದ್ದಾರೆ ಇವರು? ಅಧಿಕೃತ ವಿರೋಧ ಪಕ್ಷವಾಗಿ ಮಾಡಲಿಲ್ಲ ಎಂದರೆ ಏನು ಅರ್ಥ?

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ನೀವು ಎಷ್ಟೋ ಮಾತನಾಡುತ್ತೀರಿ. ಅವರು ಮಾತನಾಡಲಿ ಬಿಡಿ. ನೀವು ಎಷ್ಟೋ ಟೀಕೆ ಮಾಡುತ್ತೀರಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಅವರು ಸೂಕ್ಷ್ಮವಾಗಿ ಹೇಳುತ್ತಿದ್ದಾರೆ. ನೀವು ಅವರನ್ನು tempt ಮಾಡಿದರೆ ಹೇಗೆ? ಸುಮ್ಮನೆ ಇರಬೇಕು ನೀವು.

**ಶ್ರೀ ವಿ.ಎಸ್.ಉಗ್ರಪ್ಪ:-** ನಮ್ಮ ದೇಶದ ಸಂಸ್ಕೃತಿ ಏನು ಎಂದರೆ...

(ಗೊಂದಲ)

**ಶ್ರೀ ಭಾನುಪ್ರಕಾಶ್:-** ಯತ್ನಾಳ್‌ರವರು ಹೇಳುವ ರೀತಿಯಲ್ಲಿ ಹೇಳುತ್ತಿದ್ದಾರೆ. ರಾಜ್ಯದ ಜನತೆಗೆ ಸಂದೇಶ ಕೊಡುತ್ತಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಅವರು ಹೇಳುವುದನ್ನು ಕೇಳಿ.

(ಗೊಂದಲ)

**ಶ್ರೀ ವಿ.ಎಸ್.ಉಗ್ರಪ್ಪ:-** ಪೂಜಾರಿಯವರೆ ಇಲ್ಲಿ ಇದ್ದ ತಮ್ಮನ್ನು ಈ ರಾಜ್ಯದ ಜನರು ಅಲ್ಲಿಗೆ ಕಳುಹಿಸಿದ್ದಾರೆ. ನಿಮ್ಮನ್ನು ಅಲ್ಲಿ ಕೂಡಿಸಿದ್ದಾರೆ. ಯೋಚನೆ ಮಾಡಬೇಡಿ. ರಾಜ್ಯದ ಜನತೆ ಬಹಳ ಬುದ್ಧಿವಂತರಿದ್ದಾರೆ. ಹೀಗಾಗಿ ಅಧಿಕಾರ ಯಾರಿಗೂ ಶಾಶ್ವತವಲ್ಲ. ಜನಪರವಾಗಿ ಯೋಜಿಸಿದ ಕಾರ್ಯಕ್ರಮವನ್ನು ಹೇಳಬೇಕಾಗುತ್ತದೆ.

(ಗೊಂದಲ)

**ಉಪಸಭಾಪತಿಯವರು:-** ಎಲ್ಲರೂ ಕುಳಿತುಕೊಳ್ಳಿ. ಯತ್ನಾಳ್‌ರವರೆ ತಮ್ಮ ಮಾತನ್ನು ಮುಂದುವರೆಸಿ.

**ಶ್ರೀ ಬಸನಗೌಡ ರಾ. ಪಾಟೀಲ್ (ಯತ್ನಾಳ):-** ಮಾನ್ಯ ಸಭಾಪತಿಗಳೆ, ಯಾರೇ ಕೈಬಿಟ್ಟರು ನನ್ನ ಜಿಲ್ಲೆಯ ಜನರು ನನ್ನ ಕೈಬಿಡುವುದಿಲ್ಲ. ಇವತ್ತು ನಾನು ಯಾರ ಮುಲಾಜಿನಲ್ಲಿ ಇಲ್ಲ. ನನಗೆ ಹೈಕಮಾಂಡ್ ಎಂದರೆ ನನ್ನ ಜನ. ನನಗೆ ದೆಹಲಿಯಲ್ಲಿ ಹೈಕಮಾಂಡ್ ಇಲ್ಲ.

**ಉಪಸಭಾಪತಿಯವರು:-** ಯತ್ನಾಳ್‌ರವರೆ ದಯಮಾಡಿ ಮುಗಿಸಿ.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸನಗೌಡ ರಾ. ಪಾಟೀಲ್ (ಯತ್ನಾಳ):-** ನಾನು ಯಾರ ಮನೆ ಬಾಗಿಲನ್ನು ಬಡಿಯುವ ಅವಶ್ಯಕತೆ ಇಲ್ಲ. ಯಾರ ಮನೆ ಬಾಗಿಲನ್ನು ಬಡಿದುಕೊಂಡು ಓಡಾಡುತ್ತಿಲ್ಲ.

**ಶ್ರೀ ಬಸವರಾಜ ಎಸ್. ಹೊರಟ್ಟಿ:-** ನಿಮ್ಮ ಮನೆ ಬಾಗಿಲನ್ನು ಬಡಿದಿದ್ದಾರೆ ಅಲ್ಲವೆ?

**ಶ್ರೀ ಬಸನಗೌಡ ರಾ. ಪಾಟೀಲ್ (ಯತ್ನಾಳ):-**ಮಾನ್ಯ ಸಭಾಪತಿಗಳೆ, ನಾನು ಯಾರ ಮನೆಗೂ ಹೋಗಿ ನನ್ನನ್ನು ಪಾರ್ಟಿಯಲ್ಲಿಟ್ಟುಕೊಳ್ಳಿ, ನನಗೆ MLA seat ಗೆ ticket ಕೊಡಿ, ನನ್ನನ್ನು ಮಂತ್ರಿಯಾಗಿ ಮಾಡಿ ಎಂದು ಕೇಳುವ ಅವಶ್ಯಕತೆ ಇಲ್ಲ.

**ಉಪಸಭಾಪತಿಯವರು:-** ನೀವು ಯಾರ ಮನೆಗೂ ಹೋಗುವುದು ಬೇಡ. ಬೇಗನೆ ನಿಮ್ಮ ಮಾತನ್ನು ಮುಕ್ತಾಯಗೊಳಿಸಿ.

**ಶ್ರೀ ಬಸನಗೌಡ ರಾ. ಪಾಟೀಲ್ (ಯತ್ನಾಳ):-** ಮಾನ್ಯ ಸಭಾಪತಿಗಳೆ, ಮಾನ್ಯ ಎಂ.ಬಿ.ಪಾಟೀಲ್‌ರವರು ಜಲಸಂಪನ್ಮೂಲ ಸಚಿವರಾದ ಮೇಲೆ ಸಾಕಷ್ಟು ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ. ಹಿಂದಿನ ಸರ್ಕಾರದಲ್ಲಿ ಜಲಸಂಪನ್ಮೂಲ ಸಚಿವರಾಗಿದ್ದ ಮಾನ್ಯ ಈಶ್ವರಪ್ಪನವರು ಕೆರೆಗಳನ್ನು ತುಂಬಿಸುವಂತಹ ದೊಡ್ಡ ಯೋಜನೆಗೆ ಚಾಲನೆ ಕೊಟ್ಟಿದ್ದಾರೆ. ನಾನು ಬಿಜೆಪಿ ಸರ್ಕಾರದಿಂದ ಲೋಕಸಭೆ ಸದಸ್ಯನಾಗಿದ್ದಾಗ, ಮಾನ್ಯ ಎಂ.ಬಿ.ಪಾಟೀಲ್‌ರವರು ಬಿಜಾಪುರದಲ್ಲಿ ನೀರಿಗಾಗಿ ಹೋರಾಟವನ್ನು ಮಾಡುತ್ತಿದ್ದರು. ಆಗ ಈಶ್ವರಪ್ಪನವರ ಮೇಲೆ ಒತ್ತಡ ಹಾಕಿ ಮಾನ್ಯ ಎಂ.ಬಿ.ಪಾಟೀಲ್‌ರವರಿಗೆ ನಾನು ನೈತಿಕ ಬೆಂಬಲ ಕೊಟ್ಟಿದ್ದೆ. ಏಕೆಂದರೆ ನಮ್ಮ ಜಿಲ್ಲೆಯು ಅಭಿವೃದ್ಧಿಯಾಗಬೇಕು ಎಂದು ಬೆಂಬಲ ಕೊಟ್ಟು ಮಾನ್ಯ ಈಶ್ವರಪ್ಪನವರ ಮೇಲೆ ಒತ್ತಡ ತಂದು ಕೆರೆ ತುಂಬಿಸುವಂತಹ ಕೆಲಸವನ್ನು ತೆಗೆದುಕೊಳ್ಳಲಾಯಿತು. ಇವತ್ತು ಆ ಕೆಲಸ ತುಂಬಾ ಚೆನ್ನಾಗಿ ನಡೆಯುತ್ತಿದೆ. ಇವತ್ತು ನಮ್ಮ ಬಿಜಾಪುರದಲ್ಲಿ ಮಮದಾಪೂರ ಕೆರೆ, ಬೇಗಂ ತಲಾಬ್ ಕೆರೆ ಇನ್ನು ಅನೇಕ ಕೆರೆಗಳನ್ನು ತುಂಬಿಸಲಾಗಿದೆ. ಅದಕ್ಕಾಗಿ ಮೊನ್ನೆ ವಿಜಯಪುರ ಜಿಲ್ಲೆಯ ಜನತೆ ಅವರಿಗೆ 'ಆಧುನಿಕ ಭಗೀರಥ' ಎಂಬ ಬಿರುದನ್ನು ಕೊಟ್ಟು ಎರಡು ಲಕ್ಷ ಜನ ಸೇರಿ ಸನ್ಮಾನ ಮಾಡಲಾಯಿತು.

**ಶ್ರೀ ವಿ.ಎಸ್. ಉಗ್ರಪ್ಪ:-** ಯಾರಿಗೆ?

**ಶ್ರೀ ಬಸನಗೌಡ ರಾ. ಪಾಟೀಲ್ (ಯತ್ನಾಳ):-** ಮಾನ್ಯ ಎಂ.ಬಿ.ಪಾಟೀಲ್‌ರವರಿಗೆ. ಒಳ್ಳೆಯದನ್ನು ಹೇಳಿದರೂ ಇವರು ಸಹಿಸುವುದಿಲ್ಲ ಎಂದರೆ ಏನು ಹೇಳುವುದು ಇವರಿಗೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಸೀತಾರಾಂ ಅವರೆ, ಹೊಗಳಿದರೆ ಮುಂದುವರೆಸಿ ಎನ್ನುತ್ತೀರಿ. ಟೀಕೆ ಮಾಡಿದರೆ ಕೇಳಿಸಿಕೊಳ್ಳುವುದಿಲ್ಲ.

**ಶ್ರೀ ವಿ.ಎಸ್.ಉಗ್ರಪ್ಪ:-** ಅವರಿಗೆ ಎಂದಾಗ ಮಾನ್ಯ ಈಶ್ವರಪ್ಪನವರಿಗೋ ಅಥವಾ ಮಾನ್ಯ ಎಂ.ಬಿ.ಪಾಟೀಲ್‌ರವರಿಗೋ ಎನ್ನುವ confusion ನಮಗೆ ಆಯಿತು. ಅದಕ್ಕೆ ಇನ್ನೊಂದು ಸಾರಿ ಹೇಳಲಿ ಎಂದು ಹಾಗೆ ಹೇಳಬೇಕಾಯಿತು.

**ಶ್ರೀ ಬಸನಗೌಡ ರಾ. ಪಾಟೀಲ್ (ಯತ್ನಾಳ):-**ಮಾನ್ಯ ಸಭಾಪತಿಗಳೆ, ನಾನು ಮೊದಲು ಮಾನ್ಯ ಈಶ್ವರಪ್ಪನವರಿಗೆ ಅಭಿನಂದನೆಗಳನ್ನು ಹೇಳಿದ್ದೇನೆ.

**ಶ್ರೀ ಭಾನುಪ್ರಕಾಶ:-** ಮಾನ್ಯ ಈಶ್ವರಪ್ಪನವರು ಹಳೆಯ ಭಗೀರಥ, ಮಾನ್ಯ ಎಂ.ಬಿ.ಪಾಟೀಲ್‌ರವರು ಹೊಸ ಭಗೀರಥ. ಈಗ ಸರಿ ಆಯಿತಲ್ಲ.

**ಶ್ರೀ ಬಸನಗೌಡ ರಾ. ಪಾಟೀಲ್ (ಯತ್ನಾಳ):-** ಮಾನ್ಯ ಸಭಾಪತಿಗಳೆ, ಮಾನ್ಯ ಉಗ್ರಪ್ಪನವರು ಇಲ್ಲಿ ಕುಳಿತೇ ಇಷ್ಟು ಮಾತನಾಡುತ್ತಾರೆ. ನಾಳೆ ಇವರನ್ನು ಸಭಾಪತಿಗಳನ್ನಾಗಿ ಆಯ್ಕೆ ಮಾಡಿದರೆ ನಮ್ಮ ಗತಿ ಏನು? ಯಾರಿಗೂ ಮಾತನಾಡಲು ಬಿಡದೆ ಅವರೇ ಮಾತನಾಡುತ್ತಾ ಕುಳಿತುಬಿಡುತ್ತಾರೆ. ಸದಸ್ಯರು ನಾವು ಇಲ್ಲಿ ಗಂಟೆ ಹೊಡೆಯುತ್ತಾ ಕೂಡಬೇಕಾಗುತ್ತದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಎಲ್ಲರ ಪರವಾಗಿ ಅವರೇ ಮಾತನಾಡಿ ಬಿಡುತ್ತಾರೆ.

**ಶ್ರೀ ವಿ.ಎಸ್.ಉಗ್ರಪ್ಪ:-** ಅವರು ಜೊತೆಯಲ್ಲಿ ಇದ್ದಾರೆ ಎನ್ನುವುದು ಖಾತರಿಯಾಯಿತು.

**ಶ್ರೀ ಬಸನಗೌಡ ರಾ. ಪಾಟೀಲ್ (ಯತ್ನಾಳ):-** ನಾನು ಯಾರ ಜೊತೆಯಲ್ಲಿಯೂ ಇಲ್ಲ. ನಾನು ಸೂಕ್ತ ಕಾಲದಲ್ಲಿ ಸೂಕ್ತ ನಿರ್ಣಯವನ್ನು ತೆಗೆದುಕೊಳ್ಳುತ್ತೇನೆ. ಯಾರೇ ಆಗಲಿ ಒಳ್ಳೆಯ ಕೆಲಸವನ್ನು ಮಾಡಿದಾಗ ಅವರನ್ನು ಪಕ್ಷ, ರಾಜಕಾರಣ ಎನ್ನದೆ ಗೌರವಿಸಬೇಕು, ಆ ರೀತಿ ನಾನು ಗೌರವ ಕೊಡುತ್ತೇನೆ. ನಾನು ಮಾನ್ಯ ದೇವೇಗೌಡರ ಬಗ್ಗೆ, ಮಾನ್ಯ ಜೆ.ಎಚ್.ಪಟೇಲ್‌ರ ಬಗ್ಗೆ, ಮಾನ್ಯ ಈಶ್ವರಪ್ಪನವರ ಬಗ್ಗೆ ಒಳ್ಳೆಯದನ್ನೆ ಮಾತನಾಡಿದ್ದೇನೆ. ಮಾನ್ಯ ಎಂ.ಬಿ.ಪಾಟೀಲ್‌ರವರು ನಾಲ್ಕು ವರ್ಷದಲ್ಲಿ ನೀರಾವರಿಯಲ್ಲಿ ಕ್ರಾಂತಿ ತಂದಿದ್ದಾರೆ ಎಂದರೆ ತಪ್ಪಲ್ಲ. ಅದಕ್ಕಾಗಿ ಅವರಿಗೆ ಅಭಿನಂದನೆ ಸಲ್ಲಿಸುವುದು ನನ್ನ ಧರ್ಮ. ನಾನು ಆ ಭಾಗದವನಾಗಿ, ಎರಡು ಸಾರಿ ಲೋಕಸಭಾ ಸದಸ್ಯನಾಗಿ ಮತ್ತು ಮಾನ್ಯ ಅಟಲ್ ಬಿಹಾರಿ ವಾಜಪೇಯಿಯಂತಹ ಶ್ರೇಷ್ಠ ನಾಯಕನ ಸರ್ಕಾರದಲ್ಲಿ ಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ವಿಧಾನಸಭಾ ಸದಸ್ಯನಾಗಿ ಮತ್ತು ಮಾನ್ಯ ಈಶ್ವರಪ್ಪನವರು ನನಗೆ ಟಿಕೆಟ್ ಕೊಡದಿದ್ದಾಗ ಇಡೀ ರಾಜ್ಯದ 25 ಸ್ಥಳೀಯ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂಸ್ಥೆಗಳ ಅಭ್ಯರ್ಥಿಗಳಲ್ಲಿ ಅತಿ ಹೆಚ್ಚು ಮತಗಳನ್ನು ಪಡೆದು ಗೆದ್ದು ಬಂದಿದ್ದೇನೆ. ಇವತ್ತು ಜನರ ಪರವಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸಲು ಬಯಸುತ್ತೇನೆ. ಮಾನ್ಯ ಎಂ.ಬಿ.ಪಾಟೀಲ್‌ರವರು ತಲಕಾವೇರಿಯಲ್ಲಿ ಮತ್ತು ಕೃಷ್ಣೆಯ ಉಗಮ ಸ್ಥಾನದಲ್ಲಿ ಪರ್ಜನ್ಯ ಯಾಗವನ್ನು ಮಾಡಿದರು. ಮಾನ್ಯ ಈಶ್ವರಪ್ಪನವರು ಅದನ್ನು ಅನುಮೋದಿಸಿದರು, ಮಾನ್ಯ ಯಡಿಯೂರಪ್ಪನವರು ಅನುಮೋದಿಸಿದರು. ಆದರೂ ಏಕೆ ಗೊತ್ತಿಲ್ಲ...

**ಶ್ರೀ ಎಂ.ಬಿ.ಪಾಟೀಲ್(ಜಲಸಂಪನ್ಮೂಲ ಸಚಿವರು):–** ಮಾನ್ಯ ಸಭಾಪತಿಗಳೆ, ನಾನು ಎರಡು ಕಡೆಗಳಲ್ಲಿ ಪೂಜೆಯನ್ನು ಮಾಡಿದ್ದೇನೆ. ಪೂಜೆ ಮಾಡಿ ಪ್ರಾರ್ಥನೆ ಮಾಡಿದ್ದೇನೆ. ಆದರೆ ನಾನು ಹೋಮ–ಹವನ ಮಾಡಿಲ್ಲ. ಇದರ ಬಗ್ಗೆ ನಾನು ಈಗಾಗಲೇ ಹೇಳಿಕೆಯನ್ನು ಕೊಟ್ಟಿದ್ದೇನೆ. ಇದರಲ್ಲಿ ಏನೂ ತಪ್ಪಿಲ್ಲ. ಕೃಷ್ಣಾ ಮತ್ತು ಕಾವೇರಿ ಎರಡು ನಮ್ಮ ಜೀವನಾಡಿಗಳು, ಎರಡು ಕಣ್ಣುಗಳು ಇದ್ದ ಹಾಗೆ. ನಮ್ಮ ಪಾಲಿನ ದೇವರು, ನಮ್ಮ ಪಾಲಿನ ತಾಯಿ. ತಾಯಿಯ ಪೂಜೆ ಮಾಡುವಲ್ಲಿ ಏನು ತಪ್ಪಿಲ್ಲ. ಈ ಕೆಲಸವನ್ನು ನಾನು ಇನ್ನು ಲಕ್ಷಸಾರಿ ಮಾಡುತ್ತೇನೆ.

**ಶ್ರೀ ರುದ್ರಪ್ಪ. ಹನಮಂತ ನಿರಾಣಿ:–** ಸಂತ್ರಸ್ತರಿಗೆ ದೊಡ್ಡ ಬೆಲೆ ಕೊಟ್ಟುಬಿಡಿ ಅದೇ ಪೂಜೆಯಾಗುತ್ತದೆ.

ಉಪಸಭಾಪತಿಯವರು:– ಯತ್ನಾಳ್‌ರವರೆ ಭಾಷಣ ಮುಕ್ತಾಯ ಮಾಡಿ, ಸಮಯವಿಲ್ಲ.

**ಶ್ರೀ ಬಸನಗೌಡ ರಾ. ಪಾಟೀಲ್ (ಯತ್ನಾಳ):–** ಮಾನ್ಯ ಸಭಾಪತಿಗಳೆ, ಇದು ಬಹಳ ಗಂಭೀರವಾದಂತಹ ಸಮಸ್ಯೆ. ಇದಕ್ಕೆ ಬಹಳ ಸಮಯ ಬೇಕಾಗುತ್ತದೆ.

**ಉಪಸಭಾಪತಿಯವರು:–** ಸಮಯವಿಲ್ಲ, 6 ಗಂಟೆಗೆ ಸದನವನ್ನು ಮುಕ್ತಾಯಗೊಳಿಸಬೇಕು.

**ಶ್ರೀ ಬಸನಗೌಡ ರಾ. ಪಾಟೀಲ್ (ಯತ್ನಾಳ):–** ಮಾನ್ಯ ಸಭಾಪತಿಗಳೆ, ಈಗ ತಾವು ಸಭಾಪೀಠದಲ್ಲಿ ಕುಳಿತಿರುವುದರಿಂದ ನನಗೆ ಬಹಳ ಸಂತೋಷವಾಗಿದೆ. ಮೊದಲಿನವರು ಇದ್ದಿದ್ದರೆ ಅವರು ನನಗೆ ಕುಳಿತುಕೊಳ್ಳಿ, ಕುಳಿತುಕೊಳ್ಳಿ ಎಂದು ಹೇಳುತ್ತಿದ್ದರು. ಆದರೂ ಏಕೋ ಈ ಅಧಿವೇಶನದಲ್ಲಿ ಸ್ವಲ್ಪ ಸಮಾಧಾನದಿಂದ ಯತ್ನಾಳ್‌ರವರೆ ಮಾತನಾಡಿ ಎಂದು ಹೇಳುತ್ತಿದ್ದಾರೆ. ಇಲ್ಲದಿದ್ದರೆ ಯತ್ನಾಳ್ ಎಂದರೆ ಸಾಕು ಅವರಿಗೆ ವೀರಭದ್ರ ಬಂದುಬಿಡುತ್ತಿದ್ದ, ಯಾಕೋ ಗೊತ್ತಿಲ್ಲ. ಆದರೆ ಉಪಸಭಾಪತಿಯವರು ನನಗೆ ಯಾವಾಗಲು ಬೆಂಬಲ ಕೊಟ್ಟಿದ್ದಾರೆ. ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**ಉಪಸಭಾಪತಿಯವರು:–** ಆಯಿತು, ಈಗ ಮಾತನಾಡಿ ಮುಗಿಸಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಬೇಗ ಮುಗಿಸಿ ಎಂದು ಹೇಳಿದರೆ ಅಭಿನಂದನೆಗಳನ್ನು ಅವರು ವಾಪಸ್ ತೆಗೆದುಕೊಳ್ಳುತ್ತಾರೆ.

**ಶ್ರೀ ಬಸನಗೌಡ ರಾ. ಪಾಟೀಲ್ (ಯತ್ನಾಳ):–** ಮಾನ್ಯ ಸಭಾಪತಿಗಳೆ, ನಮ್ಮ ದೇಶ, ನಮ್ಮ ಸಂಸ್ಕೃತಿ, ಯಜ್ಞ–ಯಾಗ, ಪೂಜೆ–ಪುನಸ್ಕಾರ ಇವುಗಳನ್ನು ದೇವರನ್ನು ನಂಬದವರು ನಿಸರ್ಗ ಎಂದು ಕರೆಯುತ್ತಾರೆ. ನಾವು ದೇವರನ್ನು ನಂಬುತ್ತೇವೆ. ದೇವರನ್ನು ನಂಬುವವರು.. ನಾನು ಆಸ್ತಿಕ, ಉಗ್ರಪ್ಪ ನಾಸ್ತಿಕ. ಅವರು ನಿಸರ್ಗ ಎನ್ನುತ್ತಾರೆ. ನಮ್ಮ ಹಿರಿಯರು ನದಿಗಳು, ಮರಗಳು, ಗಾಳಿ, ಬೆಳಕು, ಸೂರ್ಯ ಇವೆಲ್ಲವುಗಳನ್ನು ಪೂಜೆಮಾಡಿಕೊಂಡು ಬರುವುದು ನಮ್ಮ ಸಂಸ್ಕೃತಿ ಎಂದು ಹೇಳಿದ್ದಾರೆ. ಆ ಸಂಸ್ಕೃತಿಯ ಹೆಸರನ್ನು ಹೇಳಿಕೊಂಡು ಬಂದವರು ಯಾರು ಎಂದರೆ, ನಮ್ಮ ಮಾನ್ಯ ಈಶ್ವರಪ್ಪನವರ ಹಾಗೂ ನನ್ನ ಹಿಂದಿನ ಪಕ್ಷದವರು ಆಗಿರುವ ವಿಧಾನಸಭೆಯ ವಿರೋಧ ಪಕ್ಷದ ನಾಯಕರು ಅದನ್ನು ವಿರೋಧ ಮಾಡುತ್ತಾರೆ. ಇದು ಎಂತಹ ದುರಂತವಿರಬಹುದು.

(...ಮುಂದು)

(598) YL(KS)SP / 07.06.2017 / 5.30

**(ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಬಸನಗೌಡ ಆರ್ ಪಾಟೀಲ್ (ಯತ್ನಾಳ್)(ಮುಂದು):–** ಹಿಂದೂ ಧರ್ಮವನ್ನು ರಕ್ಷಣೆ ಮಾಡುತ್ತೇವೆ. ಹಿಂದೂ ಸಂಸ್ಕೃತಿಯನ್ನು ದೇಶದಲ್ಲಿ ತರುತ್ತೇವೆಂದು ಹೇಳುವ ರಾಜಕೀಯ ಪಕ್ಷದ ಅಥವಾ ವಿರೋಧ ಪಕ್ಷದ ನಾಯಕರು ಪರ್ಜನ್ಯ ಹೋಮವನ್ನು ತಕ್ಷಣ ನಿಲ್ಲಿಸಬೇಕೆಂದು ಕೇಳುತ್ತಾರೆ. ದೇವರನ್ನು ನಂಬುವುದಿಲ್ಲವೆಂದಾದರೆ, ಬಿಜೆಪಿ ಪಕ್ಷದಲ್ಲಿರಬಾರದು. ಇದು ನನ್ನ ವಾದ. ಆಯೋಧ್ಯದಲ್ಲಿ ರಾಮಮಂದಿರವನ್ನು ಕಟ್ಟುತ್ತೇವೆಂದು ಹೇಳುತ್ತಾರೆ. ಆದರೆ, ಇಲ್ಲಿ ಬಂದು ಪರ್ಜನ್ಯ ಹೋಮ ಮಾಡುವುದು ಬೇಡವೆಂದು ಹೇಳುತ್ತೀರಿ.

**(ಗೊಂದಲ)**

**ಉಪ ಸಭಾಪತಿಯವರು:–** ಯತ್ನಾಳ್‌ರವರೆ, ಆ ವಿಚಾರ ಬೇಡ. ವಿಷಯಕ್ಕೆ ಬನ್ನಿ.

**ಶ್ರೀ ಬಸನಗೌಡ ಆರ್ ಪಾಟೀಲ್ (ಯತ್ನಾಳ್):–** ಮಾನ್ಯ ಸಭಾಪತಿಯವರೆ ಅದೇ ವಿಷಯವೇ ಇದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

ತಕ್ಷಣ 2 ತಿಂಗಳಲ್ಲಿ ಕೆರೆಯ ನೀರು ತುಂಬಬೇಕೆಂದು ಇವತ್ತು ಮಾನ್ಯ ಎಂ.ಬಿ.ಪಾಟೀಲ್‌ರವರ ಮೇಲೆ ಹರಿಹಾಯ್ದರು. 2 ತಿಂಗಳಲ್ಲಿ ನೀರು ತುಂಬಬೇಕೆಂದರೆ, ಜಾದೂಗೀದೂ ಏನಾದರೂ ಈ ದೇಶದಲ್ಲಿ ಮಾಡುವುದಕ್ಕಾಗುತ್ತದೆಯೇ? ಈಶ್ವರಪ್ಪನವರು ಏನೋ ಮನಸ್ಸು ಮಾಡಿ, ಗೋವಾದ ಸಮೀಪ ಇರುವ ಕಳಸಾ ಬಂಡೂರಿ ಮಹದಾಯಿ ಹತ್ತಿರ ಹೋದರು. ಏನೋ ಈಶ್ವರಪ್ಪನವರು ನನ್ನ ಹಾಗೆಯೇ ಹ್ಲೂಣಮಾತ ರಾಜಕಾರಣಿ ಎಂದರೆ ಅಡ್ಡಿ ಇಲ್ಲ. ನಮ್ಮ ಭಾಷೆಯಲ್ಲಿ ಹ್ಲೂಣಮಾತ ಎಂದರೆ ನುಗ್ಗಿ ಬಿಡುವುದು. ಇವತ್ತಿನವರೆಗೂ ಮಹದಾಯಿ ಬಗ್ಗೆ ಮಾತನಾಡದೇ ಇರುವವರು, ಇವತ್ತು ತಲಕಾವೇರಿಯಲ್ಲಿ ಪೂಜೆ ಮಾಡಿದ ಮೇಲೆ ದೊಡ್ಡದಾದ ಮಳೆಯಾಗಿತ್ತು. ಕೃಷ್ಣೆಗೆ ಪೂಜೆ ಮಾಡಿದ ಬಳಿಕ ಇವತ್ತು ಬಿಜಾಪುರ ಜಿಲ್ಲೆಯಲ್ಲಿ ಮಳೆಯಾಗುತ್ತಿದೆ. ಹಾಗಾದರೆ, ಹೋಮ, ಹವನ, ಪೂಜೆಗಳು ಎಂದರೆ ಈ ದೇಶದಲ್ಲಿ ಸುಳ್ಳೇ? ನಾವು ನಿಸರ್ಗವನ್ನು ಪೂಜಿಸಬೇಕು. ನಿಸರ್ಗವನ್ನು ಪ್ರೀತಿಸಬೇಕು. ಆದರೆ, ಇವತ್ತು ಎಲ್ಲವನ್ನು ಕಳೆದುಕೊಳ್ಳುತ್ತಿದ್ದೇವೆ. ನದಿಯ ನೀರು ಇವತ್ತು ಕೆಳಮಟ್ಟಕ್ಕೆ ಹೋಗಿದೆ. ಯಾವ ಮಟ್ಟದಲ್ಲಿಯೆಂದರೆ ಪಾತಾಳ ಗಂಗೆಯಿಂದ ನೀರು ತರುತ್ತೇವೆಂದು ಹೇಳುತ್ತಿದ್ದಾರೆ. ಇದನ್ನು ಇವತ್ತು ನಾವು ಹೊಸದಾಗಿ ಕೇಳುತ್ತಿದ್ದೇವೆ. ಈ ದೇಶದಲ್ಲಿ ಏನೇನು ನಡೆಯುತ್ತಿದೆಯೋ, ನಿಸರ್ಗದ ಪೂಜೆಯನ್ನು ಮಾಡುವುದರ ಮೂಲಕ ಇವತ್ತು ಏನು ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾರೆ. ಟೀಕೆ ಮಾಡುವ ವಿಷಯ ಇದ್ದರೆ ಟೀಕೆ ಮಾಡೋಣ. ಹಿಂದೆ ಯುಪಿಎ ಸರ್ಕಾರದ ಭೂಸ್ವಾಧೀನದ ಬಗ್ಗೆ ನಾನು ಕಟ್ಟುವಾಗಿ ಟೀಕೆ ಮಾಡಿದೆ. ಆದರೆ, ಇವತ್ತು ಶ್ರೀ ಎಂ.ಬಿ.ಪಾಟೀಲ್‌ರವರು ಎರಡೂ ಜಿಲ್ಲೆಯ ಕೆರೆಗೆ ನೀರು ತುಂಬುವಂತಹ ಕೆಲಸವನ್ನು ಮಾನ್ಯ ಕೆ.ಎಸ್.ಈಶ್ವರಪ್ಪನವರ ಉತ್ತರಾಧಿಕಾರಿಯಾಗಿ ಏನು ಮಾಡುತ್ತಿದ್ದಾರೆ ಅವರಿಗೆ ತುಂಬು ಹೃದಯದಿಂದ ನಾನು ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ನಿನ್ನೆಯ ದಿವಸ ಶೂನ್ಯ ವೇಳೆಯಲ್ಲಿ ಕೃಷ್ಣೆಗೆ ಕೂಡ ಕುಂಭೋತ್ಸವ ಮಾಡಬೇಕೆಂದು ಪ್ರಸ್ತಾಪವನ್ನು ಮಾಡಿದ್ದೇನೆ. ನಮ್ಮ ಗಂಗೆಗೆ ಕುಂಭ ಮೇಳ ಮಾಡುವ ರೀತಿಯಲ್ಲಿಯೇ, ನಾಸಿಕನಲ್ಲಿ ಗೋದಾವರಿ ನದಿಗೆ ಕುಂಭೋತ್ಸವ ಮಾಡುವ ರೀತಿ, ದೇಶದಲ್ಲಿ ಮಹಾ ಪವಿತ್ರ ನದಿಗಳಿಗೆ ಕುಂಭೋತ್ಸವ ಮಾಡುವ ರೀತಿ ಕೃಷ್ಣಾ ನದಿಯನ್ನು ಪೂಜೆ ಮಾಡುವುದರ ಮೂಲಕ ತಾಯಿಯ ಆಶೀರ್ವಾದ ನಮ್ಮ ಮೇಲೆ ಸದಾ ಇರಬೇಕು, ಕೃಷ್ಣಾ ನದಿ ಎಂದೂ ಬತ್ತಿ ಹೋಗಬಾರದೆಂಬ ಉದ್ದೇಶದಿಂದ ಆ ರೀತಿಯ ಕಾರ್ಯಕ್ರಮವನ್ನೂ ಸಹ ಸರ್ಕಾರ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಎಂ.ಬಿ.ಪಾಟೀಲ್ (ಜಲಸಂಪನ್ಮೂಲ ಸಚಿವರು):-** ಮಾನ್ಯ ಸಭಾಪತಿಯವರೆ, ಒಂದು ಮುಖ್ಯವಾದ ವಿಚಾರವನ್ನು ಮಾನ್ಯ ಯತ್ನಾಳ್‌ರವರು ಪ್ರಸ್ತಾಪ ಮಾಡಿದ್ದಾರೆ. ವಿಧಾನ ಸಭೆಯ ವಿರೋಧ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪಕ್ಷದ ನಾಯಕರು ಟೀಕೆ ಮಾಡಿದ ಮೇಲೆ ನಾನು ಕೆಳಮನೆಯಲ್ಲಿ ಒಂದು statement ಮಾಡಿದ್ದೇನೆ. ಆದರೆ, ನಾನು ವಿವಾದವಾದ ನಂತರ ಸರ್ಕಾರದ ಹಣ ಖರ್ಜಾಗುವುದು ಬೇಡವೆಂದು, ಸ್ವಂತ ಹಣವನ್ನು ಖರ್ಚು ಮಾಡಿ ಪೂಜೆ ಮತ್ತು ಪ್ರಾರ್ಥನೆಯನ್ನು ಮಾಡಿದ್ದೇನೆ. ಹೋಮ, ಜಪ ಮಾತ್ರ ನಾನು ಮಾಡಿಲ್ಲ.

**(ಗೊಂದಲ)**

ಹೋಮ ಮಾತ್ರ ನಾನು ಮಾಡಿಲ್ಲ. ಹೋಮ ಮಾಡಿದರೆ ತಪ್ಪೇನಿದೆ ಎಂಬುದು ನನಗೆ ಸಂಬಂಧಿಸಿದ್ದು. ನಾನು ಮಳೆ ಬರಬೇಕೆಂದು ಪೂಜೆ ಮತ್ತು ಪ್ರಾರ್ಥನೆಯನ್ನು ಹಾಗೂ ಪರ್ಜನ್ಯ ಜಪ ಮಾಡಿದ್ದೇನೆ. ನಾನು ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಇವರು ಎಲ್ಲರೂ ನನ್ನನ್ನು ಅಟ್ಯಾಕ್ ಮಾಡಿದರು ಮಾನ್ಯ ಎಂ.ಬಿ.ಪಾಟೀಲ್ ಹೀಗೆಲ್ಲಾ ಮಾಡುತ್ತಿದ್ದಾರೆ. ಅವರು ರಾಜೀನಾಮೆ ಕೊಡಬೇಕು. ಇದನ್ನು ನಿಲ್ಲಿಸಬೇಕೆಂದು ವಿರೋಧ ಪಕ್ಷದ ಸದಸ್ಯರೆಲ್ಲರೂ ನನ್ನ ಮೇಲೆ ಬಿದ್ದುಬಿಟ್ಟರು. ಮಾನ್ಯ ಬಸನಗೌಡ ಆರ್ ಪಾಟೀಲ್ (ಯತ್ನಾಳ್) ರವರೆ, ನಾನು ನಿಮ್ಮ ಸಲುವಾಗಿ ಒಂದು ಹೇಳಿಕೆಯನ್ನು ಮಾಡಿದ್ದೇನೆ. ಅದನ್ನು ಓದುತ್ತೇನೆ;

19/07/2012 ರಲ್ಲಿ ಮಾನ್ಯ ಜಗದೀಶ್ ಶೆಟ್ಟರ್‌ರವರು ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾಗಿದ್ದಾಗ ಒಂದು ಸುತ್ತೋಲೆ (ಸಂಖ್ಯೆ: ಕಂಇ 93 ಮುಇವಿ 2012) ಯನ್ನು ಹೊರಡಿಸಿದ್ದು, ಅದು ಈ ಕೆಳಕಂಡಂತಿದೆ:

"**ವಿಷಯ:–** ರಾಜ್ಯದಲ್ಲಿ ಬರಗಾಲದ ಪ್ರಯುಕ್ತ ಧಾರ್ಮಿಕ ಮತ್ತು ದತ್ತಿ ಇಲಾಖೆಯ ವ್ಯಾಪ್ತಿಗೆ ಬರುವ ಅಧಿಸೂಚಿತ ದೇವಾಲಯಗಳಲ್ಲಿ ಮಳೆಗಾಗಿ ಪ್ರಾರ್ಥಿಸಿ ವಿಶೇಷ ಪೂಜೆ ನಡೆಸುವ ಬಗ್ಗೆ.

****

*ಕರ್ನಾಟಕ ರಾಜ್ಯದಲ್ಲಿ ಸಕಾಲದಲ್ಲಿ ಮಳೆ–ಬೆಳೆ ಆಗದೇ ರಾಜ್ಯದ ಜನತೆ, ಜಾನುವಾರುಗಳು ಕಂಗಾಲಾಗಿ ರಾಜ್ಯವು ತೀವ್ರ ಬರಗಾಲ ಪರಿಸ್ಥಿತಿಯನ್ನು ಎದುರಿಸಿರುವ ಸಂದರ್ಭಗಳಲ್ಲಿ ರಾಜ್ಯದ ಜನತೆ ಹಾಗೂ ಜಾನುವಾರುಗಳ ಕ್ಷೇಮದ ಸಲುವಾಗಿ ರಾಜ್ಯದಲ್ಲಿ ಸುವೃಷ್ಟಿವುಂಟಾಗಿ ಬೆಳೆಗಳು ಸಮೃದ್ಧಿಯಾಗಿ ರಾಜ್ಯವು ಸುಭಿಕ್ಷವಾಗಲು ರಾಜ್ಯದ ಮುಜರಾಯಿ ದೇವಾಲಯಗಳಲ್ಲಿ ಪ್ರಾರ್ಥನೆ ಹಾಗೂ ವಿಶೇಷ ಪೂಜೆಗಳನ್ನು ನಡೆಸಿಕೊಂಡು ಬರಲಾಗುತ್ತಿದೆ. ಅದರಂತೆ, ಪ್ರಸಕ್ತ ಸಾಲಿನಲ್ಲಿ ರಾಜ್ಯವು ಎದುರಿಸುತ್ತಿರುವ ಬರಗಾಲದ ಸಂಕಷ್ಟದಿಂದ ಪಾರಾಗಲು ರಾಜ್ಯದ ಎಲ್ಲಾ ಮುಜರಾಯಿ ದೇವಾಲಯಗಳಲ್ಲಿ "ವರುಣಮಂತ್ರ ಪೂರ್ವಕವಾಗಿ ಜಲಾಭಿಷೇಕ ಪೂಜೆ" ಯನ್ನು ನಡೆಸಲು ಅತ್ಯವಶ್ಯಕವೆಂದು ಸರ್ಕಾರವು*

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

*ಮನಗಂಡಿರುತ್ತದೆ. ಆದುದರಿಂದ, ರಾಜ್ಯದ ಪ್ರಮುಖ ದೇವಾಲಯಗಳಲ್ಲಿ ಪರ್ಜನ್ಯ ಜಪ, ಹೋಮ ಹಾಗೂ ವಿಶೇಷ ಪೂಜೆಗಳನ್ನು ನಡೆಸುವುದು ಅತ್ಯವಶ್ಯಕವಾಗಿರುತ್ತದೆ.*

*ಈ ಹಿನ್ನೆಲೆಯಲ್ಲಿ ಈ ವಿಶೇಷ ಪೂಜೆಗೆ ತಗಲುವ ವೆಚ್ಚವನ್ನು ಗರಿಷ್ಠ ರೂ.5,000/- ಗಳು ಮೀರದಂತೆ ಆಯಾಯ ದೇವಾಲಯಗಳ ನಿಧಿಯಿಂದ ಭರಿಸಲು ಅನುಮತಿಯನ್ನು ನೀಡಲಾಗಿದೆ. ಆದರೆ, 17.00 ಕೋಟಿ ರೂಪಾಯಿಗಳು ಆಗುತ್ತದೆಂದು ನನ್ನ ಅಂದಾಜು ಆಗಿದೆ."*

**(ಗೊಂದಲ)**

ಒಂದು ನಿಮಿಷ ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೆ, ಇನ್ನೊಂದು ಕುತೂಹಲಕಾರಿ ವಿಷಯವಿದೆ. ಇದನ್ನು ಮಾನ್ಯ ಬಸನಗೌಡ ಆರ್ ಪಾಟೀಲ್ (ಯತ್ನಾಳ್) ರವರೆ ನಿಮಗೆ ಸಹಾಯ ಮಾಡುವುದಕ್ಕಾಗಿ ಈ ವಿಷಯವನ್ನು ಹೇಳುತ್ತಿದ್ದೇನೆ. ಕಾವೇರಿ ತಾಯಿ, ಕೃಷ್ಣೆ ತಾಯಿ ಇವತ್ತಿಗೂ ಸಹ ಹರಿಯುವ ಚಲನವಲನ ಹೊಂದಿದ್ದಂತಹ ಜೀವ ನದಿಗಳು. ನಮ್ಮೆಲ್ಲರಿಗೂ ಉಪಕಾರವನ್ನು ಮಾಡಿರುವಂತಹ ನದಿಗಳು. ಮುಂದೆಯೂ ಕೂಡಾ ಈ ನದಿಗಳ ಉಪಕಾರವನ್ನು ಬಯಸಿದ್ದೇವೆ. ಶ್ರೀ ಎಂ.ಆರ್.ಸೀತಾರಾಂರವರೆ, ಇನ್ನೊಂದು ಬಹಳ ರೋಚಕವಾಗಿರುವಂತಹ ವಿಷಯ.

ಸುತ್ತೋಲೆ ಸಂಖ್ಯೆ: ಎಡಿಎಂ 11/ಇತರೆ/ಸಿಆರ್ 340/08-09, ದಿನಾಂಕ:20.01.2009 ರಲ್ಲಿ ಈ ರೀತಿ ತಿಳಿಸಲಾಗಿದೆ. ಆಗ ಯಾರು ರಾಜ್ಯದ ಮುಖ್ಯಮಂತ್ರಿಗಳಾಗಿದ್ದರೆಂಬುದು ನನಗೆ ಗೊತ್ತಿಲ್ಲ.

> *"ದಿನಾಂಕ:26.01.2009 ರ ಸೋಮವಾರದಂದು ಮಧ್ಯಾಹ್ನ ಸೂರ್ಯ ಗ್ರಹಣ ಪ್ರಾಪ್ತವಾಗುವ ಕಾರಣ ಈ ಗ್ರಹಣವು ರಾಜ್ಯಕ್ಕೆ ಅತಿ ಅನಿಷ್ಟವಾಗಿರುವುದರಿಂದ ರಾಜ್ಯದ ಪ್ರಜೆಗಳ ಕ್ಷೇಮಕ್ಕಾಗಿ ಹಾಗೂ ರಾಜ್ಯದ ಹಿತಕ್ಕಾಗಿ ರಾಜ್ಯದ ಮುಜರಾಯಿ ಇಲಾಖಾ ವ್ಯಾಪ್ತಿಗೆ ಒಳಪಡುವ ಶೈವ ದೇವಾಲಯಗಳಲ್ಲಿ ಗ್ರಹಣ ಶಾಂತಿಯೊಂದಿಗೆ ಮಹಾ ಮೃತ್ಯುಂಜಯ ಜಪ, ಮೃತ್ಯುಂಜಯ ಹವನ ಹಾಗೂ ವೈಷ್ಣವ ದೇವಾಲಯಗಳಲ್ಲಿ ಗ್ರಹಣ ಶಾಂತಿಯೊಂದಿಗೆ ಉದಕ ಶಾಂತಿ ಪಠನ ಪೂರ್ವಕ ನಕ್ಷತ್ರ ಹವನವನ್ನು ನಡೆಸಲು ರಾಜ್ಯದ ಜನರ ಸಂಸ್ಥೆಯ ನಿಧಿಯಿಂದ ರೂ.8,000/- ಗಳ ವೆಚ್ಚವನ್ನು ಭರಿಸಲಾಗಿದೆ."*

ಇದು ಮೂಡನಂಬಿಕೆ. ರೂ.8000/- ಗಳೆಂದರೆ ಕೋಟ್ಯಂತರ ರೂಪಾಯಿ ವೆಚ್ಚವಾಗುತ್ತದೆ. ಹಿಂದೆಯೇ ನಾನು ಹೇಳಿದ ಹಾಗೆ ಮುಖ್ಯಮಂತ್ರಿಗಳಾದ ಮಾನ್ಯ ಜಗದೀಶ್ ಶೆಟ್ಟರ್‌ರವರು ಹೊರಡಿಸಿದ್ದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸುತ್ತೋಲೆಯ ಪ್ರಕಾರ ಹಿಂದೂ ಪತ್ರಿಕೆಯಲ್ಲಿ ಒಂದು ವರದಿ ಇದೆ. ಆ ವರದಿಯಲ್ಲಿ ರೂಪಾಯಿ 17.00 ಕೋಟಿ ಖರ್ಚಾಗುತ್ತದೆಂದು...

**(ಗೊಂದಲ)**

ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೆ, ಒಂದು ಸ್ವಲ್ಪ ನಾನು ಹೇಳುವುದನ್ನು ಕೇಳಿ. ಏಕಪ್ಪಾ...

**(ಗೊಂದಲ)**

**ಉಪ ಸಭಾಪತಿಯವರು:–** ಕೋಟ ಶ್ರೀನಿವಾಸ ಪೂಜಾರಿಯವರೆ,

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಆಯ್ತು, ಸಚಿವರೆ ಹೇಳಿ. ನೀವು ಹೇಳುತ್ತಿರುವುದನ್ನೇ ನಾವು ಕೇಳುತ್ತಿರಬೇಕು.

**(ಗೊಂದಲ)**

**ಉಪ ಸಭಾಪತಿಯವರು:–** ಸದಸ್ಯರೆ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಒಂದು ನಿಮಿಷ ಮಾನ್ಯ ಎಂ.ಬಿ.ಪಾಟೀಲ್‌ರವರು ಮಾತನಾಡಿದ್ದಾಗಿದೆ. ಒಂದು ನಿಮಿಷ ಕೋಟ ಶ್ರೀನಿವಾಸ ಪೂಜಾರಿಯವರು ಹೇಳುವುದನ್ನು ಸ್ವಲ್ಪ ಕೇಳಿ. ಅವರಿಗೂ ಮಾತನಾಡುವುದಕ್ಕೆ ಅವಕಾಶ ಕೊಡಿ.

**ಉಪ ಸಭಾಪತಿಯವರು:–** ಮಾನ್ಯ ಕೆ.ಎಸ್.ಈಶ್ವರಪ್ಪನವರೆ, ಮಾನ್ಯ ಸಚಿವರು ಮಾತನ್ನು ಮುಗಿಸಿದ ಮೇಲೆ ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರಿಗೆ ಮಾತನಾಡಲು ಅವಕಾಶ ಕೊಡುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಉಪ ಸಭಾಪತಿಯವರೆ, ಆಗಲಿ. ಸಚಿವರೇ ಹೇಳಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಉಪ ಸಭಾಪತಿಯವರು:–** ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಸಚಿವರೇ ನಿಮ್ಮ ಮಾತು ಮುಗಿಯಿತ್ತೇ?

**ಶ್ರೀ ಎಂ.ಬಿ.ಪಾಟೀಲ್:–** ಮಾನ್ಯ ಸಭಾಪತಿಯವರೆ, ನಾನು ಇನ್ನೂ ಮಾತನ್ನು ಮುಗಿಸಿಲ್ಲ. ವಿರೋಧ ಪಕ್ಷದ ಸದಸ್ಯರು ಮಾತನಾಡಲು ಬಿಡುತ್ತಿಲ್ಲ. ಮಾನ್ಯ ಉಪ ಸಭಾಪತಿಯವರೆ, ನಾನು ಕೆಳಮನೆಯಲ್ಲಿ ಒಂದು statement ಮಾಡಿದ್ದೇನೆ. ಏಕೆಂದರೆ, ಜಗದೀಶ್ ಶೆಟ್ಟರವರು ಇದರ ಮೇಲೆ ಹೇಳಿದ ಮೇಲೆ ನಾನು statement ಮಾಡಬೇಕಾಗಿತ್ತು. ಹಾಗಾಗಿ ಹೇಳಿಕೆಯನ್ನು ತಯಾರಿಸಿದ್ದೇನೆ. ಆದರೆ, ಮೇಲ್ಮನೆಯಲ್ಲಿ ಅಂತಹ ಯಾವುದೇ ಪರಿಸ್ಥಿತಿ ಬಂದಿರುವುದಿಲ್ಲ. ಎಲ್ಲರೂ ಸ್ವಾಗತಿಸಿದ್ದಾರೆ. ಆದರೆ, ನಾನು ಮಾತ್ರ ಪೂಜೆ ಮಾಡಿದ್ದೇನೆ. ಮಳೆಗಾಗಿ ಪರ್ಜನ್ಯ ಪ್ರಾರ್ಥನೆಯನ್ನು ಮಾಡಿದ್ದೇನೆ. ನನ್ನ ತಾಯಿಯ ಪೂಜೆ ಮಾಡುವುದಕ್ಕೆ ಯಾವುದೇ ಸಂಕೋಚ ನನಗಿಲ್ಲ. ಯಾವ ರೀತಿ ಪ್ರಶ್ನೆಯನ್ನು ಹಾಕಬೇಕೆಂದು ನನಗೆ ಗೊತ್ತಾಗಿದೆ. ರಾಜ್ಯದಲ್ಲಿ 34 ಸಾವಿರ ದೇವಾಲಯಗಳಿವೆ. ಪ್ರತಿ ದೇವಾಲಯಕ್ಕೆ ರೂಪಾಯಿ ಐದು ಸಾವಿರದಂತೆ ಒಟ್ಟು ರೂ.17.00 ಕೋಟಿ ರೂಪಾಯಿಗಳಾಗುತ್ತದೆ. ನಾನು ಇದರ ಬಗ್ಗೆ ಮಾತ್ರ ಹೇಳುತ್ತಿಲ್ಲ. "The Hindu" newspaper ನಲ್ಲಿ ಇದರ ಬಗ್ಗೆ ವರದಿಯಾಗಿ controversy ಅಗಿತ್ತು. Controversy ಆದ ಮೇಲೆ ಅದನ್ನು ಬಿಡಬೇಕಾಯಿತು. ರೂಪಾಯಿ ಹತ್ತು ಲಕ್ಷದ ಸಲುವಾಗಿ ದೊಡ್ಡ ರಾದ್ಧಾಂತ ಮಾಡಿದ ಮೇಲೆ ಸರ್ಕಾರದ ಬೊಕ್ಕಸ ಹೇಗೆ ಖಾಲಿಯಾಗುತ್ತದೆ? ಕೃಷ್ಣೆ ಮತ್ತು ಕಾವೇರಿ ನದಿಗಳಿಗೆ ಹತ್ತು, ಹತ್ತು ಲಕ್ಷಗಳನ್ನು ಖರ್ಚು ಮಾಡಬೇಕೆಂದು ಏನು ನಿರ್ಣಯ ಮಾಡಿದ್ದೇವೆ. ಅದಕ್ಕೆ controversy ಆದ ಮೇಲೆ, ವಿವಾದ ಮಾಡಿದ ಮೇಲೆ ನನ್ನ ಸ್ವಂತ ಖರ್ಚಿನಿಂದ ಪೂಜೆಯನ್ನು ಮಾಡಿಸುತ್ತೇನೆಂದು ಹೇಳಿದ್ದೇನೆ. ಆದರೆ, ವಿವಾದವಾದ ಮೇಲೆಯೂ ಕೂಡ ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. "The Hindu" newspaper ನಲ್ಲಿ ರೂಪಾಯಿ 17.00 ಕೋಟಿ ಖರ್ಚಾಗುತ್ತದೆಂದು...

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಮಾನ್ಯ ಜಗದೀಶ್ ಶೆಟ್ಟರ್‌ರವರು ಶೆಟ್ಟರು. ನೀವು (ಎಂ.ಬಿ.ಪಾಟೀಲ್) ಗೌಡರು ಅಷ್ಟೇ ವ್ಯತ್ಯಾಸ.

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೆ, ನಾವು ಭರಿಸಿರತಕ್ಕಂಥದ್ದು ಹತ್ತು ಲಕ್ಷ. ಆದರೆ, ಮಾನ್ಯ ಜಗದೀಶ್ ಶೆಟ್ಟರ್‌ರವರು ಭರಿಸಿರತಕ್ಕಂಥದ್ದು ಎಷ್ಟು ಕೋಟಿ? ರೂಪಾಯಿ 17.00 ಕೋಟಿ.

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಕೋಟ ಶ್ರೀನಿವಾಸ ಪೂಜಾರಿ,

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೆ, ಒಂದು ನಿಮಿಷ ನಾನು ಇನ್ನೂ ನನ್ನ ಮಾತನ್ನು ಮುಗಿಸಿಲ್ಲ. ಮಾನ್ಯ ಜಗದೀಶ್ ಶೆಟ್ಟರ್‌ರವರು ಮಳೆಗಾಗಿ ಪರ್ಜನ್ಯ ಜಪ, ಹೋಮ ಮಾಡಿದ್ದಾರೆ. ಅದು ಬಿಡಿ. ಇನ್ನೊಂದು ವಿಷಯವೇನೆಂದರೆ, ದಿನಾಂಕ:20.01.2009 ರ ಸುತ್ತೋಲೆಯಲ್ಲಿ ಗ್ರಹಣ ಶಾಂತಿಯ ಬಗ್ಗೆ ಹೇಳಲಾಗಿದೆ.

"ಸೂರ್ಯ ಗ್ರಹಣ ಪ್ರಾಪ್ತವಾಗುವ ಕಾರಣ, ಈ ಗ್ರಹಣವು ರಾಜ್ಯಕ್ಕೆ ಅತಿ ಅನಿಷ್ಠವಾಗಿರುವುದರಿಂದ" ಅದಕ್ಕೆ ಪೂಜೆಯಂತೆ....

**ಉಪ ಸಭಾಪತಿಯವರು:-** ಮಾನ್ಯ ಸಚಿವರೆ, ಆಯ್ತು ಬಿಡಿ.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೆ, ಗ್ರಹಣಕ್ಕೆ ಕೊಟ್ಯಾಂತರ ರೂಪಾಯಿ ಭರಿಸಿದ್ದಾರೆ. ನಾನು ಹೊರಡಿಸಿದ ಸುತ್ತೋಲೆಯಲ್ಲಿ ಕಾವೇರಿ, ಕೃಷ್ಣೆ ತಾಯಿಗೆ ಪೂಜೆ ಮಾಡುವಂತಹ ಕೆಲಸಕ್ಕೆ ಹತ್ತು ಲಕ್ಷ ರೂಪಾಯಿ ಖರ್ಚಾಗುತ್ತದೆಂದು ಹೇಳಿದರೆ ಬೆಂಕಿ ಹಾಕುವ ಹಾಗೆ ಮಾಡಿದರು. ಆದರೆ, ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ಸೂರ್ಯ ಗ್ರಹಣ ಮಾಡಬೇಕಂತೆ,... ಇದಕ್ಕೆ ಸದಸ್ಯರು ಉತ್ತರ ಕೊಡುವುದಕ್ಕಾಗುತ್ತದೆಯೇ?

**ಉಪ ಸಭಾಪತಿಯವರು:-** ಮಾನ್ಯ ಸಚಿವರೆ, ಆಯ್ತು ಬಿಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಚಿವರೆ ಸರಿ ಬಿಡಿ, ನೀವು ಮಾತನಾಡಿದ್ದು ಆಗಿದೆಯೇ?

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಉಪ ಸಭಾಪತಿಯವರು:–** ಮಾನ್ಯ ಸಚಿವರೆ, ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೆ, ಮಾನ್ಯ ಬಸನಗೌಡ ಆರ್ ಪಾಟೀಲ್ (ಯತ್ನಾಳ್) ರವರೆ, ಒಂದು ನಿಮಿಷ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೆ, ಒಂದು ನಿಮಿಷ ನಾನು ಹೇಳುವುದನ್ನು ಕೇಳಿ. ಮಾನ್ಯ ಸಚಿವರ ಬಗ್ಗೆ ನಾವ್ಯಾರು ವ್ಯಕ್ತಿಗತವಾಗಿ ಏನೂ ಹೇಳಿಲ್ಲ. ಬಹುಶ: ಸಚಿವರು ಅಷ್ಟು ದೊಡ್ಡದಾಗಿ ಪ್ರತಿಷ್ಠೆಯಾಗಿ ಇದನ್ನು ಏಕೆ ತೆಗೆದುಕೊಂಡಿದ್ದಾರೆಂಬುದು ಗೊತ್ತಿಲ್ಲ.

**(ಗೊಂದಲ)**

**ಉಪ ಸಭಾಪತಿಯವರು:–** ಮಾನ್ಯ ಸಚಿವರೆ, ದಯವಿಟ್ಟು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೆ, ನಾವು ಮಾತನಾಡುವುದನ್ನು ಮಾನ್ಯ ಸಚಿವರು ಕೇಳಬೇಕಲ್ಲವೇ?

(ಮುಂದು) . . .

(599) 07-06-2017 (05-40) ಜಿಆ-ಏಖ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ :–** ಅವರು ಇಷ್ಟು ಸಮಯ ಮಾತನಾಡಿರುವುದನ್ನು ನಾವು ಕೇಳಿದ್ದೇವೆ. ಅವರು ಒಂದು ನಿಮಿಷ ಕೇಳಲಿ. ಇದನ್ನು ಅವರು ಏಕೆ ಪ್ರತಿಷ್ಠೆಯಾಗಿ ತೆಗೆದುಕೊಂಡರೋ ಗೊತ್ತಿಲ್ಲ!. ಅವರು ಹೇಳಿದ ಮಾತಿಗೆ ನಾನು ಉತ್ತರ ಕೊಡಬೇಕು. ನಮ್ಮ ಸರ್ಕಾರ ಇದ್ದ ಸಂದರ್ಭದಲ್ಲಿ ಭೀಕರ ಬರಗಾಲದಲ್ಲಿ ಒಂದು ರೂಪಾಯಿಯನ್ನು ಸರ್ಕಾರಿ ಖಜಾನೆಯಿಂದ ತೆಗೆದಿಲ್ಲ. ನಾನು ಅವರ ಬಗ್ಗೆ ಏನೂ ಮಾತನಾಡಿಲ್ಲ. ಶ್ರೀ ಎಂ.ಬಿ. ಪಾಟೀಲರು ವೈಯಕ್ತಿಕವಾಗಿ ಖರ್ಚು ಮಾಡಿ ಪೂಜೆ ಮಾಡಿದ್ದಾರೆ ಎಂದು ನಾವೇನೂ ಹೇಳಿಲ್ಲ. ಕೆಳಮನೆಯಲ್ಲಿ ಏನಾಗಿದೆಯೋ, ಅದಕ್ಕೆ ಅವರು ಉತ್ತರ ಕೊಡುತ್ತಾರೆ ಮತ್ತು ಅದು ಅವರಿಗೆ ಸಂಬಂಧಪಟ್ಟಿದ್ದು. ಈ ಸದನದಲ್ಲಿ ನಾವೇನೂ ಹೇಳಿಲ್ಲ. ಕರ್ನಾಟಕ ರಾಜ್ಯದಲ್ಲಿ 34,266 ದೇವಾಲಯಗಳು ಆಗ ಇತ್ತು. ಅದರಲ್ಲಿ 125 ಎ ದರ್ಜೆಯ ದೇವಸ್ಥಾನಗಳು ಇತ್ತು. ಬಿ ದರ್ಜೆ ಎಂದರೆ ರೂ.5 ಲಕ್ಷಕ್ಕಿಂತ 239 ದೇವಸ್ಥಾನಗಳಲ್ಲಿ ಅಧಿಕ ಉತ್ಪಾದನೆ ಇತ್ತು. ಒಟ್ಟು ಸುಮಾರು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

350ಕ್ಕಿಂತ ಹೆಚ್ಚು ಎ ಮತ್ತು ಬಿ ದರ್ಜೆಯ ದೇವಸ್ಥಾನಗಳು ಇದ್ದವು. ಆ ದೇವಸ್ಥಾನಗಳಿಗೆ ಇಲಾಖೆಯಿಂದ ಒಂದು ಖಾಲಿ ಸೂಚನೆಯನ್ನು ಕೊಟ್ಟು, ಅವರವರ ದೇವಸ್ಥಾನಗಳಲ್ಲಿ ಆದಾಯ ಇದ್ದರೆ, ರೂ.5 ಸಾವಿರಕ್ಕಿಂತ ಹೆಚ್ಚಲ್ಲದ ಖರ್ಚುಗಳಲ್ಲಿ ಮಳೆಗಾಗಿ ಪೂಜೆಗಳನ್ನು ಮಾಡಬಹುದು ಎಂದು ಎರಡು ದೇವಸ್ಥಾನಗಳಿಗೆ ಸೀಮಿತಗೊಳಿಸಿ ಸುತ್ತೋಲೆ ಕೊಟ್ಟೆವು. ಆ ದೇವಸ್ಥಾನಗಳ ಸಂಖ್ಯೆ 350 ಆಗಿದ್ದು, ಸರ್ಕಾರದಿಂದ ಒಂದು ರೂಪಾಯಿ ಸಹ ಬಿಡುಗಡೆ ಮಾಡಿಲ್ಲ. ಇದು ಮಾನ್ಯ ಸಚಿವರಿಗೆ ಗೊತ್ತಿರಲಿ. ಆಗ ಮಾಧ್ಯಮದವರು ಪರ್ಜನ್ಯ ಜಪ, ಹೋಮ-ಹವನ ಮಾಡುವುದಕ್ಕೆ ರೂ.5 ಸಾವಿರದಂತೆ 34 ಸಾವಿರ ದೇವಸ್ಥಾನಗಳಿಗೆ ರೂ.17 ಕೋಟಿ ಆಗುತ್ತದೆ ಎಂದು ಹೇಳಿದರು. ಆಗ ನಾನೇ ಮಂತ್ರಿಯಾಗಿ ಸ್ಪಷ್ಟನೆ ಕೊಟ್ಟಿದ್ದೇನೆ. ಅದಕ್ಕೆ ಸರ್ಕಾರದಿಂದ ಒಂದು ರೂಪಾಯಿಯನ್ನು ಬಿಡುಗಡೆ ಮಾಡಿಲ್ಲ, ಆರ್ಥಿಕ ಅನುಕೂಲತೆ ಇರುವ ದೇವಸ್ಥಾನಗಳಿಗೆ ಸೀಮಿತವಾಗಿ ಸುತ್ತೋಲೆ ಕೊಡಲಾಗಿದೆ. ಮಾನ್ಯ ಸಭಾಪತಿಯವರೇ, ಸುಮಾರು 15 ಸಾವಿರ ದೇವಸ್ಥಾನಗಳಿಗೆ ದೀಪ ಮತ್ತು ಎಣ್ಣೆ ಇಲ್ಲ. ಅದು ಗೊತ್ತಿಲ್ಲದೇ ಆಗಿರುವ ವರದಿಯಾಗಿದ್ದು ಮಾನ್ಯ ಸಚಿವರು ಸವಾಲಾಗಿ ತೆಗೆದುಕೊಳ್ಳುವುದು ಬೇಡ. ಆಗ ರೂ.5 ಸಾವಿರ ಏಕೆ ಎನ್ನುವ ಚರ್ಚೆಗಳು ಬಂತು. ಹಿಂದೆ ಮಾನ್ಯ ರಾಣಿ ಸತೀಶ್‌ರವರು ಧಾರ್ಮಿಕ ದತ್ತಿ ಇಲಾಖೆಯ ಮಂತ್ರಿಗಳಾಗಿದ್ದಾಗ ಇಂತಹದ್ದೇ ಸುತ್ತೋಲೆ ಹೊರಡಿಸಿದ್ದರು. ಅವರು ರೂ.2,500 ಕ್ಕಿಂತ ಜಾಸ್ತಿ ಖರ್ಚಲ್ಲದ ರೀತಿಯಲ್ಲಿ ಮಳೆಗಾಗಿ ಪೂಜೆಗಳನ್ನು ಮಾಡಬಹುದು ಎಂದು ಮಾನ್ಯ ರಾಣಿ ಸತೀಶ್‌ರವರು ಸುತ್ತೋಲೆ ಹೊರಡಿಸಿದ್ದರು. ಅದರ ಆಧಾರದಲ್ಲಿ ಆರ್ಥಿಕ ವ್ಯವಸ್ಥೆಗಳನ್ನು ಗಮನದಲ್ಲಿಟ್ಟುಕೊಂಡು ರೂ.5 ಖರ್ಚು ಮಾಡುವ ಬಗ್ಗೆ ಸುತ್ತೋಲೆ ಹೊರಡಿಸಿದ್ದೆವು. ಸರ್ಕಾರದ ಖಜಾನೆಯಿಂದ ಒಂದು ರೂಪಾಯಿ ಖರ್ಚು ಮಾಡಿಲ್ಲ. ದೇವಸ್ಥಾನದ ಆದಾಯಕ್ಕೆ ಸೀಮಿತವಾಗಿ ಹೊರಡಿಸಿದ್ದೇವೆ. ಎಲ್ಲಕ್ಕಿಂತ ಹೆಚ್ಚಾಗಿ ಮಾನ್ಯ ಮಂತ್ರಿಗಳು ಇದನ್ನು ಇಷ್ಟು ದೊಡ್ಡ ಪ್ರತಿಷ್ಠೆಯನ್ನಾಗಿ ಮಾಡಿಕೊಳ್ಳುತ್ತಿದ್ದಾರೋ ಗೊತ್ತಿಲ್ಲ. ಅವರು ವೈಯಕ್ತಿಕವಾಗಿ ಖರ್ಚು ಮಾಡಿದ್ದಾರೆ. ಅವರು ಏನು ಬೇಕಾದರೂ ಮಾಡಲಿ ನಾವು ಆಕ್ಷೇಪ ಮಾಡುವುದಿಲ್ಲ. ಕೆಳಮನೆಯಲ್ಲಿ ಏನೋ ಸಮಸ್ಯೆಗಳು ಇರಬಹುದು, ಅದಕ್ಕೆ ಅವರು ಉತ್ತರ ಕೊಟ್ಟಿದ್ದಾರೆ.

**ಶ್ರೀ ಎಂ.ಬಿ. ಪಾಟೀಲ್:-** ಮಾನ್ಯ ಸಭಾಪತಿಯವರೇ, ದಿನಾಂಕ 17/01/2009ರ ಸುತ್ತೋಲೆಯಲ್ಲಿ 'ಈ ಧಾರ್ಮಿಕ ಕಾರ್ಯ ನೆರವೇರಿಸಲು ಸಂಸ್ಥೆಯಿಂದ ರೂ.8 ಸಾವಿರ ಭರಿಸಲು ಅನುಮತಿ ನೀಡಿದೆ. ಈ ಕಾರ್ಯಕ್ಕಾಗಿ ಸೇವಾಕರ್ತರು ಮತ್ತು ಭಕ್ತಾಧಿಗಳಿಂದ ಹಣ ಸಂಗ್ರಹಿಸಬಾರದು' ಎಂದು ತಿಳಿಸಿದ್ದಾರೆ. ಅಂದರೆ ಇದು ಯಾರ ದುಡ್ಡು?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಸಂಗ್ರಹಿಸಬಾರದು ಎಂದು ಹೇಳಿದ್ದಾರೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ಬಿ. ಪಾಟೀಲ್:–** ಅಂದರೆ ಹಣ ಯಾರದ್ದು?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಸರ್ಕಾರವು ಕೊಟ್ಟಿಲ್ಲ, ದೇವಸ್ಥಾನಕ್ಕೆ ಕೊಟ್ಟಿರುವ ಆದಾಯದಲ್ಲಿ ಎಂದು ಹೇಳಿದ್ದೇವೆ.

**ಶ್ರೀ ಎಂ.ಬಿ. ಪಾಟೀಲ್:–** ಅಂದರೆ ಆ ಹಣ ಭಿಘಟಿಠ ದಿಂದ ಬಂದಿರುವ ಹಣವೇ? ಆ ನಿಧಿ ಯಾರದ್ದು?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಭಕ್ತರು ಕೊಟ್ಟಿರುವುದು. ಪೂಜೆಗೋಸ್ಕರ..... ಮಂತ್ರಿಗಳಿಗೆ ಸಹನೆ ಬೇಕು. ಅವರು ಮಾತನಾಡಿದ ನಂತರ ಬೇರೆಯವರ ಮಾತು ಕೇಳದಿದ್ದರೆ ಹೇಗೆ? ಅವರು ಮಾತನಾಡಿದ ನಂತರ ನಮ್ಮ ಮಾತನ್ನೂ ಕೇಳಬೇಕಲ್ಲವೇ? ಈ ಎಲ್ಲಾ ಪ್ರಕ್ರಿಯೆಗಳನ್ನು ಗಮನಿಸಿ, ಅಂದಿನ ಕಾಂಗ್ರೆಸ್‌ನ ಸರ್ವೋಚ್ಚ ಮುಖಂಡರಾಗಿದ್ದ ಶ್ರೀ ಆರ್.ವಿ. ದೇಶಪಾಂಡೆರವರು 'ಮಾಡಿರುವುದ ಸರಿಯಿದೆ, ಧಾರ್ಮಿಕತೆಯಲ್ಲಿ ಈ ಕೆಲಸ ಮಾಡಬಹುದು' ಎಂದು ದೂರವಾಣಿ ಮುಖೇನ ಹೇಳಿದ್ದರು. ಹಾಗಾಗಿ ಅವರು ಮಾಡಿರುವುದಕ್ಕೆ ನಮ್ಮ ಆಕ್ಷೇಪ ಇಲ್ಲ. ಸುಮ್ಮನೆ ಗಡಿಬಿಡಿ ಮಾಡಿಕೊಂಡು ಗಲಾಟೆ ಮಾಡಬಾರದು.

(ಗೊಂದಲ)

**ಶ್ರೀ ಎಂ.ಬಿ. ಪಾಟೀಲ್:–** ಮಾನ್ಯ ಜಗದೀಶ್ ಶೆಟ್ಟರ್ ಅವರಿಗೆ ಹೇಳಲಿ.

**ಉಪ ಸಭಾಪತಿಯವರು:–** ದಯವಿಟ್ಟು ಕುಳಿತುಕೊಳ್ಳಿ. ಯಾರೂ ಕೂಡ ಕೃಷ್ಣೆ–ಕಾವೇರಿ ಬಗ್ಗೆ ಪ್ರೀತಿಯಿಂದ ಚರ್ಚೆ ಮಾಡುತ್ತಿಲ್ಲ. ಮಾನ್ಯ ಯತ್ನಾಳ್‌ರವರು ಬೇಗ ಮುಗಿಸಿ. ಇದು ಕೃಷ್ಣೆ–ಕಾವೇರಿ ಬಗ್ಗೆ ಕಾಳಜಿ ಇರುವ ಚರ್ಚೆಯೇ? ಎಂತಹದ್ದು?

**ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್):–** ಮಾನ್ಯ ಸಭಾಪತಿಯವರೇ, ಇದು ನಮ್ಮ ನಂಬಿಕೆ ಪ್ರಶ್ನೆ. ಪೂಜೆ–ಪುನಸ್ಕಾರವನ್ನು ಎಲ್ಲಾ ಪಕ್ಷಗಳವರು ಮಾಡುತ್ತಾರೆ.

**ಉಪ ಸಭಾಪತಿಯವರು:–** ಆ ವಿಚಾರ ಬಿಡಿ. ಮುಂದೆ ಬನ್ನಿ. ಏನಾಗಬೇಕು ಎಂದು ಹೇಳಿ.

**ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್):–** ಈಗ ಸಾಕಷ್ಟು ಚರ್ಚೆಯಾಗಿದ್ದು, ಒಟ್ಟಾರೆ ನಾನು ಹೇಳುವುದೇನೆಂದರೆ, ಸರ್ಕಾರಿ ಪುನರ್ವಸತಿ ಮತ್ತು ಪುನರ್ ನಿರ್ಮಾಣ ಹಾಗೂ ಭೂಸ್ವಾಧೀನ....... ಇನ್ನು ಬಹಳ ಎಂದರೆ ಈ ಸರ್ಕಾರ 8 ತಿಂಗಳು ಇರುತ್ತದೆ. ಮುಂದೆ ಯಾರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ನಾಯಕತ್ವ ತೆಗೆದುಕೊಳ್ಳಬೇಕು ಎಂದು ರಾಜ್ಯದ ಜನರು ನಿರ್ಣಯ ಮಾಡುತ್ತಾರೆ, ಅದನ್ನು ಈಗಾಗಲೇ ತೀರ್ಮಾನ ಮಾಡಿದ್ದು, ತೀರ್ಪನ್ನು ಕೊಡುತ್ತಾರೆ. ಮಾನ್ಯ ಜಲಸಂಪನ್ಮೂಲ ಸಚಿವರು ಯಾವ ಪ್ರದೇಶದಿಂದ ಬರುತ್ತಿದ್ದಾರೆ, ಅವರ ಕಾಲದಲ್ಲಿ ಒಂದು ಐತಿಹಾಸಿಕವಾದ ಅನೇಕ ನಿರ್ಣಯಗಳನ್ನು ಮಾಡಬೇಕಾಗಿದೆ. ಅವರ ಸರ್ಕಾರದಲ್ಲಿ ಆರ್ಥಿಕವಾಗಿ ಮತ್ತು ಹೈಕಮಾಂಡ್‌ನಲ್ಲಿ ಅತ್ಯಂತ ಬಲಿಷ್ಠ ಸಚಿವರು. ರೈತರಿಗೆ ಕೊಡಬೇಕಾದ್ದರ ಬಗ್ಗೆ ಅವರು ಘೋಷಣೆ ಮಾಡಬೇಕು. ರೈತರಿಗೆ ರೂ.30 ಲಕ್ಷ ಖುಷ್ಕಿಗೆ ಎಂದು ಘೋಷಣೆ ಮಾಡಬೇಕು. ಪುನರ್ವಸತಿ ಮತ್ತು ಪುನರ್‌ನಿರ್ಮಾಣದಲ್ಲಿ ಆಗಿರುವ ತಪ್ಪುಗಳನ್ನು ಸರಿಪಡಿಸಬೇಕು. ಪುನರ್ವಸತಿ ಕೇಂದ್ರಗಳು ಆಧುನಿಕ ವ್ಯವಸ್ಥೆಯಲ್ಲಿ ನಿರ್ಮಾಣವಾಗಬೇಕು. ಇಡೀ ದೇಶದಲ್ಲಿ ಚಂಡೀಘರ್ ಅನ್ನು planned city ಎಂದು ಕರೆಯುತ್ತೇವೆ. ಮಹಾರಾಷ್ಟ್ರದಲ್ಲಿ ಜೈಸಿಂಗ್‌ಪುರ್ planned city ಆಗಿದೆ. ಆ ರೀತಿ ಪ್ರತಿಯೊಂದು ನಗರಗಳನ್ನು ಸ್ಮಶಾನದಿಂದ ಹಿಡಿದು ಎಲ್ಲಾ ಸಕಲ ಸೌಲಭ್ಯಗಳನ್ನು ಹೊಂದಿರುವ ಮಾದರಿ ನಗರಗಳನ್ನಾಗಿ ಮಾಡಬೇಕು. Rehabilitation ಮಾಡಿದರೆ ಈ ರೀತಿ ಆಲಮಟ್ಟಿ ಮುಳುಗಡೆ ಆದಾಗ ಮಾಡಿದಂತೆ ಆಗಬೇಕು ಎನ್ನುವಂತೆ ಇರಬೇಕು. ಆ ರೀತಿ ಮಾದರಿಯಾಗಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಸಾಕಷ್ಟು technology, ಹೊಸ ಹೊಸ ವ್ಯವಸ್ಥೆ ಬಂದಿರುವ ಕಾಲದಲ್ಲಿ ಅವರು ಕ್ರಾಂತಿಕಾರಕವಾದ ಕೆಲಸವನ್ನು ಮಾಡಲಿ, ಸರ್ಕಾರ ಇದನ್ನು ಗಂಭೀರವಾಗಿ ತೆಗೆದುಕೊಳ್ಳಲಿ. ಇಲ್ಲದಿದ್ದರೆ ರೈತರು ಬೀದಿಗೆ ಬೀಳುತ್ತಾರೆ. ಇವತ್ತು ಮುಳುಗಡೆಯಾಗುವ ಹಳ್ಳಿಗಳಿಗೆ ಹೆಸರುಗಳೇ ಇಲ್ಲ. ಮೂರ್‍ನಾಲ್ಕು ಹಳ್ಳಿಗಳು club ಆಗಿ ಅಲ್ಲಿಯೂ ಸಮಸ್ಯೆ ಇದೆ. ಪುನರ್ವಸತಿ ಕೇಂದ್ರ-1, ಪುನರ್ವಸತಿ ಕೇಂದ್ರ 2, 3 ಎಂದರೆ ಇವು ಹೆಸರುಗಳು ಆಗುತ್ತವೆಯೇ? ಅಲ್ಲಿನ ಜನರ ಅಭಿಪ್ರಾಯ ತೆಗೆದುಕೊಳ್ಳಬೇಕು. ಸಾವಿರಾರು ವರ್ಷಗಳಿಂದ ಇತಿಹಾಸದಲ್ಲಿರುವ ಅನೇಕ ಹಳ್ಳಿಗಳು ಇವೆ. ರಾಮಾಯಣ, ಮಹಾಭಾರತ ಕಾಲದಲ್ಲಿಂದಲೂ ಇತಿಹಾಸ ಹೊಂದಿರುವ ಊರುಗಳು ನಮ್ಮ ಎರಡೂ ಜಿಲ್ಲೆಗಳಲ್ಲಿ ಇವೆ. ಆ ಗ್ರಾಮಗಳ ಹೆಸರುಗಳ ಬಗ್ಗೆ ಗಂಭೀರವಾಗಿ ಚಿಂತನೆ ಮಾಡಿ, ಐತಿಹಾಸಿಕ ನಿರ್ಣಯವನ್ನು ಮಾಡಬೇಕೆಂದು ಒತ್ತಾಯ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀಮತಿ ತಾರಾ ಅನೂರಾಧ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಈಗಾಗಲೇ ಕೃಷ್ಣೆಯ ನದಿ ಹರಿಯುವ ವಿಸ್ತಾರವನ್ನು, ಅಣೆಕಟ್ಟಿನ ಎತ್ತರವನ್ನು ಏರಿಸಿರುವುದಕ್ಕೆ ಸಂತ್ರಸ್ತರ ಪಟ್ಟಿ ಹೆಚ್ಚಾಗಿದೆ. ಎಷ್ಟು ಜನ ಸ್ಥಳಾಂತರಗೊಂಡಿದ್ದಾರೆ ಮತ್ತು ಎಷ್ಟು ಜನ ಸಂತ್ರಸ್ತರಾಗಿದ್ದಾರೆ ಎಂಬ ವಿಚಾರವನ್ನು ಸಹೋದರರಾದ ಮಾನ್ಯ ನಿರಾಣಿಯವರು ಹಾಗೂ ಯತ್ನಾಳ್‌ರವರು ಹೇಳಿದ್ದಾರೆ. ಅವರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮನೆಗಳ ಆಸ್ತಿಗಳನ್ನು ಕಳೆದುಕೊಂಡಿದ್ದಾರೆ ಮತ್ತು ಸಾಕಷ್ಟು ಕಷ್ಟಪಡುವ ಭಾದೆಯಲ್ಲಿರುತ್ತಾರೆ ಎಂಬ ಭಾವನಾತ್ಮಕ ಅಂಶವೂ ಇದೆ. ಈ ಯೋಜನೆಯ ಸಂತ್ರಸ್ತರಿಗೆ ಏನು ಕೊಟ್ಟರೂ, ಎಷ್ಟು ಕೊಟ್ಟರೂ ಕಡಿಮೆ ಎನ್ನುವ ಭಾವನೆ ನನ್ನದಾಗಿದೆ.

(ಮುಂದು)

**(600) 07-06-2017 SK-GR 5.50**

**(ಉಪಸಭಾಪತಿಯವರ ಉಪಸ್ಥಿತಿ)**

**ಶ್ರೀಮತಿ ತಾರಾ ಅನುರಾಧ:-(ಮುಂದು)**

ಆಸ್ತಿ ಹೋಗುತ್ತದೆ ಎನ್ನುವುದಕ್ಕಿಂತ ನಾನು ಈಗಾಗಲೇ ಹೇಳಿದೆ, it's an emotional attachment. ನನ್ನ ಮನೆ, ನನ್ನ ಹೊಲ, ನನ್ನ ಜಮೀನು, ನನ್ನ ಹುಟ್ಟಿದ ಮನೆ, ನಾನು ಬೆಳೆದ ಮನೆ, ನಮ್ಮ ಭೂಮಿ ಎನ್ನುವ ಭಾವನೆ. ವಿದೇಶಗಳನ್ನು ನಾವು ಸುತ್ತುಕೊಂಡು ಬಂದರೂ ಕೂಡ ನಮ್ಮ ಊರಿಗೆ ಬಂದು ಕಾಲಿಟ್ಟಾಗ, ನಮಗೆ ಆಗುವ ಸಂತೋಷ ಮತ್ತು ರೋಮಾಂಚನ ಇದೆಯಲ್ಲಾ ಅದು ಎಷ್ಟು ದುಡ್ಡು ಕೊಟ್ಟರೂ ಕೂಡ ನಾವು ಪಡೆದುಕೊಳ್ಳುವುದಕ್ಕೆ ಆಗುವುದಿಲ್ಲ. ಅಂತಹ ಒಂದು ಭಾವನಾತ್ಮಕ ಸಂಬಂಧ ನಮ್ಮ ಮನೆಯಲ್ಲಿರುತ್ತದೆ, ಹುಟ್ಟಿದ ಮನೆಯಲ್ಲಿರುತ್ತದೆ, ಬಾಳಿದ ಮನೆಯಲ್ಲಿರುತ್ತದೆ, ಬದುಕು ಕಟ್ಟಿಕೊಂಡ ಮನೆಯಲ್ಲಿರುತ್ತದೆ, ನಾವು ಬಾಳನ್ನು ಬೆಳೆಸಿಕೊಂಡ ಮನೆಯಲ್ಲಿರುತ್ತದೆ. ಇದು ಒಂದು ರೀತಿ ಭಾವನಾತ್ಮಕವಾದ ಸಂಬಂಧ. ಇದ್ದಕ್ಕಿದ್ದ ಹಾಗೆ ಅಲ್ಲಿಂದ ಹೋಗಿ ಅಂದರೆ ಹೇಗೆ? ಮತ್ತೆ ಸೂಕ್ತ ಪರಿಹಾರವನ್ನು ಪುನರ್ವಸತಿಗೆ ಕೊಡಬೇಕಾಗಿರುವುದು ಸರ್ಕಾರದ ಕರ್ತವ್ಯ ಮತ್ತು ಸಂತ್ರಸ್ತರು ಅದನ್ನು ಕೇಳುವುದು ಅವರ ಹಕ್ಕು ಕೂಡ ಆಗಿದೆ. ಈಗ ಸರಿಯಾದ ಪರಿಹಾರ ಸಿಗುತ್ತಿಲ್ಲ ಎನ್ನುವ ಆತಂಕದ ವಿಷಯ ಅವರಿಗಾಗಿದೆ. ಒಂದು ಬಾರಿ ಸಂತ್ರಸ್ತರು ಆದ ಮೇಲೆ, ಇನ್ನೊಂದು ಕಡೆ ಜಮೀನು ಪಡೆದುಕೊಂಡು ಮತ್ತೆ ಕೃಷಿಗೆ ಮರಳುವುದು ಇದೆಯಲ್ಲಾ ಅದು ದೊಡ್ಡ ದುಬಾರಿ ಕನಸು. ಇದರ ಬಗ್ಗೆ ನಾನು ಹೇಳಬೇಕೆಂದರೆ ಒಂದು ಕಡೆ ಜಮೀನು ಮಾಡಿ ಬೆಳೆ ಬೆಳೆಯುತ್ತಿದ್ದ ರೈತ ಇನ್ನೊಂದು ಕಡೆ ಜಮೀನನ್ನು ತೆಗೆದುಕೊಂಡು ಮತ್ತೆ ಕೃಷಿಗೆ ಹೋಗುವುದು ಇದೆಯಲ್ಲಾ ಅದು ನಿಜವಾಗಲೂ ದುಬಾರಿಯಾದ ಕನಸು. ಈ ಕಾರಣಕ್ಕಾಗಿಯೇ, ಹಿನ್ನೀರಿನಲ್ಲಿ ಮುಳಗಡೆಯಾಗಿರುವ ಜಮೀನುಗಳಿಗೆ ಏಕರೂಪದ ಪರಿಹಾರ ಕೊಡುವುದರ ಬಗ್ಗೆ ದಯಮಾಡಿ ನೀವು ಚಿಂತಿಸಬೇಕು. ಏಕೆಂದರೆ ನೇರವಾಗಿ ಸಂತ್ರಸ್ತರು ಆಗಿರುವುದಕ್ಕಿಂತ ಹೆಚ್ಚಾಗಿ ಪರೋಕ್ಷವಾಗಿ ಸಂತ್ರಸ್ತರಾಗಿರುವುದರ ಬಗ್ಗೆ ಕೂಡ ನಾವು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯೋಚನೆ ಮಾಡಬೇಕು. ಈಗ ಏನು ಹೇಳುತ್ತೇವೆಂದರೆ, ಸಂತ್ರಸ್ತರು ಎಂದ ತಕ್ಷಣ ನೀರು ಎಷ್ಟು ಜಮೀನಿಗೆ ಅವರಿಸಿಕೊಂಡಿರುತ್ತದೋ, ಅಷ್ಟು ಜಮೀನಿನ ರೈತರನ್ನು ನಾವು ಸಂತ್ರಸ್ತರು ಎಂದು ಹೇಳಿ ನಾವು ಪರಿಹಾರವನ್ನು ಕೊಡುತ್ತೇವೆ. ಆದರೆ immediate after the water, ಜಮೀನು ಇದೆಯಲ್ಲಾ ಅವರು ಸಂತ್ರಸ್ತರು ಎಂದು ಪರಿಗಣಿಸುವುದಿಲ್ಲ. ಏಕೆಂದರೆ immediate ಆಗಿ ನೀರು ಆದಮೇಲೆ ಒಂದು ಕಿಲೋ ಮೀಟರ್, ಎರಡು ಕಿಲೋ ಮೀಟರ್‌ನಷ್ಟು ಭೂಮಿಯಲ್ಲಿ ಜನ ನಿಜವಾಗಲೂ ಬದುಕುವುದಕ್ಕೆ ಸಾಧ್ಯವೇ ಇಲ್ಲ. ಅಲ್ಲಿ ಜಲತರಗಳಾಗಿರಬಹುದು, ಅಲ್ಲಿನ ವಾಸನೆಗಳಾಗಿರಬಹುದು ಅಥವಾ ಮಲೇರಿಯಾ ರೋಗ ಮತ್ತು ಸೊಳ್ಳೆಗಳ ಕಾಟ. ಇದರಿಂದ ಅಲ್ಲಿ ನಿಜವಾಗಲೂ ಮನೆ ಕಟ್ಟಿಕೊಂಡು ಜೀವನ ಸಾಗಿಸುವುದಕ್ಕಾಗುವುದಿಲ್ಲ. ಕನಿಷ್ಟ ಪಕ್ಷ ಒಂದು ಕಿಲೋ ಮೀಟರ್ ಅಥವಾ ಎರಡು ಕಿಲೋ ಮೀಟರ್‌ಗಳಷ್ಟು ದೂರ ಬಿಟ್ಟು, ಊರನ್ನು ಕಟ್ಟಿಕೊಳ್ಳುವ ಪರಿಸ್ಥಿತಿ ಅದು ನಮಗೆ ಗೊತ್ತು ಮತ್ತು ನಿಮಗೂ ಗೊತ್ತು. ಆದರಿಂದ ಅಂತಹವರನ್ನು ಕೂಡ ಸಂತ್ರಸ್ತರ ನಿಟ್ಟಿನಲ್ಲಿ ಹಾಕಿಕೊಂಡು, ಅವರಿಗೂ ಪರಿಹಾರ ಕೊಡಬೇಕಾಗಿರುವುದು ನಮ್ಮ ಕರ್ತವ್ಯವಾಗಿರುತ್ತದೆ. ಆಗಿದ್ದ ಭೂ ಸ್ವಾಧೀನ ಕಾಯ್ದೆಯಲ್ಲಿ ಹಿಂದೆ NTPC ಗಾಗಿ ಭೂ ಸ್ವಾಧೀನ ಪಡಿಸಿಕೊಂಡಿದ್ದ ಸಂದರ್ಭದಲ್ಲಿ ದೊರಕಿದ್ದಕ್ಕಿಂತ ಇನ್ನೂ ಕಡಿಮೆ ಕೊಡುತ್ತಿರುವುದು ಯಾವ ನ್ಯಾಯ ಎನ್ನುವುದು ನನ್ನ ವಾದ. ಇಲ್ಲಿ ಸಂತ್ರಸ್ತರಾಗಿರುವ ಕುಟುಂಬಗಳಿಗೆ ಸರ್ಕಾರ ಮಾಡಬೇಕಾಗಿರುವುದು ನಾನು ಅಂದು ಕೊಳ್ಳುತ್ತಿರುವುದು ಏನೆಂದರೆ ವಿವಿಧ ಇಲಾಖೆಗಳಲ್ಲಿ ಅಥವಾ ಅನುದಾನಿತ ಇಲಾಖೆಗಳಲ್ಲಿ ನೌಕರಿಗಳನ್ನು ಕೊಡಿಸುವುದರ ಮೂಲಕ ಆ ಕುಟುಂಬದವರಿಗೆ ಮೀಸಲಾತಿ ಯೋಜನೆಯಲ್ಲಿ ಸಂತ್ರಸ್ತರಿಗೆ ನೌಕರಿ ಒದಗಿಸುವುದು ಸೂಕ್ತ ಎನ್ನುವುದು ನನ್ನ ಭಾವನೆ. ನನಗೆ ಇನ್ನೊಂದು ದೊಡ್ಡ ಸಂದೇಹವೆನಿಸುವುದು ಆ ಪ್ರದೇಶಲ್ಲಿರುವವರೆಲ್ಲರಿಗೂ ಜಮೀನು ಮತ್ತು ಮನೆ ಇರುತ್ತದೆಂಬುದು ಸುಳ್ಳು. ಯಾರಿಗೆ ಸ್ವಂತ ಮನೆ ಮತ್ತು ಜಮೀನು ಇರುವುದಿಲ್ಲವೋ ಅಂದರೆ ಕುಲ ಕಸುಬುಗಳನ್ನು ನಂಬಿಕೊಂಡು ಬದುಕುವ ಜನರು ಕೂಡ ಒಂದು ಊರಲ್ಲಿ ಇದ್ದೇ ಇರುತ್ತಾರೆ. ಅದು ಗ್ರಾಮೀಣ ಕುಲ ಕಸುಬು ಅಂದರೆ ಕೃಷಿ ಕಾರ್ಮಿಕರ ಜೊತೆಗೆ ಗುಡಿ ಕೈಗಾರಿಕೆ ಮಾಡುತ್ತಿರುವವರು, ಕಮ್ಮಾರರು, ಕುಂಬಾರರು ಮತ್ತು ಇನ್ನು ಸ್ವಲ್ಪ ಜನ ಬಡವರು ಯಾರ್‍ಯಾರು ಇದ್ದಾರೆ ಅವರು ಕೂಡ ಸಂತ್ರಸ್ತರ ಅಡಿಯಲ್ಲಿ ಬರುತ್ತಾರೆ. ನೀವು ಬಡವರ ಪರವಾಗಿರುವವರು 'ಅಹಿಂದ ಸರ್ಕಾರ' ಎಂದು ಹೇಳಿಕೊಂಡು ಬರುತ್ತಿದ್ದೀರಿ.

**ಶ್ರೀ ಎಂ.ಬಿ. ಪಾಟೀಲ್ (ಜಲ ಸಂಪನ್ಮೂಲ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, UPA ಸರ್ಕಾರ ತಂದ Act ಬಗ್ಗೆ ಮಾನ್ಯ ಯತ್ನಾಳ್‌ರವರು ಮಾತನಾಡಿದರು. ಅದರಲ್ಲಿ ಪುನರ್ವಸತಿ ಬಗ್ಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಹಳಷ್ಟು stress ಕೊಟ್ಟು ಹೇಳಿದ್ದಾರೆ. ಅಲ್ಲಿ ನೀವು ಯಾವಾಗ ನೀರನ್ನು ನಿಲ್ಲಿಸುತ್ತೀರಿ, ಅಲ್ಲಿಂದ ಆರು ತಿಂಗಳು ಮುಂಚಿತವಾಗಿ ಎಲ್ಲಾ ಪುನರ್ವಸತಿಯು in all respects ಪೂರ್ತಿಯಾಗಿರಬೇಕು ಮತ್ತು ಅಲ್ಲಿ ಯಾರ್ಯಾರ ಜಮೀನು ಮುಳುಗಡೆಯಾಗುತ್ತದೆ ಅವರಿಗೆ ಬೆನಿಫಿಟ್ಸ್ ಸಿಗುತ್ತದೆ. ಇದಲ್ಲದೆ, ಮಾನ್ಯ ಸದಸ್ಯರು ಯಾರ್ಯಾರು jobless ಆಗುತ್ತಾರೆ ಎಂದು ಹೇಳುತ್ತಿದ್ದಾರೆ. ಅವರೆಲ್ಲರ ಬಗ್ಗೆಯೂ ವ್ಯಾಪಕವಾಗಿ 2013 ರಲ್ಲಿ ಯು.ಪಿ.ಎ. ಸರ್ಕಾರವು ತಂದಿರುವಂತಹ Land Acquisition Act ನಲ್ಲಿ ಸಮಗ್ರವಾಗಿ ಹಾಗೂ ಬಹಳ ಅರ್ಥಪೂರ್ಣವಾಗಿ ಮಾಡಿದ್ದಾರೆ. ಅದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

(ಗೊಂದಲ)

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-** ಮಾನ್ಯ ಸಭಾಪತಿಯವರೇ, ಹೊಸ ಕಾನೂನಿನಲ್ಲಿ ಕೂಡ ಅವರಿಗೆ ಅವಕಾಶವಿಲ್ಲ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ನೀವು ಕಾಯಿದೆ ತಂದಿರುವುದು ಇದೆಲ್ಲಾ ಸರಿ. ಈಗ ಪ್ರಶ್ನೆ ಬಂದಿರುವುದು ನಿಮಗೆ ಗೊತ್ತಿದೆ. ಬಿಜಾಪುರದಲ್ಲಿಯೇ ಆ Thermal Project ನಾವು ತಂದಿದ್ದೇವೆ. Thermal Project ತಂದಂತಹ ಸಂದರ್ಭದಲ್ಲಿ ಯಾವ ಕಾಯಿದೆಯನ್ನು ನಾವು ನೋಡುವುದಕ್ಕೆ ಹೋಗಲಿಲ್ಲ. ಯಾರನ್ನೂ ಕೇಳುವುದಕ್ಕೆ ಹೋಗಲಿಲ್ಲ. ಆ ಸಂದರ್ಭದಲ್ಲಿ ಭೂಮಿಯನ್ನು ಕಳೆದುಕೊಂಡಂತಹವರಿಗೆ, ಯಾರು ಸಾವಿರಾರು ಎಕರೆ ಭೂಮಿಯನ್ನು ಕೊಟ್ಟಿದ್ದಾರೋ ಅವರಿಗೆ ಖುಷ್ಕಿ ಜಮೀನಿಗೆ ಎಕರೆಯೊಂದಕ್ಕೆ ಏಳುಕಾಲು ಲಕ್ಷ ರೂಪಾಯಿ ಮತ್ತು ನೀರಾವರಿ ಜಮೀನಿಗೆ ಒಂಭತ್ತು ಲಕ್ಷ ರೂಪಾಯಿಗಳಂತೆ ಪರಿಹಾರವನ್ನು ಕೊಟ್ಟಿದ್ದೇವೆ. ಈಗ NTPC ತಂದಿದ್ದೇ ನಾವು. ಅಲ್ಲಿ ಹೋಗಿ ಮಾನ್ಯ ಸುಶೀಲ್ ಕುಮಾರ್ ಶಿಂಧೆಯವರ ಬಳಿ ಕುಳಿತುಕೊಂಡು.... ಇಡೀ ದಕ್ಷಿಣ ಭಾರತದ ಎಲ್ಲಾ ರಾಜ್ಯದಲ್ಲಿಯೂ ಕೂಡ ಆ Thermal Project ಇತ್ತು. ಕರ್ನಾಟಕ ರಾಜ್ಯದಲ್ಲಿ ಇರಲಿಲ್ಲ. ನಾನು ಇಂಧನ ಇಲಾಖೆ ಸಚಿವನಾಗಿದ್ದಾಗ ಆ ಸಂದರ್ಭದಲ್ಲಿ ಕೇಂದ್ರದ Energy Minister ರವರಾದ ಮಾನ್ಯ ಸುಶೀಲ್ ಕುಮಾರ್ ಶಿಂಧೆರವರ ಹತ್ತಿರ ಹೋಗಿ ಚರ್ಚೆ ಮಾಡಿ, ಆ ಪ್ರಾಜೆಕ್ಟ್ ಬೇಕು ಎಂದಾಗ ಬಿಜಾಪುರ ಜಿಲ್ಲೆಯ ಜನರಿಗೆ ಒಪ್ಪಿಸಿ, ಖುಷ್ಕಿ ಜಮೀನು ಹೊಂದಿರುವವರಿಗೆ ಏಳು ಕಾಲು ಲಕ್ಷ ರೂಪಾಯಿಗಳಂತೆ ಮತ್ತು ನೀರಾವರಿ ಜಮೀನಿಗೆ ಒಂಭತ್ತು ಲಕ್ಷ ರೂಪಾಯಿ ರೂಪಾಯಿಗಳಂತೆ ಭೂಮಿಗೆ ಹಣವನ್ನು ಕೊಟ್ಟಿತ್ತು. ಯಾವ ಆಕ್ಟನ್ನೂ ನೋಡಲಿಲ್ಲ. ಅವರನ್ನು ಕರೆಸಿ Consent

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

Award ಮಾಡಿಸಿ ನೀವು ಭೂಮಿ ಕೊಡಿ, ನಿಮಗೆ ಉದ್ಯೋಗ ಕೊಡುತ್ತೇವೆ ಮತ್ತು ನಿಮಗೆ ಹಣವನ್ನು ಕೊಡುತ್ತೇವೆ ಎಂದೆವು. ಇಲ್ಲಿ ಇಷ್ಟು ಚರ್ಚೆಯಾಗಿರುವಂತಹ ಸಂದರ್ಭದಲ್ಲಿ ಮಾನ್ಯ ಯತ್ನಾಳ್‌ರವರು ಮತ್ತು ಮಾನ್ಯ ನಿರಾಣಿ ನಮ್ಮ ಸಹೋದರಿಯಾದ ತಾರಾ ಮಾತನಾಡಿರಬಹುದು. ನೀವು ಗಮನಿಸಬೇಕಾದದ್ದು ಇಷ್ಟೇ, ನೀವು ಅವರೆಲ್ಲರಿಗೂ ಒಂದೇ ಮತ್ತು ನಮಗೂ ಒಂದೇ ಏನು? ಅವರಿಗೆ ಎಷ್ಟು ದುಡ್ಡು ಕೊಡುತ್ತೀರಿ. ನೀವು ಕಾಯಿದೆ, ಸಮಿತಿ, ಮುಖ್ಯ ಮಂತ್ರಿಗಳ ಸಮಿತಿ ಇವುಗ್ಗಳ ಬಗ್ಗೆ ದಯವಿಟ್ಟು ಏನೂ ಯೋಚನೆ ಮಾಡುವುದಕ್ಕೆ ಹೋಗಬೇಡಿ. ನಿಮಗೆ ಒಂದು ಅವಕಾಶ ಸಿಕ್ಕಿದೆ. ಒಂದು ಲಕ್ಷ ಮೂವತ್ನಾಲ್ಕು ಸಾವಿರ ಎಕರೆ ಭೂಮಿಯನ್ನು ಕಳೆದುಕೊಂಡಂತಹವರು, ಅವರ ಮನೆಯಲ್ಲಿ ದೀಪ ಹಚ್ಚಬೇಕಾದರೆ, ನೀವು ಅವರಿಗೆ ಜಾಸ್ತಿ ಹಣ ಕೊಡುವ ದಿಕ್ಕಿನಲ್ಲಿ ಏನು ವ್ಯವಸ್ಥೆ ಮಾಡಬೇಕೆಂದು ನೋಡಿ. ಇದನ್ನು ನಾನು ನಿಮ್ಮ ಹತ್ತಿರ ಪ್ರಾರ್ಥನೆ ಮಾಡುತ್ತೇನೆ. ನಿಮ್ಮ ಕಾಯಿದೆಯನ್ನು ಕೇಳಿಕೊಂಡು ಕುಳಿತುಕೊಂಡರೆ ಇದು ಆಗುವುದಿಲ್ಲ. Consent Award ಗೆ ಅವಕಾಶ ಇದೆ ಅಲ್ಲವೇ? ಅವಕಾಶ ಇರುವಂತಹ ಸಂದರ್ಭದಲ್ಲಿ ಮುಖ್ಯ ಮಂತ್ರಿಗಳ ಹತ್ತಿರ ಕುಳಿತುಕೊಂಡು ಇಂತಹ ದೊಡ್ಡ ಪ್ರಾಜೆಕ್ಟ್‌ಗೆ ರೈತರು ಭೂಮಿ ಕೊಡುತ್ತಿದ್ದಾರೆ. ಅವರ ಮಕ್ಕಳ ಮರಿಯ ಆಶೀರ್ವಾದ ನಿಮಗೆ ಸಿಗುತ್ತದೆ. ದಯವಿಟ್ಟು ಹೆಚ್ಚು ಹಣವನ್ನು ಕೊಡಿ. ಮಾನ್ಯ ಯತ್ನಾಳ್‌ರವರು ಕೇಳಿದರು ಮೂವತ್ತು ಲಕ್ಷ, ನಲವತ್ತು ಲಕ್ಷ ರೂಪಾಯಿಗಳನ್ನು ಕೊಡುವುದಕ್ಕೆ ಅವಕಾಶ ಇಲ್ಲ ಎಂದು ಅಂದುಕೊಳ್ಳಬೇಡಿ. ಸರ್ಕಾರ ಮತ್ತು ಕ್ಯಾಬಿನೆಟ್ ತೀರ್ಮಾನ ಮಾಡಿದರೆ, ಏನು ಬೇಕಾದರೂ ಮಾಡಬಹುದು. ಈ ದಿಕ್ಕಿನಲ್ಲಿ ಒಟ್ಟಾರೆ ಉತ್ತರ ಕೊಡುವಂತಹ ಸಂದರ್ಭದಲ್ಲಿ ನಾನು ಹೇಳುವುದು ಇಷ್ಟೇ ಅತಿ ಹೆಚ್ಚು ಹಣವನ್ನು ಕೊಡುವ ದಿಕ್ಕಿನಲ್ಲಿ ಮತ್ತು ಆ ರೈತರು ಮೆಚ್ಚುವಂತಹ ದಿಕ್ಕಿನಲ್ಲಿ ಮಾಡಿ. ನಿಮಗೆ ಅವರು ಒಳ್ಳೆಯ ಆಶೀರ್ವಾದ ಮಾಡುತ್ತಾರೆ. ನನಗೂ ಕೂಡ ವಿರೋಧ ಪಕ್ಷದಲ್ಲಿದ್ದರೂ ಅವರು ತುಂಬಾ ಹೊಗಳುತ್ತಿದ್ದಾರೆ. ಆಡಳಿತ ಪಕ್ಷದಲ್ಲಿರಬೇಕಾದರೆ ನಿಮ್ಮನ್ನು ಕೂಡ ಅವರು ಹೊಗಳುತ್ತಿದ್ದಾರೆ. ಏಕೆ ಹೊಗಳಿದರು? ಹಾಗಾದರೆ ಹಿಂದೆ ಇದ್ದವರು ಏಕೆ ಮಾಡಲಿಲ್ಲ? ನೀರಾವರಿ ಕೆರೆ ತುಂಬಿಸುವ ಪ್ರಯತ್ನ ಏಕೆ ನಡೆಸಲಿಲ್ಲ? ನೀವೇ ಮಳೆಯಲ್ಲಿ ಧರಣಿ ಕುಳಿತಿರುವಂತಹ ಸಂದರ್ಭದಲ್ಲಿ ನಾನು ಬಂದಿದ್ದೆ ತಾನೇ? Sanction ಮಾಡಿದ್ದೆ ತಾನೇ? ನನ್ನನ್ನು ಬೆಳ್ಳಿಯಲ್ಲೇ ತೂಗುತ್ತೇನೆ ಎಂದಿದ್ದರು, ಅದು ಇನ್ನೂ ಪೆಂಡಿಂಗ್ ಉಳಿದಿದೆ. ನಾನೇನು ಹೇಳುವುದಕ್ಕೆ ಹೊರಟಿದ್ದೇನೆಂದರೆ, ಬೆಳ್ಳಿಯಿಂದಲೂ ತೂಗಬೇಡಿ, ಬಂಗಾರದಿಂದಲೂ ತೂಗಬೇಡಿ. ಆ ರೈತರಿಗೆ ಸೇವೆಯನ್ನು ಸಲ್ಲಿಸುವುದಕ್ಕಾಗಿ ನಿಜಕ್ಕೂ ನಿಮಗೆ ಸ್ಥಾನ ಸಿಕ್ಕಿದೆ. ಇಂತಹ ನೀರಾವರಿ ಮಂತ್ರಿ ಹುದ್ದೆ ಸಿಕ್ಕಂತಹ ಅವಕಾಶವನ್ನು ನೀವು ಕಾಯಿದೆ ಮುಂತಾದವನ್ನು ದಯವಿಟ್ಟು ನೋಡುವುದಕ್ಕೆ ಹೋಗಬೇಡಿ. ನಿಮಗೆ ಅವಕಾಶ ಇದೆ. ನೀವು ಕ್ಯಾಬಿನೆಟ್‌ನಲ್ಲಿ ಮಾಡುವುದಕ್ಕೆ ನಿಮಗೆ ಯಾರು ಅಡ್ಡ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬರುತ್ತಾರೆ? ಮಾನ್ಯ ಯತ್ನಾಳ್‌ರವರು ನಲವತ್ತು ಲಕ್ಷ ರೂಪಾಯಿಗಳನ್ನು ಕೊಡಿ ಎಂದು ಕೇಳುತ್ತಿದ್ದಾರೆ. ಎಲ್ಲರೂ ನಿಮ್ಮ ಮಾತು ಕೇಳುತ್ತಾರೆ. ನೀವು ಎಲ್ಲವನ್ನು ಬಿಟ್ಟು ಬಿಟ್ಟಿದ್ದೀರಿ. ರಾಜ್ಯಾಧ್ಯಕ್ಷರು ಇಲ್ಲ ಮತ್ತು ಬೇರೆ ಏನು ಇಲ್ಲ. ಸಿಗಲಿಲ್ಲ ಬಿಡಿ ಅದು ಬೇರೆ ಮಾತು. ಅದಕ್ಕೋಸ್ಕರ ನಾನು ಪ್ರಾರ್ಥನೆ ಮಾಡುತ್ತೇನೆ. ಇಷ್ಟೆಲ್ಲಾ ಚರ್ಚೆ ಮಾಡುತ್ತಿರುವುದು ಅವರಿಗೆ ಕೂಡ ಆಸಕ್ತಿಯಿದೆ. ಅವರಿಗೆ ಆಸಕ್ತಿ ಇಲ್ಲ ಎಂದು ನಾನು ಹೇಳುತ್ತಿಲ್ಲ. ಖಂಡಿತವಾಗಿ ನಿಮಗೂ ಕೂಡ ಆಸಕ್ತಿಯಿದೆ. ಆಸಕ್ತಿ ಇರುವಂತಹ ಸಂದರ್ಭದಲ್ಲಿ, ಎಲ್ಲರ ಒತ್ತಾಯವೇನೆಂದರೆ ಬಡ ರೈತರು ತಲತಲಾಂತರಗಳಿಂದ ಅಪ್ಪನ ಕಾಲದಿಂದ ಬಂದಂತಹ ಭೂಮಿ, ಅದನ್ನು ಬಿಟ್ಟು ಕೊಡುವಂತಹ ಸಂದರ್ಭದಲ್ಲಿ ಮೂವತ್ತು ಲಕ್ಷ, ನಲವತ್ತು ಲಕ್ಷ ರೂಪಾಯಿಗಳನ್ನು ಕೊಟ್ಟರೆ ಏನಾಗುತ್ತದೆ? ಸಾವಿರಾರು ಕೋಟಿ ರೂಪಾಯಿಗಳನ್ನು ಲೂಟಿ ಮಾಡಿಕೊಂಡು ತಿಂದು ಹೋಗುತ್ತಿದ್ದಾರೆ. ನಿಮಗೂ ಗೊತ್ತಿದೆ. ಆ ಬಡ ರೈತರಿಗೆ ಮೂವತ್ತು ಲಕ್ಷ ಕೊಡಬಾರದೆ? ಸಾವಿರಾರು ಕೋಟಿ ರೂಪಾಯಿಗಳನ್ನು ಲೂಟಿ ಮಾಡಿಕೊಂಡು ಹೋಗಿದ್ದು ನಿಮಗೆ ಗೊತ್ತಿಲ್ಲವೇ?

(ಮಾನ್ಯ ಸಚಿವರಾದ ಎಂ.ಬಿ. ಪಾಟೀಲ್‌ರವರು ಕುಳಿತುಕೊಂಡೇ, ಗೊತ್ತಿಲ್ಲ ಎನ್ನುವ ಮಾತನ್ನು ಹೇಳಿದರು)

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ,:–ನೀವು ನಿಂತುಕೊಂಡು ಹೇಳಿ. ರೆಕಾರ್ಡ್‌ಗೆ ಹೋಗಲಿ. ನನಗೆ ಗೊತ್ತಿದೆ ಹೇಳುತ್ತೇನೆ. ಹೆಸರು ಹೇಳಲೇ?

(ಮುಂದು..)

(601) 7.6.2017 6.00 ಪಿಕೆ:ಜಿಆರ್

(ಗೊಂದಲ)

**ಶ್ರೀ ಕೆ.ಎಸ್.ಈಶ್ವರಪ್ಪ:–** ನಾನು ಆ ಸತ್ಯವನ್ನು ಯಾವಾಗ ಬೇಕಾದರೂ ಹೇಳುತ್ತೇನೆ. ನನಗೆ ಭಯ ಇಲ್ಲ. . . .

**ಶ್ರೀ ವಿ.ಎಸ್.ಉಗ್ರಪ್ಪ:–**ಹೀಗೆಲ್ಲ ಸುಮ್ಮನೆ ಬೆದರಿಕೆ ಹಾಕುವುದು ಬೇಡ. ಯಾರು ಹಣವನ್ನು ತಿಂದು ಹಾಕಿದ್ದಾರೆ ಅವರ ಹೆಸರುಗಳನ್ನು ಹೇಳಿ. ರಾಜ್ಯದ ಹಿತದೃಷ್ಟಿಯಿಂದ . . . ಮಾನ್ಯ ಈಶ್ವರಪ್ಪನವರು ಈ ರೀತಿ ಧಮಕಿ ಹಾಕುವುದು ಸರಿಯಲ್ಲ. ದುಡ್ಡು ತಿಂದವರು ಯಾರು ಎಂದು ಹೇಳಿ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ಬಿ.ಪಾಟೀಲ್:-**ಅವರು ಇಂದಿನದನ್ನು ಹೇಳುತ್ತಿಲ್ಲ, ಹಿಂದೆ ನಡೆದಿದ್ದನ್ನು ಹೇಳುತ್ತಿದ್ದಾರೆ, 5 ವರ್ಷದ ಹಿಂದಿನದನ್ನು ಹೇಳುತ್ತಿದ್ದಾರೆ . . .

**ಉಪಸಭಾಪತಿಯವರು:-** ಮಾನ್ಯ ಉಗ್ರಪ್ಪನವರೇ ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

**ಶ್ರೀ ವಿ.ಎಸ್.ಉಗ್ರಪ್ಪ:-**ರಾಜ್ಯದ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಯಾರು ದುಡ್ಡು ತಿಂದಿದ್ದಾರೋ ಅಂಥವರ ಹೆಸರನ್ನು ಹೇಳಬೇಕು. They should be accountable to the State.

**ಉಪಸಭಾಪತಿಯವರು:-** ಮಾನ್ಯ ಉಗ್ರಪ್ಪನವರೇ ಕುಳಿತುಕೊಳ್ಳಿ . . . .

(ಗೊಂದಲ)

**ಶ್ರೀ ವಿ.ಎಸ್.ಉಗ್ರಪ್ಪ:-**ಈ ರೀತಿ ಮಾಹಿತಿ ಗೊತ್ತಿದ್ದು ಅದನ್ನು ಮುಚ್ಚಿಡುವುದು ಅಪರಾಧ ಆಗುತ್ತದೆ. According to Indian Penal Code, concealment is an offence. ದುಡ್ಡು ತಿಂದವರು ಯಾರು ಎಂದು ಹೇಳಬೇಕಾಗುತ್ತದೆ, ಇಲ್ಲದೇ ಇದ್ದರೆ ಅವರು ಹೇಳಿದ್ದನ್ನು ವಾಪಸ್ಸು ಪಡೆಯಬೇಕಾಗುತ್ತದೆ . . .

**ಉಪಸಭಾಪತಿಯವರು:-** ಮಾನ್ಯ ಉಗ್ರಪ್ಪನವರೇ ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಕೆ.ಎಸ್.ಈಶ್ವರಪ್ಪ:-**ಕೇಂದ್ರ ಸರ್ಕಾರದಲ್ಲಿರಬಹುದು, ರಾಜ್ಯ ಸರ್ಕಾರದಲ್ಲಿರಬಹುದು, ಎಲ್ಲೆಲ್ಲಿ, ಯಾರ್‍ಯಾರು ಎಷ್ಟೆಷ್ಟು ತಿಂದು ಹೋಗಿದ್ದಾರೆ ಎಂದು ದಾಖಲೆ ಸಹಿತ . . .

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಗಳೆ, ಇದು ಸದನ. This is a floor. On the floor of the House, Hon'ble Leader of Opposition is making a statement. Concealment is an offence. ಯಾರು ದುಡ್ಡನ್ನು ತಿಂದಿದ್ದಾರೆ ಎಂದು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಬೇಕು. ಕೇಂದ್ರ ಸರ್ಕಾರದಲ್ಲಿ ಯಾರು ತಿಂದರು, ರಾಜ್ಯ ಸರ್ಕಾರದಲ್ಲಿ ಯಾರು ತಿಂದರು ಎನ್ನುವುದನ್ನು ಹೇಳಲಿ. He is talking on the floor of the House.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

**ಉಪಸಭಾಪತಿಯವರು:-** ಮಾನ್ಯ ಸಚಿವರೇ ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಈಶ್ವರಪ್ಪನವರೇ ದಯವಿಟ್ಟು ಮುಗಿಸಿ. . .

(ಗೊಂದಲ)

**ಶ್ರೀ ವಿ.ಎಸ್.ಉಗ್ರಪ್ಪ:-**ರಾಜ್ಯದ ಹಿತವನ್ನು ಬಯಸುವುದಾದರೆ ಆ ಹೆಸರುಗಳನ್ನು ಹೇಳಬೇಕಾಗುತ್ತದೆ. . .

(ಗೊಂದಲ)

**ಶ್ರೀ ಕೆ.ಎಸ್.ಈಶ್ವರಪ್ಪ:-**ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆ ಎಂದರೆ . . .

**ಉಪಸಭಾಪತಿಯವರು:-** ದಯವಿಟ್ಟು ಕುಳಿತುಕೊಳ್ಳಿ. ನೀವು ಹಿರಿಯರಿದ್ದೀರಿ. . .

**ಶ್ರೀ ಕೆ.ಎಸ್.ಈಶ್ವರಪ್ಪ:-** ತಾವು ಹೀಗೆಲ್ಲಾ ಮಾತನಾಡಬೇಡಿ, ದಯವಿಟ್ಟು ಕೇಳಿ . . .

**ಉಪಸಭಾಪತಿಯವರು:-** ಮಾನ್ಯ ಈಶ್ವರಪ್ಪನವರೇ ದಯವಿಟ್ಟು ಮುಗಿಸಿ.

**ಶ್ರೀ ಕೆ.ಎಸ್.ಈಶ್ವರಪ್ಪ:-**ಆಯಿತು, ಮುಗಿಸುತ್ತೇನೆ. ಎದ್ದು ನಿಂತು ಮಾತನಾಡುತ್ತಿರುವ ಸದಸ್ಯರನ್ನು ಕುಳಿತುಕೊಳ್ಳುವುದಕ್ಕೆ ಹೇಳಿ. ನಾನು, ಕೇಂದ್ರ ಸರ್ಕಾರದಲ್ಲಿ ಮತ್ತು ರಾಜ್ಯ ಸರ್ಕಾರದಲ್ಲಿದ್ದವರು ತಿಂದು ಹೋಗಿದ್ದಾರೆ ಎಂದು ಹೇಳಿದೆ. ನಿರ್ದಿಷ್ಟವಾಗಿ ಇಂತಹ ವ್ಯಕ್ತಿಯೇ ತಿಂದು ಹೋಗಿದ್ದಾರೆ ಎಂದು ಹೇಳಲಿಲ್ಲ. ಅದನ್ನು ಹೇಳುವಂತಹ ಸಂದರ್ಭದಲ್ಲಿ ಹೇಳುತ್ತೇನೆ. ನಾನು, ಸಾವಿರಾರು ಕೋಟಿ ರೂಪಾಯಿಗಳನ್ನು ತಿಂದು ಹೋಗುತ್ತಿರುವ ರಾಜಕಾರಣಿಗಳು ಸಾಕಷ್ಟು ಜನ ಇದ್ದಾರೆ ಎಂದು ಹೇಳಿದೆ. ಇಲ್ಲಿರುವ ಪ್ರಶ್ನೆ ಏನೆಂದರೆ, ನೂರಾರು ವರ್ಷಗಳಿಂದ ಜಮೀನು ಹೊಂದಿರುವ ರೈತರು ಅದನ್ನು ಕಳೆದುಕೊಳ್ಳುತ್ತಿದ್ದಾರೆ. ಅಂಥವರಿಗೆ ರೂ. 30-40 ಲಕ್ಷ ಪರಿಹಾರ ಕೊಡುವುದಕ್ಕೆ ಅವಕಾಶ ಇದೆ ಎಂಬ ಅಂಶವನ್ನು ಹೇಳುತ್ತಿದ್ದೆ.

**ಉಪಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೆ, ಕಡತದಿಂದ ಇದನ್ನು ತೆಗೆಸಿ. ಪರಿಹಾರ ರೂ.30-40 ಲಕ್ಷ ಕೊಡಬೇಕು ಎನ್ನುವುದನ್ನು ಸುಮಾರು 15 ಸಲ ಹೇಳಿಬಿಟ್ಟಿರಿ. ಎಷ್ಟು ಸಲ ಅದನ್ನೇ ಹೇಳುತ್ತೀರಿ? . . .

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ:-**ಹೌದು, ನೂರು ಸಲ ಹೇಳುತ್ತೇನೆ. ರೈತರ ಬಗ್ಗೆ ಹೇಳದೆ ಇನ್ಯಾರ ಬಗ್ಗೆ ಹೇಳಬೇಕು. . .

**ಉಪಸಭಾಪತಿಯವರು:-** ಕೇಳಬೇಕು ಸರಿ, ಆದರೆ ಸಮಯ ಬೇಕಲ್ಲ? ಸದನ ನಡೆಸಬೇಕಲ್ಲವೇ? . . .

**ಶ್ರೀ ಕೆ.ಎಸ್.ಈಶ್ವರಪ್ಪ:-** ಕಡತದಿಂದ ತೆಗೆಸುತ್ತೀರಾ? ಹೇಗೆ ತೆಗೆಸುತ್ತೀರೋ ತೆಗೆಸಿ . . .(ಗೊಂದಲ) ಸಭಾಪತಿ ಸ್ಥಾನದಲ್ಲಿ ಕುಳಿತು ಹೀಗೆ ಮಾತನಾಡುವುದು ಸರಿಯೇ? . . .

(ಗೊಂದಲ)

**ಉಪಸಭಾಪತಿಯವರು:-** ತಾವು ವಿರೋಧ ಪಕ್ಷದ ನಾಯಕರಾಗಿದ್ದೀರಿ. ನಾನೂ ಕೂಡ ಸದನ ನಡೆಸಬೇಕು ಅಲ್ಲವೇ? . . .

**ಶ್ರೀ ಕೆ.ಎಸ್.ಈಶ್ವರಪ್ಪ:-** ರೂ. 30-40 ಲಕ್ಷಗಳನ್ನು ಪರಿಹಾರವಾಗಿ ಕೊಡಿಸಬೇಕು ಎಂದು ನೂರು ಸಲ ಹೇಳುತ್ತೇನೆ. ಅದನ್ನು ಕಡತದಿಂದ ತೆಗೆಸಿ ನೋಡೋಣ? . . .

**ಉಪಸಭಾಪತಿಯವರು:-** ಕಡತದಿಂದ ತೆಗೆಸಬೇಕು ಎಂದು ಹೇಳುತ್ತಿಲ್ಲ. ಆದರೆ ಹೇಳಿದ್ದನ್ನೇ 15 ಸಲ ಹೇಳುತ್ತೀರಿ . . .

**ಶ್ರೀ ಕೆ.ಎಸ್.ಈಶ್ವರಪ್ಪ:-**ನೂರು ಸಲ ಹೇಳುತ್ತೇನೆ. ಬಡ ರೈತರಿಗೆ ಪರಿಹಾರ ಸಿಗಬೇಕು ಎಂದು ಹೇಳಿದೆ. . . .

**ಉಪಸಭಾಪತಿಯವರು:-** ಬಡ ರೈತರ ಬಗ್ಗೆ ಎಲ್ಲರಿಗೂ ಕಾಳಜಿ ಇದೆ. . . .

**ಶ್ರೀ ಕೆ.ಎಸ್.ಈಶ್ವರಪ್ಪ:-**ನಾವು ಮಂತ್ರಿಗಳನ್ನು ಕೇಳದೆ, ಸರ್ಕಾರಕ್ಕೆ ಕೇಳದೆ ಇನ್ಯಾರನ್ನು ಕೇಳಬೇಕು? ಖುಷ್ಕಿ ಭೂಮಿ ಕಳೆದುಕೊಂಡಿರುವ ಬಡ ರೈತರಿಗೆ ರೂ. 30 ಲಕ್ಷ ಮತ್ತು ನೀರಾವರಿ ಭೂಮಿ ಕಳೆದುಕೊಂಡಿರುವ ರೈತನಿಗೆ ರೂ. 40 ಲಕ್ಷ ನೀಡಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ.

**ಉಪಸಭಾಪತಿಯವರು:-** ಮಾನ್ಯ ತಾರಾರವರೆ ಎರಡು ನಿಮಿಷದಲ್ಲಿ ನಿಮ್ಮ ಮಾತನ್ನು ಮುಗಿಸಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀಮತಿ ತಾರಾಅನೂರಾಧ:–** ಸ್ವಂತ ಮನೆಯೂ ಇಲ್ಲದ, ಒಂದಿಂಚು ಜಮೀನು ಇಲ್ಲದ ಬಡವರಿಗೆ, ನಿರ್ಗತಿಕರಿಗೆ, ದೀನ–ದಲಿತರಿಗೆ ಬದುಕು ಕಟ್ಟಿಕೊಡುವ ಜವಾಬ್ದಾರಿ ಖಂಡಿತ ಸರ್ಕಾರದ ಮೇಲೆ ಇದೆ ಎನ್ನುವುದು ನನ್ನ ವಾದವಾಗಿದೆ.

**ಶ್ರೀ ಎಂ.ಬಿ.ಪಾಟೀಲ್:–**ಮಾನ್ಯ ಸಭಾಪತಿಗಳೆ, ಈಗ ಕ್ಯಾಬಿನೆಟ್ ಇದೆ. ಈ ವಿಷಯ ಮತ್ತೆ ನಾಳೆ ತೆಗೆದುಕೊಂಡರೆ ಒಳ್ಳೆಯದು ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ನಾಳೆ ಬೇಕಾದರೆ ಈ ಕುರಿತು ಚರ್ಚೆ ಮಾಡಲು ಪೂರ್ಣ ದಿನವನ್ನು ಬೇಕಾದರೂ ಕೊಡಿ.

**ಉಪಸಭಾಪತಿಯವರು:–** ಮಾನ್ಯ ತಾರಾರವರು ಮುಗಿಸಿಬಿಡಲಿ. ನಾಳೆ ಈ ವಿಷಯ ಮಾತನಾಡುವುದಕ್ಕೆ ಅವಕಾಶ ಇಲ್ಲ. ಈ ಕುರಿತು ನೋಟಿಸ್‌ಗೆ ಯಾರು ಸಹಿ ಮಾಡಿದ್ದಾರೋ ಅಂಥವರಿಗೆ ಮಾತ್ರ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ.

**ಶ್ರೀ ಡಿ.ಎಸ್.ವೀರಯ್ಯ:–** ಮಹಿಳಾ ಸದಸ್ಯರು ಮಾತನಾಡುತ್ತಿದ್ದಾರೆ. ಅವರಿಗೆ ಮಾತನಾಡಲು ಸಮಯ ಕೊಡಿ.

**ಉಪಸಭಾಪತಿಯವರು:–** ದಯವಿಟ್ಟು ಕುಳಿತುಕೊಳ್ಳಿ. ಈ ವಿಷಯದ ಬಗ್ಗೆ ನೋಟಿಸ್ ಕೊಟ್ಟಿರುವವರಿಗೆ ಮಾತ್ರ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ. ಈ ವಿಷಯವನ್ನು ನಾಳೆ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಈಗ ಸಚಿವ ಸಂಪುಟ ಸಭೆ ಇರುವುದರಿಂದ, ಮಾನ್ಯ ತಾರಾರವರು ಮಾತನಾಡಿದ ಮೇಲೆ ಸದನವನ್ನು ಮುಗಿಸಬೇಕಾಗುತ್ತದೆ. ನಾಳೆ ಈ ಕುರಿತು ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ.

**ಶ್ರೀ ಅರುಣಶಹಾಪುರ್:–**ಮಾನ್ಯ ಸಭಾಪತಿಗಳೆ, ನಾನೂ ಕೂಡ ಸಹಿ ಮಾಡಿದ್ದೇನೆ . . .

**ಶ್ರೀ ಸೋಮಣ್ಣ ಮ.ಬೇವಿನಮರದ:–** ನಾನು ಕೂಡ ಆ ನೋಟಿಸ್‌ಗೆ ಸಹಿ ಮಾಡಿದ್ದೇನೆ. ನಮಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕು. ನಮ್ಮ ಭಾಗದ ಸಮಸ್ಯೆಯನ್ನು ನಾವು ಹೇಳುವುದು ಬೇಡವೇ? . . .

**ಶ್ರೀ ಕೆ.ಎಸ್.ಈಶ್ವರಪ್ಪ:–**ಮಾನ್ಯ ಸಭಾಪತಿಗಳೆ, ಇದು ಕೃಷ್ಣಾ ನದಿ ಭಾಗದ ರೈತರ ಜೀವನ್ಮರಣದ ಪ್ರಶ್ನೆಯಾಗಿದೆ. ಇಂತಹ ವಿಷಯಗಳನ್ನು ಮಾತನಾಡುವುದಕ್ಕೆಂದೇ ವಿಧಾನಪರಿಷತ್ತು ಇದೆ. ಎಲ್ಲಾ ಸದಸ್ಯರಿಗೂ ಮಾತನಾಡುವುದಕ್ಕೆ ಅವಕಾಶ ಕಲ್ಪಿಸಿ ಕೊಟ್ಟು, ನಂತರ ಮಾನ್ಯ ಸಚಿವರು ಉತ್ತರ ಕೊಡಲಿ. ಇದು ನನ್ನ ಮನವಿಯಾಗಿದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಗಳೆ, ಇದು ನಿಯಮ 330 ಅಡಿ ಚರ್ಚೆ ಆಗುತ್ತಿದೆ. ಈ ನಿಯಮದ ಅಡಿ ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಕೊಡಬೇಕಾಗುತ್ತದೆ, ಇಷ್ಟೇ ಜನ ಮಾತನಾಡಬೇಕು ಎಂದು ನಿರ್ಬಂಧಿಸುವುದಕ್ಕೆ ಆಗುವುದಿಲ್ಲ. ಈ ಕುರಿತು ಚರ್ಚೆಯ ಆರಂಭದಲ್ಲೇ ಸಮಯ ನಿಗದಿ ಮಾಡಿದ್ದರೆ ಚೆನ್ನಾಗಿರುತ್ತಿತ್ತು. ಈಗ ಆ ಭಾಗದ ಕೆಲವು ಸದಸ್ಯರು ಮಾತನಾಡಿದ್ದಾರೆ. ನಿಯಮ 330ರ ಅಡಿ ಒಂದು ವಿಷಯವನ್ನು ಎತ್ತಿಕೊಂಡಾಗ ವಿರೋಧ ಪಕ್ಷದವರಾಗಲಿ, ಸ್ವತಂತ್ರ ಅಭ್ಯರ್ಥಿಗಳಾಗಲಿ ಅಥವಾ ಆಡಳಿತ ಪಕ್ಷದ ಸದಸ್ಯರಾಗಲಿ, ಅವರುಗಳು ತಮ್ಮ ವಿಚಾರಗಳನ್ನು ಸದನದ ಮುಂದೆ ಇಡುವುದಕ್ಕೆ ಅವಕಾಶ ಇರುತ್ತದೆ. ಇದು ರಾಜ್ಯದ ಅತ್ಯಂತ ದೊಡ್ಡ ಸಮಸ್ಯೆಯಾಗಿದೆ. ಮಂತ್ರಿಗಳು ಪ್ರಾರಂಭದಲ್ಲಿ, ಇದರ ಬಗ್ಗೆ ವಿಸ್ತಾರವಾಗಿ ಚರ್ಚೆ ಆಗಬೇಕು ಎಂದು ಹೇಳಿದ್ದಾರೆ. ಹಾಗಾಗಿ ಎಲ್ಲರಿಗೂ ಈ ಕುರಿತು ಮಾತನಾಡುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕು. ನಾಳೆ ಈ ಕುರಿತ ಚರ್ಚೆಗೆ ಅವಕಾಶ ಮಾಡಿ ಕೊಡಬೇಕು. ಈ ವಿಷಯವನ್ನು ತೆಗೆದುಕೊಂಡ ನಂತರ ನನ್ನ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳಬೇಕು.

**ಶ್ರೀ ಸೋಮಣ್ಣ ಮ.ಬೇವಿ ನಮರದ:–** 1964–65ನೇ ಇಸವಿಯಲ್ಲಿ ಮಾಡಿ ಕೊಟ್ಟ ಪುನರ್ವಸತಿ ಕೇಂದ್ರಗಳ ಜನ ಇವತ್ತು ಭಿಕ್ಷಾಟನೆಗೆ ಹೋಗುತ್ತಿದ್ದಾರೆ. ಆ ವಿಷಯವನ್ನು ನಾವು ಸದನಕ್ಕೆ ಹೇಳಬೇಕಿದೆ. ನಮಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ. ಹಾವೇರಿ ಜಿಲ್ಲೆಯ . . .

**ಉಪಸಭಾಪತಿಯವರು:–** ನೀವು ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಉಗ್ರಪ್ಪನವರೆ, ನಿಯಮ 330 ಅಡಿಯಲ್ಲಿ ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಹೇಳಿದಿರಿ. ಹಾಗಾದರೆ ಇದಕ್ಕೆ ಸಮಯ ನಿಗದಿ ಮಾಡಬಾರದೇ? ನೀವು ವಕೀಲರು, ಕಾನೂನು ಪಂಡಿತರು. . . .

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಗಳೆ, . . .

**ಉಪಸಭಾಪತಿಯವರು:–** ಕುಳಿತುಕೊಳ್ಳಿ . . .

**ಶ್ರೀ ವಿ.ಎಸ್.ಉಗ್ರಪ್ಪ:–**ತಾವು ನನ್ನ ಹೆಸರನ್ನು ಹೇಳಿದ್ದೀರಿ. ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಿ . . .

**ಉಪಸಭಾಪತಿಯವರು:–** ನಾನು ಮಾತನಾಡುತ್ತಿದ್ದೇನೆ, ದಯವಿಟ್ಟು ಕುಳಿತುಕೊಳ್ಳಿ. ಇದು ಮಹತ್ವದ ವಿಷಯವಾದ್ದರಿಂದ ಮಾನ್ಯ ಸಭಾಪತಿಗಳು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಈ ಕುರಿತು ಮಾತನಾಡಬೇಕೆಂದು ಶ್ರೀಮತಿ ಜಯಮಾಲರವರು ಕೇಳಿದ್ದಾರೆ, ಮಾನ್ಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೊರಟ್ಟಿಯವರು ಕೇಳಿದ್ದಾರೆ, ಮಾನ್ಯ ಬೇವಿನಮರದರವರೂ ಕೇಳುತ್ತಿದ್ದಾರೆ. ಆದರೂ ಈ ವಿಚಾರವನ್ನು ಇವತ್ತೇ ಮುಕ್ತಾಯಗೊಳಿಸಬೇಕು ಎನ್ನುವ ದೃಷ್ಟಿಯಿಂದ ನಾವು ಈ ಒಂದು ತೀರ್ಮಾನಕ್ಕೆ ಬಂದೆವು. ಇದು ಮಹತ್ವದ ವಿಚಾರ, ಈ ಕುರಿತು ಚರ್ಚೆ ಆಗಬೇಕು ಎನ್ನುವುದು ನಮಗೂ ಅರ್ಥವಾಗುತ್ತದೆ. ನಾಳೆ ಇದರ ಬಗ್ಗೆ ಮಾತನಾಡುವುದಕ್ಕೆ ನಿಮಗೆ ಎಷ್ಟು ಸಮಯ ಬೇಕಾಗುತ್ತದೆಯೋ ಅಷ್ಟು ಸಮಯವನ್ನು ಕೊಡೋಣ. ಆದರೆ, ನಿಯಮ 330 ಅಡಿ ತಂದಂಥ ವಿಷಯವನ್ನು ಇಡೀ ದಿನ ಚರ್ಚೆ ಮಾಡಬೇಕೆಂದೇನೂ ಇಲ್ಲ. ತಾವು ಸದಸ್ಯರು ಈ ರೀತಿ ಮಾಡಿದರೆ ಸದನ ನಡೆಸುವುದಕ್ಕೆ ಆಗುವುದಿಲ್ಲ, ಇದು ಎಲ್ಲರ ಗಮನದಲ್ಲಿ ಇರಲಿ. ಶ್ರೀಮತಿ ತಾರಾರವರೆ ಇನ್ನು ಎರಡು ನಿಮಿಷದಲ್ಲಿ ನೀವು ಮುಗಿಸಬೇಕು.

(ಮುಂದು . . .)

(602)07-06-2017 MM-MD 6.10 (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೆ, ನನ್ನ ಹೆಸರು . . .

**ಉಪ ಸಭಾಪತಿಯವರು:–** ಮಾನ್ಯ ಉಗ್ರಪ್ಪರವರೆ, ದಯವಿಟ್ಟು ಕುಳಿತುಕೊಳ್ಳಿ. ಬೇಡಿ . . . ಐದು ನಿಮಿಷ ಕೇಳಿದರು, ಈಗ 15 ನಿಮಿಷವಾಯಿತು. ಇನ್ನು ಎರಡು ನಿಮಿಷದಲ್ಲಿ ಮುಗಿಸಮ್ಮ.

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ಇಲ್ಲಿ ಏನಾಗಿದೆ ಎಂದರೆ;

**ಉಪ ಸಭಾಪತಿಯವರು:–** ಮಾನ್ಯ ಈಶ್ವರಪ್ಪರವರೆ, ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ನಿಮಗೆ 'ಬಿಪಿ' ಇದ್ದು ನಮಗೂ ಕೂಡ 'ಬಿಪಿ' ಬರುವ ಹಾಗೆ ಮಾಡುತ್ತಿದ್ದೀರಿ.

**ಉಪಸಭಾಪತಿಯವರು:–** ಮಾನ್ಯ ಈಶ್ವರಪ್ಪರವರೆ, ನನಗೆ ಬಿಪಿ ಬರುವುದೇ ಇಲ್ಲ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, 'ಬಿಪಿ' ಅಲ್ಲ ಹೃದಯಾಘಾತವಾಗಿ ಬಿಟ್ಟರೆ ಕಷ್ಟ. ಭಯವಾಗುತ್ತದೆ.

**ಉಪ ಸಭಾಪತಿಯವರು:–** ನನಗೇನೂ ಆಗುವುದಿಲ್ಲ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ದೇವರು ನಿಮ್ಮನ್ನು ಚೆನ್ನಾಗಿ ಇಟ್ಟಿರಲಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಉಪ ಸಭಾಪತಿಯವರು:–** ಮಾನ್ಯ ಈಶ್ವರಪ್ಪರವರೆ, ನನ್ನ ಬಗ್ಗೆ ಅಷ್ಟು ಕಾಳಜಿ ಇದೆಯಲ್ಲ ಅಷ್ಟು ಸಾಕು.

**ಶ್ರೀ ಎಂ.ಬಿ. ಪಾಟೀಲ್(ಜಲಸಂಪನ್ಮೂಲ ಸಚಿವರು):–** ಮಾನ್ಯ ಸಭಾಪತಿಯವರೆ, ಶ್ರೀಮತಿ ತಾರಾರವರು ಈಗ ಇವೆಲ್ಲದರಿಂದ disturb ಆಗಿದ್ದಾರೆ. ನಾಳೆಗೆ fresh ಆಗಿ ಮಾತನಾಡುತ್ತಾರೆ.

(ಗೊಂದಲ)

**ಉಪ ಸಭಾಪತಿಯವರು:–** ನಿಯಮ 330 ವಿಷಯದ ಬಗ್ಗೆ ನಾಳೆ ಚರ್ಚೆ ಮುಂದುವರೆಯುವುದು. ನಂತರ ಮಾನ್ಯ ಮಂತ್ರಿಯವರಿಂದ ಉತ್ತರ.

## 5. ಪ್ರಕಟಣೆ

ವಿಧಾನ ಪರಿಷತ್ತಿನ ಕಾರ್ಯಕಲಾಪಗಳ ಸಲಹಾ ಸಮಿತಿಯು ಈ ದಿನ ಸಭೆ ಸೇರಿ ಈ ಕೆಳಕಂಡಂತೆ ಕಾರ್ಯಕಲಾಪಗಳನ್ನು ನಡೆಸಲು ತೀರ್ಮಾನಿಸಿರುತ್ತದೆ ಎಂದು ಸದನದ ಗಮನಕ್ಕೆ ತರಬಯಸುತ್ತೇನೆ.

1. ಪ್ರಶ್ನೋತ್ತರ, ಗಮನಸೆಳೆಯುವ ಸೂಚನೆ, ಶೂನ್ಯವೇಳೆ, ನಿಯಮ 68ರ ಮೇಲಿನ ಪ್ರಸ್ತಾವ
2. ವಿಧೇಯಕಗಳ ಮಂಡನೆ, ಪರ್ಯಾಲೋಚನೆ ಮತ್ತು ಅಂಗೀಕಾರ.
3. ವಿಧಾನಪರಿಷತ್ತಿನ ಸಮಿತಿಯ ವರದಿಯ ಮೇಲೆ ಇಲಾಖಾ ವತಿಯಿಂದ ಕೈಗೊಂಡ ಕ್ರಮಗಳ ಬಗ್ಗೆ ಚರ್ಚೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ನಿಯಮ 330 ಮೇಲೆ ಚರ್ಚಿಸಲು ಒಂದು ಅರ್ಜಿಯನ್ನು ಕೊಟ್ಟಿದ್ದೆವು. ನಾಳೆ ನಿಯಮ 330 ಮೇಲೆ ಚರ್ಚಿಸಲು ಮತ್ತೊಂದು ಅರ್ಜಿಯನ್ನು ಸೇರಿಸಿಬಿಡಿ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೆ, ಹಾಗೆ ಮಾಡುವುದಕ್ಕೆ ಬರುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೆ, ಗಮನಸೆಳೆಯುವ ಸೂಚನೆಯನ್ನು ಹಾಕುತ್ತೀರಿ. 15 ಜನ ಸದಸ್ಯರುಗಳು ಸೇರಿ ಪಂಚಾಯತ್‌ರಾಜ್ ಬಗ್ಗೆ ಕೊಟ್ಟಿದ್ದೇವೆ. ಯಾವುದಾದರೂ ಒಂದು ದಿವಸ ಈ ವಿಷಯವನ್ನು ನಿಯಮ 330 ಮೇಲೆ ಚರ್ಚಿಸಲು ತೆಗೆದುಕೊಳ್ಳಿ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಒಂದು ನಿಮಿಷ. ನಾನು ಕಳೆದ 3–4 ಅಧಿವೇಶನಗಳಲ್ಲಿ ಗಮನಿಸುತ್ತಿರುವ ಹಾಗೆ ನಿಯಮ 330 ಮೇಲೆ ಚರ್ಚಿಸಿದವರ ಹೆಸರೇ ಪ್ರತಿ ಸಲವು ಬರುತ್ತದೆ. ಗಮನಸೆಳೆಯುವ ಸೂಚನೆ ಮೇಲೆ ಈಗಾಗಲೇ ಚರ್ಚಿಸಿದವರ ಹೆಸರೇ ಬರುತ್ತದೆ. ಅದಕ್ಕೆ ಯಾವುದೇ ವಿಧಿ–ವಿಧಾನಗಳಿಲ್ಲವೇ? ಈ ಪಕ್ಷಕ್ಕೆ ಇಷ್ಟು ಅಥವಾ ಈಗಾಗಲೇ ಕೊಟ್ಟಿರುವವರ ಬದಲಿಗೆ ಬೇರೆಯವರಿಗೆ ಕೊಡಬೇಕು; ಇದು ಏನೆಂದು ನನಗೆ ಅರ್ಥವಾಗುತ್ತಿಲ್ಲ. ಯಾವಾಗ ನೋಡಿದರೂ ಅಜೆಂಡಾದಲ್ಲಿ ಅವರ ಹೆಸರೇ ಇರುತ್ತದೆ. ಮಾನ್ಯ ಕೋಟ ಶ್ರೀನಿವಾಸ ಪೂಜಾರಿ ಅವರ ಹೆಸರು ಖಾಯಂ ಆಗಿ ಇರುತ್ತದೆ. ನಾವು ಕಳುಹಿಸುವ ನಿಯಮ 330ರ ಮೇಲಿನ ವಿಷಯದ ಬಗ್ಗೆ ಚರ್ಚೆ. . . ಅರ್ಥವಾಗುತ್ತಿಲ್ಲ.

(ಗೊಂದಲ)

**ಉಪ ಸಭಾಪತಿಯವರು:–** ಮಾನ್ಯ ಶ್ರೀಕಂಠೇಗೌಡರೆ, ದಯಮಾಡಿ ಕುಳಿತುಕೊಳ್ಳಿ. ನೀವು ಹೇಳಿದಂತಹ ವಿಷಯದ ಬಗ್ಗೆ ಅಜೆಂಡಾ ಆಖೈರು ಮಾಡುವಾಗ ಈ ಎಲ್ಲಾ ಅಂಶಗಳನ್ನು ಗಮನಿಸಿಕೊಂಡೇ ಅಜೆಂಡಾವನ್ನು ಆಖೈರು ಮಾಡಲಾಗಿರುತ್ತದೆ. ಆದ್ದರಿಂದ ದಯಮಾಡಿ ತಾವು ಹೇಳಿರುವ . . .

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಅಪರೂಪವಾಗಿ ನನ್ನ ಒಂದು ಗಮನ ಸೆಳೆಯುವ ಸೂಚನೆ ಬಂದಿತ್ತು. ನಾನು ಫೈಲ್ ಅನ್ನು ತೆಗೆದುಕೊಂಡು ಬರುವಷ್ಟರಲ್ಲಿ ತಾವು ಅದನ್ನು ತೆಗೆದುಕೊಳ್ಳುವುದಿಲ್ಲ ಎಂದು ಹೇಳಿದಿರಿ. ಇದನ್ನು ಚೇರ್ಮನ್‌ರವರ ಗಮನಕ್ಕೂ ಕೂಡ ತಂದಿದ್ದೇವೆ. ನಾಳೆ ಮತ್ತೆ ಆ ವಿಷಯ ಚರ್ಚೆಗೆ ಬರುವ ಹಾಗೆ ದಯಮಾಡಿ ಆದೇಶ ಮಾಡಬೇಕೆಂದು ಕೋರುತ್ತೇನೆ.

**ಉಪ ಸಭಾಪತಿಯವರು:–** ಮಾನ್ಯ ಉಗ್ರಪ್ಪರವರೆ, ತಾವು ಆ ಸಮಯದಲ್ಲಿ ಸದನದಲ್ಲಿ ಇರದೇ ಇದ್ದ ಕಾರಣದಿಂದ . . . ತಮ್ಮನ್ನು ಕರೆದಿದ್ದೆವು.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ನನ್ನ ಫೈಲ್ ಒಂದು ಹೊರಗಡೆ ಇತ್ತು.

**ಉಪ ಸಭಾಪತಿಯವರು:–** ಮಾನ್ಯ ಉಗ್ರಪ್ಪರವರೆ, ತಮ್ಮನ್ನು ಕರೆದಿದ್ದೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಅದು ನಿಜ. ನಾನು ತಾವು ಕರೆದಿಲ್ಲ ಎಂದು ಹೇಳುತ್ತಿಲ್ಲ. ವಾಸ್ತವವಾಗಿ ನಾನು ನನ್ನ ಸ್ನೇಹಿತರಿಗೆ ಹೇಳಿ ಹೋಗಿದ್ದೆ.

**ಉಪ ಸಭಾಪತಿಯವರು:–** ಮಾನ್ಯ ಉಗ್ರಪ್ಪರವರೆ, ತಮ್ಮನ್ನು ಹುಡುಕಲು ಒಬ್ಬರನ್ನು ನೇಮಕ ಮಾಡಿ ಅವರಿಂದ ಹುಡುಕಿಸಿ ನಂತರ ಅದನ್ನು ಕೊಡುವುದಿಲ್ಲ ಎಂದು ಹೇಳಿದ್ದೇನೆ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಒಂದು ವಿಷಯ ನಾನು ನನ್ನ ಕಛೇರಿಗೆ ಹೋಗಿ ಫೈಲ್ ತೆಗೆದುಕೊಂಡು ಬರುವಷ್ಟರೊಳಗೆ ನಾನು ಸದನದಲ್ಲಿ ಇಲ್ಲ ಎಂದು ಹೇಳಿದಿರಿ. ದಯಮಾಡಿ ಅಪರೂಪವಾಗಿ ನನ್ನ ಒಂದು ಗಮನಸೆಳೆಯುವ ಸೂಚನೆ ಬಂದಿದೆ, ಅದನ್ನು ದಯಮಾಡಿ ನಾಳೆಗೆ ಚರ್ಚೆಗೆ ತೆಗೆದುಕೊಳ್ಳಿ.

**ಶ್ರೀ ಐವನ್ ಡಿ'ಸೋಜಾ (ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೆ, ಟ್ರೇನ್ ಮಿಸ್ ಆಗಿದೆ. ಟಿಕೆಟ್ ಇದೆ.

**ಶ್ರೀ ಡಿ.ಎಸ್.ವೀರಯ್ಯ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಈಗ ಎಸ್‌ಸಿಪಿ/ಟಿಎಸ್‌ಪಿ ಯಲ್ಲಿ ಈ ಸಲ ಸುಮಾರು 27 ಸಾವಿರ ಕೋಟಿ . .

**ಉಪ ಸಭಾಪತಿಯವರು:–** ಮಾನ್ಯ ವೀರಯ್ಯನವರೆ, ದಯಮಾಡಿ ಕುಳಿತುಕೊಳ್ಳಿ. ತಾವು ಹಿರಿಯ ಸದಸ್ಯರಾಗಿದ್ದು ನೋಟಿಸ್ ಇಲ್ಲದೇ ಮಾತನಾಡುತ್ತಿದ್ದೀರಿ. ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಡಿ.ಎಸ್. ವೀರಯ್ಯ:–** ಮಾನ್ಯ ಸಭಾಪತಿಯವರೆ, ಅದರ ಬಗ್ಗೆ . . .

**ಉಪ ಸಭಾಪತಿಯವರು:–** ಮಾನ್ಯ ವೀರಯ್ಯನವರೆ, ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಡಿ.ಎಸ್. ವೀರಯ್ಯ:–** ಮಾನ್ಯ ಸಭಾಪತಿಯವರೆ, ನನಗೆ ತಾವು ಮಾತನಾಡುವುದಕ್ಕೆ ಬಿಡುವುದೇ ಇಲ್ಲ. ಆದ್ದರಿಂದ ನಾನು ಮಾತನಾಡುವುದಿಲ್ಲ. ಮೊದಲೇ ನಾವು ಧ್ವನಿ ಇಲ್ಲದಿರುವವರು. ಯಾವಾಗಲಾದರೂ ಒಮ್ಮೆ ಧ್ವನಿ ಇಲ್ಲದವರ ಪರವಾಗಿ ಮಾತನಾಡುವಾಗ ನಮ್ಮ ಧ್ವನಿಯನ್ನು ಅಡಗಿಸುವಿರಿ.

**ಉಪ ಸಭಾಪತಿಯವರು:–** ಮಾನ್ಯ ವೀರಯ್ಯನವರೆ, ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಡಿ.ಎಸ್. ವೀರಯ್ಯ:–** ಮಾನ್ಯ ಸಭಾಪತಿಯವರೆ, ಎಂತಹ ಒಳ್ಳೆಯ ಕಾಯಿದೆಯನ್ನು ತಂದಿದ್ದಾರೆ. ಅದರ ಬಗ್ಗೆ ನಿಯಮ 330ರಡಿ ಚರ್ಚೆಗೆ ಹಾಕಿದ್ದೇನೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಉಪ ಸಭಾಪತಿಯವರು:–** ಮಾನ್ಯ ಉಗ್ರಪ್ಪನವರೆ, ಆಯಿತು ಕುಳಿತುಕೊಳ್ಳಿ.

**ಶ್ರೀ ಡಿ.ಎಸ್. ವೀರಯ್ಯ:–** ಮಾನ್ಯ ಸಭಾಪತಿಯವರೆ, ಅದರ ಮೇಲೆ ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲ ಎಂದರೆ ಅರ್ಥವೇನಿದೆ?

**ಉಪ ಸಭಾಪತಿಯವರು:–** ಮಾನ್ಯ ವೀರಯ್ಯನವರೆ, ದಯವಿಟ್ಟು ಕುಳಿತುಕೊಳ್ಳಿ. ಸದನವನ್ನು ನಾಳೆ ಬೆಳಿಗ್ಗೆ 11.00 ಗಂಟೆಯವರೆಗೆ ಮುಂದೂಡಲಾಗಿದೆ.

**(ಸದನವು ಸಂಜೆ 6 ಗಂಟೆ 14 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 08–06–2017ರ ಗುರುವಾರದಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)**

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”